ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

18 ಫೆಬ್ರವರಿ 2015 ಪುಟ 20 ರೂ. 15/-



ಸಿದ್ದಲಿಂಗಯ್ಯ ಅವರಿಗೆ ಪ್ರಶ್ನೆಗಳು



ಮಲೆನಾಡು ಮಾರುತಿ ಗುರೂಜಿಯ ಗಂಡಾಗುಂಡಿ ಗಲಾಟೆ!!

ೊಮ್ಮಟನ ಪದತಲದಲ್ಲಿ ಜನಸಾಗರ

81ನೇ ಕನ್ನಡ ಸಾಹಿತ್ಯ ಸಮ್ಮೇಳನ





ಚಿತ್ರದುರ್ಗ ಆಂಜನೇಯ ರುದ್ಧ ಸಿರಿಗೆರೆ ಪಿತೂರಿ


ಕುಂದಾಪುರ ಬಹುಮತದ ದಬ್ಬಾಳಿಕೆ







ಯಲಹಂಕ ಶಾಸಕ ವಿಶ್ವನಾಥನ ರೆಡ್ಡಿ ರೌಡಿ ಪಡೆ



ಸಮ್ಮೇಳನಾಧ್ಯಕ್ಷರಿಗೆ ಪ್ರಶ್ನೆಗಳು

81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಮಾನ್ಯ ಡಾ.ಸಿದ್ದಲಿಂಗಯ್ಯನವರೇ,

ಈಗಾಗಲೇ ತಮ್ಮೊಂದಿಗೆ ಸಮ್ಮೇಳನದಲ್ಲಿ ಸಂವಾದವು ನಡೆದಿದೆ. ಆ ಸಂವಾದದಲ್ಲಿ ಕೆಲವರು ನಿಮಗೆ ಕೇಳಲೇಬೇಕಿದ್ದ ಪ್ರಶ್ನೆಗಳನ್ನು ಕೇಳಿದ್ದಾರೆ. ನೀವು ನೀಡಬೇಕಿದ್ದ ಉತ್ತರಗಳನ್ನು ನೀಡಿಲ್ಲ, ಏಕೆಂದರೆ, ಅದಕ್ಕೆ ನೀವು ಸೂಕ್ತ ಉತ್ತರ ನೀಡಬೇಕೆಂದಿದ್ದರೆ 'ತಪ್ಪಾಯಿತು' ಎಂದಷ್ಟೇ ಹೇಳಬೇಕಾ ಗುತ್ತಿತ್ತು. ತಪ್ಪೇನೂ ಆಗಿಲ್ಲ ಎಂಬುದು ನಿಮ್ಮ ನಿಲುವು ಆಗಿತ್ತು, ನೀವು ಪದೇ ಪದೇ ನಿರಾಶೆಗೊಳಿಸಿದಿರಿ. ಆದರೆ ಒಂದು ಮಾತು ಸತ್ಯ. ನಿಮ್ಮೊಂದಿಗೆ ಈಗಲೂ ಸಂವಾದ ನಡೆಸುವುದಕ್ಕೆ ಈ ನಾಡಿನ ಹಲವು ಪ್ರಗತಿಪರರು ಒಪ್ಪಿ ಬಂದು ಪ್ರಶ್ನೆ ಕೇಳಿದರು. ಎಲ್.ಎಸ್.ಶೇಷಗಿರಿರಾವ್ ಅವರು ಸಮ್ಮೇಳನಾಧ್ಯಕ್ಷರಾದಾಗ, ಕೋಮುವಾದಿಗಳೊಂದಿಗೆ ಸಂಬಂಧ ಹೊಂದಿದ್ದರು ಎನ್ನುವ ಕಾರಣಕ್ಕೆ ಉಡುಪಿಯಲ್ಲಿ ಪರ್ಯಾಯ ಸಮ್ಮೇಳನವೇ ಆಯೋಜನೆಯಾಯಿತು. ಬಹುಶಃ ನಿಮ್ಮ ಬದಲಿಗೆ, ಹಾಸನ ಜಿಲ್ಲೆಯವರಾದ, ನಿಮ್ಮ ಭಾಷಣದಲ್ಲೂ ಸ್ಥಾನ ಪಡೆದುಕೊಂಡ ಎಸ್.ಎಲ್.ಭೈರಪ್ಪ ಅಧ್ಯಕ್ಷರಾಗಿದ್ದರೆ, ಖಂಡಿತಾ ಹಾಸನದಲ್ಲಿ ಪರ್ಯಾಯ ಸಮ್ಮೇಳನ ನಡೆದೇ ನಡೆಯುತ್ತಿತ್ತು.


ಅಂತಹ ಅಪಸ್ವರ ನೀವು ಅಧ್ಯಕ್ಷರಾಗಿ ಆಯ್ಕೆಯಾದಾಗ ಕೇಳಿಬರಲಿಲ್ಲ, ಅದಕ್ಕೆ ಕಾರಣಗಳಿವೆ. ನಿಮ್ಮ ವರ್ತಮಾನ ಹಾಗೂ ಕಳೆದ ಹಲವು ವರ್ಷಗಳ ಸಿದ್ದಲಿಂಗಯ್ಯನವರ ಮೇಲಿನ ಸಿಟ್ಟಿಗಿಂತ ಹೆಚ್ಚಾಗಿ, 'ಹೊಲೆ ಮಾದಿಗರ ಹಾಡ'ನ್ನು ಬರೆದ, ಯಾರಿಗೆ ಬಂತು ಎಲ್ಲಿಗೆ ಬಂತು 47ರ ಸ್ವಾತಂತ್ರ್ಯ ಎಂದು ಕೇಳಿದ ಸಿದ್ದಲಿಂಗಯ್ಯನವರ ಮೇಲಿನ ಅಭಿಮಾನ ಅದಕ್ಕೆ ಒಂದು ಮುಖ್ಯ ಕಾರಣ. ಇದಲ್ಲದೇ ಬಹುಶಃ ನೋವುಂಡ ಸಮುದಾಯದಿಂದ ಬಂದ ವ್ಯಕ್ತಿ ಮಾಡಿದ ತಪ್ಪನ್ನು ಅತಿಯಾಗಿ ನೋಡಬಾರದು ಎಂಬ ವಿವೇಚನಾ ಪ್ರಜ್ಞೆಯೂ ಕಾರಣವಿರಬಹುದು. ಆದರೆ 'ಮನುಸ್ಮೃತಿಯಲ್ಲಿ ಒಳ್ಳೆಯದ್ದೂ ಇರುವುದರಿಂದ ನಾನು ಆ ಪುಸ್ತಕವನ್ನು ಬಿಡುಗಡೆ ಮಾಡಿದೆ' ಎಂಬ ನಿಮ್ಮ ಹೇಳಿಕೆಯು ವಿವೇಚನೆಯು ನಿಮ್ಮಲ್ಲಿ ಸಂಪೂರ್ಣ ಗೈರುಹಾಜರಾಗಿರು ವುದನ್ನು ತೋರಿಸುತ್ತದೆ.

ಮನುಸ್ಮೃತಿಯನ್ನು ಸುಟ್ಟ ಬಾಬಾಸಾಹೇಬರ ಸಿದ್ಧಾಂತವನ್ನು ಎತ್ತಿ ಹಿಡಿದು ಹೋರಾಡಿದ ಚಳವಳಿಯ ಹಿನ್ನೆಲೆ ನಿಮ್ಮದು. ಈಗ ನಿಮ್ಮಂಥವರಿಂದಲೇ ಮನುಸ್ಮೃತಿ ಪುಸ್ತಕ ಬಿಡುಗಡೆ ಮಾಡಿಸುವುದರ ಮೂಲಕ ಏನನ್ನು ಮರಳಿ ಸ್ಥಾಪನೆ ಮಾಡಿಕೊಂಡರು ಎಂಬ ಆಲೋಚನೆ ನಿಮ್ಮಲ್ಲಿ ಸುಳಿದೇ ಇಲ್ಲವೇ? ಆ ಕಾಲದ ಅವಕಾಶವಾದದ ಕಾರಣದಿಂದ ನೀವು ಹಾಗೆ ಮಾಡಿದ್ದಿರಬಹುದು; ನಂತರ ಪಶ್ಚಾತ್ತಾಪ ಪಟ್ಟಿರುತ್ತೀರಿ ಎಂಬ ನಮ್ಮಂಥವರ ಆಶಯಕ್ಕೆ ತಣ್ಣೀರೆರಚುವಂತೆ ನೀವು ಸಮ್ಮೇಳನದಲ್ಲಿ ನಿಮ್ಮ ಕೃತ್ಯವನ್ನು ಸಮರ್ಥಿಸಿಕೊಂಡಿರಿ. ಇದು ಕ್ಷಮೆಗೆ ಅರ್ಹವಲ್ಲವೇ ಅಲ್ಲ.

'ದೇವನೂರ ಮಹಾದೇವ ಸಮ್ಮೇಳನದ ಈ ವೇದಿಕೆಯನ್ನು ಬಳಸಿಕೊಂಡು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೆ, ಅವರ ಹೋರಾಟಕ್ಕೆ ಬಲ ಬರುತ್ತಿತ್ತು' ಎಂದು ನೀವು ಸಂವಾದದಲ್ಲಿ ಹೇಳಿದಿರಿ. ಇದು ವಾಸ್ತವವಲ್ಲ, ಅವರು ನಿರಾಕರಿಸಿದ್ದರಿಂದಲೇ ಇಡೀ ಸಮ್ಮೇಳನ ಆ ವಿಚಾರದ ಸುತ್ತ ಸುತ್ತಿತು. ಆ ಮೂಲಕ ದೇವನೂರರು ನಿರಾಕರಿಸುವುದರ ಹಿಂದಿನ ತಮ್ಮ ಸದುದ್ದೇಶವನ್ನು ಈಡೇರಿಸಿಕೊಂಡರು, ಅಲ್ಲವೇ? ಸಮ್ಮೇಳನದಲ್ಲಿ ಅವರು ಪ್ರತಿಪಾದಿಸಿದ ವಿಚಾರಕ್ಕೆ ಪೂರಕವಾದ ಅಂಶವು ಏಕೈಕ ನಿರ್ಣಯವಾಗಿ ಅಂಗೀಕೃತಗೊಂಡಿತು. ಇಲ್ಲದಿದ್ದರೆ ಅದೂ ಒಂದು ನಿರ್ಣಯವಾಗಿರುತ್ತಿತ್ತು; ಅಥವಾ ಅದೂ ಒಂದು ಗೋಷ್ಠಿಯ ವಿಚಾರವಾಗಿರುತ್ತಿತ್ತು, ಹೆಚ್ಚೆಂದರೆ, ಸಮ್ಮೇಳನಾ ಧ್ಯಕ್ಷರಾಗಿ ಅವರು ಇದನ್ನು ಒತ್ತಿ ಹೇಳಬಹುದಾಗಿತ್ತು, ಈಗ? ಇಡೀ ಸಮ್ಮೇಳನ ಅದರ ಕುರಿತು ಮಾತನಾಡಿತು; ನಿಮ್ಮನ್ನೂ ಒಳಗೊಂಡು.

ತಪ್ಪಾಗಿಯೋ ಅಥವಾ ಸರಿಯಾಗಿಯೋ, ಪರಿಣಾಮಕಾರಿ ಹೌದೋ ಅಲ್ಲವೋ, ರಾಜ್ಯ ಸಚಿವ ಸಂಪುಟವು ಈ ಸಮ್ಮೇಳನಕ್ಕೆ ಮುಂಚೆಯೇ ಕನ್ನಡ ಮಾಧ್ಯಮ ವನ್ನು ಕಡ್ಡಾಯ ಮಾಡುವ ನಿರ್ಣಯ ತೆಗೆದುಕೊಂಡಿತು. ಅದೂ ಸಹ ದೇವನೂರರು ತೆಗೆದುಕೊಂಡ ನಿರ್ಧಾರದಿಂದ ಉಂಟಾದ ಒತ್ತಡದ ಕಾರಣಕ್ಕೇ ಆಗಿತ್ತು.

ಈ ಸಮ್ಮೇಳನದ ಮೇಲೆ ಒಂದು ಚಾರಿತ್ರಿಕ ಜವಾಬ್ದಾರಿ ಇತ್ತು, ಅದಕ್ಕೂ ಮಿಗಿಲಾಗಿ ಕರ್ನಾಟಕದ ಮೇಲೆಯೇ ಒಂದು ಚಾರಿತ್ರಿಕ ಜವಾಬ್ದಾರಿ ಇತ್ತು ಮತ್ತು ಇದೆ. ಸುಪ್ರೀಂಕೋರ್ಟಿನ ಸಂವಿಧಾನ ಪೀಠದಿಂದ ನೀಡಲ್ಪಟ್ಟ ತೀರ್ಪಿನ ಮೂಲ ಮೊಕದ್ದಮೆಯು ಕರ್ನಾಟಕದ್ದು. ಇದರ ಪರಿಣಾಮವಾಗಿ ಈ ದೇಶದ ಎಲ್ಲ ಜನಭಾಷೆಗಳೂ ಕಂಟಕವನ್ನೆದುರಿಸಬೇಕಾಗಿ ಬಂದಿದೆ. ಉಳಿದ ರಾಜ್ಯಗಳ ಪರಿಸ್ಥಿತಿಯೂ ಕರ್ನಾಟಕಕ್ಕಿಂತ ಭಿನ್ನವಾಗಿಲ್ಲ, ಆದರೆ ಭಾಷೆಯ ವಿಚಾರದಲ್ಲಿ ಹೆಚ್ಚಿನ ಅಭದ್ರತೆಯನ್ನು ಹೊಂದಿರುವುದು ಕರ್ನಾಟಕದವರೇ ಆಗಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ಸಂವಿಧಾನ ಪೀಠದ ತೀರ್ಪಿನ ನಂತರದ ಸಮ್ಮೇಳನವು ಬಹುಮುಖ್ಯ ಜವಾಬ್ದಾರಿಯನ್ನು ಹೊರಲೇಬೇಕಿತ್ತು, ಆ ಜವಾಬ್ದಾರಿ ಹೊರುವಂತೆ ಆಗಿದ್ದು, ಕನ್ನಡದ ಬಹುಮುಖ್ಯ ಸಾಹಿತಿಯೊಬ್ಬರು ಸಮ್ಮೇಳನಾಧ್ಯಕ್ಷತೆಯನ್ನು ನಿರಾಕರಿಸಿದ್ದರಿಂದ. ಹೊರಗಿದ್ದು ಹೋರಾಟ ಮಾಡಿದ್ದರಿಂದ.



ಕರ್ನಾಟಕದ ಬಹುಮುಖ್ಯ ಚಳವಳಿಯ ಆರಂಭದ ಕಾಲಘಟ್ಟದಲ್ಲಿ ಪ್ರಮುಖ ಪಾತ್ರ ವಹಿಸಿದ ಮತ್ತು ಕನ್ನಡಕ್ಕೆ ಹೊಸ ನುಡಿಗಟ್ಟನ್ನು ತಂದುಕೊಟ್ಟ ಇಬ್ಬರು ವ್ಯಕ್ತಿಗಳನ್ನು ಎದುರುಬದುರು ನಿಲ್ಲಿಸುವ ಕಾರಣಕ್ಕೆ ಈ ಮಾತುಗಳನ್ನು ಬರೆಯುತ್ತಿಲ್ಲ. ಬದಲಿಗೆ, ನೀವು ಪ್ರತಿಪಾದಿಸಿದ ವ್ಯವಸ್ಥೆಯೊಳಗಿನ ಹೋರಾಟ ಮತ್ತು ವ್ಯವಸ್ಥೆಯ ಹೊರಗಿನಿಂದ ಹೋರಾಟ ಎಂಬ ಎರಡು ಮಾದರಿಗಳ ನಡುವಿನ ವ್ಯತ್ಯಾಸವನ್ನು ಸೂಕ್ತವಾಗಿ ಅರಿಯಲೇಬೇಕಾದ ಈ ಕಾಲದ ಒತ್ತಡದ ಕಾರಣಕ್ಕೆ ಇದನ್ನು ಹೇಳಬೇಕಿದೆ.

ಸಮ್ಮೇಳನಾಧ್ಯಕ್ಷತೆ ಒಪ್ಪಿಕೊಂಡಿದ್ದಕ್ಕೆ, ಪದೇ ಪದೇ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರಿಗೆ ಕೃತಜ್ಞತೆ ಅರ್ಪಿಸಿದ್ದಕ್ಕೆ, ಅಧ್ಯಕ್ಷ ಭಾಷಣದಲ್ಲಿ ಪರಿಣಾಮಕಾರಿಯಾದ ನಿರ್ದಿಷ್ಟ ಕ್ರಮಗಳಿಗೆ ಒತ್ತಾಯಿಸದಿದ್ದಕ್ಕೆ ಮಾಡುತ್ತಿರುವ ಆಕ್ಷೇಪಣೆ ಇದಲ್ಲ. ಪ್ರತಿಯೊಬ್ಬರೂ ಆಯ್ದುಕೊಳ್ಳುವ ಹೋರಾಟದ ರೂಪಗಳಲ್ಲಿ ವ್ಯತ್ಯಾಸ ಇರಲು ಸಾಧ್ಯ. ಆದರೆ ಬಹುಮುಖ್ಯವಾದ ಆಕ್ಷೇಪಣೆ ಇರುವುದು ಎರಡು ಕಾರಣಗಳಿಗೆ. ಒಂದು, ಕೋಮುವಾದದ ವಿರುದ್ಧ ನೀವು ಸಮ್ಮೇಳನಾಧ್ಯಕ್ಷರಾಗಿ ಮಾತನಾಡಲಿಲ್ಲ ಮತ್ತು ಎರಡನೆಯದಾಗಿ, ಮನುಸ್ಮೃತಿ ಪುಸ್ತಕ ಬಿಡುಗಡೆಯನ್ನು ಸಮರ್ಥಿಸಿಕೊಂಡಿರಿ. ಈ ಕಾಲ ನಮ್ಮೆಲ್ಲರಿಗೆ ಒಡ್ಡಿರುವ ಲಿಟ್ಮಸ್ ಪರೀಕ್ಷೆಯಲ್ಲಿ ನೀವು ನಪಾಸಾದಿರಿ.

ಕಾರ್ಮಿಕರ ಮತ್ತು ಭೂರಹಿತ ಕೃಷಿ ಕಾರ್ಮಿಕರ ವಿಚಾರ ನಿಮ್ಮ ಭಾಷಣದಲ್ಲಿ ಏಕೆ ಇರಲಿಲ್ಲ ಎಂದು ಕೇಳುವುದಿಲ್ಲ, ಈಗಾಗಲೇ 20 ವರ್ಷಗಳಿಂದ ವಿವಿಧ ಸಮ್ಮೇಳನಾಧ್ಯಕ್ಷರು ಹೇಳಿರುವ ವಿಚಾರವೇ ಪುನರಾವರ್ತನೆಯಾಗಿದೆ ಎಂತಲೂ ವಿಮರ್ಶೆ ಮಾಡುವುದಿಲ್ಲ, ಆದರೆ ನಿಮ್ಮ ಹಿಂದಿನ 8 ಸಮ್ಮೇಳನಾಧ್ಯಕ್ಷರಲ್ಲಿ ಒಬ್ಬರನ್ನು ಬಿಟ್ಟು ಎಲ್ಲರೂ ಒಂದು ವಿಚಾರವನ್ನು ಬಲವಾಗಿ ಪ್ರತಿಪಾದಿಸಿದ್ದರು. ಅದು ಈ ನಾಡನ್ನು ವಿಷದಂತೆ ವ್ಯಾಪಿಸುತ್ತಿರುವ ಕೋಮುವಾದದ ವಿರುದ್ಧ, ಘರ್‌ವಾಪಸಿ, ಗೋಡ್ಸೆಯ ವೈಭವೀಕರಣ, ಕೋಮುಗಲಭೆ ಇತ್ಯಾದಿಗಳು (ನಿಮ್ಮ ಅಧ್ಯಕ್ಷ ಭಾಷಣ ನಡೆಯುತ್ತಿರುವಾಗ್ಲೂ ಕರಾವಳಿಯಲ್ಲಿ ಗಲಭೆ ನಡೆಯುತ್ತಿತ್ತು, ನಿಮ್ಮೊಂದಿಗೆ ಸಂವಾದ ನಡೆಯುತ್ತಿರುವಾಗ ಕೊಪ್ಪಳದಲ್ಲಿ ಕೋಮು ಉದ್ವಿಗ್ನತೆಯನ್ನು ಉಂಟು ಮಾಡಲಾಗುತ್ತಿತ್ತು) ಈ ಪಾಟ ನಡೆಯುತ್ತಿರುವಾಗ ಅದನ್ನು ಮಾತ್ರ ಪ್ರಸ್ತಾಪಿಸಲಿಲ್ಲವೇಕೆ? ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದಾಗ ಅನುಕೂಲವಾಗಲಿ ಎಂಬ ಕಾರಣಕ್ಕೆ ಸಿದ್ಧಲಿಂಗಯ್ಯನವರು ಅದರ ಬಗ್ಗೆ ಪ್ರಸ್ತಾಪವನ್ನೇ ಮಾಡಲಿಲ್ಲ ಎಂದು ಟೀಕೆ ಮಾಡಿದರೆ ನಿಮ್ಮಲ್ಲಿ ಅದಕ್ಕೆ ಉತ್ತರವಿದೆಯೇ?

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಆದಿಕವಿ ಪಂಪನ ಮಾತನ್ನು ಈ ಸಮ್ಮೇಳನದ ಧ್ಯೇಯವಾಕ್ಯವನ್ನಾಗಿ ತೆಗೆದುಕೊಂಡಿರುವುದು ಔಚಿತ್ಯಪೂರ್ಣವಾಗಿದೆ ಎಂದು ಹೇಳಿದ್ದೀರಿ. ಆತನ ಮತ್ತೊಂದು ಮಾತನ್ನೂ ಉಲ್ಲೇಖಿಸಿದ್ದೀರಿ. 'ಕಸವರಂ ಎಂಬುದು ನೆರೆಸೈರಿಸಲ್ ಆರ್ಪೊಡೆ ಪರವಿಚಾರಮಂ ಪರಧರ್ಮಮಂ' ಎಂಬುದನ್ನು ಹೇಳುವಾಗಲಾದರೂ, ಈ ನಾಡನ್ನು ನುಂಗಲು ಬರುತ್ತಿರುವ ವಿಷಕಾರೀ ಶಕ್ತಿಗಳ ಕುರಿತು ನಾಲ್ಕು ಮಾತು ಹೇಳಬಹುದಿತ್ತಲ್ಲವೇ?

ಈ ರೀತಿಯಾಗಿ ನೀವು ಸೋತಿದ್ದು ನಮಗೆ ಖುಷಿ ತರುವ ವಿಚಾರವೇನಲ್ಲ, ನೂರು ರೀತಿಯ ಭಿನ್ನ ವಿಚಾರ ಧಾರೆಗಳಿದ್ದರೂ, ಇಂದು ದೇಶವನ್ನು ಆವರಿಸುತ್ತಿರುವ ಫ್ಯಾಸಿಸ್ಟ್ ರಾಜಕಾರಣದ ವಿರುದ್ಧ ಹೋರಾಡಲು ಎಲ್ಲರೂ ಜೊತೆ ಸೇರಬೇಕಿದೆ. ಕಳೆದ 20ಕ್ಕೂ ಹೆಚ್ಚು ವರ್ಷಗಳಿಂದ 'ವ್ಯವಸ್ಥೆಯ ಜೊತೆಗೆ ರಾಜಿ ಮಾಡಿಕೊಂಡಿರುವ' ಸಿದ್ಧಲಿಂಗಯ್ಯನವರು ಈಗಲಾದರೂ ಜೊತೆ ಸೇರಿಯಾರೇ ಎಂಬ ಪ್ರಶ್ನೆಗೆ ನೀವು ಕೊಟ್ಟ ಉತ್ತರ 'ಭಾಷಣ ತುಂಬಾ ದೊಡ್ಡದಿತ್ತು, ಎಲ್ಲವನ್ನೂ ಸೇರಿಸಲು ಆಗಲಿಲ್ಲ' ಎಂದು.

ಅಧಿಕಾರಸ್ಥರೊಡನೆ, ಅಧಿಕಾರದೊಡನೆ ಸುದೀರ್ಘ ಕಾಲದ ನಿಮ್ಮ ಸಾಂಗತ್ಯವು ಈ ಕಾಲದ ಕರೆಗೆ ಓಗೊಡದಷ್ಟು ದೂರಕ್ಕೆ ನಿಮ್ಮನ್ನು ಕರೆದೊಯ್ದಿದೆ. ಫ್ಯಾಸಿಸಂ ಬಂದಾಗ ಹೊರಗೆ ಬಂದು ಹೋರಾಡಬೇಕಾಗುತ್ತದೆ. ಯಾಕೆಂದರೆ ಆಗ ಒಳಗಿದ್ದು ಹೋರಾಡುವುದು ಸಾಧ್ಯವಾಗುವುದಿಲ್ಲ ಎಂಬ ನಿಮ್ಮ ಮಾತು ಕೇಳಿದಾಗ ಬಾಬಾಸಾಹೇಬರದ್ದೊಂದು ಮಾತನ್ನು ಹೇಳಬೇಕೆನಿಸುತ್ತದೆ. 'ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು'. ಏಕೆಂದರೆ, ಫ್ಯಾಸಿಸ್ಟರು ಹಂತಹಂತವಾಗೇ ಆವರಿಸುವುದು. ಅವರು ಸೂಕ್ಷ್ಮವಾಗಿ ಮತ್ತು ಹಸಿಹಸಿಯಾಗಿ, ಬಿಡಿಬಿಡಿಯಾಗಿ ಮತ್ತು ಇಡಿಯಾಗಿ ಈ ನಾಡನ್ನು ಆವರಿಸುತ್ತಿದ್ದ ಕಾಲದಲ್ಲೇ ನೀವು ಅದರ ಮುಂಚೂಣಿ ನಾಯಕನನ್ನು 'ಅಭಿನವ ಬಸವಣ್ಣ' ಎಂದು ಬಣ್ಣಿಸಿದಿರಿ. ಅದಾಗಿ ಕೆಲವೇ ದಿನಗಳಲ್ಲಿ ಆತ ಜೈಲಿಗೆ ಹೋಗಿ ಬರಬೇಕಾಯಿತು. ಫ್ಯಾಸಿಸ್ಟ್ ಪಕ್ಷವೇ ಆ ಹೊತ್ತು ಸಹಿಸಿಕೊಳ್ಳಲಾಗದಷ್ಟು ಭ್ರಷ್ಟತೆಯನ್ನು ಆತ ಹೊದ್ದುಕೊಂಡಿದ್ದರಿಂದ, ಕೆಲ ಕಾಲ ಪಕ್ಷವನ್ನೂ ಆತ ಬಿಡಬೇಕಾಗಿ ಬಂದಿತ್ತು.

ಕನ್ನಡ ಪರಂಪರೆಗೂ, ಬಸವಣ್ಣನಿಗೂ ಇದಕ್ಕಿಂತ ಅಪಚಾರ ಮಾಡಬಹುದೇ? ನೀವು ಬಿಡುಗಡೆ ಮಾಡಬಾರದಾಗಿದ್ದ ಪುಸ್ತಕವನ್ನು ಬಿಡುಗಡೆ ಮಾಡಿದಾಗ ನಿಮ್ಮೊಂದಿಗೆ ವೇದಿಕೆ ಹಂಚಿಕೊಂಡಿದ್ದು ಹೊ.ವೆ.ಶೇಷಾದ್ರಿ. ಇದೇ ಕನ್ನಡ ನಾಡಿನಿಂದ ಅವತರಿಸಿ, ಕೋಮು ವಿಷಬೀಜ ಬಿತ್ತುವ ಸಂಸ್ಥೆಯ ಅತ್ಯುನ್ನತ ಸ್ಥಾನಗಳಲ್ಲೊಂದರಲ್ಲಿ ಪ್ರತಿಷ್ಠಾಪಿತರಾಗಿದ್ದರು. ಅವರು ಇನ್ನೂ ಒಂದು ಪುಸ್ತಕವನ್ನು ಬರೆದಿದ್ದಾರೆ. 'ಆ ಕಾಳರಾತ್ರಿಯ ಪ್ರಶ್ನೆ' ಎಂಬ ಪುಸ್ತಕವದು. ಗಾಂಧಿಯನ್ನು ಕೊಂದಿದ್ದಕ್ಕೆ ಪರೋಕ್ಷ ಸಮರ್ಥನೆಯನ್ನು ಒದಗಿಸುವ ಪುಸ್ತಕವದು. ಫ್ಯಾಸಿಸಂ ಬಂದನಂತರ ಹೊರಗಿನಿಂದ ಹೋರಾಟವೆಂದಿದ್ದೀರಿ. ಫ್ಯಾಸಿಸಂಗೆ ಭದ್ರವಾದ ಅಡಿಪಾಯ ಹಾಕುತ್ತಿರುವಾಗ ಅವರ ಜೊತೆ ಇದ್ದು, ಅದಕ್ಕೆ ಸಹಕರಿಸಿ, ಮಾನ್ಯತೆಯನ್ನು ತಂದುಕೊಟ್ಟು ನಂತರ ಬೀದಿಗೆ ಬಂದು ಹೋರಾಟ ಮಾಡಲು ಸಾಧ್ಯವೇ?

ಕಡೆಯದೊಂದು ಪ್ರಶ್ನೆ ಕೇಳಿ ಮುಗಿಸುತ್ತೇನೆ. ನಿಮ್ಮ ಆ ಕಾಲದ ಕವಿತೆಯೊಂದರಲ್ಲಿ ನೀವು ಅಂಬೇಡ್ಕರರನ್ನೂ ಪ್ರಶ್ನಿಸಿದ್ದಿರಿ. ಕೇಳಬೇಕಾಗಿದ್ದ ಪ್ರಶ್ನೆಗಳೇ. ಅವನ್ನು ಕೇಳಿಕೊಳ್ಳದಿದ್ದರೆ ಅಂಬೇಡ್ಕರರ ಹೋರಾಟವನ್ನು ಮುಂದಕ್ಕೆ ತೆಗೆದುಕೊಂಡು ಹೋಗಲಾಗುತ್ತಿರಲಿಲ್ಲ, ಮಲಗಿದವರನ್ನು ಕೂರಿಸಿದ್ದ ಬಾಬಾಸಾಹೇಬರ ಕೆಲಸ ಮುಂದುವರೆಸಿ, ನಿಲ್ಲಿಸಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಈಗಿನ ಪ್ರಶ್ನೆ ಏನೆಂದರೆ, ಸಿದ್ದಲಿಂಗಯ್ಯನವರನ್ನು ಪ್ರಶ್ನೆ ಮಾಡಬಾರದೇ? ನೀವು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದಾಗ, ನಿಮ್ಮಿಂದಲೇ ಕಲಿತ ನಿಮ್ಮ ಶಿಷ್ಯರೊಬ್ಬರು ಬಹಿರಂಗವಾಗಿ ಕೆಲವು ಪ್ರಶ್ನೆಗಳನ್ನು ಕೇಳಿದರು. ಅಂತಹ ಪ್ರಶ್ನೆಗಳನ್ನು ಕೇಳಬಾರದಿತ್ತು ಎಂದು ಅವರಿಗೆ ಸೂಚಿಸಲಾಯಿತು. ಕೇಳಿದ ಪ್ರಶ್ನೆಗಳನ್ನು ಚರ್ಚಿಸುವ ಬದಲು, ಅದು ಯಾವ ವರ್ಗದಿಂದ ಬಂದ ಪ್ರಶ್ನೆಗಳು ಎಂಬುದನ್ನು ಹೇಳಲಾಯಿತು.

ಪ್ರಶ್ನೆ ಕೇಳುವುದನ್ನು, ಸಂವಾದ ನಡೆಸುವುದನ್ನು, ವಾಗ್ವಾದಕ್ಕಿಳಿಯುವುದನ್ನು ನೀವು ಮತ್ತು ನಿಮ್ಮಂಥವರು ಒಂದಿಡೀ ತಲೆಮಾರಿಗೆ ಕಲಿಸಿಕೊಟ್ಟಿದ್ದೀರಿ. ನಮ್ಮಂಥವರು ಅದನ್ನು ಮುಂದುವರೆಸುತ್ತಿದ್ದೇವೆ. ಆದರೆ, ಇದು ಸಂವಾದವಾಗಲಿಲ್ಲ; ಈ ಅಂಕಣಕಾರನಿಗಿರುವ ಅಂಕಣದ ಸೌಲಭ್ಯ ಬಳಸಿಕೊಂಡು ಏಕಪಕ್ಷೀಯವಾಗಿ ನಿಮಗೆ ಪ್ರಶ್ನೆಗಳನ್ನು ಹಾಕಲಾಗಿದೆ. ನೀವು ಉತ್ತರಿಸಿದರೆ ಇದು ಸಂವಾದವಾಗುತ್ತದೆ. ಬಹುಶಃ ಅಂತಹ ಸಂವಾದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಈ ಪತ್ರಿಕೆಯ ಸಂಪಾದಕರು ಹಿಂತೆಗೆಯುವುದಿಲ್ಲ, ನೀವು ಉತ್ತರಿಸಬೇಕೆಂದು ನಿಮ್ಮಲ್ಲಿ ಕೋರಿಕೊಳ್ಳುತ್ತೇನೆ.

...ದೇವನೂರರ ಪರ; ಭೈರಪ್ಪನ ವಿರುದ್ಧ



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

...ಳೆದ ವಾರ ಎರಡು ಪ್ರಮುಖ ಸಭೆಗಳಲ್ಲಿ ...ಸುವ ಅವಕಾಶ ನನಗೆ ಸಿಕ್ಕಿತ್ತು. ಮೊದಲನೆಯದು ... 31ರಂದು ಜಮಖಂಡಿಯಲ್ಲಿ ನಡೆದ 'ಶ್ರಮಬಿಂದು ...ದ ಬೆಳ್ಳಿಹಬ್ಬ'. ಸಿದ್ದು ನ್ಯಾಮಗೌಡರ ಮುಖಂಡತ್ವದಲ್ಲಿ ...ಂಡಿ ಸುತ್ತಮುತ್ತಲಿನ ರೈತರು ನಿರ್ಮಿಸಿದ ಬ್ಯಾರೇಜಿಗೆ ...ವರ್ಷ ತುಂಬಿದ್ದರಿಂದ ಮೂರು ದಿನಗಳ ...ಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 25 ವರ್ಷಗಳ ... ನಾನು ಆ ಬ್ಯಾರೇಜಿಗೆ ಭೇಟಿ ನೀಡಿದ್ದರಿಂದ ... ಅಷ್ಟ ಕೂಡ ಅದರ ಬಗ್ಗೆ ಬರೆದಿದ್ದರಿಂದ ನನ್ನನ್ನೂ ...ರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು.

...ಮಖಂಡಿ ಬ್ಯಾರೇಜಿಗೆ ಹೊಸದಾಗಿ ಅಳವಡಿಸಿರುವ ... ಪಂಪ್‌ಗಳು ನೀರನ್ನು ಎತ್ತುತ್ತಿದ್ದದ್ದು ಕಣ್ಣಿಗೆ ...ಂತಿತ್ತು. ರೈತರಂತೂ ಸಂತಸದಿಂದ ಬೀಗುತ್ತಿದ್ದರು. ...ಭ್ರಮದಲ್ಲಿ ಪಾಲ್ಗೊಳ್ಳಲು ಮತ್ತು ಮುಖ್ಯಮಂತ್ರಿ ...ಮಯ್ಯನವರನ್ನು ನೋಡಲು ಸಾವಿರಾರು ರೈತರು ...ಂಡಿಯಲ್ಲಿ ಜಮಾಯಿಸಿದ್ದರು. ಹಿಂದಿನ ದಿನವೇ ... ಜಾರಕಿಹೊಳಿ' ಕೂಡ ತಮ್ಮ ಮುನಿಸನ್ನು ...ರಿಂದ ಸಿದ್ದರಾಮಯ್ಯನವರೂ ಸಂತೋಷದಲ್ಲಿದ್ದರು.

...ಮಖಂಡಿಯಿಂದ ವಾಪಸ್ ಬಂದ ದಿನವೇ ...ಬೆಳಗೊಳಕ್ಕೆ ಗೆಳತಿ ಕೆ. ಷರೀಫಾಳ ಜೊತೆ ಹೊರಟೆ. ...ಡೆಯುತ್ತಿದ್ದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ...ನದ ಒಂದು ಸಭೆಯಲ್ಲಿ ನಾನು ಭಾಗವಹಿಸುವುದಿತ್ತು. ...ಯಪಟ್ಟಣದಲ್ಲಿ ರಾತ್ರಿ ತಂಗಿದ್ದಾಗ ಸಮ್ಮೇಳನದ ...ಟನಾ ಸಭೆಯಲ್ಲಿ ಎಸ್.ಎಲ್.ಭೈರಪ್ಪ ...ಶ್ವರಯ್ಯನವರಿಗೆ ಸೂಕ್ತವಾದ ಪ್ರಾತಿನಿಧ್ಯವನ್ನು ...ಳನದಲ್ಲಿ ಕೊಟ್ಟಿಲ್ಲ. ಕನ್ನಂಬಾಡಿ ಅಣೆಕಟ್ಟೆಗೆ ಅವರೇ ... ಪುರುಷರು' ಎಂದು ವಾದಿಸಿದ್ದರು ಎಂದು ...ವ್ತಯಿತು.

ನಾನು ಸಾಹಿತಿಯೂ ಅಲ್ಲ, ಸಾಹಿತ್ಯದ ವಿದ್ಯಾರ್ಥಿನಿಯೂ ಅಲ್ಲ, ಕೇವಲ ಪತ್ರಕರ್ತಳಾದ ನನ್ನನ್ನು ಕಾಡುತ್ತಿರುವ ಎರಡು ವಿಷಯಗಳನ್ನು ಕುರಿತು ಮಾತನಾಡುತ್ತೇನೆ. ಮೊದಲನೆಯದು ಎದೆಗೆ ಬಿದ್ದ ಅಕ್ಷರ.

'ಭೂಮಿಗೆ ಬಿದ್ದ ಬೀಜ
ಎದೆಗೆ ಬಿದ್ದ ಅಕ್ಷರ
ಇಂದಲ್ಲ ನಾಳೆ ಫಲ ಕೊಡುವುದು'

ಎಂದು ಹೇಳಿರುವ ದೇವನೂರ ಮಹಾದೇವ ಅವರು ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂಬ ನಿಲುವಿಗೆ ಬದ್ಧರಾಗಿ ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಿರಾಕರಿಸಿದರು. ಶಿಕ್ಷಣ ಮಾಧ್ಯಮ ತುಂಬಾ ಮುಖ್ಯವಾದ ವಿಷಯ. ನನ್ನ ಎದೆಗೆ ಬಿದ್ದ ಮೊದಲ ಅಕ್ಷರಗಳು ಅಆಇಈ ಅಲ್ಲ, ಬದಲಾಗಿ ಎಬಿಸಿಡಿ. ಪರಿಣಾಮವಾಗಿ ಅತ್ತ ಕನ್ನಡದ ಬೇರುಗಳಿಲ್ಲದ, ಇತ್ತ ಇಂಗ್ಲಿಷ್‌ನ ರೆಂಬೆಗಳೂ ಇಲ್ಲದ ವಿಚಿತ್ರ ಗಿಡವಾಗಿ ನಾನು ಬೆಳೆದೆ. ಇದರಿಂದಾಗಿ ನನಗಾದ ಲಾಭಕ್ಕಿಂತ ನಷ್ಟವೇ ಹೆಚ್ಚು. ಯಾಕೆಂದರೆ ನಾನು ಇಲ್ಲಿನ ಮಾವಿನ ಮರವೂ ಆಗಲಿಲ್ಲ, ಇಂಗ್ಲೆಂಡಿನ ಯಾವುದೋ ತಳಿಯ ಮರವೂ ಆಗಲಿಲ್ಲ. ಹೋಲಿಸಿ ನೋಡಿದರೆ, ನನಗಿಂತ ತುಂಬಾ ಕಿರಿಯರಾದ, ಕನ್ನಡ ಮಾಧ್ಯಮದಲ್ಲೇ ಓದಿದ ಅದೆಷ್ಟೊ ಯುವಕ-ಯುವತಿಯರು ನನಗಿಂತ ಹೆಚ್ಚು ಓದಿದ್ದಾರೆ, ಪ್ರಬುದ್ಧರಾಗಿದ್ದಾರೆ. ಹದಿನೈದು ವರ್ಷಗಳ ಹಿಂದೆ ಕನ್ನಡ ನನ್ನ ಬದುಕಿನಲ್ಲಿ ಅನಿವಾರ್ಯವಾದಾಗ ನಾನು ನನ್ನಲ್ಲಿನ ಗಿಡಕ್ಕೆ ಕನ್ನಡವನ್ನು ಕಸಿ ಮಾಡಿಕೊಳ್ಳಬೇಕಾಯಿತು. ಹಾಗೆ ಮಾಡಿಕೊಂಡಿದ್ದರಿಂದ ಈಗ ಚೂರುಪಾರು ಜನೋಪಯೋಗಿ ಆಗಿದ್ದೇನೆ ಎಂದುಕೊಂಡಿದ್ದೇನೆ.

ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂಬ ದೇವನೂರರ ಲೇಖನವನ್ನು ಜನಶಕ್ತಿಯ ಕಾರ್ಯಕರ್ತರು ಈ ಸಮ್ಮೇಳನದಲ್ಲಿ ವಿತರಿಸುತ್ತಿದ್ದಾರೆ. ದಯವಿಟ್ಟು ಎಲ್ಲರೂ ಅದನ್ನು ಪಡೆದು ಓದಿರಿ. ಜೊತೆಗೆ ಮಾತೃಭಾಷೆಯ ಪರವಾಗಿ ಇಲ್ಲಿ ಸಹಿಗಳನ್ನೂ ಸಂಗ್ರಹಿಸಲಾಗುತ್ತಿದೆ. ಎಲ್ಲರೂ ಆ ಮನವಿಗೆ ಸಹಿ ಹಾಕಿ ಎಂದು ವಿನಂತಿಸಿಕೊಳ್ಳುತ್ತೇನೆ.

ನನ್ನನ್ನು ಕಾಡುತ್ತಿರುವ ಎರಡನೆ ವಿಷಯವನ್ನು ಒಂದು ಪ್ರಸಂಗವನ್ನು ಕೊಡುವ ಮೂಲಕ ಹಂಚಿಕೊಳ್ಳುತ್ತೇನೆ. ಪ್ರಸಂಗ ಹೀಗಿದೆ: ಒಬ್ಬ ಇಂಜಿನಿಯರ್ ಇದ್ದಾರೆ. ಅವರು ತಮ್ಮ ಕೆಲಸದಲ್ಲಿ ಎಷ್ಟು ಮುಳುಗಿದ್ದಾರೆಂದರೆ ಅವರಿಗೆ ತಮ್ಮ ಪತ್ನಿಯತ್ತ ಗಮನಕೊಡಲು ಪುರುಸೊತ್ತೇ ಇರುವುದಿಲ್ಲ. ಸುಖ ಮತ್ತು ಸಂತೋಷ ಇಲ್ಲದ ಪತ್ನಿ ಕೊನೆಗೆ ಪರ ಪುರುಷನೊಂದಿಗೆ ಸಂಬಂಧ ಹೊಂದುತ್ತಾಳೆ...

ಲೇಖಕ ಭೈರಪ್ಪನವರ ಪ್ರಕಾರ ಪರ ಪುರುಷನ ಸಂಗ ಮಾಡುವ ಮಹಿಳೆ ಅವರ 'ವಂಶವೃಕ್ಷ' ಕಾದಂಬರಿಯ ನಾಯಕಿಯಂತೆ ಬಂಜೆ ಆಗುತ್ತಾಳೆ ಅಥವಾ ಅವರ ಇನ್ನೊಂದು ಕಾದಂಬರಿಯಾದ 'ಕವಲು' ನಲ್ಲಿ ತೋರಿರುವಂತೆ ಅಂತಹ ಮಹಿಳೆ ಸೆಕ್ಸ್ ಮೇನಿಯಾಕ್ ಆಗುತ್ತಾಳೆ, ಇಂಜಿನಿಯರ್ ಪತಿಯ ಆಸ್ತಿಯನ್ನೆಲ್ಲ ಲಪಟಾಯಿಸುವ ಮೋಸಗಾತಿ ಆಗುತ್ತಾಳೆ. ಭೈರಪ್ಪನ ಪ್ರಕಾರ ಓದಿದ ಮಹಿಳೆಯರನ್ನು, ತಮ್ಮ ಹಕ್ಕುಗಳಿಗಾಗಿ ದನಿ ಎತ್ತುವ ಮಹಿಳೆಯರನ್ನು ಮದುವೆಯಾದರೆ ಸಾಂಸಾರಿಕ ಬದುಕು ಸುಖವಾಗಿರುವುದಿಲ್ಲ. ಬದಲಾಗಿ ಅವರು ಸುಖ ಸಂಸಾರಕ್ಕೆ ಕೊಡುವ ಏಕೈಕ ಸೂತ್ರ ಬುದ್ಧಿಮಾಂದ್ಯ ಮಹಿಳೆಯನ್ನು ಮದುವೆಯಾಗುವುದು. 'ಕವಲು' ಕಾದಂಬರಿ ಹೇಳುವುದೂ ಇದನ್ನೇ.


ಆದರೆ ಮನುಷ್ಯತ್ವ ಇರುವ ವ್ಯಕ್ತಿ ಇಂತಹ ಪ್ರಸಂಗ ಎದುರಾದಾಗ ಹೇಗೆ ವರ್ತಿಸುತ್ತಾರೆ? ಆ ಪ್ರಸಂಗದಲ್ಲಿರುವ ಇಂಜಿನಿಯರ್ ವಿಶ್ವೇಶ್ವರಯ್ಯನವರು ಎಂಬುದು ಎಲ್ಲರಿಗೂ ಗೊತ್ತು. ಅವರ ಪತ್ನಿ ಬೇರೆಯವನನ್ನು ಪ್ರೀತಿಸಿದಾಗ ಆತನೊಂದಿಗೇ ನಿನಗೆ ನೆಮ್ಮದಿ ಮತ್ತು ಸುಖ ಇದೆ ಎನ್ನುವುದಾದರೆ ಆತನ ಜೊತೆಗೆ ಹೋಗು ಎಂದು ತಮ್ಮ ಪತ್ನಿಯನ್ನು ಕಳುಹಿಸಿದ್ದರು ವಿಶ್ವೇಶ್ವರಯ್ಯ.

ಇಂತಹ ವಿಶ್ವೇಶ್ವರಯ್ಯನವರನ್ನು ನೆಪವಾಗಿಟ್ಟುಕೊಂಡು ಭೈರಪ್ಪ ಸಮ್ಮೇಳನದಲ್ಲಿ ತಗಾದೆ ತೆಗೆಯುವ ಮೂಲಕ ತಮ್ಮ ಜಾತಿ ಬುದ್ಧಿಯನ್ನು, ಮನುಧರ್ಮ ಬುದ್ಧಿಯನ್ನು ಹೊರಹಾಕಿದ್ದಾರೆ. ಈ ದೇಶಕ್ಕೆ ಶತಮಾನಗಳಿಂದ ತಾಕಿರುವ ಶಾಪ ಬ್ರಾಹ್ಮಣ್ಯ. ಅಂತಹ ಶಾಪವನ್ನೇ ಎತ್ತಿಹಿಡಿಯುವ ಭೈರಪ್ಪ ಇಲ್ಲಿ ಮತ್ತೊಮ್ಮೆ ತಮ್ಮ ಜನವಿರೋಧಿ ನಿಲುವನ್ನು ಸಾಬೀತುಪಡಿಸಿದ್ದಾರೆ. ಮಹಿಳೆಯರನ್ನು ಕೀಳಾಗಿ ನೋಡುವ, ತನ್ನ ಕೃತಿಗಳಲ್ಲಿ ಕೆಟ್ಟದಾಗಿ ಬಿಂಬಿಸುವ ಭೈರಪ್ಪನವರನ್ನು ಈಗ ರಾಷ್ಟ್ರದ ಪ್ರಾಧ್ಯಾಪಕನಾಗಿ ನೇಮಿಸಿರುವುದು ಆಘಾತಕಾರಿ ಸಂಗತಿಯಾಗಿದೆ. ಅಂತಹ ಮನುಷ್ಯ ಆಡಿದ ಮಾತಿನ ಒಳಮರ್ಮವನ್ನು ಅರ್ಥಮಾಡಿಕೊಳ್ಳದೆ ಜನ ಚಪ್ಪಾಳೆ ತಟ್ಟುತ್ತಾರೆ ಎಂದರೆ ನಮ್ಮ ದೇಶದಲ್ಲಿ ಏನಾಗುತ್ತಿದೆ ಎಂದು ಎಲ್ಲರೂ ಯೋಚಿಸಬೇಕಿದೆ.


ಇದಿಷ್ಟು ನಾನು ಅಂದು ಸಮ್ಮೇಳನದಲ್ಲಿ ಆಡಿದ ಮಾತು. ನನ್ನ ನಂತರ ಮಾತನಾಡಿದ ಗೆಳತಿ ವಿಮಲ ಸಂಘಪರಿವಾರಿಗಳನ್ನು, ಮೋದಿಯನ್ನು ಮತ್ತು ಭೈರಪ್ಪನವರನ್ನೂ ತರ್ಕಬದ್ಧವಾಗಿ ಟೀಕಿಸಿದರು. ಅಂದೇ ಸಮ್ಮೇಳನದ ಮುಖ್ಯ ವೇದಿಕೆಯಲ್ಲಿ ಮತ್ತೊರ್ವ ಗೆಳತಿ ಡಾ.ಎಂ.ಎಸ್.ಆಶಾದೇವಿ ಕೂಡ "ಈ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಕೆಟ್ಟದಾಗಿ ನೋಡುವ ಭೈರಪ್ಪನವರನ್ನು ಲೇಖಕ ಎಂದು ಒಪ್ಪಿಕೊಳ್ಳುವುದಿರಲಿ, ಅವರನ್ನು ನಾಗರಿಕ ಮನುಷ್ಯ ಎಂದೂ ನಾನು ಒಪ್ಪಿಕೊಳ್ಳುವುದಿಲ್ಲ" ಎಂದು ಘೋಷಿಸಿಬಿಟ್ಟರು.

ಇಷ್ಟಾಗಿದ್ದೇ ತಡ, ಕೆಲವು ಕೋಮುವಾದಿಗಳ ಪಿತ್ಥ ನೆತ್ತಿಗೇರಿತು. ಹೇಗಿದ್ದರೂ ಅವರೆಲ್ಲ ಭೈರಪ್ಪನವರ ಸಂತತಿಯವರೇ ಆಗಿರುವುದರಿಂದ ನಾವು ಮಹಿಳೆಯರು ಭೈರಪ್ಪನವರನ್ನು ಟೀಕಿಸಲೆಂದು ಸಮ್ಮೇಳನವನ್ನು ದುರುಪಯೋಗಪಡಿಸಿ ಕೊಂಡಿದ್ದೇವೆ ಎಂದೂ, ಭೈರಪ್ಪನವರನ್ನು ಬೈಯುವುದೇ ನಮ್ಮ ಏಕೈಕ ಕೆಲಸ ಎಂದೂ ಬೊಬ್ಬೆಹಾಕಿದರು. ಆದರೇನಂತೆ, ರಾಜ್ಯದ ವಿವಿಧ ಕಡೆಗಳಿಂದ ಪ್ರಗತಿಪರರು ಮತ್ತು ಪ್ರಜ್ಞಾವಂತರು ನಮ್ಮ ದಿಟ್ಟತನವನ್ನು ಮೆಚ್ಚಿದರು; ಭೈರಪ್ಪನ ಅಸಲಿ ಮುಖವನ್ನು ಬಹಿರಂಗಪಡಿಸಿದ್ದೀರಿ ಎಂದು ಪ್ರಶಂಸಿಸಿದರು.

ಭೈರಪ್ಪ ಮತ್ತು ಅವರ ಸಂತತಿಯವರು ಒಂದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮಂತಹ ಮಹಿಳೆಯರು ಸಮಾಜದ ದಿಕ್ಕನ್ನು ತಪ್ಪಿಸುತ್ತಿರುವವರನ್ನು ಕಠಿಣವಾಗಿ ವಿರೋಧಿಸುತ್ತೇವೆ. ನಮಗೂ ನಾಲ್ಕು ಅಕ್ಷರಗಳು ಗೊತ್ತಿರುವುದರಿಂದ, ಅದಕ್ಕಿಂತ ಮುಖ್ಯವಾಗಿ ಸಮಾಜದ ಬಗ್ಗೆ ನಾವೆಲ್ಲ ಅಪಾರ ಕಾಳಜಿ ಹೊಂದಿರುವುದರಿಂದ ದೇವನೂರ ಮಹಾದೇವ ಅವರನ್ನು ಬೆಂಬಲಿಸುತ್ತೇವೆ, ಜೊತೆಗೆ ಭೈರಪ್ಪ ತರಹದವರನ್ನು ಘಂಟಾಘೋಷವಾಗಿ ಬೈಯುತ್ತೇವೆ! ಅವೆರಡನ್ನು ಮಾಡುವುದಕ್ಕೆ ಸಮ್ಮೇಳನವಾದರೂ ಸೈ, ಪತ್ರಿಕೆಯಾದರೂ ಸೈ. ಕೊನೆಗೆ ಬೀದಿಗಿಳಿದು ಹೋರಾಡಬೇಕಿದ್ದರೆ ಅದಕ್ಕೂ ನಾವು ಸೈ! ●



ಸಿದ್ದರಾಮಯ್ಯನವರ ಜೊತೆ ಸಿದ್ದು ನ್ಯಾಮಗೌಡ ಮತ್ತು ಅವರ ಪತ್ನಿಯನ್ನು ಅಭಿನಂದಿಸುತ್ತಿರುವುದು.



ಜಮಖಂಡಿ ಬ್ಯಾರೇಜಿನ ಪಕ್ಕ ರೈತರೊಂದಿಗೆ

...ಂದರ್ಹಾಗೆ ಇದೇ ಭೈರಪ್ಪನವರು "ಭಾರತದ ಆರ್ಥಿಕತೆ ...ರಿಸಲು ಕಾರಣ ಆಗ ಆರ್ಥಿಕ ಮಂತ್ರಿ ಆಗಿದ್ದ ...ೋಹನ್ ಸಿಂಗ್ ಅಲ್ಲ, ಬದಲಾಗಿ ಆಗ ಪ್ರಧಾನಿ ... ಪಿ.ವಿ.ನರಸಿಂಹ ರಾವ್. ನರಸಿಂಹ ರಾವ್ ...ದರ್ಶನದಲ್ಲಿ ಸಿಂಗ್ ಕೆಲಸ ನಿರ್ವಹಿಸಿದರು ಅಷ್ಟೇ" ... ವಾದಿಸಿದ್ದಾರೆ. ಆದರೆ ವಿಶ್ವೇಶ್ವರಯ್ಯನವರಿಗೆ ...ಗ "ಅಣೆಕಟ್ಟೆಗೆ ನಾಲ್ವಡಿ ಕೃಷ್ಣರಾಯ ಒಡೆಯರ್ ...ವನ್ನು ಒದಗಿಸಿದರು ಅಷ್ಟೇ. ಇಂಜಿನಿಯರ್ ...ಶ್ವರಯ್ಯ ಇಲ್ಲದಿದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ" ... ವಾದಿಸುತ್ತಾರೆ. ಇದನ್ನು ಇಲ್ಲಿ ಪ್ರಸ್ತಾಪಿಸಲು ಕಾರಣ ...ಶ್ವರಯ್ಯನವರ ಕೊಡುಗೆಯನ್ನು ಕಡೆಗಣಿಸುವುದಕ್ಕಲ್ಲ, ...ಗಿ ಭೈರಪ್ಪನವರ ಜಾತಿಪ್ರೇಮವನ್ನು ತೋರಿಸಲಷ್ಟೇ.

...ಮ್ಮ ಸಭೆ ಬೆಳಗ್ಗೆ 10:30ಗೆ ಪ್ರಾರಂಭವಾಗಬೇಕಿತ್ತು, ... ಅದು ಸುಮಾರು 12 ಗಂಟೆಗೆ ಶುರುವಾಗಿದ್ದರಿಂದ ... ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ಜನವಾದಿ ...ಾ ಸಂಘಟನೆಯ ಕೆ.ಎಸ್.ವಿಮಲ "ನಾವೆಲ್ಲರೂ ...ಾದಷ್ಟು ಸಂಕ್ಷಿಪ್ತವಾಗಿ ಮಾತನಾಡಿದರೆ ಮುಂದಿನ ...ಗೆ ತಡವಾಗದಂತೆ ಸಹಕರಿಸಬಹುದು" ಎಂದು ...ದರು. ಮೈಕ್ ಮುಂದೆ ನಿಂತು ಮಾತನಾಡುವುದು ... ಕಷ್ಟದ ಕೆಲಸವಾದ್ದರಿಂದ ವಿಮಲ ಅವರ ಸಲಹೆ ...ಇಷ್ಟವಾಯಿತು.

...ೊದಲು ಮಾತನಾಡಿದ ಷರೀಫಾ ...ಭೂತವಾದಿಗಳನ್ನು ತರಾಟೆಗೆ ತೆಗೆದುಕೊಂಡರು. ...ಗೆ ಎಸ್.ಎಲ್. ಭೈರಪ್ಪನನ್ನೂ ಟೀಕಿಸಿದರು. ಮಿತ್ರ ...ಉಮೇಶ್ ಮತ್ತು ಡಿ.ನಳಿನಾ ಕೂಡ ಅಚ್ಚುಕಟ್ಟಾಗಿ ... ಅಭಿಪ್ರಾಯಗಳನ್ನು ಮಂಡಿಸಿದರು. ನನ್ನ ಸರದಿ ...ಗ ನನ್ನನ್ನು ಕಾಡುತ್ತಿದ್ದ ಎರಡು ವಿಷಯಗಳ ಬಗ್ಗೆ ...ಾಡಿದೆ. ಅವುಗಳನ್ನು ಇಲ್ಲಿ ನಿಮ್ಮೊಂದಿಗೆ ...ಕೊಳ್ಳುತ್ತಿದ್ದೇನೆ.

ಗೆಳತಿಗೆ...

ಎದೆಯ ಗೂಡಲ್ಲಿ ಗೆಳೆತನದ ಹಣತಿಯೊಳು
ಪ್ರಾಂಜಲ ಮನದ ದೀಪ ಬೆಳಗಿ
ಆರದಂತೆ ದೀಪವ ಕಣ್ಣ ರೆಪ್ಪೆಯಲ್ಲಿಯೇ
ಬಿರುಗಾಳಿಯ ತಡೆದಿಟ್ಟು
ಬೆಳಕನೆಲ್ಲ ಜಗದಂಗಳಕ್ಕೆ ಬಿಟ್ಟು
ತಾನೊಬ್ಬಳೇ ಹೊರಟಳು
'ಮತ್ತೆ ಬರುವೆನು..' ಸಹ ಅನ್ನದೆ..
ಹೇಳು ಇದು ಸರಿಯೇ ಗೆಳತಿ?
ಮತ್ತೆ ಈ ಬಿಸಿಲಂಗಳಕ್ಕೆ
ಬೆಳದಿಂಗಳೊಂದಿಗೆ ಬರುವ ಭಾಷೆ ಕೊಟ್ಟು
ಹೀಗೆ ಮರೆತು ಹೊರಡುವುದೇ?
ಗಂಟಲ ನರಕ್ಕೂ ನೋವಾಗಿಸದಂತೆ
ಮೆಲ್ಲನುಲಿವ 'ಹಲೋ..' ಒಮ್ಮೆಯಾದರೂ



ಕೇಳಿಸಿಯಾತೆ?
ಹೇಗೆ ಮರೆಯಲಿ ಗೆಳತಿ
ಸರಿದ ದಿನಗಳ ಬಾಗಿಲಂಚಿಗೆ ನಿಂತು
ಸಾಲುಗಳೆರಡರ ಮೌನಕ್ಕೆ
ಮುಗಿಯದ ಮಾತುಗಳ ಹೂಮಾಲೆ ಹೆಣೆದಿದ್ದೆ
ಸಕಲ ಜೀವಾತ್ಮರ ಲೇಸ ಬಯಸಿ
ಜಾಗೃತ ಧಾರೆಯ ಬತ್ತದ ಝರಿಯಾಗಿಸಿದೆ.....
ಮಿಣುಕು ಬೆಳಕುದಿಯಲ್ಲಿ

ನೀ ಮೌನದಲೇ ಹೂಂಗುಟ್ಟುತ
ನಾ ಮಾತಾಡೆಂದೆ.
ಈಗಲೂ ಮಾತಾಡುವೆನು ದಣಿವಿಲ್ಲದೆ
ಒಮ್ಮೆಯಾದರೂ ಹೂಂ ಅನ್ನು ಗೆಳತಿ
ಗೆಳತಿ ಶಬ್ದಕ್ಕೆ ಮತ್ತದರ ತಿಳಿನೀರಂಥ ಭಾವಕ್ಕೆ
ಚಿರಗಾಗಿ ಮನದ ಮೂಲೆಯಲಿ
ಮುಗಿಯದ ನೇಹವ ಕಾಪಿಟ್ಟುಕೊಂಡವಳೇ
ಇನ್ನೆಲ್ಲಿ ಹುಡುಕಲಿ ಹೇಳು ನಿನ್ನ?
ಮುಗಿಲ ಚುಕ್ಕಿಯಲಿ ಹುಡುಕುವೆನೆಂದರೆ
ನೀ ಒಪ್ಪಲಾರೆ
ಈ ನೆಲದೊಡಲ ಮಾತಿಗೆ ಹೃದಯ ಕೊಟ್ಟವಳೇ
ಮಣ್ಣು ಕಣಕಣದ ಭಾವ ಬಗೆದವಳೇ
ಇಲ್ಲೆ ಹುಡುಕುವೆನು
ನೆಲದುಡಿಯಲಾಡುವ ಒಡಲ ಮಾತಾಕೆ.
ನೀನಿಲ್ಲೇ ಇರುವೆ.....

● ನೀಲಾ

ಯಲಹಂಕ: ರಕ್ತಹರಿಸಿದ ದಲಿತರು, ರೆಡ್ಡಿ ನೆಲಗಳ್ಳರ ಬೆನ್ನಿಗೆ ಪೊಲೀಸರು



ಇಲ್ಲಿಗೆ ವರ್ಷದ ಹಿಂದೆ ಪೊಲೀಸ್ ಪೇದೆಯೊಬ್ಬ ತನ್ನ ಬಂದೂಕಿನಿಂದ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ನನ್ನೇ ಗುಂಡಿಟ್ಟುಕೊಂದ ಕುಖ್ಯಾತಿ ದೊಡ್ಡಬಳ್ಳಾಪುರ-ಯಲಹಂಕ ನಡುವಿನ ರಾಜಾನುಕುಂಟೆ ಪೊಲೀಸ್ ಠಾಣೆಯದ್ದು. ಅಲ್ಲೀಗ ಸಬ್‌ಇನ್ಸ್‌ಪೆಕ್ಟರ್ ಆಗಿರುವುದು ಎಸ್.ಎಲ್.ಆರ್. ರೆಡ್ಡಿ. ಯಲಹಂಕ ಬಿಜೆಪಿ ಶಾಸಕ ವಿಶ್ವನಾಥ್ ರೆಡ್ಡಿಯ ಆಧಿಪತ್ಯಕ್ಕೊಳಪಟ್ಟ ಈ ಠಾಣೆಯ ಜಾತಿ ಗುಣವೋ ಎಂಬಂತೆ ಈ ಠಾಣೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಶಿವಾರೆಡ್ಡಿ ಕೂಡ ಜಾತಿಯಿಂದ ರೆಡ್ಡಿಯೇ. ಕಾಕತಾಳೀಯವೋ ಏನೋ ಮಾನವೀಯ ಪೊಲೀಸ್ ಅಧಿಕಾರಿಯೆಂದೇ ಚಾಲ್ತಿಯಲ್ಲಿರುವ ಕೋನಪ್ಪರೆಡ್ಡಿ ಇಲ್ಲಿಗೆ ಡಿವೈಎಸ್‌ಪಿ!

ಶಾಸಕನೂ ರೆಡ್ಡಿ, ಠಾಣೆಯ ಎಸ್‌ಐನಿಂದ ಹಿಡಿದು ಡಿವೈಎಸ್‌ಪಿ ತನಕ ಎಲ್ಲರೂ ರೆಡ್ಡಿಗಳೇ ಆದರೆ ಅದು ಹೇಗೆ ದಲಿತರ ಪಾಲಿಗೆ ನರಕ ಸದೃಶವಾಗುತ್ತದೆ ಎಂಬುದಕ್ಕೆ ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರಾಜಾನುಕುಂಟೆ ಪೊಲೀಸ್ ಠಾಣೆಯೇ ಸಾಕ್ಷಿ.

ಹೆಣ್ಣೂರು ರವಿಕುಮಾರ್ ಎಂಬ ದಲಿತ ಯುವಕನೋರ್ವ ಕಳೆದ ಐದಾರು ವರ್ಷಗಳಿಂದ ಜೆಸಿಬಿ ಯಂತ್ರಗಳನ್ನು ಬಾಡಿಗೆಗೆ ಬಿಟ್ಟು ಹೊಟ್ಟೆಪಾಡು ಮಾಡಿಕೊಂಡಿದ್ದಾನೆ. ಜನವರಿ 13ರ ರಾತ್ರಿ ಆತನಿಗೆ ಫೋನ್ ಕರೆಯೊಂದು ಬರುತ್ತದೆ. ರಾಜಾನುಕುಂಟೆ ಸಮೀಪ ತಮ್ಮ ಜಮೀನಿದೆ, ಅದನ್ನು ಮಟ್ಟಾ ಮಾಡೋಕೆ ನಾಳೆ ಬೆಳಗ್ಗೆ ಜೆಸಿಬಿ ಯಂತ್ರಗಳು ಬಾಡಿಗೆಗೆ ಬೇಕು ಎಂದು ಕರೆ ಮಾಡಿದಾತ ಹೇಳಿಕೊಂಡ. ಆವತ್ತೇ ರಾತ್ರಿ 2000 ರೂ. ಮುಂಗಡವನ್ನೂ ಕೊಟ್ಟ. ಮರುದಿನ ಬೆಳಗ್ಗೆ ಕಿರಣ್ ಮತ್ತು ಮಹೇಶ್ ಎಂಬ ಇಬ್ಬರು ಕೆಲಸಗಾರರ ಜೊತೆ ಸ್ಥಳಕ್ಕೆ ರವಿಕುಮಾರ್ ಜೆಸಿಬಿಯನ್ನೂ ಕಳಿಸಿಕೊಟ್ಟ. ಅದು ಅದ್ದೆ-ವಿಶ್ವನಾಥಪುರದ ನಾಗರಾಜಶೆಟ್ಟಿ ಎಂಬ ಬಿಲ್ಡರ್‌ಗೆ ಸೇರಿದ ಸೊತ್ತು. ಆ ಊರಿನ ಚಿನ್ನಪ್ಪ ರೆಡ್ಡಿಯ ಮಕ್ಕಳಾದ ಸಂಜೀವ್ ರೆಡ್ಡಿ, ಅಶ್ವತ್ಥ್ ನಾರಾಯಣ ರೆಡ್ಡಿ ಸೇರಿಕೊಂಡು ತಮ್ಮ ಎರಡೆಕರೆಯನ್ನು ಯಾವುದೋ ಕಾಲಕ್ಕೆ ಜಂಟಿ ಅಭಿವೃದ್ಧಿಗೆಂದು ಮಾರಿಕೊಂಡ ಜಮೀನು.


ಬೆಳಗ್ಗೆ 6ರ ಹೊತ್ತಿಗೆಲ್ಲಾ ಜಮೀನು ಮಟ್ಟ ಮಾಡಲೆಂದು ಸ್ಥಳಕ್ಕೆ ಜೆಸಿಬಿ ಬಂದಿದ್ದೇ ತಡ ಚಿನ್ನಪ್ಪ ರೆಡ್ಡಿಯ ಮಕ್ಕಳಾದ ಸಂಜೀವ್ ರೆಡ್ಡಿ, ಅಶ್ವಥ್ ನಾರಾಯಣ ರೆಡ್ಡಿ, ಯಲಹಂಕ ಶಾಸಕ ವಿಶ್ವನಾಥ್ ಸಂಬಂಧಿಗಳಾದ ಸೋಮಶೇಖರ್ ರೆಡ್ಡಿ, ವಿನೋದ್ ರೆಡ್ಡಿ, ಮಂಜುನಾಥ್ ರೆಡ್ಡಿ, ರಾಂರೆಡ್ಡಿ ಮುಂತಾದ ಐವತ್ತಕ್ಕೂ ಅಧಿಕ ರೆಡ್ಡಿಗ್ಯಾಂಗ್ ಏಕಾಏಕಿ ಜೆಸಿಬಿಯ ಮೇಲೆ ದಾಳಿ ನಡೆಸಿದೆ. ಮಚ್ಚು, ಲಾಂಗು, ಹಾರೆ, ಪಿಕಾಸಿ, ದೊಣ್ಣೆಗಳನ್ನು ಹಿಡಿದಿದ್ದ ರೆಡ್ಡಿ ಪಡೆ ಏಕಾಏಕಿ ನಡೆಸಿದ ದಾಳಿ ಅದೆಷ್ಟು ಭೀಕರವಾಗಿತ್ತೆಂದರೆ ಜೆಸಿಬಿಯ ಚಾಲಕ ಕಿರಣ್‌ನನ್ನು ಹೊಡೆದುರುಳಿಸಿ ಆತನ ಎದೆ ಮೇಲೆ ಸೈಜಗಲ್ಲೆತ್ತಿ ಹಾಕಿದ್ದರು!

ಎಸ್‌ಐ ರೆಡ್ಡಿ!

ಕಿರಣ್ ಮತ್ತು ಮಹೇಶ್ ಇಬ್ಬರೂ ದಲಿತರೇ. ವಿಷಯ ಗೊತ್ತಾಗಿದ್ದೇ ಜೆಸಿಬಿ ಮಾಲಿಕ ರವಿಕುಮಾರ್ ಸ್ಥಳಕ್ಕೆ ಬಂದಿದ್ದಾರೆ. ಕಿರಣ್-ಮಹೇಶ್ ಇಬ್ಬರನ್ನೂ ಆಸ್ಪತ್ರೆಗೆ ಸೇರಿಸಿದ್ದೇ ರಾಜಾನುಕುಂಟೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟರೆ ಅಲ್ಲಿಗೆ ಎಸ್‌ಐ ಆಗಿದ್ದವನು ಎಸ್.ಎಲ್.ಆರ್. ರೆಡ್ಡಿ!


ರವಿಕುಮಾರ್ ಜೊತೆ ಪೊಲೀಸ್ ಪೇದೆಯೊಬ್ಬನನ್ನು ಕಳಿಸಿಕೊಟ್ಟ ಎಸ್‌ಐ ರೆಡ್ಡಿಯ ಉದ್ದೇಶವೇ ಬೇರೆಯಿತ್ತು. ಸ್ಥಳಕ್ಕೆ ಬಂದ ಪೇದೆ ದಾಳಿಗೆ ನಿಂತವರ ಜೊತೆಗೇ ಏನೋ ಮಾತಾಡಿ ನಾಪತ್ತೆಯಾಗಿದ್ದ. ಜೆಸಿಬಿಯ ಟೈರುಗಳ ಗಾಳಿ ಬಿಟ್ಟು ಜಖಂ ಮಾಡಿ ಇನ್ನೇನು ಜೆಸಿಬಿಗೇ ಬೆಂಕಿ ಹಚ್ಚಲು ದುಷ್ಕರ್ಮಿಗಳು ಅಣಿಯಾಗುತ್ತಿದ್ದರು. ಇದನ್ನು ನೋಡಿದ್ದೇ ರವಿಕುಮಾರ್ ತಮ್ಮ ಜೆಸಿಬಿ ತರಲೆಂದು ನುಗ್ಗಿದರೆ ಮಾರಕ ಆಯುಧ ಹಿಡಿದಿದ್ದ ರೆಡ್ಡಿ ಗ್ಯಾಂಗ್ ಮತ್ತೆ ದಾಳಿಯಿಟ್ಟಿದೆ. ರವಿಕುಮಾರ್ ಜೊತೆಗಿದ್ದ ವಿಮಲ್, ಛಾಯಾಕುಮಾರ್ ಎಂಬಿಬ್ಬರು ದಲಿತರ ಸಮೇತ ಮೂವರನ್ನು ಅಟ್ಟಾಡಿಸಿ ಬಡಿದಿದೆ.

ರಕ್ತ ಸುರಿಸಿಕೊಂಡು ಮತ್ತೆ ರವಿಕುಮಾರ್ ರಾಜಾನುಕುಂಟೆ ಠಾಣೆಗೆ ಬಂದರೆ ಎಸ್‌ಐ ರೆಡ್ಡಿ ಇದನ್ನು ಮೊದಲೇ ನಿರೀಕ್ಷಿಸಿದವನಂತೆ 'ನಾನು ಕಟಿಂಗ್ ಮಾಡಿಸಿಕೋಬೇಕು. ಕ್ಷೌರ ಮಾಡಿಸಿಕೊಂಡ ನಂತರ ಬಂದು ದೂರು ಕೊಡಿ' ಎಂದು ಜಾಗ ಖಾಲಿ ಮಾಡಿದ್ದಾನೆ. ಹೊಡೆದವರನ್ನು ಬಂಧಿಸುತ್ತೇನೆಂಬ ಕಾಟಾಚಾರದ ಮಾತಿರಲಿ 'ನಿಮ್ಮ ಜೆಸಿಬಿಯ ದಾಖಲೆಗಳನ್ನು ತಗೊಂಡು ಬಂದು ತೋರಿಸಿ' ಎಂದು ಪೆಟ್ಟು ತಿಂದವರನ್ನೇ ಸಾಗಹಾಕಲು ಯತ್ನಿಸಿದ್ದಾನೆ.





ಪೆಟ್ಟು ತಿಂದ ಛಾಯಾಕುಮಾರ್



ಗಾಯಗೊಂಡ ದಲಿತ ರವಿ

ಎಸ್‌ಐ ಅಟ್ಟಹಾಸವೇ ಹೀಗಾದ ಮೇಲೆ ವಿಧಿಯಿಲ್ಲದೆ ಜೆಸಿಬಿ ಮಾಲಿಕ ರವಿಕುಮಾರ್ ತನ್ನ ರಕ್ಷಣೆಗೆಂದು ದಲಿತ ನಾಯಕರಿಗೆ ಫೋನಾಯಿಸಿದ್ದಾನೆ. ಚಿಕ್ಕಬಳ್ಳಾಪುರ ಜಿಲ್ಲಾ ಬಿಎಸ್‌ಪಿ ಅಧ್ಯಕ್ಷ ಧನರಾಜ್ ಹೇಳಿಕೇಳಿ ರವಿಕುಮಾರ್‌ಗೆ ಸಂಬಂಧಿಯಾಗಬೇಕು. ಜೊತೆಗೆ ದಲಿತ ಸಂಘರ್ಷ ಸಮಿತಿಯ ನಾಯಕ ಹೆಣ್ಣೂರು ಮುನಿಯಪ್ಪ, ರವಿಕುಮಾರ್ ತಂದೆ 65ರ ಇಳಿವಯಸ್ಸಿನ ರಾಮಕೃಷ್ಣಪ್ಪ, ಬಿಎಸ್‌ಪಿಯ ಮತ್ತೊಬ್ಬ ನಾಯಕ ಛಾಯಾಕುಮಾರ್, ದಲಿತ ಹೋರಾಟಗಾರರಾದ ರವೀಂದ್ರನಾಥ್, ಲೋಕೇಶ್ ಮುಂತಾದವರೆಲ್ಲ ರಾಜಾನುಕುಂಟೆ ಪೊಲೀಸ್ ಠಾಣೆಗೆ ಧಾವಿಸಿ ಬಂದಿದ್ದಾ... ಎಸ್‌ಐ ರೆಡ್ಡಿಗೆ ದಾಳಿಕೋರರನ್ನು ಬಂಧಿಸುವಂತೆ ದಲಿ... ನಾಯಕರು ಒತ್ತಾಯಿಸಿದ್ದಾರೆ.

ಎಮ್ಮೆಲ್ಲೇ ಅಟ್ಟಹಾಸ

ಆದರೆ ಎಸ್‌ಐ ರೆಡ್ಡಿ ಮಾಡಿದ್ದೇ ಬೇರೆ. ಯಾರ... ದಲಿತರ ಮೇಲೆ ದಾಳಿ ನಡೆಸಿದ್ದರೋ ಅವರನ್ನೇ ಫೋನ್... ಮಾಡಿ ಠಾಣೆಗೆ ಕರೆಸಿಕೊಂಡ ಎಸ್‌ಐ ರೆಡ್ಡಿ ಠಾಣೆ... ಬಂದ ದಲಿತ ನಾಯಕರನ್ನೇ ವಾಚಾಮಗೋಚ... ಬಯ್ಯಲಾರಂಭಿಸಿದ್ದಾನೆ. ಇಷ್ಟಾಗಿದ್ದೇ ತಡ ಠಾಣೆಗೆ ಬಂ... ದಾಳಿಕೋರರಾದ ಮಂಜುನಾಥ್ ರೆಡ್ಡಿ, ಸಂಜೀವ್ ರೆ... ವಿನೋದ್ ರೆಡ್ಡಿ, ಸೋಮಶೇಖರ್ ರೆಡ್ಡಿ, ರಾಂರೆ... ಬಡಿಯುತ್ತಿದ್ದರೆ ಕಾಟಾಚಾರಕ್ಕೂ ರಕ್ಷಣೆಗೆ ಬಾರ... ಸಬ್‌ಇನ್ಸ್‌ಪೆಕ್ಟರ್ ರೆಡ್ಡಿ ತಾನೂ ರೆಡ್ಡಿಗಳ ಜೊತೆ ಸೇರಿಕೊಂ... ದಲಿತ ನಾಯಕರನ್ನು ಹಿಡಿದು ಬಡಿದಿದ್ದಾನೆ.

ಅಟ್ಟಹಾಸ ಹೇಗಿತ್ತೆಂದರೆ ಪೊಲೀಸ್ ಠಾಣೆಯ ಚ...



ಫೆಬ್ರವರಿ 17ಕ್ಕೆ ಬಹುಜನ ಸಮಾಜ ಪಕ್ಷದ ಅಧ್ಯಕ್ಷ ಎನ್. ಮಹೇಶ್ ನೇತೃತ್ವದಲ್ಲಿ ಸಹಸ್ರಾರು ದಲಿತರು ಇದೇ ರಾಜಾನುಕುಂಟೆ ಪೊಲೀಸ್ ಠಾಣೆಗೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ಮಾಧ್ಯಮಗಳ ಪಾಲಿಗೆ ದೊಡ್ಡ ಸುದ್ದಿಯಲ್ಲದಿರಬಹುದು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರವೂ ಬಿಜೆಪಿ ಶಾಸಕ ವಿಶ್ವನಾಥ್ ರೆಡ್ಡಿಯ ಆಧಿಪತ್ಯದ ಯಲಹಂಕ ವ್ಯಾಪ್ತಿಯಲ್ಲಿ ಹೇಗೆ ರಿಯಲ್ ಎಸ್ಟೇಟ್ ರಕ್ತಪಾತ ಎಗ್ಗಿಲ್ಲದೆ ಮುಂದುವರಿಯುತ್ತಿದೆ ಮತ್ತು ದಲಿತರ ಪಾಲಿಗಿದು ಏನೆಲ್ಲಾ ಅನಾಹುತಗಳನ್ನು ಹುಟ್ಟುಹಾಕಿದೆ ಎಂಬುದಕ್ಕೆ ಈ ಘಟನೆಯೊಂದೇ ಸಾಕು.


ಬಲಿಯಾದ ದಲಿತರು

ಬಿಎಸ್‌ಪಿ ಅರ್ಥಾತ್ ಬಹುಜನ ಸಮಾಜ ಪಕ್ಷದ ಚಿಕ್ಕಬಳ್ಳಾಪುರ ಜಿಲ್ಲಾ ಅಧ್ಯಕ್ಷ ಧನರಾಜ್, ದಲಿತ ಮುಖಂಡ ಹೆಣ್ಣೂರು ಮುನಿಯಪ್ಪ, ಬಹುಜನ ಸಮಾಜ ಪಕ್ಷದ ಕಾರ್ಯಕರ್ತರಾದ ಛಾಯಾಕುಮಾರ್, ರವೀಂದ್ರನಾಥ್, ಲೋಕೇಶ್ ಮುಂತಾದ ದಲಿತರನ್ನು ರಾಜಾನುಕುಂಟೆ ಪೊಲೀಸ್ ಠಾಣೆಯಲ್ಲೇ ಪೊಲೀಸರು ಮತ್ತು ನೆಲಗಳ್ಳ ರೆಡ್ಡಿಗಳೆಲ್ಲ ಸೇರಿಕೊಂಡು ರಕ್ತ ಸುರಿಯೇ ಥಳಿಸಿದ ಘಟನೆ ನಡೆದದ್ದು ಮೊನ್ನೆ ಜನವರಿ 14ರಂದು. ಅಷ್ಟಕ್ಕೂ ಇಲ್ಲಿ ದಲಿತರು ಮಾಡಿದ ತಪ್ಪೆಂದರೆ ತಮಗೆ ಸಂಬಂಧವೇ ಇಲ್ಲದ ರಿಯಲ್ ಎಸ್ಟೇಟ್ ದಂಧೆಯ ಹಕೀಕತ್ತೇ ಗೊತ್ತಿಲ್ಲದ ಜಮೀನೊಂದಕ್ಕೆ ಕಾಮಗಾರಿಗೆಂದು ಜೆಸಿಬಿ ಬಾಡಿಗೆಗೆ ಬಿಟ್ಟದ್ದು!

ಯಲಹಂಕದ ಭಯಾನಕ ರೆಡ್ಡಿ ರಿಪಬ್ಲಿಕ್!

ಅಷ್ಟಕ್ಕೂ ಅದ್ದೆ ವಿಶ್ವನಾಥ್‌ಪುರದ ಸರ್ವೆ ನಂ. 46/1ರ ಎರಡೆಕರೆ 16 ಗುಂಟೆ ಜಮೀನಿಗೂ ಪೆಟ್ಟು ತಿಂದ ದಲಿತ ನಾಯಕರಿಗೂ ಯಾವುದೇ ಸಂಬಂಧವಿಲ್ಲ. ನೆಲಮಟ್ಟ ಮಾಡಲು ಜೆಸಿಬಿ ಇಟ್ಟುಕೊಂಡು ಬಾಡಿಗೆಗೆ ಹೋಗಿದ್ದು ಬಿಟ್ಟರೆ ಎಮ್ಮೆಲ್ಲೇ ಸಂಬಂಧಿ ರೆಡ್ಡಿಗಳಿಗೂ ದಲಿತರಿಗೂ ಯಾವುದೇ ಸಂಬಂಧವಿಲ್ಲ. ಹರಿಹರ ಮೂಲದ ನಾಗರಾಜಶೆಟ್ಟಿ ಎಂಬ ಲ್ಯಾಂಡ್ ಡೆವಲಪರ್ 2008ರಲ್ಲೇ ಗೃಹಮಂಡಳಿಗೆಂದು ಭೂಸ್ವಾಧೀನಗೊಂಡಿದ್ದ ಅದ್ದೆ ವಿಶ್ವನಾಥ್‌ಪುರದ ಹನ್ನೊಂದು ಎಕರೆ ಭೂಮಿಗೆ ಅಲ್ಲಿನ ರೆಡ್ಡಿಗಳ ಜೊತೆ ಜಂಟಿ ನಿರ್ಮಾಣದ ಕರಾರು ಮಾಡಿಕೊಂಡಿದ್ದರು.

ಕರಾರಿನ ಪ್ರಕಾರ ಗೃಹಮಂಡಳಿಯಿಂದ ಬಿಡಿಸಿಕೊಳ್ಳುವುದು, ನಂತರ ಭೂಪರಿವರ್ತನೆ ಮಾಡಿಸುವುದು, ಅಲ್ಲಿ ಲೇಔಟ್ ನಿರ್ಮಿಸಿ ಮಾರುವುದೆಲ್ಲವೂ ನಾಗರಾಜಶೆಟ್ಟಿಯ ಹೊಣೆಯಾಯಿತು. ಶೇ. 60ರಷ್ಟು ರೆಡ್ಡಿ ರೈತರಿಗೆ ಮತ್ತು ಶೇ.40 ರಷ್ಟು ಡೆವಲಪರ್‌ಗೆ ಆಧಾರದ ಮೇಲೆ ಸರಿಸುಮಾರು 1 ಕೋಟಿ ರೂಪಾಯಿಗಳಷ್ಟು ದುಡ್ಡನ್ನೂ ರೆಡ್ಡಿಗಳು ಪಡೆದುಕೊಂಡರು. ಯಾವತ್ತು ಗೃಹಮಂಡಳಿಯಿಂದ ಭೂಮಿ ಮುಕ್ತವಾಯಿತೋ ರೆಡ್ಡಿಗಳಿಗೆ ದುರಾಶೆ ಹುಟ್ಟಿತು. ಬರೋಬ್ಬರಿ 7 ವರ್ಷಗಳ ಕಾಲ ಹೆಣಗಾಡಿದ ನಾಗರಾಜಶೆಟ್ಟಿಗೆ ಉಲ್ಟಾ ಹೊಡೆದವರು ಸಂಜೀವ್‌ರೆಡ್ಡಿ ಮತ್ತು ಅಶ್ವತ್ಥ್ ನಾರಾಯಣ ರೆಡ್ಡಿ. ಇವರಿಬ್ಬರೂ ಎಮ್ಮೆಲ್ಲೇ ವಿಶ್ವನಾಥ್ ಅಕ್ಕನ ಮಗಳು.



ಡಿ.ಸಿ. ಅಯ್ಯಪ್ಪ

ಇವರಿಗೆ ಕುಮ್ಮಕ್ಕು ಕೊಟ್ಟವನು ಕುಖ್ಯಾತ ರಿಯಲ್ ಎಸ್ಟೇಟ್ ಖದೀಮ ಸೋಮಶೇಖರ್ ರೆಡ್ಡಿ. ವಿಶ್ವನಾಥ್ ಎಮ್ಮೆಲ್ಲೆಯಾಗದೆ ಹೋಗಿದ್ದರೆ ಯಾವತ್ತೋ ರೌಡಿ ಪಟ್ಟಿಗೆ ಸೇರಿ ಜೈಲು ಪಾಲಾಗಬೇಕಿದ್ದ ಈ ಸೋಮಶೇಖರ್ ರೆಡ್ಡಿ ಶಾಸಕ ವಿಶ್ವನಾಥ್ ಚಿಕ್ಕಮ್ಮನ ಮಗ. ಮಾದಪ್ಪನ ಹಳ್ಳಿ ಭೂಹಗರಣದಲ್ಲಿ ಜಿಲ್ಲಾಧಿಕಾರಿ ಅಯ... ಜೈಲುಪಾಲಾಗುವಲ್ಲಿ ಈತನ ಕಾಣಿಕೆಯೂ ಸಾಕಷ್ಟಿತ್ತು. ರಾಜಾನುಕುಂಟೆ ಪೊಲೀ... ಠಾಣೆಯಲ್ಲಿ ಈತನ ವಿರುದ್ಧ ಕಮ್ಮಿಯೆಂದರೂ ಒಂದು ಡಜನ್ ಕ್ರಿಮಿನಲ್ ಕೇಸುಗಳ... ಈತನ ಜೊತೆ ವಿಶ್ವನಾಥ್‌ಪುರದ ಮಂಜುನಾಥ್ ರೆಡ್ಡಿ, ಎಮ್ಮೆಲ್ಲೇ ವಿಶ್ವನಾಥ್ ಅ... ಮಕ್ಕಳಾದ ಹೊತ್ತೀನಹಳ್ಳಿ ಮುನಿರೆಡ್ಡಿ, ಸಿಂಗನಾಯಕನಹಳ್ಳಿ... ಶ್ರೀಚರಣ್ ರೆಡ್ಡಿ, ರಾಜಾನುಕುಂಟೆಯ ಕಿರಣ್ ರೆಡ್ಡಿ ಮ... ನವೀನ್ ರೆಡ್ಡಿ ಅದ್ದೆ ವಿಶ್ವನಾಥ್‌ಪುರದ ರಾಂರೆಡ್ಡಿ- ಹೀಗೆ ಯಲಹ... ಸುತ್ತಮುತ್ತಲ ಆ ಕಾಲದ ಹಳ್ಳಿಗಳ ರೆಡ್ಡಿ ರಿಯಲ್ ಎಸ್ಟೇ... ಗ್ಯಾಂಗ್ ವಿಪರೀತ ಕೊಬ್ಬಿ ನಿಂತಿದೆ.


ಒಂದಾನೊಂದು ಕಾಲಕ್ಕೆ, ಲಟಾರಿ ಸೈಕಲ್ಲಿ... ಸುತ್ತಾಡಿಕೊಂಡಿದ್ದ ಈ ರೆಡ್ಡಿಗಳೆಲ್ಲ ವಿಶ್ವನಾಥ್ ಎಮ್ಮೆಲ್ಲೆಯಾಗಿ... ತಡ ರಿಯಲ್ ಎಸ್ಟೇಟ್ ಹಾವಳಿಗಿಳಿದರು. ಸಿಕ್ಕಸಿಕ್ಕ ಸರ್ಕಾ... ಭೂಮಿ, ಬಾಯಿಲ್ಲದ ದಲಿತರ ಜಮೀನು, ಕೆರೆ, ಗೋಮಾ... ಗುಂಡುತೋಪು ಯಾವುದನ್ನೂ ಬಿಡದೆ ನಕಲಿ ದಾಖಲೆ ಸೃ... ದೋಚಲಾರಂಭಿಸಿದರು. ಆಶ್ರಯ ಸೈಟುಗಳೂ ಇವರ ಬಾಯಿ... ಬೀಳುವಂತೆ ಎಮ್ಮೆಲ್ಲೇ ವಿಶ್ವನಾಥ್ ನೋಡಿಕೊಂಡರು. ಇ... ಇಂಥ ಒಬ್ಬೊಬ್ಬ ರೆಡ್ಡಿಯೂ ಬಿಎಂಡಬ್ಲ್ಯೂ, ಸ್ಕೋಡಾ, ಫಾರ್ಚೂ... ಕಾರುಗಳಲ್ಲಿ ಪೋಜು ಕೊಡುತ್ತಿದ್ದಾರೆ. ಹಳ್ಳಿಹಳ್ಳಿಗಳ... ಐಷಾರಾಮಿ ಬಂಗಲೆಗಳಿದ್ದಿವೆ. ಇವರದ್ದೇ ರೌಡಿ ಪಡೆ, ಹಂತಕ ಪಡೆಗಳು ಯಲಹಂ... ಸುತ್ತಮುತ್ತ ತಲೆ ಎತ್ತಿವೆ. ಯಲಹಂಕದ ರೆಡ್ಡಿಗಳ ರಿಪಬ್ಲಿಕ್ಕಿಗೂ ಬಳ್ಳಾರಿ ರೆ... ರಿಪಬ್ಲಿಕ್ಕಿಗೂ ಹೆಚ್ಚು ವ್ಯತ್ಯಾಸವೇನಿಲ್ಲ.

ಂಡು ದಲಿತ ನಾಯಕರನ್ನು ಮನಸೇಚ್ಛೆ ದಾಗಿದ್ದರು. 65ರ ಮುದುಕ ರಾಮಕೃಷ್ಣಪ್ಪ ಎದೆ ಕೊಂಡು ಬದ್ವರೂ ರೆಡ್ಡಿಗಳು ಬಡದೇ ಯುತ್ತಿದ್ದರು. ಸಂಜೆ ಆರರ ಹೊತ್ತಿಗೆ ಖುದ್ದು ಎಮ್ಮೆಲ್ಲೆ ರೇ ರಾಜಾನುಕುಂಟೆ ಪೊಲೀಸ್ ಠಾಣೆಗೆ ಬಂದವ್ನೇ ಮ ಗಾಯಗೊಂಡಿದ್ದ ದಲಿತ ನಾಯಕರನ್ನು 'ಈ ಮಕ್ಕಳನ್ನ ಬಟ್ಟೆ ಬಿಚ್ಚಿಸಿ ಲಾಕಪ್ಪಿಗೆ ಹಾಕ್ರೋ...' : ಲಾಕಪ್ ಬಾಗಿಲು ತೆಗೆದು ದಲಿತ ನಾಯಕರನ್ನು ದಬ್ಬಿದ.

ನಾಥ್ ಬಂದಿದ್ದೇ ತಡ ಪೊಲೀಸ್ ಠಾಣೆಗೇ ಸ್ತ್ರಗಳನ್ನು ಹಿಡಿದು ನುಗ್ಗಲು ಬಂದ ರೆಡ್ಡಿಗಳ ಷಿ ಧಾವಿಸಿ ಬಂದ ಡಿವೈಎಸ್‌ಪಿ ಕೋನಪ್ಪ ರೆಡ್ಡಿ ಸಿದ್ದಾರೆ. ರೈಫಲ್‌ಗಳನ್ನು ಲೋಡ್ ಮಾಡ್ರೋ ಕೋನಪ್ಪ ರೆಡ್ಡಿ ಫೈರಿಂಗಿಗೆ ಅಣಿಯಾಗಿದ್ದನ್ನು ರ ದಾಳಿಕೋರರು ಚೆಲ್ಲಾಪಿಲ್ಲಿ ಕಂಬಿ ಕಿತ್ತಿದ್ದಾರೆ. ್ಯ ಎಸ್‌ಐ ರೆಡ್ಡಿ ತನ್ನ ಕರ್ತವ್ಯ ನಿರ್ವಹಣೆಗೆ ಅಡ್ಡಿ ರೆಂದು, ದಲಿತ ನಾಯಕರ ವಿರುದ್ಧವೇ ಸ್ವಯಂ ದಾಖಲಿಸಿ ನಡುರಾತ್ರಿ ನ್ಯಾಯಾಧೀಶರ ಮುಂದೆ ಪಡಿಸಿದ್ದ!

ಬೀದಿಗಿಳಿದ ದಲಿತರು

ಗ್ಗೆ ಜೆಸಿಬಿ ಜಖಂಗೊಳಿಸಿ, ಅದರ ಚಾಲಕರಿಬ್ಬರನ್ನು ಸೇರುವಂತೆ ಮಾಡಿದ, ಜೆಸಿಬಿ ತರಲೆಂದು ಬಂದ ಾರ್ ಮತ್ತಿಬ್ಬರು ದಲಿತರನ್ನು ಅಟ್ಟಾಡಿಸಿ ಹೊಡೆದ ಶ್ವನಾಥಪುರದ ರೆಡ್ಡಿಗಳ ಅಟ್ಟಹಾಸವನ್ನೇ ಎಸ್‌ಐ ಮುಚ್ಚಿಹಾಕಿದ್ದ. ಓರ್ವ ಎಮ್ಮೆಲ್ಲೆಯಾಗಿ ತಾನೇ ್ಯಾಂಗ್ ಕಟ್ಟಿಕೊಂಡು ಪೊಲೀಸ್ ಠಾಣೆಗೆ ನುಗ್ಗಿದ್ದೇ ನಾಯಕರನ್ನು ಲಾಕಪ್ಪಿಗೆ ತಳ್ಳಿದ ಯಲಹಂಕ ಶಾಸಕ



ಬಿಎಸ್‌ಪಿ ನಾಯಕ ಎನ್. ಮಹೇಶ್


್ ರೆಡ್ಡಿಯ ರಿಯಲ್ ಎಸ್ಟೇಟ್ ಅಟ್ಟಹಾಸಕ್ಕೆ ಾದ ದಲಿತ ನಾಯಕರು ಚೇತರಿಸಿಕೊಳ್ಳಲು ಬ್ಬರಿ ಅರ್ಧ ತಿಂಗಳು ಹಿಡಿಯಿತು. ಸರ್ಕಲ್ ್ಪೆಕ್ಟರ್ ಶಿವಾರೆಡ್ಡಿಯೂ ಜಾತಿಯಿಂದ ರೆಡ್ಡಿಯೇ. ಈ ಅಟ್ಟಹಾಸ ಮತ್ತು ಜಾತಿ ವ್ಯಾಮೋಹದ ಮುಂದೆ ್‌ಪಿ ಕೋನಪ್ಪ ರೆಡ್ಡಿ ಕೂಡ ಅಸಹಾಯಕರೇ. ಪಿ ನಾಯಕರ ಹಿಂಡು ಸಿಕ್ಕಸಿಕ್ಕ ಪೊಲೀಸ್ ರಿಗಳಿಗೆಲ್ಲ ದೂರು ನೀಡಾಗಿದೆ. ಗೃಹಸಚಿವ ಗೂ ಮನವಿ ಕೊಟ್ಟಿದೆ.

ರಂತವೆಂದರೆ ಈತನಕ ದಾಳಿಕೋರ ರೆಡ್ಡಿಗ್ಯಾಂಗ್ ಪೊಲೀಸರಿಂದ ಬಂಧಿಸಲಾಗಿಲ್ಲ, ಕಾಟಾಚಾರಕ್ಕೊಂದು ಟಿ ಕೇಸು ಬಿಟ್ಟರೆ ಜೆಸಿಬಿ ಚಾಲಕರನ್ನ ತ್ನಿಸಿದ್ದು ನಂತರ ಬಿಎಸ್‌ಪಿ ಕಾರ್ಯಕರ್ತ ರವಿಕುಮಾರ್ ಯತ್ನಿಸಿದ್ದು, ಠಾಣೆಗೆ ನುಗ್ಗಿ ದುಷ್ಕೃತ್ಯವೆಸಗಿದ್ದು ಯಾವೊಂದು ಪ್ರಕರಣವನ್ನೂ ರೆಡ್ಡಿಗಳ ವಿರುದ್ಧ ರು ದಾಖಲಿಸಿಲ್ಲ. ಬೆಂಗಳೂರು ಗ್ರಾಮಾಂತರ ರಮೇಶ್ ಕೂಡ ಶಾಸಕ ವಿಶ್ವನಾಥ್ ಅಟ್ಟಹಾಸಕ್ಕೆ ಪ್ರೇಕ್ಷಕರೇ. ಹಾಗಂತ ಬಿಎಸ್‌ಪಿ ನಾಯಕರಾಗಲಿ, ಹೋರಾಟಗಾರರಾಗಲಿ ಕೈಕಟ್ಟಿ ಕೂತಿಲ್ಲ. ಫೆಬ್ರವರಿ ಜಾನುಕುಂಟೆ ಪೊಲೀಸ್ ಠಾಣೆಗೆ ದಲಿತರ ಮುತ್ತಿಗೆ ು ಹಮ್ಮಿಕೊಳ್ಳಲಾಗಿದೆ. ರಾಜ್ಯ ಬಿಎಸ್‌ಪಿ ಅಧ್ಯಕ್ಷ ಮಹೇಶ್ ಸಾರಥ್ಯದಲ್ಲಿ ಸಹಸ್ರಾರು ದಲಿತರು ಟನೆಗೆ ಅಣಿಯಾಗುತ್ತಿದ್ದಾರೆ. ಚಿಕ್ಕಬಳ್ಳಾಪುರ, ರು, ದೊಡ್ಡಬಳ್ಳಾಪುರ, ದೇವನಹಳ್ಳಿ ಸೇರಿದಂತೆ ಲ್ಲಾ ದಲಿತರೆಲ್ಲ ರೆಡ್ಡಿಗಳ ದೌರ್ಜನ್ಯದ ವಿರುದ್ಧ ಿದಿದ್ದಾರೆ.

್ಯಾಗಿಯೂ ಪೊಲೀಸರು ಶಾಸಕ ವಿಶ್ವನಾಥ್ ರೆಡ್ಡಿ ಗೂಂಡಾಗಳನ್ನೇಕೆ ಬಂಧಿಸುತ್ತಿಲ್ಲವೋ ುತ್ತಿಲ್ಲ. ಯಲಹಂಕವೆಂಬ ರೆಡ್ಡಿ ರಿಪಬ್ಲಿಕ್‌ನಲ್ಲಿ ಎಸ್ಟೇಟ್ ಅಟ್ಟಹಾಸಕ್ಕಿದು ಒಂದು ದರ್ಶನವಷ್ಟೆ. ಬಳ್ಳಾರಿ ರೆಡ್ಡಿಗಳದ್ದು ಗಣಿ ಲೂಟಿಯ ದರ್ಶನವಾದರೆ ಯಲಹಂಕದ ರೆಡ್ಡಿಗಳದ್ದು ರಿಯಲ್ ದಂಧೆ!

● ರಾ. ಸೋಮನಾಥ್

ಆಂಜನೇಯ ವಿರುದ್ಧ ಸಿರಿಗೆರೆ ಮಠದ ಪಿತೂರಿ



ಆಂಜನೇಯ

ಹೇಗೇ ಎಣಿಸಿ ಗುಣಿಸಿದರೂ ರಾಜ್ಯದಲ್ಲಿ ಮತ್ತೊಂದು ವಿಧಾನಸಭಾ ಚುನಾವಣೆ ನಡೆಯಲು ಇನ್ನು ಮೂರು ವರ್ಷ ಕಾಯಲೇಬೇಕು. 'ಮಧ್ಯಂತರ ಚುನಾವಣೆ' ಯ ಕನವರಿಕೆಗೆ ಬಿದ್ದಿದ್ದ ಬಿಜೆಪಿಗಳಿಗೇ ಇದು ಖಾತ್ರಿಯಾಗಿರೋದರಿಂದ ಎಲೆಕ್ಷನ್ ಹಗಲುಗನಸು ಬಿಟ್ಟು ಸರ್ಕಾರದ ಕಾಲೆಳೆಯಲು ಕೊಸರಾಡುತ್ತಿದ್ದಾರೆ. ಅಂತಹದ್ದರಲ್ಲಿ ಸಿರಿಗೆರೆ ತರಳುಬಾಳು ಮಠದ ಜಗದ್ಗುರುಗಳು ಮಾತ್ರ ಎಂಎಲ್‌ಎ ಎಲೆಕ್ಷನ್ ಆದಷ್ಟು ಬೇಗ ಬರಲಿ ಅಂತ ಚಡಪಡಿಸುತ್ತಿರೋದು ಸೋಜಿಗವೇ ಸರಿ. ಮಠದ ಮೂಲಗಳು ಹೇಳುವ ಪ್ರಕಾರ ಹೊಳಲ್ಕೆರೆಯಲ್ಲಿ ಹಾಲಿ ಶಾಸಕ ಕಂ ಸಮಾಜ ಕಲ್ಯಾಣ ಸಚಿವ ಆಂಜನೇಯರನ್ನು ಸೋಲಿಸಿ ಮನೆಗಟ್ಟಬೇಕೆಂಬ ಹಠವೇ ಜಗದ್ಗುರುಗಳ ಎಲೆಕ್ಷನ್ ಚಡಪಡಿಕೆಗೆ ಕಾರಣವಂತೆ!

ಹೇಳಿಕೇಳಿ ಆಂಜನೇಯ ಕಳೆದ ಚುನಾವಣೆಯಲ್ಲಿ ಗೆದ್ದು ಬಂದದ್ದೇ ಸಿರಿಗೆರೆ ಮಠದ 'ಶಿಫಾರಸ್ಸಿ'ನಿಂದ. ಅಂತದ್ದರಲ್ಲೇ ಆಂಜನೇಯರನ್ನು ಸೋಲಿಸಲು ಸಿರಿಗೆರೆ ಪೀಠಾಧಿಪತಿಗಳೇಕೆ ಬುಸುಗುಡುತ್ತಿದ್ದಾರೆ? ಎಂಬ ಸಂಗತಿಯನ್ನು ಕೆದಕುತ್ತಾ ಸಾಗಿದಂತೆ ಮಠದ ಪೊಲಿಟಿಕ್ಸ್ ವಾಂಛೆ ಮತ್ತು ಜಾತಿ ಪ್ರತಿಷ್ಠೆಗಳು ಅನಾವರಣಗೊಳ್ಳುತ್ತವೆ.

ಹಾಗೆ ನೋಡಿದರೆ ಸಿರಿಗೆರೆ ಪೀಠ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗದ ಭಾಗಗಳಲ್ಲಿ ಲಗಾಯ್ತಿನಿಂದಲೂ ರಾಜಕೀಯ ಶಕ್ತಿ ಕೇಂದ್ರವಾಗಿ ತನ್ನನ್ನು ರೂಪಿಸಿಕೊಳ್ಳುತ್ತಲೇ ಬಂದಿದೆ. ಅಪಾರ ಸಂಖ್ಯೆಯಲ್ಲಿರುವ ಸಾಧು ಲಿಂಗಾಯತ ಮತದಾರರಿಗೆ ಸಿರಿಗೆರೆ ಪೀಠಾಧಿಪತಿ ಶಿವಮೂರ್ತಿ ಶಿವಾಚಾರ್ಯರ ಹುಕುಂ ಒಂಥರಾ ಅಂತಿಮ ತೀರ್ಪಿದ್ದಂತೆ. ಎಲೆಕ್ಷನ್ ವಿಚಾರದಲ್ಲಂತೂ ಮಠದ ಕೃಪೆ ಗಿಟ್ಟಿಸಿಕೊಂಡವ ಗೆದ್ದ ಅಂತಲೇ ಅರ್ಥ. ಇದು ಹೊಳಲ್ಕೆರೆ ರಾಜಕಾರಣಕ್ಕೇನೂ ಹೊರತಾದುದಲ್ಲ. ದಿವಂಗತ ಬಂಡೇಬೊಮ್ಮನಹಳ್ಳಿ ಪರಮೇಶ್ವರಪ್ಪನಿಂದ ಹಿಡಿದು ಹಾಲಿ ಆಂಜನೇಯರ ತನಕ ಅಂಥದೊಂದು ಫಾರ್ಮುಲಾವನ್ನು ಮಠ ಸಾಧಿಸಿಕೊಳ್ಳುತ್ತಲೇ ಬಂದಿದೆ; ಗೊಲ್ಲ ಸಮುದಾಯದ ಎ.ವಿ. ಉಮಾಪತಿಯೊಬ್ಬರನ್ನು ಬಿಟ್ಟು. ಹೊಳಲ್ಕೆರೆಯಲ್ಲಿ ಮಠವನ್ನು ಎದುರುಹಾಕಿಕೊಂಡೇ ಮೂರು ಬಾರಿ ಶಾಸಕರಾದ ಹೆಗ್ಗಳಿಕೆ ಉಮಾಪತಿಯವರದ್ದು. ಅವರ ಅಹಿಂದ ಸಂಘಟನೆ ಮಠದ ರಾಜಕಾರಣಕ್ಕೆ ಸೆಡ್ಡು ಹೊಡೆದಿದ್ದು ಸುಳ್ಳಲ್ಲ.

ಆದರೆ ಯಾವಾಗ ಹೊಳಲ್ಕೆರೆ ಮೀಸಲು ಕ್ಷೇತ್ರವಾಯಿತೊ ಆಗಿಂದಲೇ ಮಠ ತನ್ನ ಪ್ರಭಾವ ಹಿಗ್ಗಿಸಿಕೊಳ್ಳುತ್ತಾ ಬಂತು. ನಂತರ ಬಂದ ಚಂದ್ರಪ್ಪ, ಆಂಜನೇಯರು ಮತದಾರರ ಮೇಲೆ ನಂಬಿಕೆಯಿಟ್ಟು ರಾಜಕಾರಣ ಮಾಡಿದ್ದಕ್ಕಿಂತ ಹೆಚ್ಚಾಗಿ ಮಠದ ಹಂಗಿನಲ್ಲೇ ಸೋಲು-ಗೆಲುವಿನ ತಾಳ ಹಾಕಿದಂತಹವರು. ಈ ಒಲೈಕೆ ಯಾವ ಮಟ್ಟದ್ದೆಂದರೆ ಇದೇ ಆಂಜನೇಯ ಸಮಾಜ ಕಲ್ಯಾಣ ಸಚಿವರಾಗಿ ವಿಧಾನಸೌಧ ಹೊಕ್ಕಾಗ ಶಕ್ತಿಸೌಧದ ಮೂರನೇ ಅಂತಸ್ತಿನಲ್ಲಿರುವ ತಮ್ಮ ಕಚೇರಿಯಲ್ಲಿ ಸಿರಿಗೆರೆ ಮಠದ ಮರುಳಸಿದ್ದರ ಫೋಟೊ ತೂಗು ಹಾಕುವ ಮೂಲಕ ಮಠದ ಓಲೈಕೆಗಿಳಿದಿದ್ದರು. 2008ರ ಚುನಾವಣೆಯಲ್ಲಿ ಜಗದ್ಗುರುಗಳ ಒಲವು ಬಿಜೆಪಿಯ ಚಂದ್ರಪ್ಪನ ಕಡೆಗೆ ತಿರುಗಿದ್ದರಿಂದ ಆತ ಗೆದ್ದು, ಆಂಜನೇಯ ಸೋತಿದ್ದರು. ಆದರೇ ಐದೇ ವರ್ಷದಲ್ಲಿ ಸಿರಿಗೆರೆ ಮಠದ ಒಲವು ಚಂದ್ರಪ್ಪನಿಂದ ಆಂಜನೇಯರ ಕಡೆಗೆ ಶಿಫ್ಟಾಗಿದ್ದರಿಂದ 2013ರ ಚುನಾವಣೆಯಲ್ಲಿ ಆಂಜನೇಯ ಗೆದ್ದದ್ದು, ಸಿದ್ದು ಸಂಪುಟದಲ್ಲಿ ಮಂತ್ರಿಯಾದದ್ದು.


'ಪಾಠ' ಕಲಿಸುವ ಪರಂಪರೆ

ರಾಜಕೀಯ ಪಕ್ಷವೊಂದರ ಹೈಕಮಾಂಡ್‌ನಂತೆ ವರ್ತಿಸುವ ಸಿರಿಗೆರೆ ಶಕ್ತಿಕೇಂದ್ರಕ್ಕೆ ಒಂದು ಚಾಳಿ ಇದೆ. ಏನೆಂದರೆ ತಾನು ಯಾವುದೇ ರಾಜಕಾರಣಿಯನ್ನು ಬೆಳೆಸಲಿ, ಆತ ತನ್ನ ಕೈಯಳತೆಯಲ್ಲೇ ಇರಬೇಕೆನ್ನುವ ಬಯಕೆ; ಪಕ್ಕಾ ಪೊಲಿಟಿಕಲ್ ಪೊಸೆಸಿವ್‌ನೆಸ್! ಮಠದ ಹುಕುಂಗಳಿಗೆ ತಲೆತಗ್ಗಿಸಿ ಜೀ ಹುಜೂರ್ ಎನ್ನದಿದ್ದರೆ ಅಂತವನಿಗೆ ಮುಂದಿನ ಚುನಾವಣೆಯಲ್ಲಿ ಸೋಲಿನ ಪಾಠ ಕಲಿಸಬೇಕೆಂಬ ಹಠ ಶುರುವಾಗಿಬಿಡುತ್ತೆ. ಚಂದ್ರಪ್ಪನಿಂದ ಆಂಜನೇಯರತ್ತ ಒಲವು ಶಿಫ್ಟಾದದ್ದು, ಇದೀಗ ಆಂಜನೇಯ ಕೂಡಾ ಮಠಕ್ಕೆ ಬೇಡವಾಗಿರೋದು ಇದೇ ಕಾರಣಕ್ಕೆ.

ಕಳೆದ ಚುನಾವಣೆಯಲ್ಲಿ ಚಂದ್ರಪ್ಪನಿಗೆ ಪಾಠ ಕಲಿಸಬೇಕೆಂಬ ಕಾರಣಕ್ಕೆ ಹೊಳಲ್ಕೆರೆಯಲ್ಲಿ ಆಂಜನೇಯರನ್ನು ಮಠ ಬೆಂಬಲಿಸಿದ್ದೇನೊ ನಿಜ. ಆದರೆ ಆಂಜನೇಯ ಮಂತ್ರಿಯಾಗುತ್ತಾರೆ, ಅದೂ ಸಮಾಜ ಕಲ್ಯಾಣ ಇಲಾಖೆಯಂತಹ ಪ್ರಭಾವಿ ಖಾತೆಯೇ ದಕ್ಕುತ್ತದೆ ಅಂತ ಸ್ವತಃ ಮಠವೇ ನಿರೀಕ್ಷಿಸಿರಲಿಲ್ಲ. ಆಂಜನೇಯ ಮಂತ್ರಿಯಾದದ್ದೇ ಮಠದ ಕೆಲ ಆಪ್ತರ ಕಣ್ಣುರಿಗೆ ಕಾರಣವಾಗಿತ್ತು. ಸರ್ಕಾರದ ಆಯಕಟ್ಟಿನಲ್ಲೇ ಮಠದ ಪ್ರಭಾವಿ ಪ್ರತಿನಿಧಿಯೊಬ್ಬ ಇದ್ದಂತಾಗುತ್ತದೆ ಎನ್ನುವ ಕಾರಣಕ್ಕೆ ಎಲ್ಲರೂ ತೆಪ್ಪಗಿದ್ದರು. ಆದರೆ ದಿನದಿಂದ ದಿನಕ್ಕೆ ವರ್ಚಸ್ಸು ಹೆಚ್ಚಿಸಿಕೊಳ್ಳುತ್ತಿದ್ದ ಆಂಜನೇಯರ ಮೇಲೆ ಜಗದ್ಗುರುವನ್ನು ಎತ್ತಿಕಟ್ಟುವಂತಾ ಕಾರ್ಯ ನಡೆಯುತ್ತಲೇ ಇತ್ತು.

ಅದ್ಯಾವಾಗ ರಾಜ್ಯ ಸರ್ಕಾರ 'ಹಿಂದೂ ಧಾರ್ಮಿಕ ದತ್ತಿ ವಿಧೇಯಕ'ವನ್ನು ಮಂಡಿಸಿ ಮಠಗಳ ಮೇಲೆ ನಿಯಂತ್ರಣ ಸಾಧಿಸಲು ಹೊರಟಿದೆ ಎಂಬ ಪುಕಾರೆದ್ದಿತೊ ಆಗ ಮಠ ಆಂಜನೇಯರಿಂದ ಭಾರೀ ಪ್ರತಿಫಲವನ್ನೇ ನಿರೀಕ್ಷಿಸಿತ್ತು. ಸಹಜವಾಗಿಯೇ ಮಂತ್ರಿಯಾಗಿದ್ದ ಆಂಜನೇಯ ಈ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಮಾತುಬಿಚ್ಚಲಿಲ್ಲ. ಸಿರಿಗೆರೆಯ ಶಿವಮೂರ್ತಿ ಶಿವಾಚಾರ್ಯ ಜಗದ್ಗುರುಗಳ ಪಿತ್ತ ನೆತ್ತಿಗೇರಿದ್ದೇ ಆಗ. ತಮ್ಮಿಂದಾಗಿಯೇ ಗೆದ್ದ ಆಂಜನೇಯ, ತಮ್ಮ ಪರ ವಕಾಲತ್ತು ವಹಿಸಲಿಲ್ಲ ಎನ್ನುವ ಸಿಟ್ಟಿನ ಜೊತೆಗೆ ಆಪ್ತರ ಒಗ್ಗರಣೆ ಸಮಾಚಾರಗಳೂ ಸೇರಿಕೊಂಡು ಇದೀಗ ಪಾಠ ಕಲಿಸುವ ನಿರ್ಧಾರಕ್ಕೆ ಬಂದು ನಿಂತಿದ್ದಾರೆ.

ಒಳಗೇ ಇದ್ದ ಈ ಮುನಿಸು ಜಗಜ್ಜಾಹಿರಾದದ್ದು




ಚಂದ್ರಪ್ಪ

ಮಂತ್ರಿ ಆಂಜನೇಯರ ಮಗಳ ಮದುವೆಯಲ್ಲಿ. ಹೊಳಲ್ಕೆರೆಯಲ್ಲಿ ನಡೆದ ಸಾಮೂಹಿಕ ವಿವಾಹದಲ್ಲೇ ಆಂಜನೇಯ ತಮ್ಮ ಮಗಳ ಮದುವೆ ಮಾಡಿದ್ದರಾದರು ಆ ಸಮಾರಂಭದಲ್ಲಿ ಖುದ್ದು ಸಿಎಂ ಸಿದ್ದರಾಮಯ್ಯರಿಂದ ಹಿಡಿದು ಹಲವಾರು ಸಂಪುಟ ಸಹೋದ್ಯೋಗಿಗಳು, ಹಿರಿಯ ರಾಜಕಾರಣಿಗಳು ಭಾಗವಹಿಸಿದ್ದರು. ಸಿರಿಗೆರೆಯ ಶಿವಮೂರ್ತಿ ಶಿವಚಾರ್ಯರು ಮತ್ತು ಸಾಣೆಹಳ್ಳಿಯ ಪಂಡಿತಾರಾಧ್ಯರು ಕೂಡಾ ಉಪಸ್ಥಿತರಿದ್ದೇ ಇರುತ್ತಾರೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಇಬ್ಬರೂ ಗೈರಾಗುವ ಮೂಲಕ ಆಂಜನೇಯರ ಮೇಲೆ ಮಠಕ್ಕಿರುವ ಮುನಿಸನ್ನು ಸೂಕ್ಷ್ಮವಾಗಿ ಹೊರಹಾಕಿದ್ದರು.

ಸಾಫ್ಟ್‌ವೇರ್ ಸ್ವಾಮಿಯನ್ನು ತರ್ತಾರಂತೆ


ಆಂಜನೇಯರನ್ನು ಸೋಲಿಸಬೇಕೆಂಬ ನಿರ್ಧಾರಕ್ಕೆ ಬಂದಿರುವ ಮಠಕ್ಕೆ ಈಗ ಹೊಳಲ್ಕೆರೆಯಲ್ಲಿ ಪ್ರತಿಸ್ಪರ್ಧಿಯೊಬ್ಬ ಬೇಕಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಆಂಜನೇಯರನ್ನು ಬಿಟ್ಟರೆ ಸಕ್ರಿಯ ರಾಜಕಾರಣದಲ್ಲಿ ಇರೋದು ಬಿಜೆಪಿಯ ಚಂದ್ರಪ್ಪ ಮಾತ್ರ. ಆದರೆ ಶತಾಯಗತಾಯ ಆತನನ್ನು ಬೆಂಬಲಿಸಲು ಮಠಕ್ಕೆ ಇಷ್ಟವಿಲ್ಲ. ಹಾಗಾಗಿ ಹೊಸ ಎಂಟ್ರಿಗಾಗಿ ಮಠ ಹುಡುಕಾಟ ನಡೆಸಿದೆ.

ಇದೀಗ ಹರಿದಾಡುತ್ತಿರುವ ಲೇಟೆಸ್ಟ್ ಸುದ್ದಿಯೆಂದರೆ ಚಿತ್ರದುರ್ಗದ ಸಂಸದನಾಗಿ ಮೆರೆದಾಡಿ ಕಳೆದ ಎಂಪಿ ಎಲೆಕ್ಷನ್‌ನಲ್ಲಿ ಸೋತು ಮನೆ ಸೇರಿರುವ ಜನಾರ್ಧನಸ್ವಾಮಿ



ಯನ್ನು ಹೊಳಲ್ಕೆರೆ ರಾಜಕಾರಣಕ್ಕೆ ಎಳೆತರಲು ಮಠ ಯೋಜನೆ ಹಾಕುತ್ತಿದೆಯಂತೆ. ಇಂತಹದ್ದೊಂದು ಗಾಳಿ ಸುದ್ದಿ ಚಿತ್ರದುರ್ಗ ಜಿಲ್ಲಾ ರಾಜಕಾರಣದಲ್ಲಿ ಸಣ್ಣದೊಂದು ರಾಜಕೀಯ ಸಂಚಲನವನ್ನೇ ಸೃಷ್ಟಿಸಿಬಿಟ್ಟಿದೆ. ಹೈಫೈ ಇಂಜಿನಿಯರ್ ಜನಾರ್ಧನಸ್ವಾಮಿ ಚಿತ್ರದುರ್ಗದ ಸಂಸದನಾಗಿದ್ದಾಗ ಕ್ಷೇತ್ರದಲ್ಲಿ ಸುತ್ತಾಡಿದ್ದಕ್ಕಿಂತ ಬಿಸಿನೆಸ್ ಫಾರಿನ್ ಟೂರ್ ಮಾಡಿದ್ದೇ ಹೆಚ್ಚು. ಆತನ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಬಂದಿದ್ದ ನಿಧಿ ಖರ್ಚಾಗದೆ ಈಗಲೂ ಜಿಲ್ಲಾಧಿಕಾರಿ ಅಕೌಂಟಿನಲ್ಲೇ ಬಿದ್ದು ಒದ್ದಾಡುತ್ತಿದೆ. ಅಂತಹ ಸ್ವಾಮಿಯ ಹೆಸರನ್ನು ಮಠ ಹೊಳಲ್ಕೆರೆಯಲ್ಲಿ ಚಲಾವಣೆಗೆ ಬಿಟ್ಟು ಟ್ರಯಲ್ ನೋಡುತ್ತಿದೆ.

ಜನಾರ್ಧನ ಸ್ವಾಮಿ ಬಿಜೆಪಿಯಿಂದ ನಿಲ್ಲುವುದು ಸುಲಭವೇನೂ ಇಲ್ಲ. ಯಾಕೆಂದರೆ, ಯಡ್ಡಿಯ ಹಿಂದೆ ಕೆಜೆಪಿಗೆ ಹೋಗಿದ್ದ ಚಂದ್ರಪ್ಪ ಈಗ ಗುರುವನ್ನು ಹಿಂಬಾಲಿಸಿಕೊಂಡು ಬಿಜೆಪಿಗೆ ವಾಪಾಸ್ ಬಂದಿದ್ದಾನೆ. ಈಗಾಗಲೇ ಕ್ಷೇತ್ರದಲ್ಲಿ ಓಡಾಡಿಕೊಂಡು ಬಿಜೆಪಿಗೆ ಬಲ ತುಂಬುತ್ತಿರುವ ಚಂದ್ರಪ್ಪನಿಗೆ ಯಡ್ಡಿಯ ಕೃಪಾ ಕಟಾಕ್ಷವೂ




ಜನಾರ್ದನ ಸ್ವಾಮಿ

ಇದೆ. ತನ್ನ ಪಾಲಿನ ಟಿಕೆಟನ್ನು ಸಲೀಸಾಗಿ ಜನಾರ್ಧನಸ್ವಾಮಿಗೆ 'ತ್ಯಾಗ' ಮಾಡುವ ಮನಸ್ಥಿತಿಯಲ್ಲಿ ಆತನಿಲ್ಲ. ಆದರೆ ಈ ಟ್ರಯಲ್ ವರ್ಷನ್ನನ್ನೇ ಮಠ ಸೀರಿಯಸ್ಸಾಗಿ ಕಾರ್ಯರೂಪಕ್ಕೆ ತರಲು ಪಟ್ಟುಹಿಡಿದರೆ ಚಂದ್ರಪ್ಪನ ನೆರವಿಗೆ ಯಡ್ಡಿ ಕೂಡಾ ಬರಲಾರ. ಯಾಕೆಂದರೆ ಶಿಕಾರಿಪುರದಲ್ಲೂ ಮಠ ಸಾಲಿಡ್ ಪ್ರಭಾವಳಿಯನ್ನೇ ಹೊಂದಿದೆ. ಅದಕ್ಕಿಂತ ಮುಖ್ಯವಾಗಿ, ಯಾವುದೇ ಮಠವನ್ನು ಎದುರು ಹಾಕಿಕೊಳ್ಳುವ ಸ್ಥಿತಿಯಲ್ಲಿ ಸ್ವತಃ ಬಿಜೆಪಿ ಪಕ್ಷವೇ ಇಲ್ಲ. ಸಿದ್ದು ಸರ್ಕಾರದ ಜನಪ್ರಿಯ ಯೋಜನೆಗಳ ಏಟು ತಾಳಿಕೊಳ್ಳಲಾಗದ ಬಿಜೆಪಿಗೆ ಸದ್ಯಕ್ಕೆ ಆಸರೆ ಅಂತ ಇರೋದು ಮಠ-ರಾಜಕಾರಣ ಮಾತ್ರ. ಚಂದ್ರಪ್ಪ ಬಲಿಪಶು ಆಗಲೇಬೇಕಾಗುತ್ತದೆ. ಒಂದೊಮ್ಮೆ ಆತ ಬಂಡಾಯವೆದ್ದು ಬೇರೆ ಪಕ್ಷದಿಂದಲೊ ಅಥವಾ ಸ್ವತಂತ್ರ ಅಭ್ಯರ್ಥಿಯಾಗಿಯೋ ಸ್ಪರ್ಧಿಸಿದರೆ ಅದು ಆತನ ರಾಜಕೀಯ ಬದುಕಿನ ಇತಿಶ್ರೀ ಅಂತಲೇ ಅರ್ಥ.

ಒಟ್ಟಿನಲ್ಲಿ ಸಿರಿಗೆರೆ ಮಠ ಅವನ್ನ ಬಿಟ್, ಇವನ್ನ ಬಿಟ್ ಮತ್ತಾರು ಅಂತ ಗೇಮ್ ಆಡುತ್ತಿದೆ. ಮಠ ಯಾರನ್ನು ಬೆಂಬಲಿಸುತ್ತದೆ ಎನ್ನುವುದಕ್ಕಿಂತ ಮುಖ್ಯವಾಗಿ, ಎವಿ ಉಮಾಪತಿಯಂತಹ ಅಭ್ಯರ್ಥಿಯೊಬ್ಬನನ್ನು ತಮ್ಮ ನಡುವೆ ಸೃಷ್ಟಿಸಿಕೊಳ್ಳಬೇಕಾದ ಜರೂರತ್ತು ಹೊಳಲ್ಕೆರೆಗಿದೆ. ಆ ಮೂಲಕ ಒಂದೇ ಏಟಿನಲ್ಲಿ ಮಠವೂ ಸೇರಿದಂತೆ 'ಎಲ್ಲರಿಗೂ' ಜನರೇ 'ಪಾಠ' ಕಲಿಸಬಹುದು.

● ಟಿ.ಎನ್.ಷಣ್ಮುಖ



ಆಮ್ ಆದ್ಮಿ ಕಲಿಸಿದ ಪಾಠ!!

‘ಕೆಲವು ಸಂದರ್ಭಗಳಲ್ಲಿ ಎಲ್ಲರನ್ನೂ ಯಾಮಾರಿಸಿಬಿಡಬಹುದು; ಹಾಗೆಯೇ ಕೆಲವರನ್ನು ಎಲ್ಲ ಸಂದರ್ಭಗಳಲ್ಲೂ ಯಾಮಾರಿಸಬಹುದು. ಆದರೆ ಎಲ್ಲರನ್ನೂ, ಯಾವಾಗಲೂ ಯಾಮಾರಿಸುವುದು ಸಾಧ್ಯವಿಲ್ಲ.’ ಈ ಮಾತನ್ನು ಯಾವ ಮಹಾನುಭಾವರು ಹೇಳಿದರೋ ಗೊತ್ತಿಲ್ಲ. ಆದರೆ ದೇಶದ ರಾಜಧಾನಿ ದೆಹಲಿಯಲ್ಲಿ ನಡೆಯುತ್ತಿರುವ ರಾಜಕಾರಣಕ್ಕೆ ಈ ಮಾತು ಅಕ್ಷರಶಃ ಒಪ್ಪುತ್ತದೆ.

ಫೆಬ್ರವರಿ 7ರಂದು ರಾಜಧಾನಿ ದೆಹಲಿಯ ಚುನಾವಣೆ ನಡೆಯಲಿದ್ದು 10ರಂದು ಫಲಿತಾಂಶ ಹೊರಬೀಳಲಿದೆ. ಮರುದಿನ ಹೊಸ ಸರ್ಕಾರ ರಚನೆಯಾಗಲಿದೆ. ಅಂದರೆ ಅದು ಮಾಮೂಲಿಯಂತೆ ಕಾರ್ಪೋರೇಟ್ ಬೆಂಬಲಿತ ಬಿಜೆಪಿ ಅಥವಾ ಕಾಂಗ್ರೆಸ್ ಸರ್ಕಾರವಲ್ಲ, ಅದು ಆಮ್ ಆದ್ಮಿ ಪಕ್ಷದ ಸರ್ಕಾರ.

ಚುನಾವಣೆ ಘೋಷಣೆಯಾದ ಘಳಿಗೆಯಿಂದಲೇ ಎಂದಿನಂತೆ ಮೋದಿ ಅಲೆ ಬಡಿದೆಬ್ಬಿಸಲು ವಿಫಲ ಪ್ರಯತ್ನ ನಡೆಸಿದ ಮಾಧ್ಯಮಗಳು ಈಗ ಬಸವಳಿದು ಕೂತಿವೆ. ಒಂದು ತಿಂಗಳ ಹಿಂದೆ ಬಿಜೆಪಿಯ ಬಹುಮತದ ಸರ್ಕಾರ ಎಂದು ಮೋದಿ ತುತ್ತೂರಿ ಊದಿದ್ದರು. ಎರಡು ವಾರಗಳ ನಂತರ ಅತಂತ್ರ ಸ್ಥಿತಿ - ಎಎಪಿ, ಬಿಜೆಪಿಗಳಿಗೆ ಸಮಬಲ ಎಂದು ಅಪ್ಪಣೆ ಕೊಡಿಸಿದ್ದರು. ಆದರೆ ತಳಮಟ್ಟದ ಸತ್ಯಾಂಶವನ್ನು ಮುಚ್ಚಿಟ್ಟು ಮುಖಭಂಗ ಅನುಭವಿಸುವುದನ್ನು ತಪ್ಪಿಸಿಕೊಳ್ಳಲು ಇದೀಗ ಬಹುತೇಕ ಮಾಧ್ಯಮಗಳು ಎಎಪಿಗೆ ಬಹುಮತ ಖಚಿತ ಎಂಬ ಸುದ್ದಿಗಳನ್ನು ಬಿತ್ತರಿಸುತ್ತಿವೆ. ಚುನಾವಣಾ ಪೂರ್ವ ಸಮೀಕ್ಷೆಗಳೂ ಇದನ್ನೇ ಹೇಳುತ್ತಿವೆ.

ಚುನಾವಣೆಗಳಲ್ಲಿ ಸೋಲು - ಗೆಲುವು ಎಲ್ಲಾ ಮಾಮೂಲಿ ಸಂಗತಿಗಳೇ. ಕೊನೆ ಘಳಿಗೆಯ ನಕಾರಾತ್ಮಕ ಕರಾಮತ್ತುಗಳಿಂದ ಒಂದು ವೇಳೆ ಆಪ್ ಪಕ್ಷದ ಗೆಲುವನ್ನು ಬಿಜೆಪಿ ಕಸಿದುಕೊಂಡರೂ ಆಶ್ಚರ್ಯವಿಲ್ಲ. ಆದರೆ ಈ ದೇಶದ ಆಮ್ ಆದ್ಮಿಗಳ ಪಾಲಿಗೆ ಎಎಪಿ ಪ್ರಯೋಗ ಈಗಾಗಲೇ ಯಶಸ್ವಿಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಂತೂಇಂತೂ ಕಾರ್ಪೋರೇಟ್ ಮೀಡಿಯಾ ಪ್ರಾಯೋಜಿತ ಮೋದಿ ಅಲೆಗೆ ಕೊನೆಗಾಲ ಬಂದಿರುವುದು ಪ್ರಜಾತಂತ್ರದ ಉಳಿವು-ಅಳಿವುಗಳ ದೃಷ್ಟಿಯಿಂದ ಬಹಳ ಮುಖ್ಯವಾದುದು. ಬಡ ಭಾರತೀಯರ ಕಲ್ಯಾಣಕ್ಕಾಗಿ ಏನನ್ನೂ ಮಾಡದೆ, ಕೇವಲ ಕಾರ್ಪೋರೇಟ್ ಮೀಡಿಯಾಗಳ ಮೂಲಕ ಹಸಿಹಸಿ ಸುಳ್ಳು ಪ್ರಚಾರ ಮಾಡಿಕೊಂಡು ಈ ದೇಶದ ಜನತೆಯನ್ನು ಯಾವುದೇ ಅಡೆತಡೆಯಿಲ್ಲದೆ ಯಾಮಾರಿಸಬಹುದೆಂಬ ಮೋದಿ-ಕಾರ್ಪೋರೇಟ್ ಕೂಟದ ಷಡ್ಯಂತ್ರದ ವಿರುದ್ಧ ಆಮ್ ಆದ್ಮಿ ಪಕ್ಷ ಗೆಲುವು ಸಾಧಿಸಿ ಅಪಾರ ಜನಮನ್ನಣೆ ಗಳಿಸಿದ್ದಕ್ಕೆ ಪ್ರಜಾತಂತ್ರವಾದಿಗಳೆನಿಸಿಕೊಂಡ ನಾವೆಲ್ಲರೂ ಅಭಿನಂದನೆ ಹೇಳಲೇಬೇಕು.

ಇಲ್ಲಿ ನಾವು ಪರಿಗಣನೆಗೆ ತೆಗೆದುಕೊಳ್ಳಲೇಬೇಕಾದ ಕೆಲವು ಪ್ರಮುಖ ಅಂಶಗಳಿವೆ. ಎಲ್ಲೆಡೆ ಮೋದಿ ಅಬ್ಬರ ನಡೆಯುತ್ತಿರುವ ಸನ್ನಿವೇಶದಲ್ಲಿ ರಾಜಕೀಯವಾಗಿ ಅದಕ್ಕೆ ಸೆಡ್ಡು ಹೊಡೆಯುತ್ತಿರುವ ಈ ಎಎಪಿ ಪಕ್ಷ ಎರಡು ವರ್ಷಗಳ ಹಿಂದೆ ಅಸ್ತಿತ್ವದಲ್ಲೇ ಇರಲಿಲ್ಲ. ‘ಆಮ್ ಆದ್ಮಿ ಪಾರ್ಟಿ’ ಅರ್ಥಾತ್ ಜನಸಾಮಾನ್ಯರ ಪಕ್ಷ ಹುಟ್ಟಿದ್ದು 2012ರ ನವೆಂಬರ್ 26ರಂದು. 1949ರ ಇದೇ ದಿನ ಸಂವಿಧಾನವನ್ನು ಅಂಗೀಕರಿಸಲಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು. ಚುನಾವಣಾ ಆಯೋಗದಲ್ಲಿ ನೋಂದಣಿ ಪಡೆದುಕೊಂಡಿದ್ದು 2013ರ ಮಾರ್ಚ್‌ನಲ್ಲಿ. ಇದಾದ ಕೆಲವೇ ತಿಂಗಳುಗಳಲ್ಲಿ ಚುನಾವಣೆ ಎದುರಿಸಿ ಪವಾಡ ಎಂಬಂತೆ 28 ಸೀಟುಗಳನ್ನು ಪಡೆದು, ಡಿಸೆಂಬರ್ 28ರಂದು ದೆಹಲಿ ಗದ್ದುಗೆಗೆ ಏರಿತು.


ಇಂಥ ವಿದ್ಯಮಾನ ಬೇರೆ ಯಾವ ದೇಶದಲ್ಲಿ ನಡೆದಿದೆಯೋ ಗೊತ್ತಿಲ್ಲ, ಆದರೆ ಭಾರತದಲ್ಲಂತೂ ಇಲ್ಲ ಎಂದು ಖಚಿತವಾಗಿ ಹೇಳಬಹುದು. ದೆಹಲಿಯ ಸಿಎಂ ಹುದ್ದೆಗೇರಿದ ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್ ಅಧಿಕಾರ ನಡೆಸಿದ್ದು ಕೇವಲ 49 ದಿನ ಮಾತ್ರ. ಹೀಗೆ ಅಲ್ಪಕಾಲ ಜೀವಿಸಿದ್ದ ಎಎಪಿ ವಿದ್ಯಮಾನವನ್ನು ಒಂದು ಚಾರಿತ್ರಿಕ ಆಕಸ್ಮಿಕ ಎಂಬಂತೆ ಬಹುತೇಕ ಪಂಡಿತರು ವಿಶ್ಲೇಷಣೆ ಮಂಡಿಸಿದ್ದರು. ಅಣ್ಣಾ ಹಜಾರೆಯ ಭ್ರಷ್ಟಾಚಾರ ವಿರೋಧಿ ಆಂದೋಲನದ ಸಾಂದರ್ಭಿಕ ರಾಜಕೀಯ ಲಾಭ ಎಎಪಿಗೆ ದಕ್ಕಿದೆಯೇ ಹೊರತು ಈ ವಿದ್ಯಮಾನಕ್ಕೆ ಭವಿಷ್ಯವಿಲ್ಲ ಎಂದು ಭವಿಷ್ಯ ನುಡಿದಿದ್ದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ದೆಹಲಿಯ 7 ಸೀಟುಗಳಲ್ಲಿ ಎಎಪಿ ಒಂದು ಸೀಟನ್ನೂ ಗೆಲ್ಲದೇ ಹೋಗಿದ್ದು ಇಂಥಾ ವಾದಗಳಿಗೆ ಪುಷ್ಟಿ ಕೊಟ್ಟಿತ್ತು.

ಆದರೆ ಈ ದೇಶದ ಪ್ರಜಾತಂತ್ರದಲ್ಲಿ ಬದಲಾವಣೆಯನ್ನು ಬಯಸುವವರು ಈ ವಿದ್ಯಮಾನವನ್ನು ಸ್ವಲ್ಪ ಭಿನ್ನ ನೆಲೆಯಿಂದ ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ.

ಮೊದಲನೆಯದಾಗಿ, ಈ ಎಎಪಿ ಪಕ್ಷದ ಹಿಂದಿರುವ ಪ್ರಮುಖ ವ್ಯಕ್ತಿಗಳೇ ಅಣ್ಣಾನ ಚಳವಳಿಯ ರೂವಾರಿಗಳೂ ಆಗಿದ್ದರು. ಆ ಚಳವಳಿಯ ಕೇಂದ್ರ ವಸ್ತುವಾಗಿದ್ದ ಜನಲೋಕಪಾಲ ಮಸೂದೆಯ ಕರ್ತೃಗಳು ಆರೆಸ್ಸೆಸ್‌ನವರೂ ಅಲ್ಲ, ಕಮ್ಯುನಿಸ್ಟರೂ ಅಲ್ಲ, ಕಾಂಗ್ರೆಸ್ ಗಾಂಧಿವಾದಿಗಳಂತೂ ಅಲ್ಲವೇ ಅಲ್ಲ, ಇದೇ ಅರವಿಂದ ಕೇಜ್ರಿವಾಲ್, ಯೋಗೇಂದ್ರ ಯಾದವ್, ಪ್ರಶಾಂತ ಭೂಷಣ್ ಮುಂತಾದವರೇ. ಭ್ರಷ್ಟಾಚಾರ ವಿರೋಧಿ ಚಳವಳಿಯಿಂದಾಗಿ ಯುಪಿಎ ಸರ್ಕಾರದ ವಿರುದ್ಧ ಮೂಡಿದ ಜನಾಭಿಪ್ರಾಯ ಕಳೆದ ಲೋಕಸಭಾ ಚುನಾವಣೆಯಲ್ಲಿ ಮೋದಿ ಅಲೆಯನ್ನಾಗಿ ಪರಿವರ್ತಿಸುವಲ್ಲಿ ಕಾರ್ಪೋರೇಟ್ ಮಾಧ್ಯಮಗಳು ಯಶಸ್ವಿಯಾಗಿವೆ. ಆದರೆ ಅದೇ ಸಂದರ್ಭದಲ್ಲಿ ಈ ಕಾರ್ಪೋರೇಟ್ ಶಕ್ತಿಗಳ ವಿರುದ್ಧ ಸೆಡ್ಡು ಹೊಡೆದಿರುವ ಎಎಪಿ ಪಕ್ಷದ ಬೆಳವಣಿಗೆಯನ್ನು ನಿಯಂತ್ರಿಸಲು ಹೆಣಗಾಡಿ ಸೋತಿವೆ.

ಹೀಗೆ ಎಎಪಿ ಹುಟ್ಟು ಮತ್ತು ಬೆಳವಣಿಗೆ ಯಾವುದೋ ಒಂದು ನಿರ್ದಿಷ್ಟ ಸಂದರ್ಭದ ಆಕಸ್ಮಿಕ ಎನ್ನುವಂತಿಲ್ಲ, ಬದಲಿಗೆ ಪೂರ್ವ ನಿರ್ಧಾರಿತ ಯೋಜನೆಯ ಅನುಷ್ಠಾನ ಎಂಬುದು ಖಚಿತ.

ಅಧಿಕಾರ ಕಳೆದುಕೊಂಡ ನಂತರ ಎಎಪಿ ಪಕ್ಷದ ಮುಖಂಡರು, ಕಾರ್ಯಕರ್ತರು ಮಾಮೂಲಿಯಂತೆ ಮನೆ ಸೇರಿಕೊಳ್ಳಲಿಲ್ಲ. ತಮ್ಮ ಕಾರ್ಯ ಚಟುವಟಿಕೆಯನ್ನು ವಿಸ್ತರಿಸುವ, ಜನರ ನಡುವೆ ಇನ್ನಷ್ಟು ಬೇರು ಬಿಡುವ ಕಾರ್ಯಕ್ರಮಗಳನ್ನು ಹಾಕಿಕೊಂಡರು. ವಿದ್ಯಾರ್ಥಿ, ಯುವಕ, ಮಹಿಳಾ ಅಂಗ-ಸಂಘಟನೆಗಳನ್ನು ಕಟ್ಟಿ ನೂರಾರು ಕಾರ್ಯಕ್ರಮಗಳನ್ನು, ಪ್ರತಿಭಟನೆಗಳನ್ನೂ ಸಂಘಟಿಸಿದ್ದಾರೆ. ಇಂಥಾ ಪರಿಶ್ರಮದ ಫಲವಾಗಿ ಇಂದು ಮೋದಿಯಂಥಾ ಮೋದಿಗೂ ಸೆಡ್ಡು ಹೊಡೆದು ನಿಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.



ಆಮ್ ಆದ್ಮಿಯ ಈ ಕೆಲಸಗಳು ಮಾಧ್ಯಮಗಳಲ್ಲಿ ಸ್ಥಾನ ಪಡೆದುಕೊಳ್ಳಲಿಲ್ಲ. ಆಮ್ ಆದ್ಮಿ ನಾಯಕರ ಮೇಲೆ ಕೋಳಿ ಮೊಟ್ಟೆ ಅಥವಾ ಚಪ್ಪಲಿ ತೂರಿದಾಗ ಅಥವಾ ಕಪಾಳ ಮೋಕ್ಷ ಮಾಡುವ ಸ್ಟೇಜ್ ಮ್ಯಾನೇಜ್ಡ್ ಡ್ರಾಮಾಗಳು ನಡೆದಾಗ ಮಾತ್ರ ಮಾಧ್ಯಮಗಳಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಅಪಪ್ರಚಾರ ಸಿಗುತ್ತಿತ್ತು. ಅಲ್ಲದೆ ಹವಾಲಾ ಹಗರಣ, ಪಲಾಯನವಾದಿ, ಮಹಿಳಾ ವಿರೋಧಿ, ಕಾಂಗ್ರೆಸ್ ಏಜೆಂಟ್ ಮುಂತಾದ ಹಣೆಪಟ್ಟಿ ಹಚ್ಚಲು ಮಾಧ್ಯಮಗಳು ಪೈಪೋಟಿ ನಡೆಸಿದವು. ಆದರೆ ಎಎಪಿ ಇದಾವುದಕ್ಕೂ ಹೆಚ್ಚು ತಲೆ ಕೆಡಿಸಿಕೊಳ್ಳದೇ ತಳಮಟ್ಟದ ಜನರ ವಿಶ್ವಾಸವನ್ನು ಹಿಡಿದಿಡುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿತು.

ಪರಿಣಾಮವಾಗಿ ಕಾರ್ಪೋರೇಟ್ ಪ್ರಾಯೋಜಿತ ಮಾಧ್ಯಮಗಳ ನಿರಂತರ ಅಪಪ್ರಚಾರದ ಹೊರತಾಗಿಯೂ ದೆಹಲಿಯಾದ್ಯಂತ ಎಎಪಿ ಅಲೆ ನಿಚ್ಚಳವಾಗಿ ಕಂಡುಬರುತ್ತಿದೆ. ಮೋದಿ-ಅಮಿತ್ ಶಾನ ಕೂಟ ರಾಜಧಾನಿಯಲ್ಲೇ ಮುಖಭಂಗ ಎದುರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅದನ್ನು ತಪ್ಪಿಸಿಕೊಳ್ಳಲು ಈ ಕೂಟ ಹೆಣಗಾಡುತ್ತಿದೆ. ಆಡಳಿತಾರೂಢ 200 ಎಂಪಿಗಳನ್ನು ಪ್ರಚಾರಕ್ಕಿಳಿಸಲಾಗಿದೆ. ಮೂರು ಡಜನ್ ಕೇಂದ್ರ ಮಂತ್ರಿಗಳು ಎಲ್ಲ ಕೆಲಸ ಬಿಟ್ಟು ದೆಹಲಿಯ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ನೀರಿನಂತೆ ಹಣವನ್ನು ಸುರಿಯುತ್ತಿದ್ದಾರೆ. ಆದರೂ ಅರವಿಂದ್ ಕೇಜ್ರಿವಾಲ್ ಜನಪ್ರಿಯತೆಯನ್ನು ಅಳಿಸಲು ಸಾಧ್ಯವಾಗುತ್ತಿಲ್ಲ.

ಈ ಬೆಳವಣಿಗೆಗಳಿಂದ ದಿಕ್ಕೆಟ್ಟಂತಾಗಿರುವ ಮೋದಿ, ಕೇಜ್ರಿವಾಲ್‌ರನ್ನು ಅರಾಜಕತಾವಾದಿ, ನಗರದ ನಕ್ಸಲೈಟ್ ಇತ್ಯಾದಿ ಮಾತುಗಳಲ್ಲಿ ಜರೆಯುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ. ದಿನಕ್ಕೊಂದು ಹೊಸ ಕಟ್ಟುಕತೆಯ ಆರೋಪ ಹೊರೆಸಿ ಅಪಪ್ರಚಾರದ ದಾಳಿ ನಡೆಸಲಾಗುತ್ತಿದೆ. ಏನೇ ಮಾಡಿದರೂ ದೆಹಲಿಯ ಆಮ್ ಆದ್ಮಿಗಳು ಇಂಥಾ ಪ್ರಚಾರಗಳಿಗೆ ಸೊಪ್ಪು ಹಾಕದೆ ಕೇಜ್ರಿವಾಲ್‌ಗೆ ತಮ್ಮ ನಿಷ್ಠೆ ಎಂದು ಬಹಿರಂಗವಾಗಿ ಘೋಷಿಸುತ್ತಿದ್ದಾರೆ ಎಂಬ ಸಕಾರಾತ್ಮಕ ವರದಿಗಳು ಕೇಳಿಬರುತ್ತಿವೆ.

ಇದು ಸಾಧ್ಯವಾದದ್ದು ಹೇಗೆ? ಇದಕ್ಕೆ ಪ್ರಮುಖವಾಗಿ ಎರಡು ಕಾರಣ. ಒಂದು ಕೇಜ್ರಿವಾಲ್ ಪಕ್ಷ ಜನರ ಮಧ್ಯೆ ಜೀವಂತ ಸಂಬಂಧಗಳನ್ನಿರಿಸಿಕೊಂಡು ಅವರ ಸಮಸ್ಯೆಗಳಿಗೆ ಸ್ಪಂದಿಸುವ ವಿಶ್ವಾಸ ಮೂಡಿಸಿರುವುದು ಹಾಗೂ ಮಾಮೂಲಿ ಶಾಸಕರಂತಲ್ಲದೆ ಎಎಪಿಯ ಶಾಸಕರು ಸುಲಭವಾಗಿ ಮತದಾರರ ಕೈಗೆ ಸಿಗುತ್ತಾರೆ ಎಂಬ ವಿಶ್ವಾಸ. ಅದರ ಜೊತೆಗೆ ಮೋದಿ ಸರ್ಕಾರ ಗದ್ದುಗೆ ಏರಿ 8 ತಿಂಗಳು ಕಳೆದರೂ ಜನಸಾಮಾನ್ಯರಿಗೆ ತಾವು ಕೊಟ್ಟಿದ್ದ ಒಂದೇ ಒಂದು ಆಶ್ವಾಸನೆಯನ್ನೂ ಈಡೇರಿಸಿಲ್ಲ. ಮಾಮೂಲಿಯಂತೆ ತಮ್ಮ ಕಾರ್ಪೋರೇಟ್ ಪರ ನೀತಿಗಳನ್ನು ಮುಂದುವರೆಸಿದ್ದಾರೆ. ಮೋದಿ ಆಳ್ವಿಕೆಯಲ್ಲಿ ಅಂಬಾನಿ ಅದಾನಿಗಳ ಲಾಭ ಸಾವಿರಾರು ಕೋಟಿಗಳ ಲೆಕ್ಕದಲ್ಲಿ ಏರುತ್ತಲೇ ಇದೆ.

ಹೀಗಾಗಿ ಜನರು ಆಮ್ ಆದ್ಮಿ ಪಕ್ಷದ ಮೇಲೆ ಹೆಚ್ಚಿನ ನಿರೀಕ್ಷೆಯನ್ನು ಇಟ್ಟುಕೊಳ್ಳುವಂತೆ ಮಾಡಿದೆ. ಆಮ್ ಆದ್ಮಿ ಸಭೆಗಳಿಗೆ ಜನರು ಸ್ವಇಚ್ಛೆಯಿಂದ ಭಾರೀ ಸಂಖ್ಯೆಯಲ್ಲಿ ಜಮಾಯಿಸಲು ಇದೇ ಕಾರಣ. ಚುನಾವಣಾ ಘೋಷಣೆಯಾದಾಗಿನಿಂದ ಕೇಜ್ರಿವಾಲ್ ಸುಮಾರು 70 ಸಭೆಗಳನ್ನು ನಡೆಸಿದ್ದಾರೆ. ಎಲ್ಲೆಡೆ ಕಿಕ್ಕಿರಿದ ಜನಸಂದಣಿ. ಆದರೆ ಅದೇ ಸಂದರ್ಭದಲ್ಲಿ ಬಿಜೆಪಿ ಸಭೆಗಳಿಗೆ ಪ್ರಧಾನಿ ನರೇಂದ್ರ ಮೋದಿಯೇ ಬಂದರೂ ಕೋಟಿಗಟ್ಟಲೆ ಹಣ ಸುರಿದರೂ ಹೆಚ್ಚಿನ ಜನರನ್ನು ಸೆಳೆಯಲು ಸಾಧ್ಯವಾಗುತ್ತಿಲ್ಲ. ಹಾಕಿದ ಕುರ್ಚಿಗಳೂ ತುಂಬಿಸಲು ವ್ಯವಸ್ಥಾಪಕರು ಎಷ್ಟೆ ತಿಣುಕಾಡಿದರೂ ಸಾಧ್ಯವಾಗುತ್ತಿಲ್ಲ.

ಎಎಪಿ ಮೇಲೆ ವಿಶ್ವಾಸ ಇಡಲು ಅದರ 49 ದಿನಗಳ ಆಡಳಿತ ಪ್ರಮುಖ ಕಾರಣ. ಕೇವಲ ಏಳು ವಾರಗಳಲ್ಲಿ ಹತ್ತಾರು ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದದ್ದನ್ನು ದೆಹಲಿಯ ಜನತೆ ಮರೆತಿಲ್ಲ; ಅಥವಾ ತಮ್ಮ ಯೋಜನೆಗಳನ್ನು ಮರೆತುಬಿಡಲು ಎಎಪಿ ಪಕ್ಷ ಅವಕಾಶ ಕೊಟ್ಟಿಲ್ಲ. (ವಿವರಗಳಿಗೆ ಬಾಕ್ಸ್ ನೋಡಿ)

ಬಿಜೆಪಿಯ ಸ್ಥಳೀಯ ನಾಯಕರು ಯಾವ ರೀತಿಯಲ್ಲೂ ಕೇಜ್ರಿವಾಲ್ ಇಮೇಜಿಗೆ ಸರಿಸಾಟಿಯಾಗುವುದಿಲ್ಲ ಎಂಬುದನ್ನು ಮನಗಂಡ ಮೋದಿ ಕೂಟ ಕೊನೆ ಘಳಿಗೆಯಲ್ಲಿ ತಮ್ಮ ಏಜೆಂಟ್ ಕಿರಣ್ ಬೇಡಿಯನ್ನು ನೇರವಾಗಿ ಬಿಜೆಪಿಗೆ ಬರಮಾಡಿಕೊಂಡು ಸಿಎಂ ಅಭ್ಯರ್ಥಿ ಎಂದು ಘೋಷಿಸಿದೆ. ಅದರ ಪರಿಣಾಮ ಬಿಜೆಪಿ ಪಾಲಿಗೆ ಮತ್ತಷ್ಟು ಕೆಟ್ಟದಾಗಿದೆ. ಒಂದೆಡೆ ಇದು ಪಕ್ಷದಲ್ಲಿ ಆಂತರಿಕ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದ್ದರೆ, ಮತ್ತೊಂದೆಡೆ ಬಿಜೆಪಿಯ ಅಸಹಾಯಕತೆಯನ್ನು ಜಗಜ್ಜಾಹೀರುಮಾಡಿದೆ. ಪರಿಣಾಮವಾಗಿ ಆಮ್‌ಆದ್ಮಿ ಪಕ್ಷದ ಬೆಂಬಲಿಗರಲ್ಲಿ ಇನ್ನಷ್ಟು ಉತ್ಸಾಹ, ವಿಶ್ವಾಸ ಮೂಡಿಸಿದೆ.

ಏನೇ ಇರಲಿ. ಆಮ್ ಆದ್ಮಿ ಗೆಲ್ಲಲಿ. ಆ ಮೂಲಕ ಈ ದೇಶದ ಆಮ್ ಆದ್ಮಿಗಳಿಗೆ ಒಂದಷ್ಟು ಆಶಾವಾದವಾದರೂ ಸಿಗಲಿ. ಎಡ ಪಕ್ಷಗಳಾದಿಯಾಗಿ, ಇತರ ಎಲ್ಲಾ ಪ್ರಗತಿಪರ ಶಕ್ತಿಗಳೂ ಈ ವಿದ್ಯಮಾನವನ್ನು ಗಂಭೀರವಾಗಿ ತೆಗೆದುಕೊಂಡು ತಮ್ಮ ಯೋಜನೆಗಳ ಬಗ್ಗೆ ಮರುಚಿಂತನೆ ನಡೆಸುವಂತಾಗಲಿ.

• ದೊಡ್ಡಿಪಾಳ್ಯ ನರಸಿಂಹ ಮೂರ್ತಿ

ಆಪ್ ಆಡಳಿತದ 49 ದಿನಗಳು

1) ದೆಹಲಿಯ ವಿದ್ಯುತ್ ವಿತರಣೆಯನ್ನು ಸಂಪೂರ್ಣ ಖಾಸಗಿಯವರಿಗೆ ವಹಿಸಲಾಗಿದೆ. ಅನಿಲ್ ಅಂಬಾನಿ ಒಬ್ಬನೇ ಶೇ 70ರಷ್ಟು ಪ್ರದೇಶಗಳಿಗೆ ವಿದ್ಯುತ್ ಒದಗಿಸುವ ಏಕಸ್ವಾಮ್ಯ ಹೊಂದಿದ್ದಾನೆ. ಪರಿಣಾಮವಾಗಿ ಕೊಳಗೇರಿ ನಿವಾಸಿಗಳು ಕೂಡ ತಮ್ಮ ಕನಿಷ್ಠ ಬಳಕೆಗೂ ಸರಾಸರಿ 1500 ರೂ. ಬಿಲ್ ತೆರಬೇಕು. ಕಂಪನಿಗಳ ತೀವ್ರ ವಿರೋಧದ ನಡುವೆಯೂ ಎಎಪಿ ಈ ವಿದ್ಯುತ್ ದರದಲ್ಲಿ ಶೇಕಡಾ 50 ಕಡಿತ ಮಾಡಿತ್ತು.
2) ದುಬಾರಿ ನೀರಿನ ದರವನ್ನು ರದ್ದು ಮಾಡಿ, ತಿಂಗಳಿಗೆ 20,000 ಲೀಟರ್ ಬಳಕೆದಾರರಿಗೆ ಉಚಿತ ನೀರು ಸರಬರಾಜು ಮಾಡಲಾಯ್ತು.
3) ಭ್ರಷ್ಟಾಚಾರ ತಡೆಗೆ ಹೆಲ್ಪ್‌ಲೈನ್ ರೂಪಿಸಿ, ಜನರು ಭ್ರಷ್ಟರ ವಿರುದ್ಧ ಹೋರಾಡಲು ಪ್ರೋತ್ಸಾಹ ನೀಡಲಾಯ್ತು, ಭ್ರಷ್ಟಾಚಾರ ವಿರೋಧಿ ದಳಕ್ಕೆ 40 ನೂತನ ಅಧಿಕಾರಿಗಳ ನೇಮಕ ಮಾಡಲಾಯ್ತು.
4) ವಿದ್ಯುತ್ ಕಂಪನಿಗಳ ಲೂಟಿ ತಪ್ಪಿಸಲು ಡಿಸ್‌ಕಾಮ್ ಕಂಪನಿಗಳ ಬಗ್ಗೆ ಸಿಎಜಿ ಆಡಿಟ್‌ಗೆ ಆದೇಶ.
5) ರೀಟೆಲ್ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಗೆ ತಡೆ. ಪರಿಣಾಮವಾಗಿ ಟೆಸ್ಕೋ, ವಾಲ್‌ಮಾರ್ಟ್‌ನಂತಹ ದೈತ್ಯ ಕಂಪನಿಗಳಿಗೆ ಕಡಿವಾಣ.
6) ಗ್ಯಾಸ್ ದರ ನಿಗದಿ ಹಗರಣದಲ್ಲಿ ಶಾಮೀಲಾದ ಕೇಂದ್ರ ಸಚಿವರಾದ ವೀರಪ್ಪ ಮೊಯ್ಲಿ, ಮುರಳಿ ದೇವ್ರಾ ಮತ್ತು ಮುಖೇಶ್ ಅಂಬಾನಿಯ ಮೇಲೆ ಎಫ್‌ಐಆರ್ ದಾಖಲೆ.
7) ಜಲಮಂಡಳಿ ಹಗರಣದ ತನಿಖೆಗೆ ಆದೇಶ.
8) ಭ್ರಷ್ಟ ನೌಕರರ ಮತ್ತು ಅಧಿಕಾರಿಗಳ ಅಮಾನತು.
9) 1 ಲಕ್ಷ ಗುತ್ತಿಗೆ ಕಾರ್ಮಿಕರ ಹಾಗೂ ಸಾವಿರಾರು ಅತಿಥಿ ಉಪನ್ಯಾಸಕರ ಕಾಯಂ ವಿಷಯ ಅಧ್ಯಯನಕ್ಕಾಗಿ ಸಮಿತಿ ರಚನೆ
10) ಕೊಳಗೇರಿ ಜನರ ವಾಸಸ್ಥಳದ ಹಕ್ಕುಪತ್ರ ವಿತರಣೆಗೆ ಕ್ರಮ.
11) ಮಹಿಳಾ ಸೆಕ್ಯುರಿಟಿ ಫೋರ್ಸ್ ರಚನೆಗೆ ಕ್ರಮ.
12) ಮಹಿಳಾ ದೌರ್ಜನ್ಯದ ಕೇಸುಗಳನ್ನು 6 ತಿಂಗಳಲ್ಲಿ ಇತ್ಯರ್ಥ ಮಾಡಲು ಆದೇಶ.
13) ಶಾಲೆಗಳಲ್ಲಿ ಡೊನೇಷನ್ ಹಾವಳಿ ತಡೆಯಲು ಆದೇಶ.
14) ವ್ಯಾಟ್ ತೆರಿಗೆ ಕಡಿತ ಮತ್ತು ಸರಳೀಕರಣ.
15) ವಿಧಾನಸಭೆಯಲ್ಲಿ ಜನಲೋಕಪಾಲ ಮಸೂದೆ ಮಂಡನೆಗೆ ಪ್ರಯತ್ನ.
16) ಸರ್ಕಾರದ ವಶದಲ್ಲಿದ್ದ ಸ್ಕ್ರಾಪ್ ಆಗಿ ನಿಂತಿದ್ದ 90 ಬಸ್‌ಗಳನ್ನು ಬೀದಿಯಲ್ಲಿದ್ದ ಜನರಿಗೆ ತಾತ್ಕಾಲಿಕ ಆಶ್ರಯ ತಾಣಗಳನ್ನಾಗಿ ಪರಿವರ್ತಿಸಿ ಸುಮಾರು 2,500 ಜನರಿಗೆ ಆಶ್ರಯ ಒದಗಿಸಲಾಯ್ತು.

ಹೀಗೆ 49 ದಿನಗಳ ತನ್ನ ಆಡಳಿತದ ಪ್ರತಿ ದಿನವೂ ವಿಶಿಷ್ಟ ಯೋಜನೆಗಳನ್ನು ಘೋಷಿಸಿ, ಬಹುಪಾಲು ಯೋಜನೆಗಳನ್ನು ಜಾರಿಗೆ ತಂದಿದ್ದ ಕೇಜ್ರಿವಾಲರನ್ನು ಜನರು ಇಷ್ಟು ಬೇಗ ಮರೆತು ಬಿಡಲು ಜನರಿಗೆ ಹುಚ್ಚು ಹಿಡಿದಿದೆಯೆ?

ಗೊಮ್ಮಟನ ಪದತಳದಲ್ಲಿ ಜನಸಾಗರ!

ವಣಬೆಳಗೊಳದಲ್ಲಿ ನಡೆದ 81ನೇ ಸಾಹಿತ್ಯ ಳನ ಹಲವು ದಾಖಲೆಗಳನ್ನು ಮಾಡಿ ಯಗೊಂಡಿದೆ. ಮೊದಲನೆಯದಾಗಿ ಹಾವೇರಿ ಮತ್ತು ಮ್ಹೂರಿನವರ ಪಾಲುಪಾರೀಕತ್ತಿನಂತಹ ಜಗಳದ ಸಮ್ಮೇಳನ ಶ್ರವಣಬೆಳಗೊಳದ ಪಾಲಾಯ್ತು. ವ ಅತ್ಯಂತ ಕಡಿಮೆ ಅವಧಿಯಲ್ಲಿ ಅದ್ದೂರಿಯಾಗಿ ಸಮ್ಮೇಳನಕ್ಕೆ ಶ್ರವಣಪ್ಪನ ಮಸ್ತಕಾಭಿಷೇಕಕ್ಕಿಂತಲೂ ಜನ ಹರಿದುಬಂದಿದ್ದೂ ಒಂದು ದಾಖಲೆ. ೂ ಇದೊಂದು ಬೃಹತ್ ಬಂಡಾಯ ಸಾಹಿತ್ಯ ನದಂತೆ ಕಂಡಿದ್ದು ಮಾತ್ರವಲ್ಲ ನಿಜವಾದ ಸಾಹಿತ್ಯ ನ ನಡೆಯಬೇಕಾದದ್ದೇ ಹೀಗೆ ಅನ್ನಿಸಿತು.

ುತ್ತರ ದಶಕದ ಅಂಚಿಗೆ ಹೋಗಿ ನೋಡಿದ್ದಾದರೆ ್ಮೇಳನದ ವಿರಾಟ್ ರೂಪ ಅರಿವಿಗೆ ಬರಬಲ್ಲದು. ಸಮ್ಮೇಳನಾಧ್ಯಕ್ಷರ ಪುಟಾಣಿ ಕವನ ಸಂಕಲನವೊಂದು ಗಿದ್ದ ಕಾಲ ಅದು. ಇಡೀ ನಾಡಿನ ದಲಿತ ಯ ಹೊಲೆಮಾದಿಗರ ಹಾಡುಗಳನ್ನ ದನಿ ಎತ್ತರಿಸಿ ಾಡತಗಿದ್ದರು. 'ನನ್ನ ಜನಗಳು' ಕವನದ ಕೊನೆಯ ಾದ ಒದೆಸಿಕೊಂಡು ಒರಗಿದೋರು ಒಳಗೊಳಗೆ ು, ಭಕ್ತರಪ್ಪ ಭಕ್ತರೊ ನನ್ನ ಜನಗಳು ಎಂದು ುಗಿಸುವಷ್ಟರಲ್ಲಿ ಮಾನವೀಯ ಅಂತಃಕರಣವಿದ್ದ ಾದರೂ ಕಣ್ಣೀರು ಉಕ್ಕಿಸುತ್ತಿದ್ದವು. ಎಷ್ಟು ಬಾರಿ ೂ ಈ ಸಾಲುಗಳು ನಮ್ಮನ್ನ ಆದ್ರಗೊಳಿಸುತ್ತಿದ್ದವು. ಮಾದಿಗರ ಹಾಡು ಕನ್ನಡ ಸಾಹಿತ್ಯ ಪರಿಷತ್ತಿನ ಎಂತಹ ಪರಿಣಾಮ ಬೀರಿತ್ತೆಂದರೆ ಅಂದು ದಲಿತ ನೇಕರು ಧರ್ಮಸ್ಥಳದಲ್ಲಿ ನಡೆಯಲಿದ್ದ ಗೋಪಾಲಕೃಷ್ಣ ಸಮ್ಮೇಳನಾಧ್ಯಕ್ಷರಾಗಿದ್ದ ವೇದಿಕೆಯಲ್ಲಿ ದಲಿತ ು ಸಾಹಿತ್ಯಕ್ಕೆ ಒಂದು ಗೋಷ್ಠಿಯನ್ನ ಕೊಡಬೇಕೆಂದು ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಹಂಪಾನಾರನ್ನು ು. ಅದಕ್ಕೆ ಆತ 'ಇಲ್ಲಿ ದಲಿತ ಬಲಿತ ಅನ್ನುವ ೆ ಅವಕಾಶವಿಲ್ಲ. ಕನ್ನಡ ಸಾಹಿತ್ಯ ಸಮ್ಮೇಳನ ಭಾಗವಹಿಸಿ' ಎಂದು ಮುಲಾಜಿಲ್ಲದೆ ಹೇಳಿದ್ದರು. ವ ಕೆರಳಿದ ಬಂಡಾಯ ಸಾಹಿತಿಗಳು ಬೆಂಗಳೂರಿ ಂದು ಪರ್ಯಾಯ ಸಾಹಿತ್ಯ ಸಮ್ಮೇಳನ ಮಾಡಿದರು. ಗೋಸ್ಕರ ಧರ್ಮಸ್ಥಳಕ್ಕೆ ಹೋಗಿದ್ದ ಲಂಕೇಶರು ಭಾಗವಹಿಸಿದ್ದರೂ ನನ್ನ ಮನಸ್ಸೆಲ್ಲಾ ಬೆಂಗಳೂರಿನ ರುದ ಗೆಳೆಯರ ಜೊತೆ ಇದೆ' ಎಂದಿದ್ದರು.

ುದು ಒಂದು ಪರ್ಯಾಯ ಸಾಹಿತ್ಯ ಸಮ್ಮೇಳನವನ್ನೇ ಹಾಕಿದ್ದ ಹೊಲೆಮಾದಿಗರ ಹಾಡಿನ ಕವಿ ಗಯ್ಯನವರು ಶ್ರವಣಬೆಳಗೊಳದ ಸಾಹಿತ್ಯ ನಾಧ್ಯಕ್ಷರಾಗಿದ್ದುದೂ ಒಂದು ಐತಿಹಾಸಿಕ ಘಟನೆ. ವನ್ನು ಯೋಚಿಸುತ್ತ ಶ್ರವಣಬೆಳಗೊಳದ ದಿಯಲ್ಲಿ ನಿಂತಿದ್ದಾಗ ಸಿದ್ದಲಿಂಗಯ್ಯ ದಂಪತಿ ಹೊತ್ತ ಡಿ ರಥ ಬರತೊಡಗಿತು. ಸಿದ್ದಲಿಂಗಯ್ಯನವರು ರಾಘವೇಂದ್ರ ಸ್ವಾಮಿಯ ಪ್ರಸನ್ನತೆಯಿಂದ ದದ ಕೈಬೀಸುತ್ತ ಮೆರವಣಿಗೆಯ ಖುಷಿಯನ್ನು ಸುತ್ತಿದ್ದರು. ಗಾಡಿ ಹೊಡೆಯುತ್ತಿದ್ದ ಬಾಲಕೃಷ್ಣ ಬೆಳಗೊಳದ ಶಾಸಕ. ಬಹಳ ಹಿಂದಿನಿಂದಲೂ ಾಗಿ ಬದುಕಿದ್ದ ಬಾಲಕೃಷ್ಣ ಗೌಡನ ಹಿರಿಯರು ಲೆಮಾದಿಗರು ನಮ್ಮ ಸೇವೆಗೆಂದೇ ಇರುವವರು, ರಕ್ಷಿಸಿ-ಉಳಿಸಿ ತಮ್ಮ ಗದ್ದೆ ತೋಟ ಮತ್ತು ಕೆಲಸ ಮಾಡಿಸಿಕೊಳ್ಳುವುದು ನಮ್ಮ ಧರ್ಮವೆಂದು ದ್ದವರು. ಅಂತಹ ಪರಂಪರೆಯ ಬಾಲಕೃಷ್ಣ ಗೌಡ ಾಡಿ ರಥದಲ್ಲಿ ದಲಿತ ಕವಿಯನ್ನ ಕೂರಿಸಿಕೊಂಡು ಗಂಟೆ ಪ್ರಯಾಣಿಸಿದ್ದೂ ಒಂದು ದಾಖಲೆ.

ತ್ರೆಯ ಇಂತಹ ಪಲ್ಲಟ ಸಂಭವಿಸಿದ್ದು ಸಾಹಿತ್ಯದಿಂದ. ಪುರೋಹಿತಶಾಹಿಗಳು ಸಾಹಿತ್ಯದ ವಿರೋಧಿಗಳು. ಾಗಿ ಕಾವ್ಯದ ವಿರೋಧಿಗಳು. ಸಮಾನತೆಯ ಒಂದು ಂಚ್ ಹಾಕಿಗೂ ಬೆಚ್ಚಿ ಪಲಾಯನ ಮಾಡುವ ಅಲ್ಲಿಲ್ಲಿ ಕಾಣಲೇ ಇಲ್ಲ. ಏಕೆಂದರೆ ಸಮ್ಮೇಳನಾಧ್ಯಕ್ಷ ಯ್ಯ, ಕವಿಗೋಷ್ಠಿ ಅಧ್ಯಕ್ಷ ಸುಬ್ಬು ಹೊಲೆಯರ್, ಸ್ತುವಾರಿ ಮಂತ್ರಿ ಡಾ. ಹೆಚ್.ಸಿ. ಮಹದೇವಪ್ಪ, ಕಾರ್ಯಕ್ರಮದ ಉದ್ಘಾಟಕಿ ಉಮಾಶ್ರೀ, ಪುಸ್ತಕ ಬಿಡುಗಡೆ ಮಾಡಿದವರು ವಸುಂಧರಾ 'ಕನ್ನಡ ಬದುಕು-ಚಳವಳಿ' ಗೋಷ್ಠಿಯ ಅಧ್ಯಕ್ಷತೆ ಶ್ರೇಷ್ಠ ಶರಣರಾದ ಮರುಳಸಿದ್ಧಪ್ಪನವರು, ಹುಳಿಯಾರ್, ಮಲ್ಲಿಕಾ ಘಂಟಿ, ಬೌದ್ಧ ಮತ್ತು ಕತೆ ಬಗ್ಗೆ ಅದ್ಭುತವಾಗಿ ಮಾತನಾಡಿದ ೋಹನ್‌ದಾಸ್, ಆಶಾದೇವಿ, ವಿನಯಾ, ಾಧ್ಯಕ್ಷರ ಕಾವ್ಯ ಗಾಯನ ಹಾಡಿದ ಪಿಚ್ಚಳ್ಳಿ ... ಹೀಗೆ, ಇಡೀ ಸಮ್ಮೇಳನ ಕನ್ನಡ ನೆಲದ



ಎಲ್ಲಾ ಸಮುದಾಯಗಳನ್ನ ಒಳಗೊಂಡಿದ್ದು ಒಂದು ದಾಖಲೆಯಾಗಿಬಿಟ್ಟಿತು.

ಇನ್ನು ಮೆರವಣಿಗೆಯನ್ನ ಸೂಕ್ಷ್ಮವಾಗಿ ಗಮನಿಸಿದಾಗ ನಮ್ಮ ಜನಪದ ಕಲೆಗಳ ಹಿರಿಮೆ ದಂಗು ಬಡಿಸಿತು. ಪಟ ಕುಣಿತ, ಪೂಜಾ ಕುಣಿತ, ಕೋಲಾಟ, ಕಂಸಾಳೆ, ಕೀಲು ಕುದುರೆ, ನಂದಿ ಕೋಲು, ಹಲಗೆ ಮೇಳ, ರಂಗದ ಕುಣಿತ... ಇವುಗಳ ಅಬ್ಬರದ ವಿರಾಟ ರೂಪ ನೋಡಿದಾಗ ಯಾಕೆ ನಮ್ಮ ಜಾನಪದ ವಿದ್ವಾಂಸರು ಈ ಕಲೆಗಳ ವಿಷಯದಲ್ಲಿ ತಮ್ಮ ಆಯಸ್ಸನ್ನೇ ಮುಗಿಸಿದರು ಎಂಬುದು ಅರಿವಿಗೆ ಬರತೊಡಗಿತು. ಅದರಲ್ಲೂ ರಂಗದ ಕುಣಿತದ ಬಿಸಿರಕ್ತದ ಹುಡುಗರನ್ನ ನೋಡುವುದೇ ಸಂಭ್ರಮವೆನಿಸಿತು. ಶ್ರವಣಬೆಳಗೊಳದ ಸಮೀಪದ ನಾಗಯ್ಯನ ಕೊಪ್ಪಲದ ಆ ಹುಡುಗರು ಎಷ್ಟು ಉತ್ಸಾಹದಲ್ಲಿದ್ದರು ಎಂದರೆ, ಅವರೂರಿನ ಜಾನಪದ ಕಲೆಗಳಿಗೆ ಮರುಜೀವ ಕೊಡುವ ಸಲುವಾಗಿ ಕೋಲಾಟ, ಸೋಬಾನೆ ಪದ, ಜಾನಪದ ಹಾಡುಗಳನ್ನೆಲ್ಲಾ ಕಲಿಯತೊಡಗಿದ್ದಾರಂತೆ.

ಇದೆಲ್ಲಕ್ಕಿಂತ ಅಚ್ಚರಿ ಹುಟ್ಟಿಸಿದ ದೃಶ್ಯವೆಂದರೆ, ದಮ್ಮನಿಂಗಲ ಗ್ರಾಮದ ಹಿರಿಯರೆಲ್ಲಾ ಸೇರಿ ರಂಗ ಕುಣಿದದ್ದು. ಅವರನ್ನ ಗಮನಿಸಿದಾಗ ಎಲ್ಲರೂ ಎಪ್ಪತ್ತು ವರ್ಷದ ಸಮೀಪದವರು. ಅವರ ಕುಣಿತವಂತೂ ನವಿಲಿನ ಜಾಗಾರದಂತಿತ್ತು, ಎಲ್ಲರೂ ಒಂದೇ ಬಾರಿ ಬಾಗುವುದು, ತಲೆ ಓರೆ ಮಾಡುವುದು, ಕೈಬೀಸುವುದು, ಇದಕ್ಕೆ ತಕ್ಕಂತೆ ಹೆಜ್ಜೆ ಹಾಕುವುದು, ಎಲ್ಲವೂ ಅಚ್ಚರಿ ಹುಟ್ಟಿಸುವ ದೃಶ್ಯಗಳಾಗಿದ್ದವು. ಅರವತ್ತು ವರ್ಷಕ್ಕೆ ನಡೆಯಲಾಗದ ಜನರೆಲ್ಲಾ ಕುತೂಹಲದಿಂದ ಈ ವಯೋವೃದ್ಧರ ನರ್ತನ ನೋಡಿ ದಂಗುಬಡಿದರು.

ಒಟ್ಟಿನಲ್ಲಿ ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿನ ಜಾನಪದ ಕಲಾವಿದರ ಪ್ರದರ್ಶನ, ಮುಖ್ಯ ವೇದಿಕೆಯಲ್ಲಿನ ಗೋಷ್ಠಿಗಳನ್ನ ಮೀರಿ ಮನಸ್ಸಿನಲ್ಲುಳಿಯಿತು.

ಉದ್ಘಾಟನಾ ಸಮಯಕ್ಕೆ ಸರಿಯಾಗಿ ಮುಖ್ಯ ವೇದಿಕೆಯು ಜನಗಳಿಂದ ಭರ್ತಿಯಾಗಿ ಹೋಗಿತ್ತು ಆದರೂ ಶ್ರವಣಬೆಳಗೊಳದ ಕಡೆಯಿಂದ ಬರುತ್ತಿದ್ದ ಜನಸಾಗರ ನೋಡಿ ಅವರೆಲ್ಲಾ ಬಂದಿಲ್ಲಿ ತುಂಬಿಕೊಂಡರೆ ಕತೆಯೇನು ಅನ್ನಿಸಿತು. ಆದರೆ ಅವರೆಲ್ಲಾ ಪ್ರಧಾನ ವೇದಿಕೆಯ ಕಡೆ ತಿರುಗಿಯೂ ನೋಡದೆ ಊಟದ ಮಳಿಗೆ ಕಡೆ ಹೋಗುತ್ತಿದ್ದುದು ಸೋಜಿಗವುಂಟುಮಾಡಿತು. ಊಟ ಮಾಡಿದವರೂ ಕೂಡ ಬಂದ ದಾರಿ ಹಿಡಿದು ಹೋಗುತ್ತಿದ್ದುದು ಸಾಮಾನ್ಯರ ಸಹಜ ನಡವಳಿಕೆಯನ್ನು ಎತ್ತಿ ತೋರಿತು. ಇನ್ನ ಕೆಲವರು ಪುಸ್ತಕದ ಮಳಿಗೆ ಕಡೆ ನುಗ್ಗಿ ಪುಸ್ತಕಗಳನ್ನು ನೋಡಿದ ಕೂಡಲೆ ಅಯ್ಯೋಯ್ಯೋ ಎಲ್ಲೆಲ್ಲೊ ಬಂದೆವಲ್ಲ ಎನ್ನುತ್ತ ಗಲಿಬಿಲಿಯಿಂದ ಹೋಗುತ್ತಿದ್ದದ್ದು ನಾಲ್ಕು ದಿನವೂ ನಡೆಯಿತು.

ಎತ್ತಿನ ರಥದ ತಕರಾರು

ಸಮ್ಮೇಳನಾಧ್ಯಕ್ಷರನ್ನು ಹೊತ್ತ ಎತ್ತಿನ ರಥಕ್ಕೆ ಹೂಡಿದ್ದ ಕರುಗಳು ದೃಷ್ಟಿಯಾಗುವಷ್ಟು ಸುಂದರವಾಗಿದ್ದವು. ಅವುಗಳನ್ನ ಸಾಕಿದವರು 'ನಾವು ಮೆರವಣಿಗೆಗೆ ಕೊಡುವುದಿಲ್ಲ, ಜನರ ಕಣ್ಣು ಬೀಳುತ್ತದೆ' ಎಂದು ಎಷ್ಟೇ ಗೋಗರೆದರೂ ಬಲವಂತವಾಗಿ ತರಲಾಗಿತ್ತು. ಅವುಗಳು ಜಾನಪದ ಕಲೆಗಳ ಸದ್ದಿಗೆ ಬೆದರದಂತೆ ಹಿಡಿದಿಡುವುದೇ ಕಷ್ಟವಾಗಿತ್ತು.

ಮೆರವಣಿಗೆ ಮುಗಿದನಂತರ ಆ ಕರುಗಳ ಮಾಲೀಕನಿಗೆ



ಕನಿಷ್ಠ ಎರಡು ಸಾವಿರ ಕೊಡಲು ಬಹಳ ಸತಾಯಿಸಿದರಂತೆ. ಈ ಬಗ್ಗೆ ಸಿಟ್ಟುಗೊಂಡ ಎತ್ತಿನ ಮಾಲೀಕ ವೇಗವಾಗಿ ಬೈಕಿನಲ್ಲಿ ಹೊರಟು ಇನ್ನೇನು ಯಾವುದೋ ಕಾರಿಗೆ ಗುದ್ದೇ ಬಿಡುತ್ತಿದ್ದ. ಹೆದರಿದ ನಾನು ತುಸು ಹೊತ್ತು ಅಲ್ಲೇ ನಿಂತು ಸುಧಾರಿಸಿಕೊಂಡೆ. ಮೆರವಣಿಗೆಗೆ ಮೆರಗು ತಂದ ಲಕ್ಷಾಂತರ ರೂ. ಬೆಲೆಯ ಎತ್ತುಗಳಿಗೆ, ಕಲಾವಿದರಿಗೆ ಕೊಟ್ಟಂತೆ 25 ಸಾವಿರ ಕೊಟ್ಟಿದ್ದರೂ ಅದು ಕಡಿಮೆಯೇ!

ಕಾರ್ನಾಡ-ಕಂಬಾರ ಶಿಲ್ಪಗಳು

ಪ್ರಧಾನ ವೇದಿಕೆಯ ಎದುರು ಒಂದು ಮಳಿಗೆ ದ್ವಾರದಲ್ಲಿ ನಮ್ಮ ಜ್ಞಾನಪೀಠ ಪ್ರಶಸ್ತಿ ವಿಜೇತರ ಶಿಲ್ಪಗಳ ಶಿರಭಾಗವನ್ನು ಇಡಲಾಗಿತ್ತು. ಅದರಲ್ಲಿ ಆರು ಜನರ ಶಿಲ್ಪಗಳು ಯಥಾವತ್ತಾಗಿದ್ದವು. ಆದರೆ ಗುರುತು ಹಿಡಿಯಲಾಗದಂತಿದ್ದ ಕಾರ್ನಾಡ್ ಮತ್ತು ಕಂಬಾರರ ಶಿಲ್ಪಗಳು ಕೊನೆಯ ಬದಿಯಲ್ಲಿದ್ದವು. ನಿಜಕ್ಕೂ ನನಗೆ ಗೊತ್ತಾಗದೆ 'ಇವ್ಯಾರವ್ವಾ' ಎಂದು ಚನ್ನರಾಯಪಟ್ಟಣದ ಶೈಲಿಯಲ್ಲೇ ಉದ್ಗಾರ ತೆಗೆದೆ.

ನನ್ನ ಎದುರು ಒಬ್ಬ ವಾಟಿಸ್ಸೆ ನಿಂತಿದ್ದ. ಹನ್ನೊಂದು ಗಂಟೆಗೆ ಕೆಟ್ಟ ಬೋರೆ ಹಣ್ಣಿನ ವಾಸನೆ ಬೀರುತ್ತಿದ್ದ ಆತ ನನ್ನ ಕಡೆ ತಿರುಗಿ "ಇವರು ಕಾಲಜ್ಞಾನಿಗಳು ಸಾರ್. ಮುಂದೇನಾಯ್ತದೆ, ಹಿಂದೆ ಏನಾಗಿತ್ತು ಅಂತ ಬರಿಯೋ ಕಾಲಜ್ಞಾನಿಗಳು. ವಿಜ್ಞಾನಿಗಳ ಫೋಟೋ ಒಳಗವೆ" ಎಂದ.

ಇನ್ನೊಂದು ಬಾರಿ ತಿರುಗಮುರುಗ ಅದನ್ನೇ ಹೇಳಿದ. ಮತ್ತೆ ವಿಶೇಷವಾದ ಗ್ರೀನ್ ತರಹ ದೃಷ್ಟಿ ಬೀರಿದ. ಇನ್ನೇನು 'ಬ್ಲೆಂಟ ರುಹೀನ್ ಇದಿಯಾ' ಅಂತ ಕೇಳುವಂತೆ ಕಂಡಿದ್ದರಿಂದ ನಾನು ಬೇಗ ಜಾಗ ಖಾಲಿ ಮಾಡಿದೆ.

ಕಟ್ಟೆ ಪುರಾಣ

ನನ್ನ ಕಟ್ಟೆ ಪುರಾಣ ನಾಟಕ ಚನ್ನರಾಯಪಟ್ಟಣದ ಭಾಷೆಯನ್ನು ಒಳಗೊಂಡಿರುವುದರಿಂದ ಅದು ಶುರುವಾದಾಗಲೇ ಹಾಸನದ ಕಾಲೇಜಿನಲ್ಲಿ ಆಡಿದ್ದ ಗೆಳೆಯರ ಒತ್ತಾಸೆಯಿಂದ ಸಾಹಿತ್ಯ ಸಮ್ಮೇಳನದಲ್ಲಿ ಆಡಲು ಹೋಗಿದ್ದೆವು. ನಮಗೆ ಕೊಟ್ಟಿದ್ದ ಸಮಯ ರಾತ್ರಿ ಹತ್ತುಗಂಟೆಗೆ. ಸಮಾನಾಂತರ ವೇದಿಕೆಗೆ ಎಲ್ಲರೂ ಮೇಕಪ್ ಮಾಡಿಕೊಂಡೇ ಹೋದಾಗ "ರಾತ್ರಿ 12 ಗಂಟೆಗೆ ನಿಮ್ಮ ಸರದಿ ಬರುತ್ತದೆ" ಎಂದರು. ಯಾವುದೋ ಕಾಲೇಜು ಹುಡುಗರು ಸಿನಿಮಾ ಹಾಡು ಹಾಕಿಕೊಂಡು ಕುಣಿಯುತ್ತಿದ್ದರು. ಜನ ಕಿಕ್ಕಿರಿದು ಶಿಳ್ಳೆ ಚಪ್ಪಾಳೆ ಹೊಡೆಯುತ್ತಿದ್ದರು. ಅದು ಮುಗಿದನಂತರ ಸಂಗೀತಾ ಕಟ್ಟಿಯವರ ಹಿಂದೂಸ್ತಾನಿ ಗಾಯನ. ಆ ಗಾಯಕಿಗೆ ಮೈಕ್ ಇತ್ಯಾದಿ ಯಾವ ವ್ಯವಸ್ಥೆಯೂ ಸರಿಯಿರಲಿಲ್ಲ. ಸಿಟ್ಟಿನಿಂದ ಪ್ರತಿಕ್ರಿಯಿಸಿ ಅದ್ಭುತವಾಗಿ ಹಾಡು ಶುರುಮಾಡಿ ಸಂಗೀತಾ ಕಟ್ಟಿ ತಮ್ಮ ಗಾಯನ ಮುಗಿಸುವಾಗ ಸಭಾಂಗಣದಲ್ಲಿ ಬರೋಬ್ಬರಿ ನಲವತ್ತು ಜನ ಉಳಿದಿದ್ದರು. ಆ ನಂತರ ನಮ್ಮ ಸರದಿ ಬಂತು.

ನಲವತ್ತು ಜನರಿಗೆ ನಾಟಕ ಮಾಡಬೇಕಾಗಿ ಬಂತಲ್ಲಾ ಎಂದು ಬೇಸರ ಮಾಡಿಕೊಳ್ಳದೆ ನಮ್ಮ ಕಲಾವಿದರು ನಾಟಕ ಮುಗಿಸಿದಾಗ ರಾತ್ರಿ ಒಂದೂವರೆ ಗಂಟೆ. ಈ ನಡುವೆ ಮಧ್ಯಮಧ್ಯೆ ಬಂದೊಬ್ಬ "ಬೇಗ ಮುಗಿಸಿ ಸಾರ್" ಎನ್ನುತ್ತಿದ್ದ. ಸಮ್ಮೇಳನದಲ್ಲಿ ಕಾರ್ಯಕ್ರಮ ನಿಗದಿಗೊಳಿಸುವಂತಹ ಜನರಿಗೆ ಅಂತಹ ಅಭಿರುಚಿ ಇದ್ದಂತೆ ಕಾಣಲಿಲ್ಲ. ಸಮಾನಾಂತರ ವೇದಿಕೆಯಲ್ಲಿ ಏನಿರಬೇಕು, ಮುಖ್ಯವೇದಿಕೆಯಲ್ಲಿ ಏನಿರಬೇಕು, ಸಂಗೀತಾ ಕಟ್ಟಿಯಂತಹ ಹಿಂದೂಸ್ತಾನಿ ಗಾಯಕಿಯನ್ನು ಕರೆಸಿದಾಗ ಹೇಗೆ ನಡೆಸಿಕೊಳ್ಳಬೇಕೆಂದು ಗೊತ್ತಿದ್ದಂತೆ ಕಾಣಲಿಲ್ಲ.

ಇನ್ನೊಂದು ವಿಶೇಷವನ್ನು ಇಲ್ಲಿ ದಾಖಲಿಸಬೇಕಿದೆ. ಸಮ್ಮೇಳನಾಧ್ಯಕ್ಷರ ಕಾವ್ಯ ಗಾಯನ ಮುಖ್ಯವೇದಿಕೆಯಲ್ಲಿತ್ತು. ಅಲ್ಲಿ ಕೇಳಿಸಿಕೊಂಡಾಗ ಸಿದ್ದಲಿಂಗಯ್ಯನವರ ನನ್ನ ಜನ ಸಂಗೀತವನ್ನು ನಿಷೇಧಿಸಿರುವ ಕವನ ಎಂಬುದು ಅರಿವಿಗೆ ಬಂತು. ಅದನ್ನು ಪರಿಣಾಮಕಾರಿಯಾಗಿ ವಾಚಿಸಬಹುದೇ ಹೊರತು ರಾಗ ಹಾಕಿ ಹಾಡಿದರೆ ಕವನ ದೂರ ಹೋಗುತ್ತದೆ.

ಪುಟ್ಟೇಗೌಡರ ಪಜೀತಿ

ಶ್ರವಣಬೆಳಗೊಳ ಕ್ಷೇತ್ರದಲ್ಲಿ ಮೂರು ಬಾರಿ ಗೆದ್ದು ಮೂರು ಬಾರಿ ಸೋತಿರುವ ಪುಟ್ಟೇಗೌಡರು ಸಾರ್ವಜನಿಕವಾಗಿ ಸಾಮಾನ್ಯರಂತೆ ಕಾಣಿಸಿಕೊಳ್ಳುವ ವ್ಯಕ್ತಿ. ಇಸ್ತ್ರಿ ಕಾಣದ ಅಂಗಿ ಪಂಚೆ, ಹವಾಯಿ ಚಪ್ಪಲಿ, ಕುರುಚಲು ಬಿಳಿಗಡ್ಡ ಒಂಟಿ ದನ ಮಡಗಿಕೊಂಡಿರುವ ಬಡವನಂತೆ ಕಾಣುವ ಪುಟ್ಟೇಗೌಡರನ್ನ ಈ ಹಿಂದೆ ನಡೆದ ಮಹಾಮಸ್ತಕಾಭಿಷೇಕದ ಸಮಯದಲ್ಲಿ ಬೆಟ್ಟ ಹತ್ತಲು ಹೋದಾಗ ಪೊಲೀಸರು ಎಳೆದು ಬಿಸಾಡಿದ್ದರು. ಗೌಡರು ಸಾವಧಾನವಾಗಿಯೇ "ನಾನು ಶಾಸಕ ಕಂಡ್ರಿ" ಎಂದಾಗ ನಗಾಡಿದ ಪೊಲೀಸರು "ಕಂಡಿದ್ದೀವಿ ಹೋಗಯ್ಯ" ಎಂದು ನೂಕಿದ್ದರು. ಆಗ ಎಸ್ಪಿಯಾಗಿದ್ದ ಡಿ.ಸಿ. ರಾಜಪ್ಪ "ಲೇ ಅವರು ಈ ಕ್ಷೇತ್ರದ ಶಾಸಕರು. ಬಿಡ್ರಿ ಅವರನ್ನ" ಎಂದಾಗ ಪೊಲೀಸರು ದಂಗು ಬಡಿದಿದ್ದರು. ಈಗ ನಡೆದ ಸಾಹಿತ್ಯ ಸಮ್ಮೇಳನದಲ್ಲೂ ಅವರನ್ನು ತಡೆಯಲಾಯ್ತು. ಸಿಟ್ಟಾದ ಗೌಡರು ಪ್ರತಿಭಟಿಸಲು ಆಲೋಚಿಸುತ್ತಲೇ ಸಾಹಿತ್ಯ ಸಮ್ಮೇಳನದಲ್ಲಿ ಇವೆಲ್ಲಾ ಕಾಮನ್ ಎಂದುಕೊಂಡು ಸುಮ್ಮನಾದರು.

ನಮ್ಮ ಗೊಮ್ಮಟ

ಶ್ರವಣ ಬೆಳಗೊಳದ ಸಾಹಿತ್ಯ ಸಮ್ಮೇಳನಕ್ಕೆ ನಾಡಿನ ಮೂಲೆಮೂಲೆಯಿಂದ ಜನಸಾಗರ ಹರಿದು ಬರಲು ಕಾರಣವೇನೆಂದು ಯೋಚಿಸಿದರೆ ಬಹಳಷ್ಟು ಜನ ಕ್ಷೇತ್ರ ನೋಡಿ ಹೋಗಲು ಬಂದವರಾಗಿದ್ದರು. ಆದ್ದರಿಂದ ಇಡೀ ದಿನ ಬೆಟ್ಟಕ್ಕೆ ಹತ್ತಿ ಇಳಿಯುವ ಜನ ಇರುವೆಯಂತೆ ಸಾಲಿಕ್ಕಿದ್ದರು. ಶ್ರವಣಪ್ಪನನ್ನ ನೋಡಿ ಬಂದ ಪೊಲೀಸನೊಬ್ಬ "ಗೌಡ್ರೆ, ಈ ಗೊಮ್ಮಟೇಶ್ವರ ವಯಸ್ಸನಂತೆ ಕಾಣಲ್ಲ" ಎಂದರು. "ನಿಮ್ಮ ಊಹೆ ಸರಿ ಸಾರ್. ನಮ್ಮ ಗೊಮ್ಮಟೇಶ್ವರನದು ಮಗುವಿನ ಪ್ರತಿಮೆ. ಹಾಲು ಗಲ್ಲ ಗುಂಗುರು ಕೂದಲು ನೋಡಿದರೆ ಗೊತ್ತಾಗುತ್ತೆ. ಬೆತ್ತಲೆ ಇರುವ ಮಕ್ಕಳು ಮಾತ್ರ ಸುಂದರವಾಗಿ ಅಪ್ಪಿಕೊಳ್ಳುವಂತೆ ಕಾಣುತ್ತವೆ. ನಮ್ಮ ಗೊಮ್ಮಟನೂ ಹಾಗೆಯೇ. ಅದೇ ಧರ್ಮಸ್ಥಳದ ಗೊಮ್ಮಟನನ್ನು ನೋಡಿ. ಬೆತ್ತಲೆ ನಿಂತ ಅವಮಾನ ಮುಖದಲ್ಲಿ ಎದ್ದು ಕಾಣುತ್ತದೆ" ಎಂದೆ. ಪೊಲೀಸರು ಗಹಗಹಿಸಿ ನಕ್ಕರು.

● ಬಿ. ಚಂದ್ರೇಗೌಡ


ಕುಂದಾಪುರದ ವಿದ್ಯಮಾನಗಳು: 'ಬಹುಮತ'ದ ದಬ್ಬಾಳಿಕೆ ಕಡಲಕಿನಾರೆಯ ಅಮಲು



ಬೆಂಕಿ ಬಿದ್ದ ಜಾಮಿಯಾ ಕಟ್ಟಡ

ಕುಂದಾಪುರದಿಂದ ಸಮುದ್ರ ತೀರದ ಕೋಡಿಯ ಕೊನೆಯ ಸ್ಟಾಪಿಗೆ ಬಸ್ ಪ್ರಯಾಣದಲ್ಲಿ ಐದು ಕಿಲೋಮಿಟರ್ ದೂರ. ಆದರೆ ಕೋಡಿ ಕುಂದಾಪುರದ ಭಾಗವೇ ಎನ್ನಿಸುವಷ್ಟು ಸಮೀಪದಲ್ಲಿದೆ. ಕೋಡಿಯ ಹಾಗೆಯೇ ಕುಂದಾಪುರದಿಂದ ಒಂದು ಹೊಳೆ ದಾಟಿದರೆ ಸಿಗುವ ಗಂಗೊಳ್ಳಿ ಬಸ್ ಪ್ರಯಾಣದಲ್ಲಿ ಹತ್ತು ಕಿಲೋಮಿಟರ್ ದೂರದಲ್ಲಿದೆ. ಕುಂದಾಪುರದ ಕೋಡಿ ಮತ್ತು ಗಂಗೊಳ್ಳಿ ಎರಡೂ ಹಳ್ಳಿ ಎಂದರೆ ಹಳ್ಳಿಗಳಲ್ಲ; ಹಾಗೆಂದು ಅವು ಪಟ್ಟಣಗಳೂ ಅಲ್ಲ-ಕರಾವಳಿಯ ಹೆಚ್ಚಿನ ಊರುಗಳ ಬಗ್ಗೆ ಈ ಮಾತನ್ನು ಹೇಳಬಹುದು. ಭಾರತದ ಹಳ್ಳಿಗಳು ಈಗಲೂ ಉಳಿಸಿಕೊಂಡಿವೆ ಎಂದು ಮಾನವಶಾಸ್ತ್ರಜ್ಞರು ಹೇಳುವ ಸೌಹಾರ್ದ ಸಹಬಾಳ್ವೆಗಳನ್ನು ಕರಾವಳಿಯ ಊರುಗಳು ದಶಕದ ಹಿಂದೆಯೇ ಕಳೆದುಕೊಂಡಿವೆ. ಇತ್ತೀಚೆಗೆ ಕೋಡಿ ಮತ್ತು ಗಂಗೊಳ್ಳಿಗಳಲ್ಲಿ ನಡೆದ ಪ್ರಕರಣಗಳು ಸಣ್ಣ ಊರುಗಳಲ್ಲೂ ಸಹ ಊರೊಟ್ಟಿನ ಜನ 'ನಾವು' ಮತ್ತು 'ಅವರು' ಎಂದು ಒಡೆದುಕೊಂಡಿರುವುದಕ್ಕೆ ನಿದರ್ಶನಗಳಾಗಿವೆ. ಕರಾವಳಿಯ ಪುತ್ತೂರು, ಮಂಗಳೂರು ಮತ್ತು ಕುಂದಾಪುರ ಮಾತ್ರವಲ್ಲ, ಈ ಊರುಗಳನ್ನು ಸುತ್ತುವರೆದ ಹಳ್ಳಿಗಳಲ್ಲೂ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ 'ಗಲಭೆ'ಗಳು ನಡೆಯುವುದು ಈಗ ಸಾಮಾನ್ಯವಾಗಿವೆ. ಹೆಚ್ಚಾಗಿ ಗಲಭೆಗಳನ್ನು ಹುಟ್ಟುಹಾಕಿ ಹಲ್ಲೆ ಪೆಟ್ಟು, ದೈಹಿಕ ಹಿಂಸೆಗಳ ಉಸ್ತುವಾರಿ ನೋಡಿಕೊಳ್ಳುವುದು ಹಿಂದೂತ್ವ ಸಂಘಟನೆಗಳು ಮತ್ತು ಅವುಗಳ ಟಾರ್ಗೆಟ್ ಮುಸ್ಲಿಮ್ ಸಮುದಾಯ. ವೈಯಕ್ತಿಕ ವೈಮನಸ್ಸು, ಆಸ್ತಿ ತಕರಾರು, ಲೇವಾದೇವಿ-ಇತ್ಯಾದಿ ಕಾರಣಗಳ ಬದಲು ಸ್ಪಷ್ಟವಾಗಿ ಗುರುತಿಸಬಹುದಾದ ರಾಜಕೀಯ ಸಿದ್ಧಾಂತವೊಂದರ ಕಾರಣದಿಂದ ಗಲಭೆಗಳು ನಡೆಯುತ್ತವೆ. ಉದಾಹರಣೆಗೆ ಕೋಡಿಯಲ್ಲಿ ಇತ್ತೀಚೆಗೆ ನಡೆದ ಘರ್ಷಣೆ ಮತ್ತು ಮದುವೆ ಮನೆಯೊಂದರ ಮೇಲೆ ನಡೆದ ದಾಳಿಗಳಿಗೆ ಮೂಲ ಕಾರಣವಾಗಿರುವುದು 20 ವರ್ಷಗಳ ಹಿಂದೆ ನಡೆದ ಒಂದು ಅಂತರ್‌ಮತೀಯ ವಿವಾಹ.

ಕುಂದಾಪುರ-ಕೋಡಿ ರಸ್ತೆಯಲ್ಲಿ ಎಂ.ಕೋಡಿ (ಮೂರು ರಸ್ತೆ ಕೋಡಿ) ದಾಟಿದ ನಂತರ ಸಿಗುವ ಹಳುವಳ್ಳಿ ಎಂಬಲ್ಲಿ ಬಿಲ್ಲವ ಸಮುದಾಯದ ತರುಣಿಯೊಬ್ಬರು, ಅಬ್ದುಲ್ ರೆಹಮಾನ್ ಎಂಬ ಯುವಕನನ್ನು ಪ್ರೇಮಿಸಿ ಮದುವೆಯಾದರು. ಸ್ವಇಚ್ಛೆಯಿಂದಲೇ ಮತಾಂತರಗೊಂಡು ಜೀನತ್ ಎಂಬ ಹೊಸ ಹೆಸರನ್ನೂ ಪಡೆದುಕೊಂಡರು. ಎಂಟು ವರ್ಷಗಳ ಹಿಂದೆ ಅಬ್ದುಲ್ ರೆಹಮಾನ್ ಸೌದಿ ಅರೇಬಿಯಾದಲ್ಲಿ ಉದ್ಯೋಗದಲ್ಲಿದ್ದಾಗಲೇ ಮೃತಪಟ್ಟರು. ಜೀನತ್ ಈಗ ತನ್ನ ನಾಲ್ಕು ಹೆಣ್ಣುಮಕ್ಕಳ ಜೊತೆ ಕೋಡಿಯ ಹಳುವಳ್ಳಿಯ ತನ್ನ ಗಂಡನ ಮನೆಯಲ್ಲಿ ಅತ್ತೆಯೊಂದಿಗೆ ವಾಸಿಸುತ್ತಿದ್ದಾರೆ. ಜೀನತ್‌ರಿಗೆ ಬಿಟ್ಟುಬಂದ ಜಾತಿಯವರು ನಿರಂತರವಾಗಿ ಕಿರುಕುಳ ಕೊಡುತ್ತಿದ್ದರು. ಇತ್ತೀಚೆಗೆ ಈ ಜಾತಿಕಾರಣದ ಜೊತೆ ಧರ್ಮಕಾರಣವೂ ಸೇರಿಕೊಂಡು, ಈ ಕಿರುಕುಳ ದ್ವೇಷ ಮತ್ತು ಹಿಂಸೆಯ ಸ್ವರೂಪ ಪಡೆದುಕೊಂಡಿದೆ. ಜೀನತ್‌ರ ಹಿರೆ ಮಗಳು ಮುಬೀನ (18) ಬಿ.ಕಾಂ. ಮೊದಲ ವರ್ಷದ ವಿದ್ಯಾರ್ಥಿನಿಯಾಗಿದ್ದು ಆಕೆಗೆ ಹಳುವಳ್ಳಿಯ ಕೆಲವು ತರುಣರು ಬೈದು, ಹಂಗಿಸಿ, ಚುಡಾಯಿಸುತ್ತಿದ್ದರು. ಜನವರಿ 11, 2015ರ ಭಾನುವಾರ ಸಂಜೆ ಹೊತ್ತಿಗೆ ಆಸುಪಾಸಿನ 10-15 ತರುಣರು, ಜೀನತ್‌ರ ಮನೆ ಎದುರು ನಿಂತು ಮುಬೀನಳ ಕೈಹಿಡಿದು ಎಳೆದು "ಐಸ್‌ಕ್ರೀಮ್ ಕೊಡಿಸುತ್ತೇವೆ ಬಾ" ಎಂದು ಜುಲುಮೆ ಮಾಡಿದ್ದಾರೆ. ಅದೇ ಹೊತ್ತಿಗೆ ಊರಿನ ಕೆಲವು ಹೆಂಗಸರು ಬಂದು ಮುಬೀನಳ ತಾಯಿ ಜೀನತ್‌ಗೆ 'ರಂಡೆ ಮುಂಡೆ' ಮುಂತಾಗಿ ಬೈದಿದ್ದಾರೆ. ಜೀನತ್‌ರ ನೆರೆಮನೆಯ ಮುಸ್ಲಿಮ್ ತರುಣನೊಬ್ಬ ಅಲ್ಲಿ ಏನಾಗುತ್ತಿದೆ ಎಂದು ನೋಡಲು ಬಂದಾಗ, ಅಲ್ಲಿ ಸೇರಿದವರು ಅವನಿಗೂ ಹೊಡೆದಿದ್ದಾರೆ, ಜೀನತ್ ಮನೆಯ ಕಿಟಕಿಯ ಗಾಜುಗಳನ್ನೂ ಒಡೆದಿದ್ದಾರೆ. ಮುಬೀನ ಘಟನೆಯ ಮಾರನೆ ದಿನವೇ ದಾಂಧಲೆಯಲ್ಲಿ ಪಾಲ್ಗೊಂಡಿದ್ದವರ ಹೆಸರನ್ನು ಕಾಣಿಸಿ ಕುಂದಾಪುರ ಠಾಣೆಯಲ್ಲಿ ದೂರು ದಾಖಲಿಸಿದ್ದಾಳೆ.



ರೌಡಿ ಶೀಟರ್ ಪರವಾಗಿ 'ಹಿಂದೂ'ವೀರರ ಪ್ರತಿಭಟನೆ

ಹೀಗೆ ಕೋಡಿ ಹಳುವಳ್ಳಿಯಲ್ಲಿ ವಾತಾವರಣ ಉದ್ವಿಗ್ನವಾಗಿದ್ದ ವೇಳೆಯಲ್ಲೇ ಮುಸ್ಲಿಮ್ ತರುಣರಿಬ್ಬರು ತಮ್ಮ ಮೊಬೈಲಿನಲ್ಲಿ ವಿಡಿಯೋ ಚಿತ್ರೀಕರಣ ನಡೆಸುತ್ತಿದ್ದರು ಎಂಬ ಕಾರಣಕ್ಕೆ ನೂರಾರು ಜನ ಗುಂಪಾಗಿ ಹಳುವಳ್ಳಿಯ ಅಬ್ದುಲ್ಲಾರ ತಮ್ಮ ಇಬ್ರಾಹಿಂರ ಮನೆಯ ಮೇಲೆ ಜನವರಿ 25ರಂದು ಮಧ್ಯಾಹ್ನ ದಾಳಿ ನಡೆಸಿದ್ದಾರೆ. ಇಬ್ರಾಹಿಂ ಹಾಗು ಅಬ್ದುಲ್ಲಾರ ಮನೆ ಎದುರುಬದುರಾಗಿದ್ದು, ದಾಳಿ ನಡೆದ ಹೊತ್ತು ಮನೆಗಳ ನಡುವಿನ ಅಂಗಳದಲ್ಲಿ ಅಬ್ದುಲ್ಲಾರ ಮಗಳ ಮದುವೆ ಸಮಾರಂಭ ನಡೆದಿತ್ತು, ಮದುವೆ ಮನೆಯಲ್ಲಿ ದಿಬ್ಬಣದ ಸುಮಾರು 200 ಜನರಿಗೆ ಬಿರಿಯಾನಿ ಸಿದ್ಧವಾಗಿತ್ತು. ಇದ್ದಕ್ಕಿದ್ದಂತೆ ಜನ ಭಾರಿ ಸಂಖ್ಯೆಯಲ್ಲಿ ಮನೆಯನ್ನು ಸುತ್ತುವರೆದು ಕಲ್ಲುಗಳನ್ನು ಎಸೆಯಲಾರಂಭಿಸಿದರು. ಜನ ಆ 'ಯುದ್ಧ'ಕ್ಕೆ ಸನ್ನದ್ಧರಾಗಿಯೇ ಬಂದಿದ್ದರು. ದಾಳಿಗೆ ಮನೆಯ ಎಲ್ಲ ಕಿಟಕಿಯ ಗಾಜುಗಳು ಪುಡಿಯಾಗಿವೆ. ಮನೆಯ ಹಿಂಭಾಗದ ಕೊಠಡಿಗೆ ಹೊಚ್ಚಲಾಗಿದ್ದ ಸಿಮೆಂಟು ಶೀಟುಗಳ ಮೇಲೆ ಬಿದ್ದ ದೊಡ್ಡ ಕಲ್ಲುಗಳು ದೊಡ್ಡ ಕಿಂಡಿಯನ್ನೇ ತೆರೆದಿವೆ! ನೂರಾರು ನೆಂಟರ ಒಡಗೂಡಿ ಬರಬೇಕಿದ್ದ ಮಧುಮಗನ ದಿಬ್ಬಣ, ದಾಳಿಯ ಸುದ್ದಿಗೆ ಬೆದರಿ ಕೇವಲ 50 ಜನ ಮಾತ್ರ ಮದುವೆ ಮನೆ ತಲುಪಿದ್ದಾರೆ. 200 ಜನರಿಗೆ ತಯಾರಾಗಿದ್ದ ಊಟ ಉಣ್ಣುವವರಿಲ್ಲದೆ ಉಳಿದು ನೆರೆಕರೆಯವರಿಗೆ ಹಂಚಿಯೂ, ಅರ್ಧವಾಸಿ ಮಣ್ಣು ಪಾಲಾಯಿತು. ಪೊಲೀಸರು ದಾಳಿ ನಡೆಸಿದವರು ಎಂದು ಕೆಲವರನ್ನು ಗುರುತಿಸಿ ಬಂಧಿಸಿದ್ದಾರೆ; ಪೆಟ್ಟು ತಿಂದ ಮದುವೆ ಮನೆಯ ಕಡೆಯಿಂದಲೂ ಬಾಟಲಿಗಳಿಂದ ಪ್ರತಿದಾಳಿ ನಡೆಸಿದ್ದಾರೆ ಎಂದು 13 ಜನರ ಮೇಲೆ ಆರೋಪ ಹೊರಿಸಲಾಗಿದೆ; ಅವರಲ್ಲಿ ಕೆಲವರನ್ನು ಬಂಧಿಸಲಾಗಿದೆ, ಉಳಿದವರ ಮೇಲೆ ವಾರಂಟ್ ಹೊರಡಿಸಲಾಗಿದೆ. ಸೌದಿಯಲ್ಲಿ ಉದ್ಯೋಗದಲ್ಲಿದ್ದು ತಂಗಿಯ ಮದುವೆಗೆ ಬರಲಾಗದೆ ಅಲ್ಲೇ ಉಳಿದ ಅಬ್ದುಲ್ಲಾರ ಮಗ ಕೂಡ ಆರೋಪಿಗಳಲ್ಲಿ ಒಬ್ಬನಾಗಿದ್ದಾನೆ!

ಮದುವೆ ಮನೆಯ ಮೇಲೆ ದಾಳಿ ನಡೆದ ನಂತರ ಪೊಲೀಸರು ತೆಗೆದುಕೊಂಡ ಕ್ರಮಗಳು ಸರಿಯೋ ತಪ್ಪೋ ಎಂಬ ಬಗ್ಗೆ ವಾದವಿವಾದಗಳಿರಬಹುದು. ಹಳುವಳ್ಳಿಯಲ್ಲಿ ಮಾತ್ರವಲ್ಲ, ಈಗೀಗ ನಾಡಿನ ಎಲ್ಲೆಡೆ ಮುಸಲ್ಮಾನರು ಹಿಂಸೆ ಅನುಭವಿಸಿ ಆ ನಂತರ ಪೊಲೀಸು ಕ್ರಮಗಳಿಗೂ ಒಳಗಾಗಬೇಕಾಗುತ್ತದೆ; ಕೆಲವೊಮ್ಮೆ ಠಾಣೆಗೆ ದೂರು ತೆಗೆದುಕೊಂಡು ಹೋದ ತಪ್ಪಿಗೇನೇ ಲಾಕ್‌ಅಪ್ ಆಗಬೇಕಾಗುತ್ತದೆ. ಈ ನೋವು ಅವರ ಅನುಭವಕೋಶದಲ್ಲೇ ಸೇರಿಹೋಗಿದೆ-ಮಾರ್ ಕೇ ಸಾಥ್ ಜೇಲ್ ಕಾ ಹವಾ ಮುಫ್ತ್, ಸರಿ. ಆದರೆ ಮದುವೆ ಮನೆಯೊಂದರ ಮೇಲೆ ದಾಳಿ ಮಾಡಿದ ಹಿಂದೂಗಳ ಮನೋಸ್ಥಿತಿ ಯಾವ ಬಗೆಯದ್ದು? ಈ ಬಗೆಯ ನಡವಳಿಕೆ ನಾವು ಇದುವರೆಗೂ ಕಂಡದ್ದಿಲ್ಲ, ಮದುವೆ ಮನೆ ನಮ್ಮ ಆಜನ್ಮ ವೈರಿಯದೇ ಆಗಿರಲಿ 'ಶುಭಕಾರ್ಯ ನಿರ್ವಿಘ್ನ'ವಾಗಿ ನಡೆಯಬೇಕು, 'ಮದುಮಕ್ಕಳು ಚೆಂದದಲ್ಲಿ ಬಾಳಬೇಕು' ಎಂಬುದು ಎಲ್ಲರ ಹಾರೈಕೆಯಾಗಿರುತ್ತದೆ. ಮೊನ್ನೆ ಕುಂದಾಪುರ ಕೋಡಿಯಲ್ಲಿ ಅಬ್ದುಲ್ಲಾರ ಮನೆಯ ಮೇಲೆ ದಾಳಿ ನಡೆಸಿದವರಿಗೆ ಅಲ್ಲಿ ನಡೆಯಲಿದ್ದ ಸಮಾರಂಭದ ಬಗ್ಗೆ ಮಾಹಿತಿ ಇತ್ತು, ಮನೆಯ ಯಜಮಾನ ಅಬ್ದುಲ್ಲಾರಿಗೆ ಕೋಡಿಯಲ್ಲಿ ಈ ಹಿಂದೆ ಆಗಿಹೋದ ಘಟನೆಗಳ ಜೊತೆ ಯಾವ ಸಂಬಂಧವೂ ಇರಲಿಲ್ಲ, ಆದರೆ ಅವರು ಮುಸ್ಲಿಮರಾಗಿದ್ದರು ಎಂಬ ಕಾರಣಕ್ಕೆ ಈ ದಾಳಿ ನಡೆದಿದೆ. ಈ ದಾಳಿಯಲ್ಲಿ ಹಿಂದೂತ್ವ ಸಂಘಟನೆಗಳ ನೇರ ಪಾಲುದಾರಿಕೆ ಇದೆಯೋ ಇಲ್ಲವೋ, ಹಿಂದೂತ್ವದ ರಾಜಕೀಯ ಗ್ರಹಿಕೆಗಳು ಅದಕ್ಕೆ ಕಾರಣವಾಗಿರುವುದು ಸ್ಪಷ್ಟವಾಗಿದೆ. ಅಬ್ದುಲ್ಲಾರ ಮನೆ ಮತ್ತು ಸಮುದ್ರಗಳ ನಡುವೆ ಮೀನುಗಾರಿಕೆಯ ಅನುಕೂಲಕ್ಕಾಗಿ ಡಾಂಬಾರು ರಸ್ತೆ ಇದೆ. ಆ ರಸ್ತೆಯಲ್ಲಿ 'ಕಿನಾರ ಬಾರ್' ಇದ್ದು ಅದೀಗ ಕಿನಾರ ಹೋಟೆಲ್ ರಸ್ತೆಯಾಗಿದೆ. ಈ ರಸ್ತೆಯಲ್ಲಿ ಇದೀಗ ಮುಸಲ್ಮಾನರು ಒಬ್ಬಂಟಿಯಾಗಿ ಓಡಾಡುವುದಕ್ಕೆ ಭಯಪಡುತ್ತಾರಂತೆ. ಈ ಬಾರ್ ಹತ್ತಿರವಿರುವ 'ಕಿನಾರ ಬಸ್ ಸ್ಟಾಪ್'ನಲ್ಲಿ ಗುಂಪು ಸೇ[...] ಮುಸಲ್ಮಾನ ಹುಡುಗರನ್ನು ಆಡಿಕೊಳ್ಳುವುದ[...] ಹುಡುಗಿಯರನ್ನು ಚುಡಾಯಿಸುವುದು ಇತ್ತೀಚ[...] ಹೆಚ್ಚಾಗಿದೆಯಂತೆ. ಬಹುಶಃ ಬಾರಿನಲ್ಲಿ ಪ್ರಾಪ್ತವಾಗು[...] ಅಮಲಿಗಿಂತ ಕಣ್ಣ ಎದುರಿಗೆ ಇರುವ ಅರಬ್ಬೀ (!)[...] ಸಮುದ್ರವೂ, ಬೆನ್ನ ಹಿಂದಿರುವ ಹಿಂದೂಸ್ತಾನ[...] ಪುಣ್ಯಭೂಮಿಯೂ ತಮ್ಮ ಕಿಸೆಯಲ್ಲಿರುವ ಕಾಸಿನ ಹಾಗೆಯ[...] 'ತಮ್ಮ ಸ್ವಂತದ್ದು, ಈ ಅನ್ಯಮತೀಯರಿಗೆ ಇಲ್ಲೇನು ಕೆಲಸ[...] ಎಂಬ ಅಮಲು ಕಿನಾರ ಬಸ್‌ಸ್ಟಾಪಲ್ಲಿ ಒಟ್ಟಾ[...] ಮುಸ್ಲಿಮರನ್ನು ಟಾರ್ಗೆಟ್ ಮಾಡುತ್ತಿರುವವರಿ[...] ಏರಿದೆಯೇನೋ! ಇದು ಹಿಂದೂತ್ವ ಜನರ ತಲೆಯೊಳ[...] ತುಂಬಿದ ಅಮಲಲ್ಲವೇ?



ಬಹುಮತದ ದಬ್ಬಾಳಿಕೆ

ಬಹುಸಂಖ್ಯಾತರ ಗುಂಪು ನ್ಯಾಯದಿಂದ ಆಗು[...] ಕೆಡುಕಿಗೆ ಕುಂದಾಪುರ ಗಂಗೊಳ್ಳಿ 'ಅಕ್ಷರಶಃ' ಒಂದು ಜ್ವಲ[...] ನಿದರ್ಶನ. 2014ರ ನವೆಂಬರ್ 28ರ ನಟ್ಟಿರುಳ[...] ಗಂಗೊಳ್ಳಿಯ ಜಾಮಿಯಾ ಮಸೀದಿ ಕಟ್ಟಡದಲ್ಲಿ[...] ಹಾರ್ಡ್‌ವೇರ್, ಪೇಂಟು, ಟೈಲರಿಂಗ್ ಇತ್ಯಾದಿ ಅ[...] ಮಳಿಗೆ ಮತ್ತು ಎರಡು ಗೋದಾಮುಗಳಿಗೆ ಯಾರೋ[...] ಬೆಂಕಿ ಕೊಟ್ಟರು. ಅಂಗಡಿ ಗೋದಾಮುಗಳ ಅಪ[...] ಸಾಮಾನು ಸರಂಜಾಮು ಸುಟ್ಟು ಬೂದಿಯಾಗಿ ಮಾಲಿಕರ[...] ಕೋಟ್ಯಾಂತರ ರೂಪಾಯಿ ನಷ್ಟವಾಯಿತು. ಗಂಗೊಳ್ಳಿಯ[...] ಆ ವೇಳೆಗಾಗಲೇ ಮತೀಯ ಸಂಬಂಧ ಬಿಗಡಾಯಿಸಿ[...] ಸಣ್ಣಪುಟ್ಟ ಘರ್ಷಣೆಗಳು ಮೇಲಿಂದ ಮೇಲೆ ನಡೆದಿದ್ದ[...] ಬಹುತೇಕ ಹಿಂದೂತ್ವವಾದಿಗಳೇ ಈ ಘರ್ಷಣೆಗಳ[...] ಹುಟ್ಟು ಹಾಕುತ್ತಿದ್ದರು. ಗಂಗೊಳ್ಳಿಯ ಮುಸಲ್ಮಾನ[...] ಬೆಂಕಿ ಹಾಕಿದ ಆರೋಪಿಗಳನ್ನು ತನಿಖೆ ಮಾ[...] ಬಂಧಿಸಬೇಕೆಂದು ಶಾಂತಿಯುತ ಪ್ರತಿಭಟನೆ ಮಾಡಿದ[...] ಈ ಹಿನ್ನೆಲೆಯಲ್ಲಿ ಜಾಮಿಯಾ ಮಸೀದಿ ಕಾಂಪ್ಲೆ[...] ಮಳಿಗೆಗಳಿಗೆ ಬೆಂಕಿ ಕೊಟ್ಟ ಕೇಸಿನಲ್ಲಿ ಪೊಲೀಸರು ವಿಚಾ[...] ನಡೆಸಿ ಹಿಂದೂ ಜಾಗರಣ ವೇದಿಕೆಯ ಕಾರ್ಯಕ[...] ಎನ್ನಲಾದ ವ್ಯಕ್ತಿಯೊಬ್ಬನನ್ನು ಕ್ರಿಮಿನಲ್ ಕಾಯ್ದೆಯ ಸೆಕ್ಷ[...] 307ರ ಅಡಿಯಲ್ಲಿ ವಶಕ್ಕೆ ತೆಗೆದುಕೊಂಡರು. [...] ವೇಳೆಗಾಗಲೇ ಆತನ ಮೇಲೆ 11 ಕ್ರಿಮಿನಲ್ ಕೇಸುಗಳಿದ್ದ[...] ಈ ಹಂತದವರೆಗೆ ಕಾನೂನು ವ್ಯವಸ್ಥೆ ಜಾಮಿಯಾ ಮಸಿ[...] ಕಾಂಪ್ಲೆಕ್ಸಿನ ಬೆಂಕಿ ಪ್ರಕರಣವನ್ನು ನಿಭಾಯಿಸಿದ ರೀ[...] ನ್ಯಾಯಶಾಸ್ತ್ರದ ಪಠ್ಯಪುಸ್ತಕದ ನಿರೂಪಣೆಯ ಹಾಗಿದೆ.

ಆದರೆ, ಪ್ರಕರಣದಲ್ಲಿ ಸದ್ರಿ ಆರೋಪಿಯನ್ನು ಸಂಶಯ[...] ಮೇಲೆ ಕಸ್ಟಡಿಗೆ ತೆಗೆದುಕೊಂಡ ಮಾರನೆ ದಿನ - ಡಿಸೆಂಬ[...] 5ರಂದು - ನಡೆದ ವಿದ್ಯಮಾನ ಸಂಖ್ಯಾಬಲದ ದಬ್ಬಾಳಿ[...] ಅಚ್ಚುಕಟ್ಟಾದ ನಿದರ್ಶನವಾಗಿದೆ. ಹಿಂದೂ ಜಾಗರ[...] ವೇದಿಕೆಯ ಈ ರೌಡಿ ಶೀಟರನ ಬಂಧನವನ್ನು ಪ್ರತಿಭ[...] ಕುಂದಾಪುರ ಮತ್ತು ಗಂಗೊಳ್ಳಿ ನಡುವೆ ಸಂಪರ್ಕ ಕಲ್ಪಿಸ[...] ಮಂಗಳೂರು- ಉಡುಪಿ- ಕುಂದಾಪುರ-ಮುಂ[...] ರಾಷ್ಟ್ರೀಯ ಹೆದ್ದಾರಿಯಲ್ಲಿ ಐದು ಸಾವಿರಕ್ಕೂ ಹೆಚ್ಚು 'ಹಿಂ[...] ಬಾಂಧವರು'-ಗಂಡಸರೂ, ಹೆಂಗಸರೂ- ಗುಂಪು ಸೆ[...] ವಾಹನ ಸಂಚಾರವನ್ನು ಸಂಪೂರ್ಣವಾಗಿ ಬಂ[...] ಮಾಡಿದರು. ಈ ಹೆದ್ದಾರಿ ಬಂದ್ ಹಗಲಿನ ಸುಮಾ[...] ಆರೇಳು ಗಂಟೆಗಳ ಕಾಲ ನಡೆದು ಪ್ರಯಾಣಿಕರು ಹಾ[...] ಟ್ರಕ್ ಡ್ರೈವರುಗಳು ಭಾರಿ ಕಷ್ಟನಷ್ಟ ಅನುಭವಿಸಿದ[...] ಮಾರನೆಯ ದಿನ ಕರಾವಳಿಯ ಹೆಚ್ಚಿನ ಮಾಧ್ಯಮಗ[...] ಇದು ಸುದ್ದಿಯಾಗಲಿಲ್ಲ, ಸಂಘಪರಿವಾರದ ಇಮೇ[...] ಬಗ್ಗೆ ಇಲ್ಲಿನ ಮಾಧ್ಯಮಗಳಿಗೆ ಅಷ್ಟು ಕಾಳಜಿ! ಹೆದ್[...] ಬಂದ್ ಮಾಡಿದ ಗುಂಪಿನ ಒತ್ತಡಕ್ಕೆ ಮಣಿದು ಪೊಲೀ[...] ಸಂಜೆಯ ಹೊತ್ತಿಗೆ ಬಂಧಿತನನ್ನು ಬಿಡುಗಡೆ ಮಾಡಿದ[...] ನಂತರ 11/1 ಕೇಸಿನ ಸದ್ರಿ ಹಿಂದೂ ವೀರನನ್ನು ಭ[...] ಮೆರವಣಿಗೆಯಲ್ಲಿ ಒಯ್ದು ವಿಜಯೋತ್ಸವವ[...] ಆಚರಿಸಲಾಯಿತು. ಜಾಮೀನು ನೀಡಲು ಅವಕಾಶವಿ[...] ಕ್ರಿಮಿನಲ್ ಕಾಯ್ದೆಯ ಸೆಕ್ಷನ್ 307ರ ಅಡಿಯ[...] ಬಂಧಿತನಾದವನು 24 ಗಂಟೆಗಳ ಒಳಗೆ ಬಿಡು[...] ಯಾದದ್ದು ಕರ್ನಾಟಕದಲ್ಲೇ ಇದು ಮೊದಲ ಬಾರಿಯ[...] ಹಾಗೆಂದೇ ವಿಜಯೋತ್ಸವದಲ್ಲಿ ಭಾಗಿಯಾದ ಭಾಷಣಕಾ[...] ಕೊಚ್ಚಿಕೊಂಡರು. ಶಾಂತಿಯುತ ಪ್ರತಿಭಟನೆ ನಡೆಸಿ ಕಾನ[...] ಕ್ರಮಕ್ಕೆ ಆಗ್ರಹಿಸಿದ್ದ ಗಂಗೊಳ್ಳಿಯ ಮುಸಲ್ಮಾನ[...] ಹಿಂದೂತ್ವದ ಈ ರೋಡ್ ಷೋ ಮತ್ತು ಗುಂ[...] ಅರಣ್ಯ ನ್ಯಾಯಗಳಿಗೆ ದಂಗಾದ ಮೂಕಪ್ರೇಕ್ಷಕರಾಗಿ[...] ಇದು ತಪ್ಪು ಎಂದು ಶಾಂತಿಯುತವಾಗಿ ಪ್ರತಿಭಟಿಸುವುದ[...] ಅವಕಾಶವೆಲ್ಲಿದೆ? ಗಂಗೊಳ್ಳಿಯಲ್ಲಿ ಎಲ್ಲರೂ ಸಮಾನ[...] ಆದರೆ ಹಿಂದೂಗಳು ಹೆಚ್ಚು ಸಮಾನರು!

ಈ ಮಾತಿಗೆ ಗಂಗೊಳ್ಳಿಯಲ್ಲಿ 2015ರ ಜನ[...] 21ರಂದು ನಡೆದ ಮತ್ತೊಂದು ಘಟನೆಯೂ ಪುಷ್ಟಿ ನೀ[...] ಜನವರಿ 20ರ ತಡ ರಾತ್ರಿ ಸುಮಾರು 2 ಗಂ[...] ಗಂಗೊಳ್ಳಿಯ ಪೇಟೆಯಲ್ಲಿರುವ ವೆಂಕಟೇಶ [...] ಎಂಬುವವರ ಕಿರಾಣಿ ಅಂಗಡಿಗೆ ಬೆಂಕಿ ಬಿತ್ತು. ತಕ್ಷ[...] ಉಡುಪಿ ಜಿಲ್ಲೆಯ ಎಸ್.ಪಿ.ಯಾದಿಯಾಗಿ ಸಕಲ ಪೊ[...] ಗಣವೇ ಅಲ್ಲಿ ನೆರೆದು ತನಿಖೆ ಶುರು ಹಚ್ಚಿಕೊ[...] ಮೊದಲೇ ಅದು ಮುಸ್ಲಿಮರದ್ದೇ ಕೆಲಸ ಎಂದು ಕ[...]



...ದೂ ಮುಖಂಡರು ತೀರ್ಮಾನಿಸಿಬಿಟ್ಟರು. ಅಂಗಡಿ ...ರಣದಲ್ಲಿದ್ದ ಸಿ.ಸಿ. ಟೀವಿಯ ಚಿತ್ರಿಕೆಯೇ ಈ ...ರ್ಮಾನಕ್ಕೆ ಸಾಕ್ಷ್ಯವೆಂಬಂತೆ ಮಾಧ್ಯಮಗಳೂ ವರದಿ ...ಡಿದವು. ಆದರೆ ಈ ಚಿತ್ರಿಕೆಯಲ್ಲಿ ಯಾರೋ ಒಬ್ಬರು ...ಕಿ ಹಚ್ಚುತ್ತಿರುವುದು ಮಸುಕು ಮಸುಕಾಗಿ ...ಣಿಸುತ್ತದೆಯೇ ವಿನಹ ಯಾರು ಎಂದು ...ಗುರುತಿಸಬಹುದಾದಷ್ಟು ಸ್ಪಷ್ಟವಾಗಿಲ್ಲ, ಆದಾಗ್ಯೂ ಅದು ...ಮುಸ್ಲಿಮರೇ ಮಾಡಿದ ಕೆಲಸ ಎಂದು ತೀರ್ಮಾನಿಸಿ ...ಹಿಂದೂತ್ವ ಸಂಘಟನೆಗಳ ನಾಯಕತ್ವದಲ್ಲಿ ಜನ ಕೇಸರಿ ... ಹಿಡಿದು ಗಂಗೊಳ್ಳಿಯಲ್ಲಿ ಭಾರಿ ಮೆರವಣಿಗೆ ...ಡಿದರು. ಮುಸ್ಲಿಮರು ಸ್ವಲ್ಪ ಹೆಚ್ಚಾಗಿರುವ ಜಾಗಗಳಿಗೆ ...ಗುಂಪು ಕಟ್ಟಿಕೊಂಡು ನುಗ್ಗಿ, ಮನೆಗಳ ಮೇಲೆ ಕಲ್ಲು ...ದೊಣ್ಣೆ ...ಟಲಿಗಳಿಂದ ದಾಳಿ ಮಾಡಿದರು. ಕೆಲವು ಮನೆಗಳ ...ಗೆ ನುಗ್ಗಿ ಹೆಂಗಸರ ಮೈ ಮೇಲೆ ಕೈಮಾಡಿದರು. ...ಗೊಳ್ಳಿಯಲ್ಲಿ ಮುಸಲ್ಮಾನರಿಗೆ ಅವರ ಮನೆಯ ...ಗಡೆಯೂ ರಕ್ಷಣೆ ಇಲ್ಲದ ಹಾಗಾಯಿತು. ಪೊಲೀಸರು ...ದೂಗಳು ಮತ್ತು ಮುಸಲ್ಮಾನರೂ ಸೇರಿದಂತೆ ಗುಂಪು ...ರ್ಷಣೆಯ ಆರೋಪದಲ್ಲಿ 31 ಮಂದಿಯನ್ನು ...ಧಿಸಿದರು. ಪೆಟ್ಟು ತಿಂದ ಮುಸ್ಲಿಮರೂ ಯಾಕೆ ಬಂಧನಕ್ಕೆ ...ಗಾದರು? ಪೊಲೀಸರು ಕಾನೂನು ಪಾಲನೆಯಲ್ಲಿ ...ಕ್ಷಪಾತವಾಗಿ ವರ್ತಿಸಿದ್ದಾರೆ ಎಂದು ಬಿಂಬಿಸಲು ಹಾಗೆ ...ಡಲಾಗುತ್ತಿದೆಯೆ? ಈ ಬಗ್ಗೆ ನಾವು ಪೊಲೀಸು


...ಜಿ ಶೀಟರ್‌ನ ಮೆರವಣಿಗೆ

...ಕಾರಿಗಳನ್ನೇ ವಿಚಾರಿಸಿದಾಗ 'ಮುಸ್ಲಿಮರ ...ಯಿಂದಲೂ ಕಲ್ಲು ತೂರಾಟ ನಡೆದಿದೆ; ಅವರಿಂದಲೂ ...ತಿಭಂಗವಾಗಿದೆ' ಎಂಬ ಉತ್ತರ ದೊರೆಯಿತು. ತಮ್ಮ ...ನೆಗಳ ಅಂಗಳದವರೆಗೂ ಜನ ಗುಂಪು ಕಟ್ಟಿಕೊಂಡು ...ದು ಕಲ್ಲೆಸೆದರೆ, ಮನೆಗಳ ಒಳಗೆ ನುಗ್ಗಿ ದಾಂಧಲೆ ...ಡಿದರೆ, ಆಗಲೂ ಮುಸಲ್ಮಾನರು ಸುಮ್ಮನಿರಬೇಕು ...ದು ಪೊಲೀಸರು ನಿರೀಕ್ಷಿಸುತ್ತಾರೆಯೇ? 'ಅವರ ...ಡುಗ', 'ನಮ್ಮ ಹುಡುಗಿ' ಎಂದು ಜೊತೆಯಾಗಿ ...ಡುವ ಹರೆಯದವರನ್ನು ಸಾರ್ವಜನಿಕವಾಗಿ ...ಮಾನಿಸಿ, ಪೊಲೀಸು ಠಾಣೆಗೆ ಎಳೆದುಕೊಂಡು ...ಗುವ ವೀರರ ಮೇಲೆ 'ಅವರೂ ಕಾನೂನು ...ಲ್ಲಂಘಿಸಿದ್ದಾರೆ' ಎಂದು ಕೇಸು ಹಾಕಿದ್ದನ್ನು ಇದುವರೆಗೂ ...ಕಂಡಿಲ್ಲ, ನಮ್ಮ ಮಾಧ್ಯಮದವರಿಗಂತೂ ಆ ವೀರರು ...ಡಿಯನ್ನು ಠಾಣೆಗೆ ಕರೆದೊಯ್ದು ಕಾನೂನಿನ ವಶಕ್ಕೆ ...ದ ನಾಗರಿಕರು'! ಈ ಪ್ರಶ್ನೆಯನ್ನು ಹಿಂದೊಮ್ಮೆ ... ಒಬ್ಬ ಸಬ್‌ಇನ್‌ಸ್ಪೆಕ್ಟರರ ಹತ್ತಿರ ಎತ್ತಿದಾಗ ಅವರು ...ದರು! ನಾಗರಿಕರೂ ಕಾನೂನು ಪಾಲನೆಯ ...ಜವಾಬ್ದಾರಿಯನ್ನು ಹೊರಬೇಕು! ಬರಿ ಪೊಲೀಸರೇ ಎಲ್ಲಾ ... ಮಾಡೋಕ್ಕಾಗುತ್ತ ಹೇಳಿ!' ಅಂದಿದ್ದರು. ಕರಾವಳಿಯಲ್ಲಿ ...ಊರಿನ ವಿಪರ್ಯಾಸ ಇರೋದೇ ಹೀಗೆ. ...ಯಂಗಳದಲ್ಲಿ ದಾಳಿ ನಡೆದಾಗ ಸ್ವರಕ್ಷಣೆಗೆ ಏನು ...ಡಿದರೂ, ಮಾಡಿದವರು ಯಾರು ಎನ್ನುವುದರ ಮೇಲೆ ... 'ನಾಗರಿಕ ಕರ್ತವ್ಯ'ವೋ 'ಕಾನೂನು ಉಲ್ಲಂಘನೆ'ಯೋ ...ನಿರ್ಧಾರವಾಗುವಂತೆ ಕಾಣುತ್ತಿದೆ. ಈ ಮಾತುಗಳನ್ನು ...ವಿಷಾದದಿಂದಲೇ ಹೇಳಬೇಕಾಗಿದೆ. ಯಾಕೆಂದರೆ ಪ್ರತಿಯೊಂದು ...ಗಲಭೆಯಲ್ಲಿ ಗುಂಪು ದಾಳಿಗೆ ತುತ್ತಾದ ಮುಸಲ್ಮಾನರು ...ಪರಿಣಾಮಗಳನ್ನು ಎದುರಿಸಬೇಕಾಗಿದೆ. 'ನಿಮ್ಮ ಕಣ್ಣಲ್ಲಿ ... ನೋಡ್ತೀರಾ. ಕೌಂಟರ್ ಕಂಪ್ಲೇಂಟ್ ಬಂದಿದೆ.

ವಿಚಾರಣೆ ನಡೆಸೋದು ತಪ್ಪಾ!' ಎನ್ನುವ ಕಾನೂನು ಪಾಲಕರಿಗೆ ಕರಾವಳಿಯ ಮುಸಲ್ಮಾನರು ಕೇಳೋದು: 'ಊರಿನ ಕಾನೂನು ವ್ಯವಸ್ಥೆ ಮುಸ್ಲಿಮ್ ನಾಗರಿಕರಿಗೆ ರಕ್ಷಣೆ ಒದಗಿಸುವುದನ್ನು ಒಳಗೊಂಡಿಲ್ಲವೇ? ಅದು ಇಲ್ಲವೆಂದಾದರೆ ಮುಸ್ಲಿಮರ ಸ್ವರಕ್ಷಣೆಯ ನಡವಳಿಕೆಯೂ ಕಾನೂನುಬಾಹಿರವೇ?'

ಗಂಗೊಳ್ಳಿಯ ವಿದ್ಯಮಾನವನ್ನು ಪ್ರತಿಭಟಿಸಿ ಉಡುಪಿಯ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಜನವರಿ 23ರಂದು ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಯವರ ಕಚೇರಿಯ ಎದುರು ಸಭೆ ನಡೆಸಿತು. ಈ ಸಭೆಯಲ್ಲಿ ಗಂಗೊಳ್ಳಿಯ ಹಲವು ಸಂತ್ರಸ್ತ ಕುಟುಂಬಗಳ ಮಹಿಳೆಯರೂ ಭಾಗವಹಿಸಿದ್ದರು; ಎಸ್.ಪಿ.ಯವರ ಸಮ್ಮುಖವೇ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. 'ಕಳೆದ ವರ್ಷ ನವೆಂಬರ್‌ನಲ್ಲಿ ಜಾಮಿಯಾ ಮಸೀದಿ ಕಾಂಪ್ಲೆಕ್ಸ್‌ಗೆ ಬೆಂಕಿ ಬಿದ್ದಾಗ ನಮ್ಮವರು ಹಿಂದೂ ಮನೆಗಳ ಮೇಲೆ ಕಲ್ಲು ತೂರಲಿಲ್ಲ, ಮನೆಗೆ ನುಗ್ಗಿ ಕೈಮಾಡಲಿಲ್ಲ. ಆದರೆ ನೀವೇ ಬಂಧಿಸಿದ ಆರೋಪಿಯೊಬ್ಬನನ್ನು ನೀವೇ ಬಿಡುಗಡೆ ಮಾಡಿದಿರಿ. ಈಗ ನಮ್ಮ ಮನೆಗಳಿಗೆ ನುಗ್ಗಿ ನಮ್ಮ ಮೈಮೇಲೆ ಕೈ ಮಾಡಿದಾಗಲೂ ನಮ್ಮವರನ್ನೇ ಏಕೆ ಬಂಧಿಸುತ್ತಿದ್ದೀರಿ?' ಎಂದು ಸವಾಲು ಹಾಕಿದರು. ಎಸ್.ಪಿ. 'ನವೆಂಬರಿನಲ್ಲಿ ನಾನು ಹುದ್ದೆಯಲ್ಲಿ ಇರಲಿಲ್ಲ, ಹಾಗಾಗಿ ಅದಕ್ಕೆ ನಾನು ವಿವರಣೆ ಕೊಡಲಾರೆ' ಎಂದು ಸಮಜಾಯಿಷಿ ಕೊಟ್ಟರು.

ಗಂಗೊಳ್ಳಿಯ ಬಂಧಿತ ಮುಸ್ಲಿಮರಲ್ಲಿ 55 ವಯಸ್ಸಿನ ಹಂಗಾರಕಟ್ಟೆ ಹಮೀದ್ ಕೂಡ ಒಬ್ಬರು. ಅವರೂ, ಅವರ ಹಿರಿಯರೂ ಅದೇ ಊರಿನಲ್ಲಿ ಹುಟ್ಟಿ ಬೆಳೆದೋರು. ಈಗ ಅವರಿರುವ ಮನೆಯ ಜಾಗದ ದಾಖಲೆಯೇ 80 ವರ್ಷದಷ್ಟು ಹಳೆಯದು. ಅವರು ಗಂಗೊಳ್ಳಿಯ ಜಮಾತುಲ್ ಮುಸ್ಲಿಮಿನ ಕಾರ್ಯದರ್ಶಿ. ವೆಂಕಟೇಶ ಶೆಣೈ ಅಂಗಡಿಗೆ ಬೆಂಕಿ ಬಿದ್ದ ನಂತರ ಮುಸಲ್ಮಾನರ ಮನೆಗಳ ಮೇಲೆ ನಡೆದ ಗುಂಪು ದಾಳಿಯ ವೇಳೆ ಇವರ ಮನೆಯ ಮೇಲೂ ಕಲ್ಲು ಎಸೆದು ಜಖಂ ಮಾಡಲಾಗಿದೆ. ಮನೆಯೊಳಗೆ ನುಗ್ಗಿ ಹೆಂಗಸರ ಮೇಲೆ ಕೈಮಾಡಲಾಗಿದೆ. ತಮ್ಮ ಮನೆಗೆ ಹತ್ತೆಜ್ಜೆ ದೂರದಲ್ಲಿ ಹಿಂದೂ-ಮುಸ್ಲಿಮ್ ಗುಂಪುಗಳು ಎದುರಾಗಿವೆ ಎಂದು ತಿಳಿದು ಕೈ ಕೈ ಮಿಲಾಯಿಸುವುದನ್ನು ತಪ್ಪಿಸಲು ಹಮೀದ್ ಹೋಗಿದ್ದರಂತೆ. ಪೊಲೀಸರ ಸಮ್ಮುಖವೇ ಅವರು ಹಿಂಸೆ ನಿಯಂತ್ರಣದಲ್ಲಿ ತೊಡಗಿದ್ದರು. ಆದರೂ ಅವರನ್ನೂ ಘರ್ಷಣೆಯ ಆರೋಪಿಯನ್ನಾಗಿಸಿ ಜೈಲಿಗೆ ತಳ್ಳಿದ್ದಾರೆ. ಅವರ ಆರೋಗ್ಯ ಬಿಗಡಾಯಿಸಿ, ಉಡುಪಿ ಜಿಲ್ಲಾ ಆಸ್ಪತ್ರೆಯ ಜೈಲು ವಾರ್ಡಿಗೆ ಕರೆದುಕೊಂಡು ಬಂದ ಹೊತ್ತಲ್ಲಿ, ವಾರ್ಡಿನ ಬಂಧಿಖಾನೆಯ ಅಡ್ಡ-ಉದ್ದ ಸರಳುಗಳ ಹಿಂದೆ ನಾವು ಅವರನ್ನು ಕಂಡೆವು. ಆಗಲೇ ಅವರು ಜೈಲು ಸೇರಿ ಹಲವು ದಿನಗಳಾಗಿತ್ತು. ನಮ್ಮೊಡನೆ ಮಾತನಾಡಿದ ಹಮೀದ್ "ಜೈಲು ವಾರ್ಡಿನಲ್ಲಿ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ" ಎಂದು ಮತ್ತೆ ಮತ್ತೆ ಹೇಳಿದರು. ತನ್ನ ಮನೆಯಲ್ಲಿ ತನ್ನ ಪಾಡಿಗೆ ತಾನಿರಬೇಕಾದ ವ್ಯಕ್ತಿ ವಿನಾಕಾರಣ ಬಂಧನಕ್ಕೆ ಒಳಗಾಗಿದ್ದರೂ ಅವರು ಕಸ್ಟಡಿಯಲ್ಲಿ ತನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿರೋದರ ಬಗ್ಗೆ ಕೃತಜ್ಞರಾಗಿದ್ದರು.

ಕೋಡಿ ಮತ್ತು ಗಂಗೊಳ್ಳಿ ಪ್ರಕರಣಗಳಲ್ಲಿ ಹೊಡೆದು ಕಾಣುವ ಸತ್ಯವೆಂದರೆ:

ನಾಗರಿಕ ಸಮಾಜ ಮುಸಲ್ಮಾನರಿಗೆ ಕೊಡಲು ಸಾಧ್ಯವಿಲ್ಲದ ಅಭಯವನ್ನು ಪೊಲೀಸರು ಕಲ್ಪಿಸಿ ಕೊಡಲು ಸಾಧ್ಯವಿಲ್ಲ,

ಊರಿನ ಜನ ಹಿಂಸೆಯ ಬಗ್ಗೆ ಅಸಹ್ಯ ಪಟ್ಟುಕೊಳ್ಳುತ್ತಿಲ್ಲ, ಸಮಾಜವೇ ಹಿಂಸೆಗೆ ಜಡವಾಗಿದೆ.

ಬಿ.ಜೆ.ಪಿ.ಯೇತರ ರಾಜಕೀಯ ಪಕ್ಷಗಳು ಕೋಡಿ-ಗಂಗೊಳ್ಳಿಯಲ್ಲಿ ನಡೆದ ಹಿಂಸೆಯ ವಿರುದ್ಧ ಸಾಂಕೇತಿಕವಾಗಿ ಕೂಡ ಪ್ರತಿಭಟಿಸಲಿಲ್ಲ,

ಪ್ರಜಾತಂತ್ರವನ್ನು ಬಹುಮತದ ದಬ್ಬಾಳಿಕೆ ತುಳಿದು ಬೀಗುತ್ತಿರುವ ಅವಮಾನಕಾರಿ ಸ್ಥಿತಿ ಎಂದು ಯಾರಿಗೂ ಅನಿಸಲಿಲ್ಲ.

● ಜಿ.ರಾಜಶೇಖರ್, ಕೆ.ಫಣಿರಾಜ್

ಮೇಡಂ, ನೀವು ಆ ಕಾರ್ಯಕ್ರಮಕ್ಕೆ ಹೋಗಿದ್ರಾ?




ಮೇಡಂ, ಜನವರಿ 13ನೇ ತಾರೀಖು ನಿಮ್ಮ ಮೊಬೈಲ್‌ನಿಂದ ಮೆಸೇಜ್ ಬಂದಿತ್ತು, ಅದು ಹೀಗಿತ್ತು 'ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಅವರಿಗೆ ಸ್ವಾಗತ ಮತ್ತು ಸಮಾಲೋಚನಾ ಸಭೆ. 4 ಗಂಟೆ ಪಿ.ಎಂ. 18, ಜನವರಿ ಸಂಡೆ, ಬೆಂಗಳೂರು ಪ್ರೆಸ್‌ಕ್ಲಬ್ ಪ್ರೋಗ್ರಾಮ್ ಹಾಲ್. ಪ್ಲೀಸ್ ಕೀಪ್ ಯುವರ್‌ಸೆಲ್ಫ್ ಫ್ರೀ ಅಂಡ್ ಅಟೆಂಡ್'. ನನಗೆ ಆ ಕಾರ್ಯಕ್ರಮಕ್ಕೆ ಹೋಗಲು ಆಗಲಿಲ್ಲ, ಚೆನ್ನಾಗಿ ನಡೆಯಿತು ಅಂತ ಗೆಳೆಯರು ತಿಳಿಸಿದರು. ನೀವು ಆ ಕಾರ್ಯಕ್ರಮಕ್ಕೆ ಹೋಗಿದ್ರಾ?

ನೀವು ಪ್ರಜಾವಾಣಿಯಲ್ಲಿ ಬರೆಯುತ್ತಿದ್ದ 'ಕರುಳುಬಳ್ಳಿ' ಅಂಕಣದ ಬರವಣಿಗೆಗಳನ್ನು ನಾನು ತಪ್ಪದೇ ಓದುತ್ತಿದ್ದೆ, ಓದಿ ಮೊಬೈಲ್‌ನಲ್ಲಿ ತಮ್ಮೊಂದಿಗೆ ಚರ್ಚೆ ಮಾಡುತ್ತಿದ್ದೆ ಅಥವಾ ನೀವು ಬರೆದ ಬರವಣಿಗೆ ಕುರಿತು ನಾವಿಬ್ಬರೂ ಚರ್ಚೆ ಮಾಡುತ್ತಿದ್ದೆವು. ಕೆಲವು ಸಲ ನಿಮ್ಮ ಲೇಖನ ಬಂದಾಗ ನಾನು ಪತ್ರಿಕೆ ಸಿಗದ ಸ್ಥಳದಲ್ಲಿದ್ದರೆ ಓದಲು ಮತ್ತು ತಮ್ಮೊಂದಿಗೆ ಅದರ ಬಗ್ಗೆ ಮಾತಾಡಲು ಆಗ್ತಾ ಇರಲಿಲ್ಲ, ಎರಡು ಮೂರು ದಿವಸ ಬಿಟ್ಟು ನೀವೇ ನನಗೆ ಕಾಲ್ ಮಾಡಿ, 'ಸರ್ ಹೇಗಿದಿರಿ, ನನ್ನ ಲೇಖನ ಓದಿದಿರಾ?' ಅಂತ ಕೇಳ್ತಾ ಇದ್ರಿ.

ಬೆಂಗಳೂರು ವಿವಿಯ ಇತಿಹಾಸ ವಿಭಾಗದವರು, ಯುಜಿಸಿ ಸ್ಯಾಪ್ ಯೋಜನೆಯ ಭಾಗವಾಗಿ ನಡೆಸಿದ ಸೆಮಿನಾರೊಂದರಲ್ಲಿ ನನ್ನನ್ನು ನೀವು ವೇದಿಕೆಗೆ ಪರಿಚಯ ಮಾಡಿಕೊಟ್ಟಿದ್ದಿರಿ. ಮೇಡಂ ಅದು ನಿಮಗೆ ನೆನಪಿದೆಯಾ? ನನ್ನ ದೃಷ್ಟಿಕೋನ, ಆಲೋಚನಾ ಕ್ರಮ ಮತ್ತು ನನ್ನ ಹೋರಾಟದ ಹಿನ್ನೆಲೆಗಳನ್ನು ಹೇಳಿದ್ದಿರಿ. ನನ್ನ ಬಗೆಗಿನ ಈ ಆಯಾಮ ನಿಮಗೆ ಗೊತ್ತಿಲ್ಲ ಅಂತ ಅಂದ್ಕೊಂಡಿದ್ದೆ.

ನಮ್ಮ ತಲೆಮಾರಿನಲ್ಲಿ ಪದವಿಗಾಗಿ ಇತಿಹಾಸ ಓದಿಕೊಂಡು, ಇತಿಹಾಸ ಬರವಣಿಗೆಯ ಸಾಂಪ್ರದಾಯಿಕ ಮತ್ತು ಯಾಂತ್ರಿಕ ಧೋರಣೆ/ ಚೌಕಟ್ಟಿನ ಆಚೆಗೆ ಬಂದು ಆಲೋಚನೆ ಮಾಡ್ತಾ ಇದ್ರಿ. ಕರ್ನಾಟಕದ ಮತ್ತು ಭಾರತದ ಒಟ್ಟು ರಾಜಕೀಯ-ಆರ್ಥಿಕ ವಿದ್ಯಮಾನಗಳನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲನೆ ಮಾಡ್ತಾ ಇದ್ರಿ. ನಿಮ್ಮ ಬರವಣಿಗೆ ಮತ್ತು ಮಾತುಕತೆಯಲ್ಲಿ ಜನಸಾಮಾನ್ಯರ ಸಮಸ್ಯೆ, ಸಂಕಟಗಳೇ ಮುಖ್ಯ ಜಾಗ ಪಡಿತಾ ಇದ್ವು. ಈ ಸಮುದಾಯಗಳಿಗೆ




ಬಂದಿರುವ ಹೊರಗಿನ ಮತ್ತು ಒಳಗಿನ ಇಕ್ಕಟ್ಟು ಹಾಗೂ ಬಿಕ್ಕಟ್ಟುಗಳನ್ನು ಬಿಡಿಸಿ ಬಿಡಿಸಿ ಹೇಳ್ತಾ ಇದ್ರಿ. ಹಸಿದವರ, ನೊಂದವರ ಮತ್ತು ಅಪಮಾನಿತರ ದೃಷ್ಟಿಕೋನದಲ್ಲಿ, ಅವರ ಹಿತಾಸಕ್ತಿಯ ನೆಲೆಯಲ್ಲಿ ನೀವು ಆಲೋಚನೆ ಮಾಡ್ತಾ ಇದ್ರಿ, ಬರೀತಾ ಇದ್ರಿ. ನಿಮ್ಮ ಮಾತುಕತೆ ಮತ್ತು ಬರವಣಿಗೆಯಲ್ಲಿ ಚಿಂತನೆ ಆಳವಾಗಿತ್ತು; ಗಂಭೀರವಾಗಿತ್ತು. ಆದರೆ ಅದರ ಮಂಡನೆ ಮತ್ತು ಅಭಿವ್ಯಕ್ತಿ ಸರಳವಾಗಿತ್ತು, ಮನಮುಟ್ಟುವಂತಿತ್ತು. ಇದಕ್ಕೆ ಬೇಕಾದ ಕರುಳಿನ ಭಾಷೆಯನ್ನು ನೀವು ಸೃಷ್ಟಿಸಿದಿರಿ.

ಕೆಲವರು ತೋರಿಕೆಗೆ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ತಪ್ಪುತಪ್ಪಾಗಿ ಬಳಸ್ತಾ ಇದಾರೆ. ಆದರೆ ನೀವು ಆ ದೃಷ್ಟಿಕೋನದ ಮೂಲಕ ಲೋಕದ ಒಳಹೊರಗನ್ನು ಸರಿಯಾಗಿ ಗ್ರಹಿಸ್ತಾ ಇದ್ರಿ. ಇದು ನಿಮಗೆ ಕೇವಲ ಗ್ರಹಿಕೆಯ ಭಾಗವಾಗಿರಲಿಲ್ಲ, ನಿಮ್ಮ ಬದುಕಿನ ಭಾಗವಾಗಿತ್ತು.

2014ರ ಅಕ್ಟೋಬರ್ 13ನೇ ತಾರೀಖು ನಮ್ಮ ವಿಶ್ವವಿದ್ಯಾಲಯದಲ್ಲಿ ನೀವು 'ಸಂಶೋಧನೆಯ ವಿಧಾನ'ಗಳನ್ನು ಕುರಿತು ಮಾತಾಡಿದಿರಿ. 'ಯಾವುದೇ ಪರಿಭಾಷೆಗಳ ಯಜಮಾನಿಕೆ ಇಲ್ಲದೆ ಸಂಶೋಧನೆ ಕುರಿತು ಮಾತಾಡಬಹುದು ಎಂಬುದಕ್ಕೆ ಒಳ್ಳೆಯ ಉದಾಹರಣೆ' ಅಂತ ನಮ್ಮ ವಿದ್ಯಾರ್ಥಿ ಮಿತ್ರರು ಹೇಳಿದ್ರು. ಅದೇ ದಿಸದ ಹಿಂದೆ ಮುಂದೆ ನಮ್ಮ ವಿಶ್ವವಿದ್ಯಾಲಯದ, ದಲಿತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಸಿದ್ದಗಂಗಮ್ಮ ಅವರು 'ದಮನಿತ ಮಹಿಳೆಯರ ಬದುಕು ಬವಣೆ: ಕಾರ್ಯಾಗಾರ'ದ ರೂಪುರೇಷೆ ಕುರಿತು ಚರ್ಚೆ ಮಾಡಲು ನಮ್ಮಿಬ್ಬರನ್ನು ಕರೆಸಿದ್ರು. ಅದನ್ನು ಕುರಿತು ಸಮಾಲೋಚನೆ ಮಾಡ್ತಾ ಇರುವಾಗ, 'ಸಂಪನ್ಮೂಲ ವ್ಯಕ್ತಿಗಳಿಗೆ 500 ರೂ. ಸಭಾ ಭತ್ಯೆ ಮತ್ತು ಕಮ್ಮಟಾರ್ಥಿಗಳಿಗೆ 200 ರೂಪಾಯಿ ಸಭಾ ಭತ್ಯೆ' ಎಂಬ ಅಂಶ ಚರ್ಚೆಗೆ ಬಂತು. ಆಗ ನೀವು 'ಈ ತಾರತಮ್ಯ ಬೇಡ. ಇಬ್ಬರಿಗೂ ಒಂದೇ ಪ್ರಮಾಣದ ಸಭಾ ಭತ್ಯೆ ಇರಲಿ' ಅಂತ ಹೇಳಿ, ಅದನ್ನು ನಡಾವಳಿಯಲ್ಲಿ ಸೇರಿಸಿದಿರಿ. ಇದ್ಯಕೆ ಕರುಳಿರುವ ಕಣ್ಣು ಬೇಕು. ಅದು ನಿಮಗಿತ್ತು.

ಅನೇಕ ಸಲ ನಮ್ಮ ವೃತ್ತಿ ಚಟುವಟಿಕೆಗಳ ಭಾಗವಾಗಿ ಮಾತ್ರ ನಾವು ಒಂದು ಕಡೆ ಸೇರಿ ಚರ್ಚೆ ಸಂವಾದ ಮಾಡ್ತಾ ಇದ್ವಿ. ಸಮಾನ ಆಶಯ ಮತ್ತು ಸಮಾನ ಕನಸುಳ್ಳವರು ಇದನ್ನು ಮೀರಿ ಒಂದು ಕಡೆ ಸೇರಬೇಕು ಅಂತ ಕಾಣುತ್ತೆ, ಮೊನ್ನೆ 2ನೇ ತಾರೀಖು ಸೋಮವಾರ, ಶ್ರವಣಬೆಳಗೊಳದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಗೆಳೆಯ ಕೆ.ವೈ.ನಾರಾಯಣಸ್ವಾಮಿ ಮತ್ತು ನಾನು ಒಂದೇ ವೇದಿಕೆಯಲ್ಲಿ ಸಾಹಿತ್ಯ ಕುರಿತು 'ಭಾಷಣ' ಮಾಡಿದ್ವಿ. ಅವತ್ತು ರಾತ್ರಿ ಉಳಕೋ ಅಂತ ನಾರಾಯಣಸ್ವಾಮಿಗೆ ಹೇಳಿದೆ. 'ಇಲ್ಲ, ಮನು ಮೇಡಂ ಆಸ್ಪತ್ರೆಲಿದಾರೆ, ಹೋಗ್ಬೇಕು' ಅಂತ ಹೇಳಿ ಹೊರಟ. ಮಾರನೇ ದಿನ ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ 'ಮನು ಈಸ್ ನೊ ಮೋರ್. ಸಾರಿ ಗೆಳೆಯ' ಅಂತ ಮೆಸೇಜ್ ಕಳಿಸಿದ. ಮೇಡಂ, ಇಷ್ಟು ಬೇಗ ನಿಮ್ಮ ಬಗ್ಗೆ ಹಾಸ್ಟೈಲ್ಸ್ ಡಾಕ್ಯ ಬರಿಬೇಕಾಗಿ ಬಂತಾ!

● ಡಾ. ಬಿ.ಎಂ. ಪುಟ್ಟಯ್ಯ


ಮಾರುತಿ ಭಟ್ಟ

ಮಲೆನಾಡು ಮಾರುತಿ ಗುರೂಜಿಯ ಗಂಡಾಗುಂಡಿ ಗಲಾಟೆ!!


ನಯನ ಭಟ್

ಅನಾಯಾಸವಾಗಿ ಅಕ್ರಮ ಹಣ ಹರಿದು ಬರುವಲ್ಲೆಲ್ಲ ಅನಾಚಾರ, ಅನಾಹುತ ತಪ್ಪಿದ್ದಲ್ಲ! ಇದು ನೈಸರ್ಗಿಕ ನ್ಯಾಯತತ್ವ. ಈ ಪ್ರಕೃತಿ ನಿಯಮ ಹೊನ್ನಾವರದ ಬಂಗಾರಮಕ್ಕಿ (ಗೇರುಸೊಪ್ಪ)ಯ 'ಭಾರದ ಭೂಪ' ಮಾರುತಿ ಭಟ್ಟ ಯಾನೆ ಮಾರುತಿ ಗುರೂಜಿಗೆ ಕರಾರುವಾಕ್ಕಾಗಿ ಅನ್ವಯವಾಗಿದೆ! ಪೆದ್ದು ಭಕ್ತಾದಿಗಳಿಗೆ ಸಮಸ್ಯೆ-ಸಂಕಷ್ಟ ಪರಿಹರಿಸುವ ದೇವಮಾನವನ ಪೋಸು ಕೊಡುತ್ತಿದ್ದ ಮಾರುತಿಯೇ ಈಗ ಸ್ವತಃ ತಾನೇ ದುಡ್ಡು-ದೊಡ್ಡಸ್ತಿಕೆ-ದಗಲುಬಾಜಿತನ ಮತ್ತು ಕೌಟುಂಬಿಕ ಕಲಹಕ್ಕೆ ಬಿದ್ದು ಒದ್ದಾಡುತ್ತ ಲೋಕ ವಿಖ್ಯಾತವಾಗಿ ಹೋಗಿದ್ದಾನೆ; ಅತ್ಯಾಚಾರದಂಥ ರಣಗಂಭೀರ ಅಪವಾದದ ಗಂಡಾಂತರಕ್ಕೆ ತುತ್ತಾಗಿ ನಿದ್ದೆಯಲ್ಲೂ "ಆಂಜನೇಯಾ... ಆಂಜನೇಯಾ...." ಎನ್ನುತ್ತ ಬೆಚ್ಚಿಬೀಳುತ್ತಿದ್ದಾನೆ.

ಗುರೂಜಿ ಜಾತಕ

ಹೊನ್ನಾವರ-ಬೆಂಗಳೂರು ದಾರಿಯಲ್ಲಿ ಸುಮಾರು 33 ಕಿ.ಮೀ. ದೂರದಲ್ಲಿ ಗೇರುಸೊಪ್ಪ ಎಂಬ ಹಳ್ಳಿಯಿದೆ. ದಟ್ಟ ಕಾಡಿನ ನಡುವೆ, ಶರಾವತಿ ನದಿ ದಂಡೆಯಲ್ಲಿರುವ ಗೇರುಸೊಪ್ಪ ಚೆಂದದ ಊರು. ಶರಾವತಿಯ ಆಚೆ ದಂಡೆಯಲ್ಲಿ ಒಂದು ವೀರಾಂಜನೇಯನ ಗುಡಿಯಿತ್ತು, ಈ ದೇವಸ್ಥಾನಕ್ಕೆ ಪೂಜಾರಿಯಾಗಿದ್ದವನು ಗಣೇಶ ಭಟ್ಟನೆಂಬ ಬಡ ಹವ್ಯಕ ಬ್ರಾಹ್ಮಣ. ಈತನಿಗೆ ಹನುಮಂತನ ಆವಾಹನೆ ಆಗುತ್ತದೆಂಬ ಪ್ರತೀತಿ ಸುತ್ತಲಿನ ಮಲೆನಾಡಿನಲ್ಲಿ ಬಿರುಸಾಗಿ ವ್ಯಾಪಿಸಿತ್ತು. ಗಣೇಶ ಭಟ್ಟ ಭಾರ ಬಂದಾಗ ತೊಂದರೆಯಲ್ಲಿದ್ದವರ ಸಮಸ್ಯೆ ತಾನೇ ಹೇಳಿ, ಪರಿಹಾರವೂ ಸೂಚಿಸುತ್ತಿದ್ದ. ಸಂತುಷ್ಟರಾದ ಮೌಢ್ಯದ ಭಕ್ತರು ಮನ ಬಂದಷ್ಟು ಕಾಣಿಕೆ ಭಟ್ಟರಿಗೆ ಮತ್ತು ದೇವರಿಗೆ ಹಾಕುತ್ತಿದ್ದರು.

ಅದೇನಾಯ್ತೋ ಒಂದು ರಾತ್ರಿ ಬೆಳಗಾಗುವುದರಲ್ಲಿ ಗಣೇಶ ಭಟ್ಟ ಹೊಳೆಯ ಈಚೆ ದಡದಲ್ಲಿ ಆಂಜನೇಯನ ಮೂರ್ತಿ ಪ್ರತಿಷ್ಠಾಪಿಸಿ ಬಿಡುತ್ತಾರೆ. ರಸ್ತೆ ಸಂಪರ್ಕ ಇದ್ದ ಈ ದೇಗುಲಕ್ಕೆ ದೊಡ್ಡ ಭಕ್ತ ಪರಿವಾರವೇ ಬೆಳೆದುಬಿಡುತ್ತದೆ. ಹೊಟ್ಟೆಪಾಡಿಗೆಂದು ಒಂದು ಸಣ್ಣ ಚಹ ದುಖಾನನ್ನೂ ಗಣೇಶ ಭಟ್ಟ- ಗಂಗಾ ಭಟ್ಟ ದಂಪತಿಗಳು ನಡೆಸುತ್ತಾರೆ. ಬರಬರುತ್ತ ಆ ಚಹಾದಂಗಡಿಯ ಅವಶ್ಯಕತೆಯೇ ಈ ದಂಪತಿಗಳಿಗೆ ಇರುವುದಿಲ್ಲ, ಆ ಪಾಟ ಕಾಣಿಕೆ-ದೇಣಿಗೆ ಬರುತ್ತದೆ. ಇಂಥ ಗಣೇಶ-ಗಂಗಾ ಭಟ್ಟರಿಗೆ ಈಗ ವಿವಾದದ ಸುಳಿಗೆ ಸಿಲುಕಿರುವ ಮೂರು ಗಂಡು ಸಂತಾನ. ಹಿರಿಯ ಮಗ ರಾಮಚಂದ್ರ ಬಂಗಾರಮಕ್ಕಿಯ ಧಾರ್ಮಿಕ ಬಿಸ್ನೆಸ್‌ನ ಕೇಂದ್ರವಾಗಿರುವ ಆಂಜನೇಯ ಗುಡಿಯ ಅರ್ಚಕ. ಎರಡೆಯವನೇ ಸ್ವಯಂಘೋಷಿತ 'ಗುರೂಜಿ' ಮಾರುತಿ ಎಂಬ ಅಧಿಕಾರಸ್ಥರ-ಹಣವಂತರ-ಪ್ರಭಾವಿಗಳ ಸಖ್ಯದ ಮಹಾಮಹಿಮ. ಮೂರನೆಯವನೇ ಈ ಸಂಸಾರಕ್ಕೀಗ ಖಳನಾಗಿ ಕಾಡುತ್ತಿರುವ ಉಂಡಾಡಿಪುಂಡ ಸಿದ್ಧಿ ವಿನಾಯಕ ಯಾನೆ ವಿನಾಯಕ ಭಟ್ಟ.

ಗಣೇಶ ಭಟ್ಟ ಭಾರ ಬಂದಾಗ ಥೇಟ್ ಮಂಗನಂತೆ ಚಂಗ-ಚಂಗನೆ ಕುಣಿಯುತ್ತಿದ್ದರು. ಈ ವಿಶಿಷ್ಟ ನೃತ್ಯವೇ ನೋಡುಗರಲ್ಲಿ ರೋಮಾಂಚನ ಮಾಡಿ ಭಯ-ಭಕ್ತಿ ಮೂಡಿಸುತ್ತಿತ್ತು, 1990ರ ದಶಕದಲ್ಲಿ ಗಣೇಶ ಭಟ್ಟರ ಕಾಲಿಗೆ ಗ್ಯಾಂಗರಿನ್ ಆಗುತ್ತದೆ. ಒಂದು ಕಾಲು ಕಟ್ ಮಾಡಲಾಗುತ್ತದೆ. ಆದರೂ ಆತ ಆವೇಶದಲ್ಲಿ ಒಂದೇ ಕಾಲಲ್ಲಿ ನೆಗೆದಾಡಿ ಭಕ್ತರ ಅಹವಾಲಿಗೆ ಸ್ಪಂದಿಸುತ್ತಿದ್ದ. ಆದರೆ ಕೊನೆ-ಕೊನೆಗೆ ಭಟ್ಟರ ಶಕ್ತಿ ಉಡುಗಿತು. ಭಾರ ಇಳಿಯಿತು. ಆಗವರು ಎರಡನೇ ಮಗ ಮಾರುತಿಗೆ ಭಾರದ ದೀಕ್ಷೆ ಕೊಡುತ್ತಾರೆ. ಹೀಗೆ ಈ ಮಾರುತಿಯನ್ನು ತನ್ನ ಉತ್ತರಾಧಿಕಾರಿ ಮಾಡಲು ಗಣೇಶ್ ಭಟ್ಟರಿಗೆ ಕಾರಣವೂ ಇತ್ತು, ನೆಟ್ಟಗೆ ಎಸ್ಸೆಸ್ಸೆಲ್ಸಿಯೂ ಪಾಸು ಮಾಡಲಾಗದ ಲಿಗಾಡಿ ಹನುಮನೆಂದೇ ಅಡ್ಡ ಹೆಸರು ಪಡೆದಿದ್ದ ಮಾರುತಿಯ ಕೀರುತಿ ಅಪ್ಪನನ್ನು ಚಿಂತೆಗೀಡುಮಾಡಿತ್ತು, ವೀರಾಂಜನೇಯನ ಆವಾಹನೆಯಿಂದಾದರೂ ಮಗ ಬದುಕಿಕೊಳ್ಳಲಿ ಎಂಬ ದೂರದೃಷ್ಟಿ ಅಪ್ಪನದಾಗಿತ್ತು, ಮತ್ತ್ಯಾವುದೇ ಕಸುಬು ಮಾಡಲಾಗದ ಮಾರುತಿಗೂ ಈ 'ಭಾರ'ದ ಬದುಕು ಅಪ್ಯಾಯಮಾನ ಅನಿಸಿತು.


ಗುರೂಜಿ ನಾಮಕರಣ

ಅಪ್ಪ ಇರುವಾಗಲೇ ದರ್ಶನದ ತರಬೇತಿ ಪಡೆದಿದ್ದ ಮಾರುತಿ ತುಂಬ ಚಾಲಾಕಿ. ಹೈಸ್ಕೂಲಿಗೆ ಹೋಗುವಾಗ ದೀವರ ಹುಡುಗಿಯೊಬ್ಬಳ ತಂಟೆಗೆ ಹೋಗಿ ಹೊಡೆತ ತಿಂದಿದ್ದು, ಡ್ರಾಪ್‌ಔಟ್ ಆಗಿ ಊರ ಜನರ-ಸ್ವಜಾತಿ ಹವ್ಯಕರ ನಿಂದನೆಗೆ ತುತ್ತಾಗಿದ್ದೆಲ್ಲ ಮರೆಸುವಂತೆ 'ದೈವ ಕಳೆ'ಯ ಗೆಟಪ್ ಆತ ಬಲುಬೇಗ ಪಡೆದುಕೊಂಡು ಬಿಟ್ಟ. ಈತನ ಮಹಿಮೆ ಅಕ್ಕ-ಪಕ್ಕದ ಸಾಗರ-ಸೊರಬ-ಶಿವಮೊಗ್ಗ-ಸಿದ್ದಾಪುರ ದಾಟಿ ಚಿಕ್ಕಮಗಳೂರು, ಮೈಸೂರು-ಬೆಂಗಳೂರಿಗೆಲ್ಲ ಹಬ್ಬಿತು. ಕಳ್ಳ ಹಣದ ಮತ್ತು ಬೆವರಿನ ಕಾಸಿನ ಎರಡು ವೆರೈಟಿ ಭಕ್ತ ಸಮೂಹ ಹರಿದು ಬರಲಾರಂಭಿಸಿತು. ಬಂಗಾರಮಕ್ಕಿಯ ವೀರಾಂಜನೇಯನ ಸನ್ನಿಧಿಯಲ್ಲಿ ಕುರುಡು ಕಾಂಚಾಣ ಹಗಲಿರುಳೂ ಕುಣಿಯ ತೊಡಗಿತು.

ಬಂಗಾರಮಕ್ಕಿಯ ಆಂಜನೇಯನ ಮುರುಕು ಗುಡಿಯ ದೆಸೆಯೇ ಬದಲಾಗಿ ಹೋಯ್ತು, ಗ್ರಾನೈಟ್‌ನ ದೇವಸ್ಥಾನ, ಪ್ರವಚನದ-ಭಾರದ ದೊಡ್ಡ ಹಾಲ್, ಆಸ್ತಿಕರ ಸೆಳೆದ ಗೋಪುರ ನಿರ್ಮಾಣವಾಯ್ತು, ಎಲ್ಲೆಲ್ಲಿಂದಲೋ ಜನ ಬಂದು ಮಾರುತಿ ಭಟ್ಟನ ಪಾದಕ್ಕೆ ಬಿದ್ದು ಕೈಗೆ ಸಿಕ್ಕಷ್ಟು ದುಡ್ಡು ಆತನ ಪೀಠ ಮುಂದಿಟ್ಟು ಹೋಗಹತ್ತಿದ್ದರು. ತಾನೊಬ್ಬ 'ಆಧ್ಯಾತ್ಮಿಕ ಗುರು' ಎಂಬ ಅಮಲು ಆತನ ತಲೆಗೇರಿತು. ಧಾರ್ಮಿಕ ದಂಧೆಗೆ ಅನುಕೂಲವಾಗುವಂಥ ಹೆಸರೊಂದನ್ನು ಇಟ್ಟುಕೊಳ್ಳುವ ಯೋಚನೆ ಬಂತು. ಮಲೆನಾಡಿಗೆ ಅಪರೂಪವಾದ ಬೆಂಗಳೂರು ಸ್ಟೈಲಿನ 'ಗುರೂಜೀ' ಮಾರುತಿಯ ಹೆಸರಿಗೆ ಸೇರಿಕೊಂಡಿತು. 'ಭಟ್ಟ' ಕಳಚಿ ಬಿತ್ತು, ಸ್ಥಳೀಯರು ಈತನ 'ಬದಲಾವಣೆ' ಕಂಡು ನಂಬಿಕೆ ಕಳಕೊಂಡರು. ಆದರೆ ಹೊರಗಿನವರು ಈತನ ಥಳಕು-ಬಳುಕಿನ ಸೆಳೆತಕ್ಕೆ ಸಿಲುಕಿ ತಂಡೋಪತಂಡವಾಗಿ ಬಂದು-ಹೋಗಹತ್ತಿದರು.

ಮಾರುತಿ ಗುರೂಜಿ ಮಹಿಮೆ ಅದ್ಯಾವ ಪರಿ ಹಬ್ಬಿತೆಂದರೆ, ನಿವೃತ್ತ ಜಡ್ಜ್‌ಗಳು, ಆಯಕಟ್ಟಿನ ಸರ್ಕಾರಿ ಅಧಿಕಾರಿಗಳು, ಪೊಲೀಸ್ ಪರಾಕ್ರಮಿಗಳು, ಕಪ್ಪು ಹಣದ ವ್ಯಾಪಾರಿ-ಕಂಟ್ರಾಕ್ಟರ್‌ಗಳು, ಹೆಡ್ಡ ಸಾಹಿತಿಗಳು, ಗೊಡ್ಡು ರಾಜಕಾರಣಿಗಳು, ಪೆದ್ದು ಸಿನಿಮಾ ತಾರೆಗಳು ಈತನ ಪಾದಸ್ಪರ್ಶ ಬಯಸಿ ಬರಲಾರಂಭಿಸಿದರು. ಪೇಜಾವರ


ರಾಮಚಂದ್ರ ಭಟ್


ಗಣೇಶ್ ಭಟ್


ಸಿದ್ದಿ ವಿನಾಯಕ ಭಟ್



ಪ್ರಳಯಾಂತಕಿ ಪದ್ಮಾ ಪುರಾಣ!!

ಬಂಗಾರಮಕ್ಕಿ ದೇವ ಮಾನವನ ಫ್ಯಾಮಿಲಿ ಸೊಸೆ ನಯನಾ ಭಟ್ ನಾಪತ್ತೆಯಾದಾಗಲೇ ಮಲೆನಾಡು-ಕರಾವಳಿಯ ಇಡೀ ಹವ್ಯಕ ಸಮುದಾಯಕ್ಕೆ ಆಕೆ ಮಹಾ ವಂಚಕಿ-ರಂಗೀಲಾ ರಾಘು ಸ್ವಾಮಿಯ 'ಪರಮ ಭಕ್ತೆ' ಪದ್ಮಾಭಟ್ಟಳ ಕ್ಯಾಂಪ್ ಸೇರಿದ್ದಾಳೆಂಬುದು ಗೊತ್ತಾಗಿಹೋಗಿತ್ತು, ಇದಕ್ಕೆ ಕಾರಣವೂ ಇತ್ತು, ಹವ್ಯಕ ಬ್ರಾಹ್ಮಣರ


ಪದ್ಮಾ

ಏಕಮೇವಾದ್ವಿತೀಯ ಗುರುವರ್ಯ ತಾನೊಬ್ಬನೇ ಎಂಬ ಪಿತ್ಥ ನೆತ್ತಿಗೇರಿಸಿಕೊಂಡಿದ್ದ ರಾಘುಗೆ ಸ್ವ-ಜಾತಿ ಜನರ ನಡುವೆ ಬಂಗಾರಮಕ್ಕಿ ಭಾರದ ಭೂಪ ಮಾರುತಿ ಜನಪ್ರಿಯ ಆಗುತ್ತಿರುವುದು ಹೊಟ್ಟೆಯುರಿಸಿತ್ತು, ಒಂದು ಕಾರ್ಯಕ್ರಮಕ್ಕೆ ರಾಘುನನ್ನು ಕರೆಸಿದ್ದ ಮಾರುತಿ ಭಟ್ಟ ತಾನು ಆತನ ಪೀಠಕ್ಕಿಂತ ಎತ್ತರದ ಆಸನದಲ್ಲಿ ಕುಂತು ಕಂಗೊಳಿಸಿದ್ದು, ಸಮ್ಮೋಹಕ ಧಾರ್ಮಿಕ ಪ್ರವಚನ ಬಿಗಿದಿದ್ದು ರಾಘುನ ಕಂಗಾಲಾಗಿಸಿ ಬಿಟ್ಟಿತ್ತು, ಅತ್ತ ಬಂಗಾರಮಕ್ಕಿ ಕ್ಷೇತ್ರ ಕಮರ್ಷಿಯಲ್ ಆಗಿ ಬೆಳೆದಂತೆ ಇತ್ತ ರಾಘುನಲ್ಲಿ ಅಸೂಯೆ ಮೂಡಿಸಿತ್ತು. ಮಾರುತಿಯ ಹಲವು ಪ್ರಾಜೆಕ್ಟ್‌ಗಳಿಗೆ ಆತ ಅಡ್ಡಗಾಲೂ ಹಾಕಿದ್ದ.

ನಯನಾ ಭಟ್ ರಾಘುನ ಷಡ್ಯಂತ್ರ ತಂಡದ ಸಕ್ರಿಯ ಸದಸ್ಯೆ ಪದ್ಮಾ ಭಟ್ಟಳ ಅಡ್ಡೆಯಲ್ಲಿ ಕಾಣಿಸಿದಾಗ ಬಂಗಾರಮಕ್ಕಿ ಕ್ಷೇತ್ರ ಮಹಾತ್ಮೆ ಹಿಂದೆ ರಾಘುನ ಕ್ರಿಮಿನಲ್ ತಂತ್ರಗಾರಿಕೆ ಇರುವ ಅನುಮಾನ ಹವ್ಯಕರಿಗೆ ಬಂದಿತ್ತು, ರಾಘು ತನ್ನ ಸಂಸಾರದ ಸಂಘರ್ಷ ಬಳಸಿಕೊಳ್ಳುವ ಭಯ ಮಾರುತಿಗೂ ಇತ್ತು, ಹಾಗಾಗಿ ಆತ ರಾಘುಗೆ ಫೋನಾಯಿಸಿ 'ನಿಜ ಸ್ಥಿತಿ' ಹೇಳಿದ್ದ. ಇದನ್ನು ರಾಘು ಪದ್ಮಾಗೆ ಹೇಳಿದ್ದಾನೆ. ಅದೇ ಹೊತ್ತಿಗೆ ಮಠ ಮಾಫಿಯಾದಲ್ಲಿ ಪರಿಚಯವಾಗಿದ್ದ ಪತ್ರಕರ್ತೆ ಪದ್ಮಾಳನ್ನು ಗಣೇಶ್ ಸಂಧಿಸಿದ್ದಾನೆ. ನಯನಾಳನ್ನು ಬಳಸಿಕೊಂಡು ಬ್ಲ್ಯಾಕ್‌ಮೇಲ್ ಆಟ ಬಂಗಾರಮಕ್ಕಿ ಅಂಗಳದಲ್ಲಿ ಆಡಲು ಇಬ್ಬರೂ ಸ್ಕೆಚ್ ಹಾಕಿದ್ದಾರೆ. ಈ ಘನಕಾರ್ಯಕ್ಕೆ ಗುರುಗಳು ಆಶೀರ್ವಾದ ಮಾಡಿದ್ದಾರೆ.

ಕೆಲವು ಟಿವಿ ಚಾನೆಲ್‌ಗಳಲ್ಲಿ ಮಾರುತಿ ಭಟ್ಟನ ಭಂಡಾಟದ ಎಪಿಸೋಡುಗಳು ಪ್ರಸಾರವಾದಾಗ ಆತ ರಾಘು ಸ್ವಾಮಿಯ ಪ್ರತಿಸ್ಪರ್ಧಿ ಎಂಬಂತೆ ಚಿತ್ರಿಸಲಾಯ್ತು, ಮಾರುತಿ ಭಟ್ಟ ರಾಮಚಂದ್ರಾಪುರ ಮಠದ ಪೀಠದ ಮೇಲೆ ಕಣ್ಣಿಟ್ಟಿದ್ದಾನೆಂದು ಬಿಂಬಿಸಲಾಯ್ತು. ಸುಳ್ಳು ಹೇಳುವುದಕ್ಕೂ ಮಿತಿ ಬೇಡವಾ. ಮಾರುತಿ ಗುರೂಜಿ ಸಂಸಾರಿ. ಸಣ್ಣ ಪ್ರಾಯದ ಹುಡುಗಿ ದೊಡ್ಡವಳಾಗುವ ಮೊದಲೆ ಮದುವೆಯಾಗಿರುವಾತ. ಆ ಹುಡುಗಿಯ ಅಪ್ಪನ ಆರ್ಥಿಕ ಅಡಚಣೆ ಬಳಸಿಕೊಂಡು ಲವ್ ಕಂ ಅರೆಂಜ್ ಮದುವೆ ಆಗಿರುವಾತ. ಇಂಥ ಸಂಸಾರಿ ಸನ್ಯಾಸಿ ಪೀಠವಾದ ರಾಮಚಂದ್ರಾಪುರಮಠಕ್ಕೆ ನೆಗೆವ ಸಾಧ್ಯತೆಯಾದರೂ ಇದೆಯಾ? ವಿಚಾರವಂತರಲ್ಲದ ಬುದ್ಧಿವಂತ ಹೈಗರಲ್ಲಿ ಮಾರುತಿ ರಾಘು ಸ್ವಾಮಿಯ ಶತ್ರು ಎಂದು ಬಿಂಬಿಸಲು ಪ್ರಳಯಾಂತಕಿ ಪದ್ಮಾ ಮಾಡಿದ ಹಿಕಮತ್ತಿದು.


ರಾಘವೇಶ್ವರ

ಪದ್ಮಾಭಟ್ಟ ರಾಘು ಸ್ವಾಮಿಯನ್ನು ತಾರೀಫು ಮಾಡಲು ತನ್ನ ಬಕೆಟ್ ಮಾಸ ಪತ್ರಿಕೆಯಲ್ಲಿ ರೀಮುಗಟ್ಟಲೆ ಅಸಹ್ಯ-ಅಸತ್ಯಗಳನ್ನೇ ಬರೆದಿದ್ದಳು. ಪ್ರೇಮಲತಾ ಮತ್ತಾಕೆಯ ಮದುವೆಗೆ ಬಂದ ಹೆಣ್ಣು ಮಕ್ಕಳ ಶೀಲವನ್ನು ಕೆಟ್ಟದಾಗಿ ಚಿತ್ರಿಸಿದ್ದಳು. ತಾನೊಬ್ಬ ಹೆಣ್ಣೆಂಬುದನ್ನು ಮರೆತು ಆಕೆ ನೀಲಿ ಪತ್ರಿಕೆಯಲ್ಲಿ ಬರುವಂಥ ವರದಿಗಳನ್ನು ಅಚ್ಚಿಸಿ ಪ್ರೇಮಲತಾ ಮತ್ತು ಸ್ವಾಮಿ ಸಂಬಂಧ ಬಗ್ಗೆ ಗೀಚಿದ್ದಳು. ರಾಘು ಸುಬಗನೆಂದು ತೋರಿಸಲು ಆಕೆ ಬರೆದ ಒಂದೊಂದು ಘಟನೆಯೂ ರಾಘು ಪೀಠದ ಮೇಲೇ ಜಾರಿದ್ದಾನೆಂಬುದು ಸಾರಿಸಾರಿ ಹೇಳುತ್ತಿದ್ದವು; ಪ್ರೇಮಲತಾರ ಮೇಲೆ ಕಾವಿ ಹಾಕಿಕೊಂಡೇ ರಾಘು ಅತ್ಯಾಚಾರ ಎಸಗಿದ್ದಾನೆಂಬುದು ಸಾಬೀತಾಗುತ್ತಿತ್ತು. ಆದರೆ ಆಕೆ ಈ ರೇಪ್‌ಕೇಸ್‌ನಲ್ಲಿ ಗುರುಗಳಿಗೆ ಮಕಮಲ್ ಟೋಪಿ ಹಾಕಿ ಕೆಲವು ತಿಂಗಳ ಚೈನಿಗೆ ಹಣ ಮಾಡಿಕೊಂಡಿದ್ದಳು.

ಆಕೆಯ ಜಾಯಮಾನವೇ ವಂಚನೆಯದು. ಆಕೆ ಪುರಾತನ ಮೋಸಗಾತಿ. ರಾಜಧಾನಿ ಎಕ್ಸ್‌ಪ್ರೆಸ್ ಎಂಬ ಎತ್ತುವಳಿ ಕರಪತ್ರದ ಸಂಪಾದಕಿಯಾಗಿ ಆಕೆ ಅವತರಿಸಿದ್ದೇ ತನ್ನ ಸುಲಿಗೆಗೆ ಅನುಕೂಲವಾಗಲೆಂದು. ಬಕೀಟು ಹಿಡಿಯಲು ದಾರಿ ಯಾವುದೆಂದು ಸದಾ ಚಿಂತಿಸುವ ಈಯಮ್ಮ ಬೆಂಗಳೂರಿನ ಕೆಂಗೇರಿ ಏರಿಯಾದಲ್ಲಿ ಕುಖ್ಯಾತಳು. ಸೈಟು ಕೊಡಿಸುತ್ತೇನೆಂದು ಹಲವರಿಗೆ ಟೋಪಿ ಹಾಕಿದ್ದ ಪದ್ಮಾ ಈ ಪ್ರಕರಣದಲ್ಲಿ ಜೈಲಿಗೂ ಹೋಗಿಬಂದಿರುವಾಕೆ! ಈಕೆಯ ಒಂದೊಂದು ಎತ್ತುವಳಿ-ವಂಚನೆ-ಮೋಸದ ಪ್ರಕರಣವೂ ಭೀಭತ್ಸವಾಗಿದೆ. ಇಂಥ ಸ್ವಾಮಿ ಸಖಿಯ ಮಾತು ನಂಬಿ ಟಿವಿ ಚಾನೆಲ್‌ನ ಬುದ್ಧಿವಂತರು ಬೇಸ್ತು ಬಿದ್ದಿದ್ದು ಮಾತ್ರ ಮೋಜಾಗಿದೆ!

...ಲೀಜು ಗಣೇಶನ ಪಾತ್ರ ಪರಿಚಯ!!

...ಂಗಾರಮಕ್ಕಿ ದೈವ ಸನ್ನಿಧಿಯ ಸಂಸಾರದ ಸೊಸೆ ನಯನಾ ಭಟ್ ಎಲ್ಲ ...ಏನೂ ಇಲ್ಲದಂತೆ ಚಡಪಡಿಸಿದ ಹೆಣ್ಣು. ನಯನಾಳ ಗಂಡ ರಾಮಚಂದ್ರ ತಮ್ಮ ಗುರೂಜಿ ಹಾಕಿದ ಗೆರೆದಾಟದ ಪರಮ ಪೆದ್ದ. ಹೆಂಡತಿಗೆ ...ರುವುದೇನೆಂಬುದು ಪತ್ತೆ ಹಚ್ಚಲಾಗದೇ ಬದುಕಲ್ಲಿ ಸೋತ ಆತನಿಗೆ ...ನಕ್ಕೆ ಕಾಸು-ಓಡಾಟಕ್ಕೆ ಗಾಡಿ ಕೊಟ್ಟರೆ ಅಷ್ಟಕ್ಕೇ ಸಂತೃಪ್ತ. ಇತ್ತ ...ಲ್ಲಿ ಮೈದುನ ಮತ್ತಾತನ ಹೆಂಡತಿಯದೇ ದರ್ಬಾರು. ಅತ್ತೆ ಕಾಲದಲ್ಲಿ ...ತೊಂದರೆ ಅನುಭವಿಸಿದ್ದಾಳೆ. ಅತ್ತೆ ಗಂಗಾ ಭಟ್ ಸೊಸೆ ತನಗೆ ವಿಷ ಮಾಡಿಸಿದ್ದಳೆಂದು ಹಿಂದೊಮ್ಮೆ ಕೇಸೂ ಮಾಡಿದ್ದರು. ಮನೆಯಲ್ಲಿ ಸುಖ-ಸೌಲಭ್ಯ ಹೆಚ್ಚಾದಂತೆ ನಯನಾ ಒಂಟಿಯಾಗಿ ಒದ್ದಾಡಿದ್ದಾಳೆ.

...ದನ್ನು ಮೊದಲು ಗುರ್ತಿಸಿದವನು ಆಕೆಯ ಸಣ್ಣ ಮೈದುನ ಸಿದ್ಧಿ ...ಯಕ. ಅಂಥ ಕಲೆ ಆತನಿಗೆ ಸಿದ್ಧಿಸಿದೆ. ಆ ನಂತರ ನಯನಾಳಿಗೆ ಆಸರೆ ...ನು ಸಂಘ ಪರಿವಾರದ ಉಂಡಾಡಿಪುಂಡ ಎಚ್.ಆರ್. ಗಣೇಶ್. ಈತ ...ಳಿಗೆ ದೂರದ ಸಂಬಂಧಿಯೂ ಹೌದು. ಬಂಗಾರಮಕ್ಕಿ ಕ್ಷೇತ್ರದ ಫಂಕ್ಷನ್‌ಗಳಲ್ಲಿ ಕೇಸರಿ ಶಾಲು ಹಾಕಿ ಓಡಾಡಿದ ಟ್ರಾಕ್ ರೆಕಾರ್ಡ್ ...ನದು. ನಿಧಾನಕ್ಕೆ ಚಂಚಲೆ ನಯನಾಳಿಗೆ ಹತ್ತಿರವಾದ ಈತ ಆಕೆ ...ತ ಕ್ಲಾಸಿಗೆ ಬಿಡಲು ಹೋಗುತ್ತಿದ್ದ. ಆ ವಂಚಕ ಸಾಂಗತ್ಯಕ್ಕೆ ಅರಿವಿಲ್ಲದೆ ...ನಯನಾ ಇಲ್ಲಿಗೆ ಮೂರು ವರ್ಷದ ಹಿಂದೂ ಒಮ್ಮೆ ಬ್ಯೂಟಿಪಾರ್ಲರ್-...ತೊಲಿಗೆ ಕಸುಬು ಕಲಿಯುತ್ತೇನೆಂದು ಮನೆಬಿಟ್ಟು ತಿಂಗಳುಗಟ್ಟಲೆ ...ಯಾಗಿದ್ದಳು. ಆಗ ಗಣೇಶನೇ ಈಕೆಯನ್ನು ಕುಮಟಾದ ಬಗ್ಗೋಣ ... ಕಟ್ಟಿಗೆ ಅಡ್ಡೆಯ ಮನೆಯೊಂದರಲ್ಲಿ ಪೇಯಿಂಗ್ ಗೆಸ್ಟಾಗಿ ಇಟ್ಟಿದ್ದ. ಆ ...ಮೊಡತಿ ಈತನ 'ಲೀಲೆ' ಚೆನ್ನಾಗಿ ವಿವರಿಸುತ್ತಾಳೆ.

... ತಪ್ಪು ಆಗ ರಾಮಚಂದ್ರ ಭಟ್ ಮನ್ನಿಸಿ ಹೆಂಡತಿಯನ್ನು ಮನೆ ...ಕೊಂಡಿದ್ದರು. ಹಿರಿಯರಿಂದ ಬುದ್ಧಿವಾದ ಹೇಳಿಸಿದ್ದರು. ಪ್ರತ್ಯೇಕ ಸಂಸಾರ ...ವುದಕ್ಕೂ ಗಂಡ ಒಪ್ಪಿದ್ದರು. ಮೈದುನನ ಮನೆಯಲ್ಲಿರಲು ನಯನಾ ಒಪ್ಪುತ್ತಿಲ್ಲವೆಂದು ಪಂಚರು ಹೇಳಿದಾಗ ಅದಕ್ಕೆ ಸಮ್ಮತಿಸಿದ್ದ. ಅಷ್ಟೇ ಅಲ್ಲ, ವಿಚ್ಛೇದನ ಬೇಕಿದ್ದರೂ ಕೊಡುತ್ತೇನೆ ಆದರೆ ಸರಿಯಾದ ದಾರಿಯಲ್ಲಿ ಹೋಗು ಅಂದಿದ್ದರು. ಪದೇಪದೇ ಹೇಳದೇಕೇಳದೆ ಹೊಸಿಲು ದಾಟಿ ಕುಟುಂಬದ ಮರ್ಯಾದೆ ಕಳಬೇಡ ಅಂದಿದ್ದರು. ಆಕೆ ಸರಿದಾರಿಗೆ ಬಂದಂತೆ ಗಣೇಶ್ ಅಡ್ಡದಾರಿಗೆ ಇಳಿಸುತ್ತಿದ್ದನೆಂದು ಮಾರುತಿ-ರಾಮಚಂದ್ರ ಅಲವತ್ತುಕೊಳ್ಳುತ್ತಾರೆ.


ಗಣೇಶ್

ಕಳೆದ ಜುಲೈನಲ್ಲಿ ನಯನಾ ತಾನೊಬ್ಬಳೇ ಮುಗ್ವಾದ ಸುಬ್ರಹ್ಮಣ್ಯ ದೇವಾಲಯಕ್ಕೆ ಹೋಗಲು ಸಿದ್ಧವಾಗಿದ್ದಳು. ಏನೋ ಅನುಮಾನ ಬಂದು ಗಂಡ ಜತೆಗೇ ಹೋಗಿದ್ದ. ನಡುರಸ್ತೆಯಲ್ಲಿ ಬಿಜೆಪಿಯ ದನ ಹಿಡಿಯುವ ಗ್ಯಾಂಗಿನ ಫಂಟರ್ ಗಣೇಶ್ ಗಂಡ-ಹೆಂಡತಿಗೆ ಅಡ್ಡ ಹಾಕಿದ್ದಾನೆ. "ನಿನ್ನ ಹೆಂಡತಿ ನನ್ನತ್ರ ಒಂದು ಲಕ್ಷ ರೂ. ತಗೊಂಡಿದ್ದಾಳೆ... ನೀನು ಕೊಡು.... ಇಲ್ಲದಿದ್ರೆ ಹೆಂಡ್ತಿ ಕಳ್ಸು...." ಎಂದು ತನ್ನ ಸಂಘ ಪರಿವಾರದ ಸಂಸ್ಕಾರ ಪ್ರದರ್ಶಿಸಿದ್ದಾನೆ. ಸಿಟ್ಟಿಗೆದ್ದ ಗಂಡನಿಗೆ ನಯನಾಳೇ ಸಮಾಧಾನಮಾಡಿದ್ದಾಳೆ. ಇಷ್ಟು ಕೆಟ್ಟ ಮಾತಾಡಿದ ನೀಚ ಗಣೇಶನನ್ನು ಆಕೆ ಸಹಿಸಿಕೊಂಡಿದ್ದು ಅನೇಕ ಅನುಮಾನ ಮೂಡಿಸುತ್ತದೆ! ಈ ಪ್ರಕರಣದಲ್ಲಿ ಚೆಡ್ಡಿ ಪರಿವಾರದ ಪಂಚಾಯ್ತಿಕೆ ಬಿಸ್ನೆಸ್‌ನ ಫಂಟರ್‌ಗಳು ಬಂಗಾರಮಕ್ಕಿ ಕ್ಷೇತ್ರಕ್ಕೆ ನುಗ್ಗಿದ್ದೂ ಇದೆ.

ಸಂಘ ಪರಿವಾರದ ಅನೈತಿಕ ಪೊಲೀಸ್‌ಗಿರಿಯ ಭಂಡ ಈ ಗಣೇಶ. ಬಿಜೆಪಿ-ಸಂಘ ಪರಿವಾರ ಪ್ರಣೀತ ಹಿಂದೂತ್ವದ ಹೊಡೆಪೆಟ್‌ನಲ್ಲಿ ಈತ ಮುಂಚೂಣಿಯಲ್ಲಿರ್ತಾನೆ. ಈತನ ಬಳಿ ಬೇರೆ-ಬೇರೆ ಕಂಪನಿಯ 16-20 ಸಿಮ್‌ಗಳಿವೆ. ನಯನಾ ಬಳಸುವ ಸಿಮ್ ಯಾವುದೋ ಕ್ರಿಶ್ಚಿನ್ ಆಸಾಮಿ ಹೆಸರಲ್ಲಿದೆ ಅಂತಾರೆ ಆಕೆಯ ಗಂಡ. ಈ ಸಿಮ್‌ಗಳಿಂದ ಆತ ಬ್ಲ್ಯಾಕ್‌ಮೇಲ್ ಬಿಸ್ನೆಸ್ ನಡೆಸುತ್ತಾನೆ. ಹೊಸಾಕುಳಿ ಕಡೆಯ ಗಣೇಶ್ ಕುಟುಂಬ ಜಲವಳ್ಳಿ ಬಳಿ ತೋಟ ಮಾಡಿಕೊಂಡಿದೆ. ಈತನ ತಾಯಿ... ತೋಟಗಾರಿಕೆ ಮಾಡಿದರೆ ಮಗ ... ಕರವೇ ಸೇವಾದುರಂಧರನ ಗೆಟಪ್‌ನಲ್ಲಿ ಅಂಡಲೆದು ... ಕಳೆಯುತ್ತಾನೆ.

ಪಾಪದ ಹೆಂಗಸು ನಯನಾಳ ಬ್ರೈನ್‌ವಾಶ್ ಮಾಡಿ ಬೆಂಗಳೂರಲ್ಲಿ ಬ್ಯೂಟಿ ಪಾರ್ಲರ್ ಹಾಕಿಕೊಡುವ ಆಸೆ ಹುಟ್ಟಿಸಿ ಮನೆ-ಗಂಡ-ಮಗಳನ್ನು ಬಿಟ್ಟು ಬರುವಂತೆ ಮಾಡಿದ್ದೇ ಈ ದಗಲ್‌ಬಾಜಿ ಗಣೇಶನೆಂದು ಆಕೆಯ ತವರುಮನೆಯವರೂ ಬೇಸರಿಸುತ್ತಾರೆ. ತಮ್ಮ ವಿನಾಯಕ ಮತ್ತು ತಾಯಿ ಗಂಗಾ ಭಟ್‌ರ ಆಸ್ತಿ ಹೊಡೆತದಿಂದ ಹೈರಾಣಿದ್ದ ಮಾರುತಿ ಗುರೂಜಿಯನ್ನು ಅದೇ ಹೊತ್ತಲ್ಲಿ ಹಣಿಯಲು ಗಣೇಶ ನಯನಾಳನ್ನು ಅಸ್ತ್ರ ಮಾಡಿಕೊಂಡಿದ್ದಾನೆ. ನಯನಾ ನಿಜಕ್ಕೂ ಅಡಕತ್ತರಿಯಲ್ಲಿ ಸಿಕ್ಕ ಹೆಣ್ಣು ಮಗಳಂತೆ ಕಾಣಿಸುತ್ತಾಳೆ. ತಾನು ಗಂಡನ ಮನೆಯಲ್ಲಿ ಅನುಭವಿಸಿದ ತೊಂದರೆಯನ್ನು ಶಿವರಾಜ್ ಮಾಸ್ತರ್ ಮತ್ತು ಎಸ್.ಜೆ. ಕೈರನ್ ಮಾಸ್ತರ್‌ನೆ ಪತ್ರ ಬರೆದು ತಿಳಿಸಿದೇನೆಂದು ನಯನಾ ಪೊಲೀಸ್ ಹೇಳಿಕೆಯಲ್ಲಿ ತಿಳಿಸಿದ್ದಾಳೆ. ಬಂಗಾರಮಕ್ಕಿ ದೇವಧೂತನ ಕುಟುಂಬದ ಸಮಸ್ಯೆಗೂ ಈ ಇಬ್ಬರಿಗೂ ಏನು ಸಂಬಂಧ? ಇಂಥದೊಂದು ಚರ್ಚೆ ಈಗ ನಡೆದಿದೆ. ಬೇಡದ ಆಕ್ಷೇಪಾರ್ಹ ಎಲಿಮೆಂಟ್‌ಗಳು ಗುರೂಜಿ ಫ್ಯಾಮಿಲಿಯಲ್ಲಿ ಮೂಗು ತೂರಿಸಿದ್ದಾರೆಂಬುದೇ ದುರಂತಕ್ಕೆ ದಾರಿಯಂತಿದೆ. ದೇವರ ಹೆಸರಲ್ಲಿ ಹರಿದುಬರುವ ಪಾದದ ಹಣವೇ ಸಕಲ ಅನಾಹುತಕ್ಕೆ ಮೂಲ!

ರಾಮಚಂದ್ರ ಭಟ್ ಇವತ್ತಿಗೂ ತನಗೆ ಹೆಂಡತಿ ಬೇಕು ಅಂತಿದ್ದಾರೆ. ಆಗಿದ್ದು ಆಯ್ತು, ಇನ್ನಾದರೂ ಆಕೆ ತಪ್ಪು ತಿದ್ದಿಕೊಂಡು ಬಂದರೆ ಮನೆ ತುಂಬಿಕೊಳ್ತೇನೆ ಅಂತಾರೆ. ನನ್ನ ಎರಡು ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ತಾನು ಎಲ್ಲ ಕಹಿಯನ್ನೂ ನುಂಗಿ ನಗುತ್ತೇನೆ ಎನ್ನುವ ರಾಮಚಂದ್ರ ಭಟ್ ಸಂಸಾರ ಹಳಿ ಮೇಲೆ ಬರಲೆಂದೇ 'ಪತ್ರಿಕೆ' ಬಯಸುತ್ತದೆ. ನಿಜಕ್ಕೂ ರಾಮಚಂದ್ರ ಭಟ್ ಶ್ಲಾಘನಾರ್ಹರು!


ನಿರ್ಮಾಣ ಹಂತದಲ್ಲಿರುವ ಲಾಡ್ಜ್‌ಗಳು

...ಯಿಂದ ಸ್ವರ್ಣವಲ್ಲಿ ಸ್ವಾಮಿತನಕ, ಯಡ್ಡಿ-...ಯಿಂದ ಸುತ್ತಲಿನ ಸಂಸದರು-ಶಾಸಕರವರೆಗಿನ ...ಗಳು ಗುರೂಜಿ ಶಿಷ್ಯರಾಗಿ ಹೋದರು. ಊರಿಗೆಲ್ಲ ... ಹೇಳುವ ದೊಡ್ಡ ಪತ್ರಕರ್ತರೂ ಗುರೂಜಿಯಿಂದ ... ಹೊದಿಸಿಕೊಂಡು ಆತನ ಧಾರ್ಮಿಕ-ಸಾಂಸ್ಕೃತಿಕ ...ಹಿರಿದಿನ ಕೊಂಡಾಡಿ ಕೃತಾರ್ಥರಾದರು. ಗುರೂಜಿಯ ... ಆಸೆಗೆ ರಾಷ್ಟ್ರ ಪ್ರಶಸ್ತಿ ವಿಜೇತರೂ ಮೂರೂ ... ಚಾಕರಿಗೆ ನಿಂತರು.

ಕೋಟಿ ಕೋಟಿ ಆಸ್ತಿ!!

...ರೂಜಿಯ ಗೋಲ್‌ಮಾಲ್ ಧಾರ್ಮಿಕ ದಂಧೆ ...ಯಾಗಿ ಬೆಳೆಯಿತು. ತರಹೇವಾರಿ ವಾಹನಗಳು ...ವ್ರ. ಐಷಾರಾಮಿ ಫಾರ್ಚೂನರ್ ಕಾರಲ್ಲೇ ಮಾರುತಿ ... ಶುರುವಾಯ್ತು. ಅಣ್ಣ-ತಮ್ಮಂದಿರಿಗೂ ದುಬಾರಿ ... ತಾಯಿ-ಹೆಂಡಂದಿರಿಗೆ ಬಡ ಗಣೇಶ ಭಟ್ಟನ ... ನೂರಾರು ಗ್ರಾಮ್ ಬಂಗಾರ-ಸಿಂಗಾರ ಮಾಡಿಸಿ 20-25 ಎಕರೆ ಅಡಿಕೆ ತೋಟ ಕೊಂಡುಕೊಂಡರು. ...ಸು ಭೂಮಿ ಕಬಳಿಸಿದರು. ಗೇರುಸೊಪ್ಪೆಯ ಕಾಡಲ್ಲಿ ..., ಛತ್ರಗಳು, ಅನ್ನ ಛತ್ರ, ಸಿಬಿಎಸ್‌ಇ ಶಾಲೆ ...ನೋಡುತ್ತಿದ್ದಂತೆ ತಲೆ ಎತ್ತಿತು. ಇವುಗಳಲ್ಲಿ ಹಲವು ...ಗಳಿಗೆ ಪರವಾನಗಿಯೇ ಇಲ್ಲ. ಮಾರುತಿ ಗುರೂಜಿ ...ಯ ಕನ್ನಡಕದ ಚೌಕಟ್ಟು ಬಂಗಾರದಿಂದ ...ಸತೊಡಗಿತು. ದೂರದ ಸೊರಬದಲ್ಲಿ ಸಮೃದ್ಧ ... ತೋಟ ಖರೀದಿಯಾಯ್ತು.

...ನೊಬ್ಬ ಸಮಾಜಮುಖಿ ಧರ್ಮಗುರು ಎಂದು ... ಬಿಡುತ್ತಲೇ ಸ್ವಾಹಾ ಮಾರುತಿ ಗುರೂಜಿ ನಡೆಸಿದ್ದ. ...ಾಡು ಉತ್ಸವ' ಎಂದಾತ ಶುರು ಹಚ್ಚಿ ಕೊಂಡಿದ್ದ ...ಕ ವಿಶ್ವ... ಅದು ... ...ಸುವ ಅಡ್ಡಸುಬಾಗಿತ್ತು, ಒಳಗಿನ ಉದ್ದೇಶ ಅರಿಯದ ... ಈ ಉತ್ಸವಕ್ಕೆ ... ಮುಗಿಸಿಗೊಂಡರು. ... ಇಲ್ಲದೆ ಸೆಂಟ್ರಲ್ ... ಶಾಲೆ ... ಮಾರುತಿ ಗುರೂಜಿ ... ಅಲ್ಲಿಗೆ ... ...!

...

ಎಕರೆಗಟ್ಟಲೆ ಕೃಷಿ ಜಮೀನು ಖರೀದಿಸಿ ತಾಯಿ-ಅಣ್ಣ-ತಮ್ಮ- ಹೆಂಡತಿ-ಅತ್ತಿಗೆ ಹೆಸರಲ್ಲಿ ಮಾಡಿದ್ದಾನೆ. ಇದು ಕೃಷಿ ಉತ್ಪನ್ನ ತೋರಿಸುವ ಹಿಕಮತ್ತು. ಸೊರಬ ಮತ್ತು ಗೇರುಸೊಪ್ಪೆಯಲ್ಲಿರುವ ಜಾಗ-ಜಮೀನುಗಳೇ ಇವತ್ತು ಮಾರುತಿ ಭಟ್ಟನ ತುಂಬು ಕುಟುಂಬ ಒಡೆದು ಬೀದಿ ಬದಿಯ ಚರ್ಚೆಗೆ ಕಾರಣವಾಗಿದೆ. ಖಾಸಗಿ-ಸರ್ಕಾರಿ ಜಾಗವನ್ನೆಲ್ಲ ಸೇರಿಸಿಕೊಂಡು ದೊಡ್ಡದೊಂದು 'ಭಾರದ ವಸಾಹತು' ಸ್ಥಾಪಿಸಿಕೊಂಡಿರುವ ಮಾರುತಿ ಗುರೂಜಿ ಪರಿವಾರ-ಸಲಹೆಗಾರರು ರಾಮನ ಲೆಕ್ಕಕ್ಕಿಂತ ಕೃಷ್ಣನ ಖರ್ಚು-ವೆಚ್ಚ ತೋರಿಸುವ ನಿಪುಣರು.

ಅವನು ಸಿದ್ಧಿ ವಿನಾಯಕ!!

ಧಾರ್ಮಿಕ-ದುಡ್ಡಿನ ಸಾಮ್ರಾಜ್ಯ ಬೆಳೆದಂತೆಲ್ಲ ಮಾರುತಿ ಭಟ್ಟನ ಸಂಸಾರದ ನೆಮ್ಮದಿ ಎಂಬುದು ಕದಡಿಹೋಯ್ತು. ಆತನ ಅಣ್ಣ ರಾಮಚಂದ್ರನ ಹೆಂಡತಿ ಗಂಗೂಬಾಯಿ ಯಾನೆ ನಯನಾಗೆ ಬಂಗಾರದ ಪಂಜರದಲ್ಲಿ ಬೋರಾಯ್ತು. ಆತ್ಮ ಸಂಗಾತಿಯನ್ನು ಅರಸುತ್ತ ಆಕೆ ಕಳೆದ ಮೂರ್‍ನಾಲ್ಕು ವರ್ಷದಿಂದ ಹೊಸಿಲು ದಾಟಲು ಹಲವು ಪ್ರಯತ್ನ ಮಾಡುತ್ತಲೇ ಇದ್ದಳು. ತಾಯಿ ಗಂಗಾ ಭಟ್ಟರಿಗೆ ಮೊದಲಿನೆರಡು ಮಕ್ಕಳ ಧನಾಧಾರಿತ ಧರ್ಮ-ಕರ್ಮ ರೇಜಿಗೆ ಹುಟ್ಟಿಸಿತು. ತನ್ನ ಮುದ್ದು ಮಗ ಸಿದ್ಧಿ ವಿನಾಯಕನಿಗೆ ಅಣ್ಣಂದಿರು ಮೋಸ ಮಾಡುತ್ತಿದ್ದಾರೆ ಅನ್ನಿಸಿ ಸಿಟ್ಟು ಬಂತು. ದುಡ್ಡು ಮಾಡುವ ಭರದಲ್ಲಿ ಗುರೂಜಿ ತಾಯಿಯನ್ನು ಆತನಿಗೆ ಗೊತ್ತಿಲ್ಲದೇ ಕಡೆಗಣಿಸತೊಡಗಿದರು. ತಾಯಿ ಗಂಗಾಗೂ ಅದ್ಯಾಕೋ ಮೂವರೂ ಒಂದೇ ಬಳ್ಳಿಯ ಹೂವುಗಳು ಅನ್ನಿಸುತ್ತಲೇ ಇರಲಿಲ್ಲ. ಈಕೆಯ ಕಿರಿಯ ಮಗ ವಿನಾಯಕನ ಪಾರ್ಟಿ. ಆತ ಅದೆಂಥಾ ಬಾರಾ ಭಾನಗಡಿ ಮಾಡಿದರೂ, ಸಂಸ್ಥಾನದ ಹಣ ಎಗರಿಸಿದರೂ, ಪೋಲಿ ಬಿದ್ದು ಓಡಾಡಿದರೂ, ಕೊನೆಗೆ ಮದುವೆಯಾಗದೇ ಪ್ರಕೃತಿ ಸುಖಕ್ಕೆ ಸರಸವಾಡಿದರೂ ಆಕೆಗದು ಅಪರಾಧವೇ ಅನ್ನಿಸುತ್ತಿರಲಿಲ್ಲ.

ಗುರೂಜಿ ಮತ್ತು ಆತನ ನಿಷ್ಪಾಪಿತ ಅಣ್ಣ ರಾಮಚಂದ್ರ ಒಂದು ಕಡೆಯಾದರೆ ತಾಯಿ-ತಮ್ಮ ಇನ್ನೊಂದು ಕಡೆ. ಅತ್ತಿಗೆ ... ಸಮಸ್ಯೆಯೇ ಬೇರೆ. ಆಕೆಗೆ ಸಂಸ್ಥಾನದ ...-... ಯಾವುದೂ ಬೇಡ; ಗಂಡ-ಮಕ್ಕಳೂ ಬೇಡ. ಬೇಕಾಗಿರುವುದು ... ಹೃದಯ. ... ಬದುಕು ಕಳೆದ ಮೂರು ವರ್ಷದ ಹಿಂದಿನವರೆಗೂ ಗುರೂಜಿ ಕ್ಷೇತ್ರದ ಸಕಲ ಉಸ್ತುವಾರಿಯೂ ಸಿದ್ಧಿ ವಿನಾಯಕನದೇ ಆಗಿತ್ತು. ಆತ ಜೇನು ತೆಗೆದಾಗೆಲ್ಲ ತಪ್ಪದೇ ಕೈನೆಕ್ಕುತ್ತಿದ್ದ. ಅಣ್ಣನ ದೌರ್ಬಲ್ಯ ಬಳಸಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದ. ಆದರೆ ಸ್ವಂತದೊಂದು ದಂಧೆ ಮಾತ್ರ ಈತ ಅಣ್ಣನ ಜತೆಗಿರುವಾಗ ಮಾಡಲೇ ಇಲ್ಲ. ಅಣ್ಣ ಆತನಿಗೆ ಸಿಮೆಂಟ್ ಡೀಲರ್‌ಶಿಪ್ ಮಾಡಿಸಿ ಕೊಟ್ಟಿದ್ದ. ಸೊರಬದಲ್ಲಿ 25 ಎಕರೆ ಅಡಿಕೆ ತೋಟ ಕೊಡಿಸಿದ್ದ. ಮತ್ತೆ ಯಾವ್ಯಾವುದೋ ಬಿಸ್ನೇಸ್ ಹಿಡಿಸಿ ಕೊಟ್ಟಿದ್ದ. ಸಿಎ ಮಾಡುತ್ತೇನೆಂದು ಅರ್ಧಕ್ಕೆ ಬಂದ. ಈ ವಿನಾಯಕನಿಗೆ ಎಲ್ಲೂ ಬರ್ಕತ್ತಾಗಲೇ ಇಲ್ಲ.

ಅವನಿಗೆ ಬೇಕಾಗಿದ್ದು ಕ್ಷೇತ್ರದ ಯುವರಾಜನ ಪಟ್ಟವಾಗಿತ್ತು, ಅಲ್ಲಿಯ ಆಸ್ತಿಯೆಲ್ಲಿ ಅಧಿಕೃತ ಪಾಲುದಾರಿಕೆ. ಕ್ಷೇತ್ರಕ್ಕೆ ಬರುವ ಚೆಂದರ ಹುಡುಗಿಯರ ಸಾಂಗತ್ಯ. ಅಣ್ಣ ಮಾರುತಿ ಪೂರ್ವಾಶ್ರಮದಲ್ಲಿ ಮಾಡಿದ ಡಿಂಗ್‌ಡಾಂಗ್ ಎಲ್ಲ ಈತ ಕ್ಷೇತ್ರದಲ್ಲೇ ಪೂರೈಸಿಕೊಳ್ಳಲು ಹವಣಿಸಿದ. ಸಿಬಿಎಸ್‌ಇ ಶಾಲೆಯಲ್ಲಿದ್ದ ಒಬ್ಬ ಬಾಲಕನ ತಾಯಿ ಮಗನ ಹೋಮ್‌ಸಿಕ್‌ನೆಸ್‌ನಿಂದಾಗಿ ಕ್ಷೇತ್ರದಲ್ಲೇ ಉಳಿದುಕೊಂಡಿದ್ದರು. ಸಿದ್ದಾಪುರದ ಹಳ್ಳಿಯೊಂದರ ಹವ್ಯಕ ಬ್ರಾಹ್ಮಣ ಮನೆತನದ ಈ ಸೊಸೆಗೆ ಮಾರುತಿ ಭಟ್ಟರು ಕ್ಷೇತ್ರದ ಕಚೇರಿಯಲ್ಲಿ ಒಂದು ಚಾಕರಿಯೂ ಕೊಟ್ಟಿದ್ದರು. ಈಕೆಯ ಗಂಡ ಕ್ಷೇತ್ರ ಪರಮ ಭಕ್ತನಷ್ಟೇ ಅಲ್ಲ, ವಿನಾಯಕನ ಕಟ್ಟಾ ಬೆಂಬಲಿಗ. ಅಂದರೆ ಗುರೂಜಿ ವಿರೋಧಿ. ಇದನ್ನು ತನ್ನ ಅಡ್ಡಕಸುಬಿಗೆ ಬಳಸಿಕೊಂಡಿದ್ದ ವಿನಾಯಕ ಆತನ ಹೆಂಡತಿಯ ಜತೆ ಚಕ್ಕಂದ ಆಡತೊಡಗಿದ್ದ. ಇದು ವೀರಾಂಜನೇಯನ ಭಕ್ತ ಸಂಕುಲದ ನಡುವೆ ದೊಡ್ಡ ಚರ್ಚೆಗೆ ವಸ್ತುವಾಯ್ತು.

ಇತ್ತ ಇನ್ನೂ ಅನೇಕ ಅನೈತಿಕ ಅವಾಂತರವೂ ಆತನಿಂದ ಆಯ್ತು. ಸೊರಬದ ತೋಟ ನೋಡಲೆಂದು ಆತ ನೇಮಿಸಿದ್ದ ಶಶಿಗುಳಿ ವಸಂತ ಹೆಗಡೆ ಮತ್ತು ಬಿದ್ರಕಾನ್‌ನ ರಾಮಚಂದ್ರ ಹೆಗಡೆಗಳು ವಿನಾಯಕನೊಂದಿಗೆ ಸೇರಿಕೊಂಡು ಮಾರುತಿ ಗುರೂಜಿಗೆ ಬತ್ತಿ ಇಡತೊಡಗಿದರು. ಕ್ಷೇತ್ರದ ಭಕ್ತರಾದ ಈ ಇಬ್ಬರು ವಿನಾಯಕನ ಜತೆ ಸೇರಿಕೊಂಡಿದ್ದು ಗುರೂಜಿಗೆ ತಮ್ಮನನ್ನು ಕ್ಷೇತ್ರದಿಂದಲೇ ಓಡಿಸುವ ಯೋಚನೆಗೆ ಹಚ್ಚಿತು! ಹೆಣ್ಣಿನ ಖಯಾಲಿಯ ಜತೆಗೆ ಹತ್ತಿರತ್ತಿರ ಒಂದು ಕೋಟಿಯಷ್ಟು ಹಣ ಆತ ಅಧಿಕೃತವಾಗೇ ಹೊಡೆದಿದ್ದ. ಲೆಕ್ಕ ಇಡದೇ ಇನ್ನೊಂದಿಷ್ಟು ಎಗರಿಸಿದ್ದ. ಒಟ್ಟನಲ್ಲಿ ವಿನಾಯಕ ಗುರೂಜಿಗೆ ದೊಡ್ಡ ತಲೆ ಭಾರವಾಗಿದ್ದ. ಇನ್ನೊಬ್ಬರ 'ಭಾರ' ಇಳಿಸುತ್ತಿದ್ದ ದೇವಮಾನವ ಮಾರುತಿ ಭಟ್ಟನಿಗೆ ತನ್ನ ಸಮಸ್ಯೆ ಪರಿಹಾರಕ್ಕೇ ಮತ್ತೊಬ್ಬ ಭಾರದವನ ಬಳಿ ಹೋಗುವ ಪರಿಸ್ಥಿತಿ ಬಂತು. ಉತ್ತರ ಕನ್ನಡದ ಉದ್ದಗಲಕ್ಕಿರುವ ಇಂಥ 'ಭಾರ'ದವರ ಬಗ್ಗೆ ಒಂದು ಪಿ.ಎಚ್‌ಡಿ ಸಂಶೋಧನೆ ನಡೆಸಬಹುದು.

ನಕಲಿ ಜೆಪಿಎ?!

ಹೇಗೆ ವಿನಾಯಕನಿಗೆ ಕ್ಷೇತ್ರದ ಒಳ-ಹೊರಗು ಬಲ್ಲ ವಸಂತ ಹೆಗಡೆ ಮತ್ತು ರಾಮಚಂದ್ರ ಹೆಗಡೆ ಬೆನ್ನಿಗೆ ನಿಂತಿದ್ದಾರೋ, ಹಾಗೆ ಗುರೂಜಿಗೆ ನಂಬಿಗಸ್ಥ ಬಂಟನಾಗಿದ್ದವನು ಸಂತೋಷ್ ಕೆ.ಎಸ್. ಎಂಬ ಶಿವಮೊಗ್ಗೆಯ ಆಸಾಮಿ. ಈತನಿಗೆ ಒಂದು ವ್ಯವಸ್ಥಿತ ಮನೆ ಮಾಡಿಕೊಟ್ಟು ಕ್ಷೇತ್ರದಲ್ಲೇ ಗುರೂಜಿ ಇಟ್ಟುಕೊಂಡಿದ್ದಾನೆ. ಸಿಎ ಮಾಡುತ್ತೇನೆಂದು ಅಣ್ಣನ ಹಣ ಹಳ್ಳ ಹಿಡಿಸಿ ಅರ್ಧದಲ್ಲೇ ಓಡಿಬಂದಿದ್ದ ತಮ್ಮ ವಿನಾಯಕನಿಗಿಂತ ಸಂತೋಷ್ ಗುರೂಜಿಯ ಆತ್ಮಾಪ್ತನಾಗಿ →13


ಗೇರುಸೊಪ್ಪದ ವೀರಾಂಜನೆಯ ಗುಡಿ

ಧಾರ್ಮಿಕ ನಂಬಿಕೆಗಳು ಮತ್ತು ಮನುಷ್ಯನ ಘನತೆ



81ನೇ ಸಾಹಿತ್ಯ ಸಮ್ಮೇಳನದಲ್ಲಿ 'ಮೌಢ್ಯಾಚರಣೆ-ವೈಚಾರಿಕತೆ' ಸಭೆಯಲ್ಲಿ ಡಾ.ವಿನಯಾ ಒಕ್ಕುಂದ ಮಾಡಿದ ಭಾಷಣವನ್ನು ನಮ್ಮ ಓದುಗರಿಗಾಗಿ ಇಲ್ಲಿ ನೀಡಿದ್ದೇವೆ.

ಜನಪದರಲ್ಲಿ ಒಂದು ಮಾತಿದೆ. 'ಹಿಡಿದರೆ ಹಿಡಿಯಗಲ, ಬಿಟ್ಟರೆ ಜಗದಗಲ' ಅಂತ. ಧಾರ್ಮಿಕ ನಂಬಿಕೆಗಳು ಮತ್ತು ಮನುಷ್ಯನ ಘನತೆ ಎಂಬ ವಿಷಯ ಹೀಗೆ ವಿಸ್ತಾರವಾದದ್ದು, ಅಷ್ಟೇ ಸಂಕೀರ್ಣವಾದದ್ದು. 'ಧಾರ್ಮಿಕ ನಂಬಿಕೆ' ಎಂಬ ಪದ ಅಮೂರ್ತ ಛಾಯೆಗಳಲ್ಲಿ ಸಮಕಾಲೀನ ಸಾಮಾಜಿಕ ಬಿಕ್ಕಟ್ಟುಗಳಲ್ಲಿ ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಡೆಸ್ನಾನ ಎಂಬ ಹೇಯ ಆಚರಣೆ ನಡೆದಾಗ, ಅತ್ಯಾಧುನಿಕ ತರುಣಿಯೊಬ್ಬಳು 'ಯಾಕೆ ನಿಷೇಧಿಸಬೇಕು? ಇದು ಜನರ ಧಾರ್ಮಿಕ ನಂಬಿಕೆಯ ಪ್ರಶ್ನೆ' ಎಂದು ಹೇಳಿದ್ದು ಟಿವಿ ಚಾನೆಲ್ ಒಂದರಲ್ಲಿ ಪ್ರಸಾರವಾಗಿತ್ತು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರೊಬ್ಬರು, 'ಇದು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಜನರ ಧಾರ್ಮಿಕ ನಂಬಿಕೆಯಾದ್ದರಿಂದ ನಿಷೇಧ ಕಷ್ಟ' ಎಂದಿದ್ದರು. ಧಾರ್ಮಿಕ ನಂಬಿಕೆಯ ಹೆಸರಿನಲ್ಲಿ ಸಹಗಮನ, ಬಾಲ್ಯವಿವಾಹ, ವಿಧವಾ ಪದ್ಧತಿ, ಅಜಲು ಪದ್ಧತಿ, ನರಬಲಿ-ಪ್ರಾಣಿಬಲಿ ಇವುಗಳನ್ನೆಲ್ಲ ಉಳಿಸಿಕೊಂಡರೆ ಏನಾಗಬಹುದಿತ್ತು ಎಂಬ ಸರಳ ಸತ್ಯವನ್ನು ಮುಖಾಮುಖಿಯಾಗಲು ಅವರು ಸಿದ್ಧರಿರಲಿಲ್ಲ, ಸ್ಥಳೀಯ ಮಲೆಕುಡಿಯ ಜನರು ತಮ್ಮ ಅಪಮಾನಕ್ಕೆ ತಾವೇ ಸಿದ್ಧರಾಗಿ ಮಡೆಸ್ನಾನ ನಿಷೇಧದ ವಿರುದ್ಧವಾದರು. ನಿಧಿಯಾಸೆಗೆ ನರಬಲಿ, ಅಧಿಕಾರ ಹಣದಾಸೆಗೆ ವಾಮಾಚಾರಗಳು, ಮಾಧ್ಯಮಗಳ ಮೂಲಕ ಕಂದಾಚಾರಗಳು ಬೆಳೆಯುತ್ತಿರುವ ಕೆಟ್ಟ ಕಾಲದಲ್ಲಿ ಮೌಢ್ಯವಿರೋಧಿ ಶಾಸನ ಆಗಬೇಕಾದ ಚರ್ಚೆ, ಧಾರ್ಮಿಕ ನಂಬಿಕೆ-ಧಾರ್ಮಿಕ ಸ್ವಾತಂತ್ರ್ಯ ಎಂಬ ಹುಯಿಲಿನಲ್ಲಿ ಕಲಸಿಹೋಯಿತು. ಮಠಗಳ ಹೆಚ್ಚುಗಾರಿಕೆ ಪ್ರಜಾಪ್ರಭುತ್ವದ ಆಶಯಗಳನ್ನು ಒತ್ತುವರಿ ಮಾಡುತ್ತಿದೆ. ಅತ್ಯಾಚಾರದ ಆರೋಪಿಯಾದ ಮಠಾಧೀಶರನ್ನು ವಿಚಾರಣೆಗೊಳಪಡಿಸಲು ಧಾರ್ಮಿಕ ನಂಬಿಕೆಯ ಬೇಲಿ ಅಡ್ಡಬರುತ್ತದೆ. ಹಳಸಿಹೋಗುತ್ತಿರುವ ಸಾಮಾಜಿಕ ಸೌಹಾರ್ದವನ್ನು ಮರುಸ್ಥಾಪಿಸಿ ಮನುಷ್ಯನ ಘನತೆಯನ್ನು ಗೌರವಿಸುವ ಸೃಜನಶೀಲ ಪ್ರತಿಕ್ರಿಯೆಗಳು ಭಯೋತ್ಪಾದನೆಯ ಹಲ್ಲೆಗೆ ಒಳಗಾಗುತ್ತಿವೆ. ಪಿಕೆ ಸಿನಿಮಾದ ಬಗ್ಗೆ ಹುಟ್ಟಿದ ವಿರೋಧ, ಪಕ್ಕದ ತಮಿಳುನಾಡಿನಲ್ಲಿ ಲೇಖಕ ಪೆರುಮಾಳ್ 'ಪೆರುಮಾಳ್ ಎಂಬ ಲೇಖಕ ಸತ್ತಿದ್ದಾನೆ' ಎಂದು ಘೋಷಿಸಿಕೊಳ್ಳುವ ದುರಂತ ಇನ್ನೂ ಹಸಿಯಾಗಿದೆ. ಇಂತಹ ವಿದ್ಯಮಾನಗಳು ಧಾರ್ಮಿಕ ನಂಬಿಕೆಯು ಸಂವಿಧಾನದ ಆಶಯ ಮತ್ತು ನಾಗರಿಕ ಬದುಕಿನ ಮೇಲೆ ಉಂಟುಮಾಡುತ್ತಿರುವ ವಿದ್ರೋಹದ ಸೂಚಕಗಳು.

ನಂಬಿಕೆ ಅತ್ಯಂತ ಆಪ್ತ ಅರ್ಥವಲಯವನ್ನು ಹೊಂದಿರುವ ಪದ. ಖಾಸಗಿ ಮತ್ತು ಸಾಮಾಜಿಕ ಬದುಕಿನ ಭದ್ರತೆಯ ತಳಪಾಯ. ಆದಿಮ ಮತ್ತು ಬುಡಕಟ್ಟುಗಳ ಕಾಲದಿಂದಲೂ ಮನುಷ್ಯ ಕುಲ ನೂರೆಂಟು ನಂಬಿಕೆಗಳನ್ನು ಕಟ್ಟಿಕೊಂಡು ಬಂದಿದೆ. ಪ್ರಕೃತಿಯ ವಿಸ್ಮಯಗಳ ಕಾರಣದ ಆತಂಕ, ನಾಳೆಯನ್ನು ಖಚಿತವಾಗಿ ತಿಳಿದುಕೊಳ್ಳಲಾಗದ ಭಯ, ಕೃಷಿ ಮತ್ತು ಶ್ರಮಮೂಲದ ಕಾರ್ಯ ನಿರ್ವಹಣೆಯಲ್ಲಿ ಎದುರಾಗುವ ಅಡೆತಡೆಗಳನ್ನು ಎದುರಿಸುವ ಸವಾಲು ಹೀಗೆ ನಂಬಿಕೆಗಳ ಉಗಮಕ್ಕೆ ಸಾಕಷ್ಟು ಕಾರಣಗಳಿದ್ದವು. ಆ ಕಾಲದ 'ಸಹಬದುಕಿನ' ತತ್ವದಿಂದಾಗಿ ನಂಬಿಕೆಗಳು ಸಹಜೀವಿಯನ್ನು ಅಪಮಾನಿಸುತ್ತಿರಲಿಲ್ಲ, ಯಾವಾಗ ಸಂಪತ್ತಿನ ಉತ್ಪಾದನೆ ಹೆಚ್ಚಿ ಖಾಸಗಿ ಆಸ್ತಿಯ ಪರಿಕಲ್ಪನೆ ಬೆಳೆದು ವರ್ಗ ಸಮಾಜದ ಉದಯವು ಪುರೋಹಿತಶಾಹಿ ಮತ್ತು ರಾಜಶಾಹಿಗಳೆಂಬ ಕಾಲುಗಳಲ್ಲಿ ನಡೆಯಲಾರಂಭಿಸಿತೋ ಆಗ ಧರ್ಮದ ಸಾಂಸ್ಥೀಕರಣ ಆರಂಭವಾಯಿತು. ದುಡಿಯುವ ವರ್ಗವನ್ನು ಕತ್ತಿಯಿಲ್ಲದೆ ಆಳುವ, ಬಂಧಿಸದೆ ಅಧೀನಗೊಳಿಸುವ ಪ್ರಬಲ ಅಸ್ತ್ರ ದೊರೆತಂತಾಯಿತು. ಈ ಅಪಮೈತ್ರಿಯನ್ನು ಕವಿ ಕುವೆಂಪು,

ಕೊನೆಯ ಪುರೋಹಿತನ ಕರುಳು
ಕೊನೆಯ ದೊರೆಯ ಕೊರಳಿಗುರುಳು

ಎಂದರು. ಆ ಕಾಲದಿಂದಲೂ 'ಧಾರ್ಮಿಕ ನಂಬಿಕೆಗಳು' ಸಾಮಾಜಿಕ ಸ್ಥಿತ್ಯಂತರಗಳೊಂದಿಗೆ ಬಣ್ಣ ಬದಲಿಸುತ್ತ ಸಾಗಿಬಂದಿದೆ. ವರ್ತಮಾನ ಕಾಲದಲ್ಲಂತೂ 'ಧಾರ್ಮಿಕ' ಎಂಬ ಪರಿಕಲ್ಪನೆ 'ಮತೀಯ' ಎಂಬರ್ಥಕ್ಕೆ ಬಂದು ತಲುಪಿದೆ. ಸಾಮಾಜಿಕ ಬದುಕಿನ ನಿಯಂತ್ರಕ ಶಕ್ತಿಯಾಗಿದೆ. ಅಂದಿನಿಂದ ಇಂದಿನವರೆಗೂ ಇವು ಉಂಟುಮಾಡುತ್ತಿರುವ ಪರಿಣಾಮದ ಚರಿತ್ರೆಯನ್ನು ಗಮನಿಸಿ ನಾಲ್ಕು ನೆಲೆಗಳಲ್ಲಿ ವಿವರಿಸಿಕೊಳ್ಳುತ್ತೇನೆ.

1. ಯಜಮಾನ್ಯ ಹಿತಾಸಕ್ತ ನಂಬಿಕೆಗಳ ಉತ್ಪಾದನೆ

ಜಾಗತೀಕರಣವನ್ನು 'ಒಪ್ಪಿಗೆಯನ್ನು ಉತ್ಪಾದಿಸುವ ವ್ಯವಸ್ಥೆ' ಎಂದು ಕರೆಯಲಾಗಿದೆ. ಆದರೆ ಈ ಪುಣ್ಯಭೂಮಿಯಲ್ಲಿ ಲಾಗಾಯ್ತಿನಿಂದಲೂ ದುರ್ಬಲ ವರ್ಗವನ್ನು ಸೃಷ್ಟಿಸಿ, ಅದನ್ನು ಆಳಲು ನಂಬಿಕೆಯನ್ನು ಉತ್ಪಾದಿಸಲಾಯ್ತು, ಅತಾರ್ಕಿಕವಾದ ಚಾತುರ್ವರ್ಣ್ಯ ಪದ್ಧತಿ, ವಿಧಿವಾದ, ಕರ್ಮ ಸಿದ್ಧಾಂತಗಳು ನಿರಾಧಾರವಾಗಿ ರೂಪಿಸಲ್ಪಟ್ಟವು. ಯಾರು ಈ ನೆಲದ ಮೂಲನಿವಾಸಿಗಳೋ, ಹೊಲದೊಡೆಯರೋ, ಕುಶಲಕರ್ಮಿಗಳೋ, ಜ್ಞಾನ ಮೀಮಾಂಸೆ ಮತ್ತು ಸಂಸ್ಕೃತಿ ಮೀಮಾಂಸೆಯ ಒಡೆಯರೋ ಅವರನ್ನು ಅತಿಕ್ರಮಿಸಿ, ಕೂಡುಬದುಕನ್ನು ಗೆಲ್ಲಲಾಯಿತು. ನಿರಾಕಾರಿ ನಿರ್ಗುಣಿ ದೈವತ್ವದ ಕಲ್ಪನೆಯನ್ನು, ಸಾಕಾರಿ ಸಂಸಾರಿ ದೈವತ್ವ ಕಲ್ಪನೆಯು ಆಕ್ರಮಿಸಿಕೊಳ್ಳತೊಡಗಿತು. ಉದ್ದೇಶಪೂರ್ವಕ ಸುಳ್ಳುಗಳು ಸಂಕಥನಗೊಂಡವು. ಅಸುರ ಕಲ್ಪನೆಯ ಉಗಮವಾಯಿತು. ಜನರ ಅಧಿಕಾರವನ್ನು ಹಕ್ಕನ್ನು ಕಸಿದುಕೊಂಡು, ಅಸಹಾಯಕತೆಯನ್ನು ಜನ್ಮಾಂತರಗಳಿಗೆ ಚೆಸೆಯಲಾಯಿತು.

ಈ ಇಡೀ ಪ್ರಕ್ರಿಯೆ ಸಂಘರ್ಷರಹಿತವಾಗಿರಲಿಲ್ಲ, ಪ್ರತಿಧರ್ಮಗಳ ಉದಯ ಮತ್ತು ಮತಾಂತರವು ಇಂತಹ ಪ್ರವೃತ್ತಿಗಳ ವಿರೋಧಿ ದನಿಗಳೇ. ಬುದ್ಧ-ಬ್ರಾಹ್ಮಣರು ಮೂಢನಂಬಿಕೆಯು ಪೂರೈಸುವ ಆಹಾರದಲ್ಲಿ ಬದುಕುತ್ತಾರೆ. ಬಾಯಿಯಿಂದ ಬೆಂಕಿಯುಗುಳುತ್ತಾರೆ. ಜ್ಯೋತಿಷ್ಯದ ಹೆಸರಲ್ಲಿ ಸಂಬಂಧಗಳನ್ನು ಕೂಡಿಸುತ್ತಿದ್ದಾರೆ, ಮುರಿಯುತ್ತಿದ್ದಾರೆ. ಇಂಥವರನ್ನು ನಂಬಲಸಾಧ್ಯ ಎನ್ನುತ್ತಾನೆ. ಯಾವುದನ್ನೂ ನನ್ನ ಮಾತನ್ನೂ ವಿಚಾರಿಸದೆ ನಂಬಬೇಡಿರಿ ಎಂದ ಬುದ್ಧ ಬೌದ್ಧಿಕ ಗುಲಾಮೀತನವನ್ನು ಒಪ್ಪುವುದಿಲ್ಲ, ಜೈನಧರ್ಮವು ಮೋಸ, ಕಳ್ಳತನಗಳ ಸ್ಥಿತಿಗೆ ಹೊರತಾದ ಅವಕಾಶವಿಲ್ಲದ ಬಡವರಿಗೆ ಆತ್ಮಘನತೆಯ ಬದುಕಿನ ವಾಗ್ದಾನ ಮಾಡುತ್ತದೆ. ಇಂತಹ ಪ್ರತಿರೋಧವನ್ನು ಎದುರಿಸಿ ಸ್ಥಾಪಿತ ಸ್ಥಿತಿಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಧರ್ಮಶಾಸ್ತ್ರಗಳು, ಬ್ರಾಹ್ಮಣಕಗಳು, ಪುರಾಣ ಮಹಾಕಾವ್ಯಗಳು ಬರೆಯಲ್ಪಟ್ಟವು. ಅಸಮಾನತೆಯನ್ನು ಸಾಂಸ್ಥೀಕರಣಗೊಳಿಸಿದವು. 'ಶೂದ್ರನಾಗಲಿ, ಸ್ತ್ರೀಯಾಗಲಿ ವೇದಾಧ್ಯಯನವನ್ನು ಕೇಳಿದರೆ ಕಿವಿಯಲ್ಲಿ ಕಾದ ಸೀಸವನ್ನು ಸುರಿಯಬೇಕು'- ಎಂದು ಸಾಮಾಜಿಕ ಕಾನೂನನ್ನು ಅನ್ವಯಗೊಳಿಸುವ ಧರ್ಮಶಾಸ್ತ್ರಗಳು ಜಾರಿಗೆ ಬಂದವು. ಧಾರ್ಮಿಕತೆಯು ಜಡ ಆಚರಣೆಗಳ ಮಟ್ಟಕ್ಕೆ ಇಳಿದಾಗ ಅದು ಆತ್ಮಗೌರವವನ್ನು ಲೆಕ್ಕಿಸುವುದಿಲ್ಲ, ಅರುಹು ಸ್ಥಗಿತವಾಗಿ ಕುರುಹು ವೈಭವೀಕರಣಗೊಳ್ಳುತ್ತದೆ. ಇದರ ಇತ್ತೀಚಿನ ಉದಾಹರಣೆ ಮಲೆಕುಡಿಯರು ಮಡೆಸ್ನಾನವನ್ನು ಬೆಂಬಲಿಸಿ ಮನುಷ್ಯ ಘನತೆಯ ಸ್ವಹತ್ಯೆಗೆ ಒಳಗಾಗಿದ್ದು.

ಜಾತೀಯತೆ ತುಂಬಿರುವ ದೇಶದಲ್ಲಿ ಧರ್ಮಕ್ಕೆ ಸಾವಿರ ಪಾದಗಳಿರುತ್ತವೆ. ಅದು ಧರ್ಮ, ಜಾತಿ, ಉಪಜಾತಿಗಳ ನೆಲೆಯಲ್ಲಿ ಬೇರೆ ಬೇರೆ ರೂಪಗಳಲ್ಲಿ ಕ್ರಿಯಾಶೀಲವಾಗಿರುತ್ತದೆ. ಸಾವಿರ ಪಾದಗಳ ಆಕೃತಿಯು ಏಕಕಾಲದಲ್ಲಿ ಚಲನಶೀಲವಾಗಿಯೂ ಜಡವಾಗಿಯೂ ಇದ್ದುಬಿಟ್ಟಿರುತ್ತದೆ. ಇಂಥಲ್ಲಿ ಸಮಾನತೆಯ ಘನತೆಯ ಪ್ರಶ್ನೆ ಹಾಸ್ಯಸ್ಪದವಾಗುತ್ತದೆ. ಸಣ್ಣ ಮಾತು ಕಾರಣಗಳ ನೆಪದಲ್ಲಿ ದಲಿತರ ಮೇಲಾಗುವ ಹಲ್ಲೆಯನ್ನು ಗಮನಿಸಬೇಕು. ಆಳದಲ್ಲಿ ಅದು 'ತನ್ನಂತೆ ಪರರನ್ನು ನೋಡಲಾಗದ' ದುರಂತದ ಫಲಿತ. ದೇವನೂರ ಮಹಾದೇವ ಇದನ್ನು 'ಸಮಾನತೆಯ ತುಡಿತಕ್ಕಾಗಿ ಏನೆಲ್ಲ' ಎಂದು ವಿಷಾದಿಸುತ್ತಾರೆ.

ಮನುಷ್ಯ ಘನತೆಯ ಹುಡುಕಾಟದಲ್ಲಿ ಅಂಬೇಡ್ಕರ್ 'ನಗರಗಳನ್ನು' ಸುರಕ್ಷಿತ ವಲಯಗಳಾಗಿ ಭಾವಿಸಿದ್ದರು. ಇಂದಿಗೂ ಸಂಘರ್ಷದ ರಾಜಸೂತ್ರಗಳಲ್ಲಿ ಮರಳಿ ನಗರಗಳೆಡೆಗೆ- ಎಂಬ ಸೂತ್ರವನ್ನು ಅಳವಡಿಸಲಾಗುತ್ತಿದೆ. ಆದರೆ ನಗರಗಳಲ್ಲಿ ಜಾತೀಯತೆಯ ಪ್ರತ್ಯೇಕೀಕರಣ ಕಾಲೋನಿಗಳು ಶುರುವಾಗಿವೆ.

ಯಾಜಮಾನ್ಯವು ದ್ವಂದ್ವನೀತಿಯನ್ನು ಜೋಪಾನವಾಗಿ ನಡೆಸುತ್ತದೆ. ತನ್ನ ಉದಾರತೆಯ ಮುಖವಾಡವನ್ನು ಕಳಚುವುದಿಲ್ಲ, ಪೇಜಾವರ ಸ್ವಾಮಿಗಳು ಪಂಕ್ತಿಭೇದವನ್ನೂ ಒಪ್ಪುತ್ತು, ದಲಿತಕೇರಿಗಳಿಗೆ ಪಾದಯಾತ್ರೆಯನ್ನೂ ಮಾಡುತ್ತ ಹೋರಾಟದ ಸಾಗರಕ್ಕೆ ಎಂದೂ ಉಬ್ಬರ ಬರದಂತೆ ನೋಡಿಕೊಳ್ಳಬಲ್ಲರಾಗುತ್ತಾರೆ. ಧರ್ಮದ ಕಾರಣದ ಗೊಂದಲಕ್ಕೆ ದಲಿತರು ತಟಸ್ಥರಾಗಿರುವುದು. ಇಲ್ಲದಿದ್ದರೆ ಮೀಸಲಾತಿ ಚಳವಳಿಯನ್ನು ಹತ್ತಿಕ್ಕಿದ ರಾಜ್ಯದಲ್ಲಿ ದಲಿತರು ಆಳುವವರ ಕೈಗೊಂಬೆಯಾಗಲು ಸಾಧ್ಯವಾಯಿತು. ಅದನ್ನು ಡಿ.ಆರ್. ನಾಗರಾಜ್- ಧರ್ಮ ಬರೀ ಪ್ರತೀಕವಾಗುವುದಿಲ್ಲ, ಸಮಕಾಲೀನ ಅಧಿಕಾರ ರಾಜಕಾರಣದ ಪ್ರಖರ ಆಯುಧವಾಗುತ್ತದೆ- ಎನ್ನುವುದು.

ಆದರ್ಶವೆಂಬ ವಿದ್ರೋಹ


ಮಾತೃಪ್ರಧಾನತೆಯಿಂದ ಪಿತೃಪ್ರಧಾನತೆಯೆಡೆಗೆ ಹೊರಳಿದ ಸಮಾಜ ತನ್ನ ಆಳ್ವಿಕೆಯನ್ನು ಅನ್ವಯಗೊಳಿಸುವ ಸಲಕರಣೆಯಾಗಿ ಬಳಸಿದ್ದು ಧರ್ಮ ಕೇಂದ್ರಿತ ಚಿಂತನೆಗಳನ್ನು, ಹೆಣ್ಣು ಹಾಗಂದರೇನು? ಎಂಬ ಪ್ರಾಥಮಿಕ ವಿವರಣೆಯಿಂದ ಒಳಗೊಂಡು ಹೆಣ್ಣಿನ ಇರುವಿಕೆಯ ಅರ್ಥ ಮತ್ತು ಮಹತ್ವದ ನಿರ್ವಚನವು ವ್ಯವಸ್ಥೆಯ ಯಥಾಸ್ಥಿತಿಯನ್ನು ರಕ್ಷಿಸುವುದಾಗಿತ್ತು, ಅವಳ ದೇಹ, ಉಡುಗೆ-ತೊಡುಗೆ, ಮಾತು-ವರ್ತನೆ, ಕೃತಿ-ಚಹರೆ ಎಲ್ಲವೂ ಧಾರ್ಮಿಕ ಅಮೂರ್ತ ಆದರ್ಶದಲ್ಲಿ ನಿರೂಪಿಸಲ್ಪಟ್ಟವು. ಹೆಣ್ತನದ ಬಾಧ್ಯಸ್ಥಿಕೆಯನ್ನು ವಿವರಿಸುವ ಕಥನಗಳು ನೀತಿ-ನಿಯಮಗಳು ಜಾರಿಯಾದವು. ಎಲ್ಲ ಆದರ್ಶ- ಮೌಲ್ಯಗಳೂ ಸತೀತ್ವದ ಚೌಕಟ್ಟಿನೊಳಗೆ ಹಾಕಲ್ಪಟ್ಟವು. ದಿನನಿತ್ಯದ ಆಗುಹೋಗುಗಳಿಂದ ವಿಶೇಷ ಹಬ್ಬ-ಹರಿದಿನಗಳು ಕೂಡ ಅವೇ ಮೌಲ್ಯಗಳನ್ನು ಗಟ್ಟಿಗೊಳಿಸುವ ಆಚರಣೆಗಳಾಗಿ ಬೇರೂರಲ್ಪಟ್ಟವು. ಭೀಮನ ಅಮಾವಾಸ್ಯೆ ಮಹಾಲಕ್ಷ್ಮೀ ವ್ರತ, ಗೌರೀಪೂಜೆ ಹೀಗೆ ದಂಡಿದಂಡಿಯಾಗಿ ರೂಪಣಗೊಂಡವು. ಹುಟ್ಟಿನಿಂದ ಸಾವಿನವರೆಗೆ ಹೆಣ್ಣು ನಿರ್ವಹಿಸುವ ಮಗಳು, ತಾಯಿ, ಹೆಂಡತಿ, ಸೊಸೆ, ಅತ್ತೆ ಅಜ್ಜಿ ಇಂತಹ ಕರ್ತವ್ಯಗಳು ಪಿತೃವ್ಯವಸ್ಥೆಗೆ ಹಿತಕಾರಿಯಾಗಿ ವಿವರಣೆಗೊಂಡವು. ಪ್ರೀತಿ, ಗೌರವ, ರಕ್ಷಣೆ, ಅನುನಯದ ಹೆಸರಿನ ವಿದ್ರೋಹವಿದು. ಶಿಕ್ಷಣ-ಉದ್ಯೋಗಗಳಂತಹ ಸಾಮಾಜಿಕ ಬದುಕಿನ ವಿಸ್ತರಣೆ ಕೂಡ ಇದೇ ಚೌಕಟ್ಟುಗಳಲ್ಲಿಯೇ ಮುಂದುವರಿದು, ಹೊಸ ಸಮಸ್ಯೆಯನ್ನು ಬಿಡುಗಡೆಯ ಹೆಸರಿನಲ್ಲಿ ಹೊಸ ಸವಾಲುಗಳನ್ನು ಒಡ್ಡತೊಡಗಿತು ಆಧುನಿಕ ಕಾಲದಲ್ಲಿ ಹೆಣ್ಣಿನ ಜೀವನ ಮೀಮಾಂಸೆಯಲ್ಲಿ ನಡೆಯತೊಡಗಿದ. ಕಿಂಚಿತ್ ಸ್ಥಿತ್ಯಂತರವು ಪುರೋಹಿತಶಾಹಿಯ ನಿದ್ದೆಗೆಡಿಸಿದೆ. ಧರ್ಮಗ್ಲಾನಿಯ ಭಯ ಒಡ್ಡಿದೆ. ಅವಳ ಆಯ್ಕೆಯ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಹೊಸ ರೀತಿಯಲ್ಲಿ ದಬಾವಣೆ ಮಾಡುವ ಆತಂಕ ಎದುರಾಗಿದೆ. ಅವಳು ಏನನ್ನು ಎಷ್ಟನ್ನು ಆಯ್ದುಕೊಳ್ಳಬೇಕು ಎನ್ನುವುದನ್ನು ಇನ್ಯಾರೋ ನಿರ್ದೇಶಿಸುವಂತಾಗಿದೆ. ಇತ್ತೀಚೆಗೆ 'ಹಿಂದೂಧರ್ಮದ ಮಹಿಳೆಯರು ಎಷ್ಟು ಮಕ್ಕಳನ್ನು ಹಡೆಯಬೇಕು' ಎನ್ನುವ ಫರ್ಮಾನು ಹೊರಡಿಸುವ, ಮುಸ್ಲಿಂ ಮಹಿಳೆಯ ಬುರ್ಖಾ ಮತ್ತು ಕಲಿಕೆಯ ಹಕ್ಕನ್ನ ಮೂಲಭೂತವಾದಿಗಳು ಪ್ರಶ್ನಿಸುವ ಮಟ್ಟಕ್ಕೆ ಬೆಳೆದಿದೆ. ಮಾಧ್ಯಮಗಳಲ್ಲಿ ಜಾಹೀರಾತುದಾರರಾಗಿ ಪ್ರವೇಶ ಪಡೆದಿರುವ ಪುರೋಹಿತಶಾಹಿಯು ವಾಸ್ತು, ಜ್ಯೋತಿಷ್ಯ ಭವಿಷ್ಯ ಮುಂತಾದ ವಿವಿಧ ಪ್ರಯೋಗಗಳಲ್ಲಿ ಮಧ್ಯಮವರ್ಗದ ಮಹಿಳೆಯರನ್ನು ಗುರಿಯಾಗಿಸಿಕೊಂಡಿದೆ. ಅವರ ಅಸಹಾಯಕತೆಯನ್ನು ಬಂಡವಾಳ ಮಾಡಿಕೊಂಡು ವಿರಾಮವನ್ನು ಬಳಸಿಕೊಂಡು ಅವರ ಆಲೋಚನಾಶಕ್ತಿಯನ್ನು ಅಪಹರಣ ಮಾಡುತ್ತಿವೆ. ಇದನ್ನು ಪ್ರಶ್ನಿಸಿದರೆ ನೀಚ ಉಗ್ರವಾದ ತಲೆಯೆತ್ತುತ್ತದೆ. 'ಇಂಥವರನ್ನು ಎಳೆತಂದು ರೇಪ್ ಮಾಡಬೇಕು' ಎಂಬ ಮಟ್ಟಕ್ಕೆ ನಾಗರಿಕ ಸಮಾಜ ನಿರ್ಲಜ್ಜಗೊಳ್ಳುವುದನ್ನು ಇತ್ತೀಚೆಗೆ ಪ್ರಭಾ ಪ್ರಕರಣದಲ್ಲಿ ನೋಡಿದ್ದೇವೆ.

ಧರ್ಮಗಳು ಹೆಣ್ಣನ್ನು ಆತ್ಮಘನತೆಯುಳ್ಳ ಸಹಜೀವಿಯಾಗಿ ಅರ್ಥೈಸಿಕೊಂಡಿಲ್ಲ, ಪೂರಕಳಾಗಿ ಮಾತ್ರ ನೋಡಿದೆ. ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಪ್ರತಿಹಂತವೂ ಅವಳ ಸ್ವಾಭಿಮಾನವನ್ನು ಕತ್ತರಿಸುವಂಥವೇ. ಕೆಲವೊಮ್ಮೆ ತಾಲಿಬಾನ್ ಉಗ್ರಗಾಮಿಗಳ ಗುಂಡಿನ ರೂಪವನ್ನು ಪಡೆಯುತ್ತದೆ. ಬಹಳ ಸಲ ಹಿತರಕ್ಷಣೆಯ ಅನುನಯದಲ್ಲಿ ವ್ಯವಹರಿಸುತ್ತದೆ. ಭ್ರೂಣಹತ್ಯೆ, ಹೆಣ್ಣು ಶಿಶು ಮರಣ, ತಾಯ್ಮರಣ, ಮಕ್ಕಳು ಮತ್ತು ಯುವತಿಯರ ಮಾರಾಟ, ಮದುವೆ ಮಾರುಕಟ್ಟೆ, ಶಿಕ್ಷಣ ಮತ್ತು ಉದ್ಯೋಗ ಇಂತಹ ಎಲ್ಲ ಹಂತಗಳಲ್ಲೂ ಪಿತೃಪ್ರಧಾನ ಚಿಂತನೆಗಳೇ ಮುಖ್ಯವಾಗಿ ಆದರ್ಶದ ಹೆಸರಿನಲ್ಲಿ ವಿದ್ರೋಹವನ್ನು ಉಂಟು ಮಾಡುವ ನಿಧಾನವಿಷ ಹರಡುತ್ತದೆ. ಅಪಕಲ್ಪಿತಗಳ ಆವರಣ-ಮತೀಯ ನಂಬಿಕೆಗಳನ್ನು ಬಳಸಿಕೊಂಡು ಕಲ್ಪಿತ ವೈರವನ್ನು ಜನಮಾನಸದಲ್ಲಿ ಒಂದು ಮನಸ್ಥಿತಿಯಾಗಿ ಬೆಳೆಸುವುದರಿಂದ ಯಾಜಮಾನ್ಯವು ಸುರಕ್ಷಿತವಾಗುತ್ತದೆ, ಆ ಪ್ರಶ್ನಾರ್ಹವಾಗುತ್ತದೆ. ಇದನ್ನು ಕೆಲವು ನಿಧಾನಗಳಿಂದ ರೂಪಿಸಿಕೊಳ್ಳಲಾಗುತ್ತದೆ.

1) ಚರಿತ್ರೆಯ ಆಯ್ದು ಕಟ್ಟುವಿಕೆ: ಚಾರಿತ್ರಿಕ ಸತ್ಯಗಳನ್ನು ಇಡಿಯಾಗಿ ವಿವರಿಸಿಕೊಳ್ಳದೆ, ತನಗೆ ಅಗತ್ಯವಾದಂತೆ ಆಯ್ದು ತಂದು ಮರುನಿರ್ವಚನಗೊಳಿಸುವ ಕೆಲಸವನ್ನು ಪುರೋಹಿತಶಾಹಿ ಶ್ರದ್ಧೆಯಿಂದ ನಿರ್ವಹಿಸಿದೆ. ಈ ಅರೆಓದುಗಳು ದೇಶದ ವರ್ತಮಾನದ ರಾಜಕಾರಣದ ಹಿತಕಾಯುವ ಅಜೆಂಡಾಗಳಾಗಿರುತ್ತವೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿರುವ ಮುಸ್ಲಿಮರ ಕಥನಗಳು ಮುಂದಿನ ತಲೆಮಾರಿಗೆ ಕೈದಾಟಲಿಲ್ಲ. ಆದರೆ ದೇಶ ಇಬ್ಭಾಗವಾಗಲು ಮುಸ್ಲಿಂ ಲೀಗ್ ಕಾರಣ ಎನ್ನುವುದನ್ನು ಮಾತ್ರ ನಂಬಿಸಲಾಗಿದೆ. ಸಮಕಾಲೀನ ಸಮಾಜದ ಎಲ್ಲ ತಪ್ಪು ನಡೆಗಳಿಗೆ ಮಧ್ಯಕಾಲೀನ ಚರಿತೆಯಲ್ಲಿ ನಡೆದ ಮುಸ್ಲಿಮರ ಆಕ್ರಮಣ ಕಾರಣ ಎಂದು ಗೂಬೆ ಕೂರಿಸುವಿಕೆ ನಡೆದಿದೆ. 'ಮತಾಂತರ ಮತ್ತು ಧರ್ಮಪ್ರಸಾರ ಬಲವಂತದಿಂದ ನಡೆದುದ್ದಲ್ಲ, ಅವಕ್ಕೆ ವೈದಿಕಶಾಹಿಯ ಅಸಮಾನತೆ ಕಾರಣ' ಎಂದು ವಿವೇಕಾನಂದರಂಥವರು ಹೇಳಿರುವಾಗಲೂ ಇಂತಹ ಸತ್ಯಗಳಿಂದ ಮುಖದಿರುವಲಾಗಿದೆ. ಮಹಮ್ಮದ್ ಪೈಗಂಬರರು ಸ್ತ್ರೀ ಶಿಕ್ಷಣದ ಅಗತ್ಯವನ್ನು ಪ್ರತಿಪಾದಿಸಿರುವಾಗಲೂ, ಧರ್ಮದ ಅಂಧ ಅನುಯಾಯಿಗಳು ಇದರ ವಿರೋಧಿಗಳಾಗುತ್ತಾರೆ, ಭಯೋತ್ಪಾದಕರಾಗುತ್ತಾರೆ. ದೇಶದ ನಿಜವಾದ ಚರಿತ್ರೆ ಧರ್ಮ-ಜಾತಿಗಳ ಸಂಕರದಲ್ಲಿ ರೂಪುಗೊಂಡ ಕಲೆ, ಸಾಹಿತ್ಯ ಸಂಸ ತಿ, ಸಂಗೀತ, ಧರ್ಮಗಳಲ್ಲಿದೆ ಎಂಬ ಸತ್ಯವನ್ನು ಸರಿಸಿಡಲಾಗಿದೆ.

2) ಪ್ರತಿರೋಧಗಳ ಅಲಕ್ಷ

ಪ್ರತಿಯೊಂದು ಸಾಂಸ್ಥಿಕ ಧರ್ಮವೂ ತನ್ನ ಜಡತೆಯಿಂದಾಗಿ ಪ್ರಬಲ ಪ್ರತಿರೋಧಗಳಿಂದ ಕೂಡಿದೆ. ಈ ಒಳಬಂಡಾಯ ಧರ್ಮವನ್ನು ಚಲನಶೀಲಗೊಳಿಸಿದೆ. ಇಸ್ಲಾಂದಿಂದ ಸೂಫಿ ಪರಂಪರೆ, ವೈದಿಕ ಧರ್ಮದಿಂದ ಭಕ್ತಿಪಂಥ ಮತ್ತು ಅನುಭಾವದ ಧಾರೆಗಳು ಹುಟ್ಟಿ ಬೆಳೆದಿವೆ. ವೀರಶೈವ ಧರ್ಮವಂತೂ ತನ್ನ ಸಂಘಟನೆಯ ಸಂದರ್ಭದಲ್ಲಿಯೇ ತೀವ್ರ ಭಿನ್ನಮತವನ್ನೂ ಒಡಲೊಳಗೆ ಧರಿಸಿದೆ. ಈ ಪ್ರತಿರೋಧಗಳು ಮನುಷ್ಯ ಘನತೆಯನ್ನು ಪ್ರತಿಪಾದಿಸುವ ಪ್ರಯತ್ನಗಳು "ಕಲ್ಲಮನೆಯ ಮಾಡಿ ಕಲ್ಲ ದೇವರ ಮಾಡಿ ಪೂಜಿಸುವಾಗ ಮೇಲಿನ ಕಲ್ಲು ಬಿದ್ದರೆ ಮೂರ್ತಿ ಲಿಂಗ ಭಂಜನೆಯಾದಾಗ, ದೇವರೆತ್ತ ಹೋಗುತ್ತಾನೆ?" ಎಂದು ಪ್ರಶ್ನಿಸುವ ಅಲ್ಲಮ "ನಾ ದೇವನಲ್ಲದೆ ನೀ ದೇವನೆ?" ಎಂದು ಪ್ರಶ್ನಿಸುವಷ್ಟು ಪ್ರಖರ ಚಿಂತನೆಯನ್ನು ಹೊಂದಿದವನು. ಆದರೆ ಪ್ರತಿರೋಧವನ್ನು ವಿಸ್ಮೃತಿಗೆ ತಳ್ಳಿ ಅನ್ಯಚಹರೆಯನ್ನು ರೂಪಿಸಿಕೊಳ್ಳಲು, ಸ್ಥಾಪಿತ ವ್ಯವಸ್ಥೆ ಪ್ರಯತ್ನಿಸುತ್ತಲೇ ಇರುತ್ತದೆ. ವಿವೇಕಾನಂದರ 'ಸ್ವಾಮಿತನದ' ಕುರುಹನ್ನು ಯಥೇಚ್ಛವಾಗಿ ಬಳಸಿಕೊಂಡು, 'ಪುರೋಹಿತಶಾಹಿಯಿಂದ ಬಿಡುಗಡೆಗೊಳ್ಳುವವರೆಗೂ ದೇಶಕ್ಕೆ ಮುಕ್ತಿಯಿಲ್ಲ' ಎಂಬ ತತ್ವವನ್ನು ಹಲವು ನೆಲೆಗಳಿಂದ ಮನವರಿಕೆ ಮಾಡಿದ ಅರಿವನ್ನು ಕೈಬಿಡಲಾಗಿದೆ. 'ಈಶ್ವರ ಅಲ್ಲಾ ತೇರೇ ನಾಮ್, ಸಬಕೊ ಸನ್ಮತಿದೇ ಭಗವಾನ್'- ಎಂಬ ಸೌಹಾರ್ದತೆಯನ್ನು ಜೀವದುಸಿರಾಗಿಸಿಕೊಂಡಿದ್ದ ಗಾಂಧೀಜಿಯ ವ್ಯಕ್ತಿತ್ವದಿಂದ 'ಸ್ವಚ್ಛ ಭಾರತ್ ಅಭಿಯಾನ'ದ ಛಿದ್ರಬಿಂಬವನ್ನು ರೂಪಿಸುವುದು ಇಂಥದೇ ಪ್ರಯತ್ನವಾಗಿದೆ. ಗಾಂಧೀಜಿಯನ್ನು ಹತ್ಯೆ ಮಾಡಿದ ಗೋಡ್ಸೆಯನ್ನು ದೇಶಭಕ್ತನೆಂದು ಬಿಂಬಿಸುವ ಪ್ರಯತ್ನ ಕೂಡ ಚರಿತ್ರೆಯನ್ನು ವಿಚ್ಛಿದ್ರಗೊಳಿಸುವುದಾಗಿದೆ. ನಮ್ಮ ದೇಶ ಮನಸ್ಸು ವಿಷಪೂರಿತವಾಗಿದೆ. ಗೋಡ್ಸೆ ಅವರ ಹಲ್ಲು-ಎಂದಿದ್ದ



ಕವಿ ವಿ.ಸೀ. ನೆನಪಾಗುತ್ತಾರೆ. ಜನಸಮುದಾಯವು ಕಟ್ಟಿ ಬೆಳೆಸಿಕೊಂಡು ಬಂದಿದ್ದ ಹಬ್ಬ-ಹರಿದಿನಗಳಂತಹ ಆಚರಣೆಗಳಲ್ಲಿ ಮತೀಯ ನಂಬಿಕೆಗಳನ್ನು ತೂರಿಸಿ, ಅವುಗಳನ್ನು ಸಾಂಸ್ಥಿಕ ರೂಪಕ್ಕೆ ಇಳಿಸಿ ಮೂಲಭೂತವಾದವನ್ನು ಬೆಳೆಸುವ ಸಾಕಷ್ಟು ಪ್ರಯತ್ನಗಳು ಈಗಾಗಲೇ ನಡೆದಿವೆ, ನಡೆಯುತ್ತಿವೆ.

ಧಾರ್ಮಿಕ ನಂಬಿಕೆಯ ಹೆಸರಿನಲ್ಲಿ ಬೆಳೆಯುವ ಮತೀಯವಾದವು ಉನ್ಮಾದದ ಸ್ವರೂಪವನ್ನು ಪಡೆದು ಬದುಕಿನ ಸ್ವಾಸ್ಥ್ಯವನ್ನು ಹಾಳುಗೆಡವುತ್ತಿದೆ. ನಿರಂತರ ಸಂಶಯ, ಅಪಮಾನಗಳಿಗೆ ಮನುಷ್ಯತ್ವ ಬಲಿಯಾಗಬೇಕಾಗುತ್ತದೆ. ಗುಜರಾತ್ ಹತ್ಯಾಕಾಂಡ ನಡೆದಾಗ ಏಳುತ್ತಿದ್ದ ಹೊಗೆಗೆ 'ಅಂಕಲ್ ಅವರೆಲ್ಲ ಈಗ ಸುಟ್ಟುಹೋಗಿರಬಹುದು' ಎಂದು ಖುಷಿಪಟ್ಟ ತರುಣಿಯ ಬಗ್ಗೆ ಶ್ರೀಕುಮಾರ್ ಅವರು ದಾಖಲಿಸುತ್ತಾರೆ. ಅವಳ ಮನೋನ್ಮಾದ ಪೇಶಾವರದಲ್ಲಿ ಮಕ್ಕಳನ್ನು ಕೊಲೆ ಮಾಡಿದವರ ಉನ್ಮಾದ, ಮ್ಯಾನ್ಮರ್‌ನಲ್ಲಿ ಬುದ್ಧಧರ್ಮದವರಿಂದ ನಡೆದ ಹಿಂಸೆ, ಶಿಯಾ ಮಸೀದಿಗಳ ಮೇಲೆ ಬಾಂಬ್ ದಾಳಿ ನಡೆಸುವ ಹಿಂಸೆ, ಕಂಬಾಲಪಲ್ಲಿಯಲ್ಲಿ ದಲಿತರನ್ನು ಸುಟ್ಟುರಿಸಿದ ಉನ್ಮಾದ, ಮಡೆಸ್ನಾನವಿಲ್ಲದಿದ್ದರೆ ಎಡೆಸ್ನಾನವಾದರೂ ಇರಲಿ ಎನ್ನುವವರ ಚಡಪಡಿಕೆ- ಈ ಎಲ್ಲವೂ ಒಂದೇ ಬಗೆಯ ಉನ್ಮಾದಗಳು. ದುರಂತವೆಂದರೆ ಈ ಉನ್ಮಾದದ ಬೇರು ಧಾರ್ಮಿಕ ನಂಬಿಕೆ. ಇದರ ಅಂತಿಮ ಪರಿಣಾಮ ಮನುಷ್ಯತ್ವದ ಹಲ್ಲೆ, ಇಂತಹ ನಂಬಿಕೆಗಳು ಭಯೋತ್ಪಾದನೆಯ ಪ್ರವೃತ್ತಿಗೂ ಧರ್ಮಕ್ಕೂ ಸಂಬಂಧ ಕಲ್ಪಿಸುತ್ತವೆ. ಜಾತಿ-ಧರ್ಮಗಳ ಗಡಿದಾಟುವವರನ್ನು ಮರ್ಯಾದಾ ಹತ್ಯೆಗೀಡು ಮಾಡುತ್ತದೆ. ತಪ್ಪಿ ಉಳಿದವರ ಖಾಸಗಿ ಬದುಕನ್ನು ಅನೈತಿಕವಾಗಿ ಪ್ರವೇಶಿಸುತ್ತದೆ. ಅದಕ್ಕೆ ಲವ್ ಜೆಹಾದ್‌ನಂತಹ ಕಾರಣಗಳನ್ನು ಸೃಷ್ಟಿಸುತ್ತದೆ. ಬಾಲಿವುಡ್‌ನ ಮೂವರು ನಟರು ಅಂತರ್‌ಧರ್ಮೀಯ ವಿವಾಹ ಮಾಡಿಕೊಂಡವರು ಎಂಬ ಕಾರಣಕ್ಕಾಗಿ ನಂಜಿನ ನುಡಿಗಳನ್ನು ಕೇಳಿಸಿಕೊಳ್ಳಬೇಕಾಗುತ್ತದೆ. ಸೌಹಾರ್ದತೆಯ ಮಿಣುಕು ದೀಪ: ಧಾರ್ಮಿಕ ನಂಬಿಕೆಗಳು ಮತೀಯ ಭಯಾವತಾರಗಳಾಗಿ, ಸಂಪೂರ್ಣ ರಾಜಕೀಯ ಅಜೆಂಡಾ ಆಗಿ ಬಳಕೆಯಾಗುತ್ತಿರುವ ಸಂದರ್ಭದಲ್ಲಿ ಜನಪದರು ಕಟ್ಟಿ ಉಳಿಸಿಕೊಂಡು ಬಂದ ಸೌಹಾರ್ದತೆಯ ದಾರಿಯನ್ನು ಮರುರೂಪಿಸಿಕೊಳ್ಳಬೇಕಿದೆ. ನೆನಪಿನ ಓರಿಯೊಳಗ ಮಿಣಕತಾವ ಎಣ್ಣೆದೀಪ-ಎನ್ನುತ್ತಾರೆ ಕವಿ ಬೇಂದ್ರೆ. ಆ ಎಣ್ಣೆದೀಪದ ಬೆಳಕಿನ ಭರವಸೆಯಲ್ಲಿ ಸಾಗಬೇಕಿದೆ. ಆಧುನಿಕ ತಂತ್ರಜ್ಞಾನದ ಕಾಲದಲ್ಲಿಯ ಸೌಲಭ್ಯಗಳನ್ನು ಅನುಭವಿಸುತ್ತ ಗ್ರಹ ತಾರಾಕೂಟಗಳು ನಮ್ಮ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ ಎಂಬ ಮೌಢ್ಯವನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ. 'ರಾತ್ರೋರಾತ್ರಿ ದೇವಾಲಯವನ್ನು ಕಟ್ಟು, ಮೌಢ್ಯವನ್ನು ಬೆಳೆಸು. ಹಣ ಸಂಗ್ರಹಿಸು. ಬೊಕ್ಕಸಕ್ಕೆ ಬಳಸು' ಎಂಬ ಚಾಣಾಕ್ಯ ನೀತಿಯನ್ನು ಇನ್ನಾದರೂ ಕಿತ್ತೆಸೆಯಬೇಕಿದೆ.

ಜನ ಕೂಡು ಬದುಕಿನಲ್ಲಿ ನಂಬಿಕೆಯಿಟ್ಟವರು. ಆ ವಿವೇಕ ತತ್ವ ಇಂದಿನ ಅಗತ್ಯ. ಈ ನಾಡಿನ ಕಲೆ, ಸಾಹಿತ್ಯ ಸಂಗೀತಗಳು ಸಂಕರಶೀಲತೆಯಿಂದ ಮೈದಾಳಿದವು. ವಿಜ್ಞಾನ, ಸಂಗೀತ, ನೃತ್ಯ ಸಿನಿಮಾ, ಚಿತ್ರಕಲೆ, ಸಾಹಿತ್ಯ ಕ್ರೀಡೆ, ರಾಜಕೀಯ ಯಾವುದನ್ನು ಶುದ್ಧ ಜಾತಿ-ಧರ್ಮಗಳಿಂದ ನೋಡಲಾದೀತು? 'ಕಸವರೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮುಮಂ, ಪರಧರ್ಮಮುಮಂ' ಎನ್ನುವ ಕವಿರಾಜಮಾರ್ಗದಿಂದ ಈ 'ನೈತಿಕ ಧರ್ಮ'ದ ಮಾತನ್ನು ಕಾವ್ಯ ಸಾಹಿತ್ಯಗಳು ಅನುವಾದಿಸುತ್ತಲೇ ಬಂದಿವೆ. 'ನಾವು ವಿಜ್ಞಾನ ಕಲಿತೆವು ವೈಜ್ಞಾನಿಕ ಮನೋಧರ್ಮವನ್ನು ಕಲಿಯಲಿಲ್ಲ' ಎಂದ ಕವಿ ಕುವೆಂಪು ವಿಜ್ಞಾನ ಬುದ್ಧಿಯ ಅಗತ್ಯವನ್ನು ಕಾವ್ಯಧರ್ಮವಾಗಿಸಿದವರು. ವರ್ತಮಾನದ ರಾಜಕಾರಣ ಮತೀಯ ಹಿಂಸೆಯನ್ನು ಆಹಾರ ರಾಜಕಾರಣದ ಮೂಲಕ ಪ್ರತಿಪಾದಿಸ ಹೊರಟಾಗ ಕನ್ನಡ ಸಾಹಿತ್ಯ ಸೌಹಾರ್ದತೆಯ ಮಿಣುಕು ದೀಪವನ್ನು ಕಾಪಾಡಲು ಸಜ್ಜಾಗಿದೆ. 'ನಾನು ಅಸ್ಪೃಶ್ಯ, ಗೋವು ತಿಂದು ... ಎಂಬ ಎನ್ನೆ ಕವಿತೆಯನ್ನು ಹೀಗಲ್ಲದೆ ಹೇಗೆ ಓದುವುದು? ಇಂತಹ ಸಾವಿರ ಉದಾಹರಣೆಗಳು ಕನ್ನಡದ ಅಂತರಂಗದಲ್ಲಿವೆ.

ವೈಚಾರಿಕತೆ ಮತ್ತು ಕಲೆ ಎರಡು ಪ್ರತ್ಯೇಕ ಚಹರೆಗಳಲ್ಲ, ಬಸಿರಾಟದ ವಿಜ್ಞಾನ ಪಾಠ ಸರಿಯಾಗಿ ತಿಳಿದಾಗ, ಹೊಲಗೇರಿ ಶಿವಾಲಯಕೆ ಎಂಬ ಸಾಹಿತ್ಯದ ಪಾಠವೂ ತಿಳಿಯುತ್ತದೆ. ನಮ್ಮ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಸೇರಿಸಿದ್ದ ಸಮಾಜವಾದಿ, ಧರ್ಮನಿರಪೇಕ್ಷ (ಜಾತ್ಯತೀತ) ಪದಗಳ ಅಗತ್ಯವನ್ನು ಕಲಿತಿದ್ದರೆ ಆ ಪದಗಳ 'ಕೇಸರೀಕರಣದ' ಬಗ್ಗೆ ಗಾಬರಿಯಾಗುತ್ತದೆ. ಸಂವಿಧಾನದ ಆಶಯವನ್ನು ಅಪಹರಿಸಿದ ವಿಧಾನದ ಬಗ್ಗೆ ಪ್ರಶ್ನೆಯೇಳುತ್ತದೆ. ... ಅರ್ಥಕಳೆದುಕೊಂಡು, ಕಲಿತಾಗ ಭ್ರಷ್ಟಾಚಾರ ವಿರೋಧಿ ಮಾತುಗಳಿಗೂ ತನ್ನನ್ನು ತಾನು 'ಶೋ ಮ್ಯಾನ್' ಮಾಡಿಕೊಳ್ಳುವ ಮನಸ್ಸಿಗೂ ಇರುವ ಅಂತರ ಕಣ್ಣಿಗೆ ... ಧಾರ್ಮಿಕ ನಂಬಿಕೆಗಳು ಮತಾಂಧತೆಯ ಆಹಾರದ ಚಟುವಟಿಕೆಯಾಗಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ... ಗೊಳಿಸುವಾಗ ಯಾವ ಬೆಲೆ ತೆತ್ತಾದರೂ ... ಕಾಪಾಡಿಕೊಳ್ಳಬೇಕಾಗುತ್ತದೆ. ●

ಮಾರುತಿ ಗುರೂಜಿಯ ಗಂಡಾಗುಂಡಿ

→11 ಹೋದ. ಈ ಸಂತೋಷ್ ವಿಧಾನ ಪರಿಷತ್‌ನ ಬಾಯಿ ಹರುಕ ಪ್ರತಿಪಕ್ಷ ನಾಯಕ ಕೆ.ಎಸ್. ಈಶ್ವರಪ್ಪನ ಹತ್ತಿರದ ಸಂಬಂಧಿ. ಈಶ್ವರಪ್ಪ ಸಂತೋಷ್‌ಗೆ ತಾಯಿ ಮತ್ತು ತಂದೆ ಎರಡೂ ಕಡೆಯಿಂದ ರಕ್ತ ಬಂಧು. ಸಂತೋಷ್ ಗುರೂಜಿಗೆ ಮಹತ್ವ ಕೊಡುವುದು ವಿನಾಯಕನನ್ನು ಕೆರಳಿಸಿತ್ತು, ಮನೆಯಿಂದ ಹೊರಹೋಗ್ತೇನೆ ನನ್ನ ಪಾಲು ಕೊಡು ಎಂದಾತ ಗುರೂಜಿಗೆ ಕಾಡಲು ಶುರು ಮಾಡಿದ್ದು ಇಲ್ಲಿಗೆ ಮೂರು ವರ್ಷದ ಹಿಂದೆ.

ತಾಯಿ ಗಂಗಾಳೂ ಮಾರುತಿಗೆ ಪಾಲು ಕೊಡಲು ಪದೇಪದೇ ಹೇಳುತ್ತಿದ್ದರು. ಅತ್ತ ಅತ್ತಿಗೆಯೂ ಹೊರಹೋಗುವ ಸನ್ನಿಹದಲ್ಲಿದ್ದಳು. ಇದರಿಂದ ಗುರೂಜಿ ಕಂಗಾಲಾಗಿಹೋದ. ತನ್ನ ವ್ಯವಹಾರ ಗೊತ್ತಿರುವ ಈ ತಮ್ಮ-ಅತ್ತಿಗೆ ಆಸ್ತಿಗೆ ಮುಳುವಾಗುತ್ತಾರೆಂದು ಆತ ಒಂದು ಪ್ಲಾನ್ ಹೆಣೆದ. ಬಂಗಾರಮಕ್ಕಿ ಸುತ್ತಲಲ್ಲಿ ಇರುವ ಜಾಗ, ತೋಟ ಎಲ್ಲವನ್ನೂ ತನ್ನ ಹೆಸರಿಗೆ ಬರೆಸಿಕೊಳ್ಳಲು ಮುಂದಾದ. ಇದಕ್ಕೆ ಬದಲಾಗಿ ಸೊರಬದ 12 ಎಕರೆ ಮಾತ್ರ ತಾಯಿ-ತಮ್ಮನಿಗೆ ಕೊಟ್ಟು ಅವರಿಬ್ಬರನ್ನೂ ಕ್ಷೇತ್ರದಿಂದ ಹೊರಹಾಕುವ ಸ್ಕೆಚ್ ಹಾಕಿದ. ಇದಕ್ಕೆ ತಾಯಿ-ತಮ್ಮ ಬಿಲ್‌ಕುಲ್ ಒಪ್ಪಲಿಲ್ಲ.

ತಾನೇ ಸ್ವಂತ ಹಣದಲ್ಲಿ ಖರೀದಿಸಿದ್ದ ಈ ತೋಟ-ಜಾಗದ ಮೇಲೆ ತಾಯಿ-ತಮ್ಮನಿಗೆ ಹಕ್ಕಿಲ್ಲ ಎಂಬ ವಾದ ಗುರೂಜಿಯದಾದರೆ ತನ್ನ ಮತ್ತು ತಾಯಿ ಹೆಸರಲ್ಲಿರುವ ಜಾಗ ತಾಯಿ-ತಂದೆಯ ಸ್ವಂತಾರ್ಜಿತ ಎಂಬ ತರ್ಕ ಹುಂಬ ವಿನಾಯಕನದು. ಆಗ ಮಾರುತಿ ಗುರೂಜಿ ಸಾಗರದ ನೋಟರಿ ಪಬ್ಲಿಕ್ ಎಚ್. ನಾಗಪ್ಪರ ಮೊರೆ ಹೋದ. ಅಲ್ಲೊಂದು ಜನರಲ್ ಪವರ್ ಆಫ್ ಅಟಾರ್ನಿ (ಜಿಪಿಎ) ಸಿದ್ಧವಾಗುತ್ತದೆ. ತಮ್ಮ ಹೆಸರಲ್ಲಿರುವ ಜಾಗ ಮಾರುವ ಅಧಿಕಾರ ತಾವು ಮಾರುತಿ ಭಟ್ಟನಿಗೆ ಕೊಟ್ಟಿದ್ದೇವೆಂದು ಗಂಗಾ ಭಟ್ ಮತ್ತು ವಿನಾಯಕ ಕೊಟ್ಟ ಜಿಪಿಎ ಇದು. ಇದನ್ನು 23.7.2012ರಂದು ಮಾಡಲಾಗುತ್ತದೆ. ಇದೇ ಜಿಪಿಎ ಆಧಾರದಲ್ಲಿ 4.8.12ರಂದು ಹೊನ್ನಾವರ ಸಬ್‌ರಿಜಿಸ್ಟರ್ ಕಚೇರಿಯಲ್ಲಿ ಗಂಗಾ ಮತ್ತು ವಿನಾಯಕನ ಹೆಸರಲ್ಲಿದ್ದ ಸ್ಥಿರಾಸ್ತಿ ಮಾರುತಿ ಭಟ್ಟನ ಹೆಸರಿಗೆ ವರ್ಗಾವಣೆ ಆಗುತ್ತದೆ.

ತಿರುಗಿಬಿದ್ದಳು ತಾಯಿ!!


ಈ ಆಸ್ತಿ ಸಂಬಂಧವಾಗಿ ವೀರಾಂಜನೇಯ ಕ್ಷೇತ್ರ ಎಂಬುದು ಅಣ್ಣ-ತಮ್ಮಂದಿರ ಹೊಡೆದಾಟದ ಅಂಕಣ ಆಗುತ್ತದೆ. 2012ನೇ ಇಸ್ವಿಯ ಮಾರ್ಚ್ ತಿಂಗಳಲ್ಲಿ ಬಂಗಾರಮಕ್ಕಿಯ ಗುರೂಜಿ ಸಂಸ್ಥಾನದಲ್ಲಿ ನಿತ್ಯ ಮಾರಾಮಾರಿ. ಅಣ್ಣ ಮಾರುತಿ ತನಗೆ ತಮ್ಮ ಹೊಡೆದು-ಬಡಿದು ತನ್ನ



ಸ್ಫಟಿಕದ ಪವಿತ್ರ ಮಾಲೆ ಹರಿದು ಹಾಕಿದ್ದಾನೆ ಅಂತಾನೆ. ಇದಕ್ಕೆ ಪ್ರತಿಯಾಗಿ ಹಿರಿಯ ಮಗ ರಾಮಚಂದ್ರ ಮತ್ತು ಮಾರುತಿ ಸೇರಿ ತನಗೆ ಹೊಡೆದು ಹಿಂಸಿಸಿದ್ದಾರಲ್ಲದೆ, ಗೋಣಿಮೂಟೆ ಎತ್ತಿ ಬಿಸಾಡುವಂತೆ ಮನೆಯಾಚೆ ಎಸೆದಿದ್ದಾರೆ ಎಂದು ಎಸ್ಪಿ ಗಂಗಾಧರ್ ಮತ್ತು ಕೆಳ ಹಂತದ ಪೊಲೀಸರಿಗೆಲ್ಲ ಕಂಪ್ಲೇಂಟು ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಬದ್ರುಕಾನ್‌ನ ರಾಮಚಂದ್ರನ ನೆರವಿನಿಂದ ಉಡುಪಿಯ ಶ್ರೀನಿವಾಸ್ ನಾಯಕ್ ಎಂಬಾತನನ್ನು ಹಿಡಿದುಕೊಂಡು ಹೊನ್ನಾವರ ನ್ಯಾಯಾಲಯದಲ್ಲಿ ವಂಚನೆಯ ಕೇಸೂ ಜಡಿದಿದ್ದಾರೆ. ಆಸ್ತಿ ಲಪಟಾಯಿಸಿದ್ದಾರೆಂದು ಗೋಗರೆಯುತ್ತಿರುವ ಗಂಗಾ ಭಟ್ಟ ಮಗ ಮಾರುತಿ ಮೇಲೆ ಯಾವ ದೇವರೂ ಬರುತ್ತಿಲ್ಲ; ಆತ ಢೋಂಗಿ ಅಂತಿದ್ದಾರೆ. ಮಾರುತಿ ತಾಯಿ ಬಂಗಾರ ಕದ್ದೊಯ್ದಿದ್ದಾರೆಂದು ಹಲುಬುತ್ತಿದ್ದಾನೆ.

ಅಂತೂ ಮಾರ್ಚ್ ಕೊನೆಯಲ್ಲಿ ಗಂಗಾ-ವಿನಾಯಕ ಇಬ್ಬರೂ ಬಂಗಾರಮಕ್ಕಿಗೆ ವಿದಾಯ ಹೇಳಿ ದೂರದ ಆಂಧ್ರದ ಆದೂನಿ ಎಂಬಲ್ಲಿಗೆ ಹೋಗುತ್ತಾರೆ. ಇತ್ತ ನ್ಯಾಯಾಲಯ-ಪೊಲೀಸ್ ಕಚೇರಿಯಲ್ಲಿ ಹೋರಾಟ ನಡೆಯುತ್ತದೆ. ಅಲ್ಲಿ ಆದೂನಿಯಲ್ಲಿ ವಿನಾಯಕ ಗ್ರಾನೈಟ್ ಬಿಸ್ನೆಸ್ ಆರಂಭಿಸುತ್ತಾನೆ. ಗೇರುಸೊಪ್ಪೆಯ ಗ್ರಾಮ ಪಂಚಾಯ್ತಿ ಮೆಂಬರ್‌ನಾಗಿರುವ ಆತನಿಗೆ ಅಣ್ಣನ ಗೂಂಡಾಪಡೆ ಊರಿಗೆ ಬಂದಾಗ ಹೊಡೆಸುತ್ತದೆಂಬ ಭಯ ಕಾಡುತ್ತಿದೆ. ಹಾಗಾಗಿ ಆತನೂ ಬೀದಿ ಕಾಳಗಕ್ಕೆ ರೆಡಿಯಾಗೇ ಬರ್ತಾನೆ. ಹಿಂದೆರಡು





ಮುಂದೆರಡು ಸ್ಕಾರ್ಪಿಯೋದಲ್ಲಿ ಗೂಂಡಾಗಳನ್ನಿಟ್ಟುಕೊಂಡು ನಡುವೆ ತನ್ನ ಸ್ಕಾರ್ಪಿಯೋದಲ್ಲಿ ಬರ್ತಾನೆ. ಸೇರಿಗೆ ಸವ್ವಾ ಸೇರು ತಾನೆಂದು ಅಣ್ಣನಿಗೆ ಸಂದೇಶ ಕಳಿಸುವುದೇ ಆತನ ಉದ್ದೇಶ.

ಹೊಸಿಲು ದಾಟಿದಳು ಅತ್ತಿಗೆ!!

ಈ ತಾಯಿ-ಮಕ್ಕಳ ಕದನ ಆಂಜನೇಯನ ಸನ್ನಿಧಿಯಲ್ಲೇ ನಡೆಯುತ್ತಿರುವುದು ಬಂಗಾರಮಕ್ಕಿಯ ಮೂಲ ಭಕ್ತರೇ ಗುರೂಜಿ ಬಗ್ಗೆ ನಂಬಿಕೆ ಕಳೆದುಕೊಳ್ಳುವಂತೆ ಮಾಡಿದೆ. ಸದ್ರಿ ಬೀದಿ ಕಾಳಗದಲ್ಲಿ ನೇರ ಏಟು ಬಿದ್ದಿರುವುದು ಮಾರುತಿ ಭಟ್ಟನ ದೈವಾಂಶಸಂಭೂತನೆಂಬ ಇಮೇಜಿಗೆ. ಹೀಗಾಗಿ ಒಂದಿಷ್ಟು ಆತನ ಕಟ್ಟಾ ಬೆಂಬಲಿಗರಾದ ಅಡಿಕೆ-ಬಂಗಾರ-ಚೆಪ್ಪಿ ವ್ಯಾಪಾರಸ್ಥರು, ಹಿತೈಷಿ ಪತ್ರಕರ್ತರು ರಾಜಿಗೆ ಪ್ರಯತ್ನಿಸಿದ್ದಾರೆ. ಪೊಲೀಸ್ ಅಧಿಕಾರಿಗಳೂ ಎರಡು ವರ್ಷದ ಹಿಂದೆ ಈ ರಾಜಿ ಪಂಚಾಯ್ತಿಕೆಯ ಪೌರೋಹಿತ್ಯ ವಹಿಸಿದ್ದರು. ಆದರೆ ಮಾರುತಿ ಭಟ್ಟನೇ ಆಂಧ್ರದಿಂದ ತನ್ನ ತಮ್ಮ ವಿನಾಯಕ ಗೂಂಡಾಗಳನ್ನು ಪಂಚಾಯ್ತಿಕೆ ಜಾಗಕ್ಕೆ ಕರೆತರುತ್ತಾನೆಂದು ಹೆದರಿ ಮಾತುಕತೆಗೆ ಬರಲೇ ಇಲ್ಲ.

ಅಲ್ಲಿಗೆ ಭಕ್ತಾಗ್ರೇಸರ ರಾಜಿ ಪಂಚಾಯ್ತಿಯೂ ಮುರಿದುಬಿತ್ತು. ಗುರೂಜಿ ಕುಟುಂಬ ಕಲಹ ದೊಡ್ಡ ಸುದ್ದಿಯಾಗಿ ನಂತರ ಕೋರ್ಟು ಕಚೇರಿ ಸುತ್ತ ಗಿರಕಿ ಹೊಡೆವ ಪ್ರಕರಣವಾಗಿ ಸದ್ದು ಮಾಡದೇ ಚಾಲ್ತಿಯಲ್ಲಿತ್ತು. ಇದಕ್ಕೆ ಕಳೆದ ನವೆಂಬರ್ ಮೊದಲ ವಾರದಲ್ಲಿ ಹಿರಿಯ ಸೊಸೆ ನಯನಾ ಎಂಟ್ರಿ ಹೊಡೆದಿದ್ದಾರೆ. ಗುಡ್ಡೆಬಾಳ ಎಂಬ ಹಳ್ಳಿಯಲ್ಲಿರುವ ಸೋದರ ಮಾವನ ಮನೆಗೆಂದು ಹೋಗಿದ್ದ ನಯನಾ ಅಲ್ಲಿಂದ ಕಣ್ಮರೆಯಾಗಿದ್ದರು. ಆಕೆ ಪ್ರತ್ಯಕ್ಷವಾಗಿದ್ದು 'ರಾಜಧಾನಿ ಎಕ್ಸ್‌ಪ್ರೆಸ್' ಎಂಬ ತಗಡು ಪತ್ರಿಕೆಯ ಸಂಪಾದಕಿಯಾದ ಪದ್ಮಾ ಭಟ್ ಎಂಬ ರಸಿಕ ಸ್ವಾಮಿ ರಾಘುನ ಅತ್ಯಾಪ್ತೆಯ ಅಬಲಾಶ್ರಮ ಅಡ್ಡೆಯಲ್ಲಿ!! ಪದ್ಮಾ ಭಟ್ಟನ ನಿರ್ದೇಶನದಲ್ಲಿ ನಯನಾ ಗಂಡ ರಾಮಚಂದ್ರ ಭಟ್ ಮತ್ತು ಮೈದುನ ಮಾರುತಿ ಗುರೂಜಿ ಮೇಲೆ ದೈಹಿಕ-ಮಾನಸಿಕ ಮತ್ತು ಲೈಂಗಿಕ ದೌರ್ಜನ್ಯದ ದೂರು ಸಾಕ್ಷಾತ್ ಪೊಲೀಸ್ ಮಹಾನಿರ್ದೇಶಕರಿಗೇ ಕೊಟ್ಟಿದ್ದಾರೆ.

ಹುಲೀಗಾರ್ ಗ್ರಾಮದಲ್ಲಿ ತನ್ನ ಹೆಸರಲ್ಲಿ ಇರುವ 1.13 ಎಕರೆ ತೋಟವನ್ನು ಮೈದುನ ಮಾರುತಿ ಭಟ್ ಕಸಿಯಲು ಹವಣಿಸುತ್ತಿದ್ದಾನೆ. ತನ್ನ ಹೆಸರಿಗೆ ಆ ಜಮೀನು ಬರೆದುಕೊಡು ಎಂದು ಬೆದರಿಸಿ-ಪೀಡಿಸಿ ಕಾಡುತ್ತಿದ್ದಾನೆ. ಲೈಂಗಿಕವಾಗಿ ಬಳಸಿಕೊಳ್ಳಲು ಸಮಯ ಸಾಧಿಸುತ್ತಿದ್ದಾನೆ. ಹಾಗಾಗಿ ತಾನು ಓಡಿಬಂದು ಬೆಂಗಳೂರಿನ ಕೆಂಗೇರಿಯಲ್ಲಿ ಪದ್ಮಾ ಭಟ್ಟರ ಶ್ರೀ ಸತ್ಯಸಾಯಿ ಮಹಿಳಾ ... ಎಂದು ... ಆಕೆ ಪೊಲೀಸರಿಗೆ ಕೊಟ್ಟಿರುವ ಹೇಳಿಕೆಯಲ್ಲಿ ತಾನು ಮನೆ ಬಿಟ್ಟು ಬರಲು ಸ್ಥಳೀಯ ಬಿಜೆಪಿ ಮತ್ತು ಕನ್ನಡ ರಕ್ಷಣಾ ವೇದಿಕೆ (ಸ್ವಾಭಿಮಾನಿ ಬಣ)ಯ ಜಿಲ್ಲಾ ಮಹಾಮಹಿಮ ಎಚ್.ಆರ್. ಗಣೇಶ್ (ಹೆಗಡೆ) ಕಾರಣ ಅಲ್ಲವೆಂದು ಹೇಳಿದ್ದಾಳೆ. ರಾಮಚಂದ್ರ ಭಟ್ ತನ್ನ ಹೆಂಡತಿ ಈ ಗಣೇಶನ ಜತೆ 'ಅನ್ಯೋನ್ಯ' ಸಂಬಂಧ ಹೊಂದಿದ್ದು, ಆತನೇ ಆಕೆಯ ಕಣ್ಮರೆಗೆ ಕಾರಣ ಎಂದು ಕಂಪ್ಲೇಂಟಿನಲ್ಲಿ ಹೇಳಿದ್ದ. ಬೋಳೆ ಸ್ವಭಾವದ ರಾಮಚಂದ್ರ ಭಟ್ಟರ ದಾಂಪತ್ಯದಲ್ಲಿ ಬಿರುಕು ಬಂದು ಈ ಗಣೇಶ್ ಎಂಬ ಮಹಿಳೆಯರನ್ನು ಮಾತೆ ಎಂದು ಕರೆವ ಸಂಸ್ಕೃತಿಯ ಸಂಘ ಪರಿವಾರದ ಪರಾ'ಕ್ರಮಿ'ಯೇ ಕಾರಣ ಎಂದು ಗುರೂಜಿ ಸಂಸಾರ 'ಸಾರ' ಬಲ್ಲವರು ಹೇಳುತ್ತಾರೆ. ಗುರೂಜಿಯ ಕಳ್ಳಕಾಸಿನ ಮೇಲೆ ಕಣ್ಣಿಟ್ಟಿರುವ ಗಣೇಶ ಅಮಾಯಕ ನಯನಾರನ್ನು ದಾರಿ ತಪ್ಪಿಸಿದ್ದಾನೆಂಬುದು ಸಾರ್ವತ್ರಿಕ ಅನಿಸಿಕೆ!

ಮೂರು ತಿಂಗಳಿಂದ ಮಾಯಾಂಗನೆ ಪದ್ಮಾಳ ಕಬ್ಜಾದಲ್ಲಿದ್ದ ನಯನಾ ಭಟ್ಟಳನ್ನು ಮನೆಗೆ ವಾಪಸ್ ಕರೆತರಲು ಆಕೆಯ ಗಂಡ ರಾಮಚಂದ್ರ ಶತಾಯಗತಾಯ ಪ್ರಯತ್ನ ಮಾಡಿದ್ದಾರೆ. ಎಲ್ಲವನ್ನೂ ಮರೆತು-ಕ್ಷಮಿಸಿ ಸಂಸಾರ ಮಾಡಲು ರಾಮಚಂದ್ರ ಭಟ್ಟ ಸಿದ್ಧರಾಗಿ ರಾಜಿಗೆ ಹಲವರನ್ನು ಬೆಂಗಳೂರಿಗೆ ಕಳಿಸಿದ್ದರು. ಹೊನ್ನಾವರದ ಕಳ್ಳ ಅಡಿಕೆ ವ್ಯಾಪಾರಿ ಎಂ.ಆರ್. ನಾಯ್ಕ್, ಬಂಗಾರ ದಂಧೆಯ ಗಜಾನನ ಶೇಟ್ ಮತ್ತು ಶಿವಮೊಗ್ಗದ ಮೆಡಿಕಲ್ ಶಾಪ್ ಮಾಲೀಕ ರಮೇಶ್ ರಾವ್ ಪದ್ಮಾಳ ಆಶ್ರಮಕ್ಕೆ ಹೋಗಿ ಪುಸಲಾಯಿಸಿ ಮನೆಗೆ ಬರುವಂತೆ ನಯನಾಗೆ ಹೇಳಿದ್ದಾರೆ. ಆದರೆ ಗಣೇಶ್ ಮತ್ತಾತನ ಫೇಸ್‌ಬುಕ್ ಗೆಳತಿ ಪದ್ಮಾರ ದುರ್ಬೋಧೆಯಿಂದ ನಯನಾ ಮನೆಗೆ ಬರಲು ಹಿಂದೇಟು ಹಾಕಿದ್ದಾರೆ. ಇಂಥ ಸಂಧಾನಗಳು ಮೂರು ತಿಂಗಳಿಂದ ನಡೆದೇ ಇತ್ತು. ಆದರೆ ನಯನಾಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡವರಿಗೆ ಬೇಕಾದ ಕಾಸು ಬಿಚ್ಚಲು ಮಾತ್ರ ಭಾರದ ಬಹಾದ್ದೂರ್ ಮಾರುತಿ ಸಿದ್ಧನಾಗಿಲ್ಲ. ಹೀಗಾಗಿ ನಯನಾಗೆ ಕೆಂಗೇರಿ ಆಶ್ರಮದಿಂದ ಮುಕ್ತಿ ಸಿಗುತ್ತಿಲ್ಲ.

ಹಲವು ದಿನಗಳಿಂದ ಮುಸುಕಲ್ಲೇ ಹೊಯ್ದಾಡುತ್ತಿದ್ದ ಗುರೂಜಿ ಕುಟುಂಬದ ಆಸ್ತಿ ಮತ್ತು ಸೊಸೆ ಸಂದಿಗ್ಧ ಪ್ರಕರಣ ಕಳೆದ ವಾರ ರಾಜ್ಯಾದ್ಯಂತ ಢಾಣಾ ಡಂಗೂರ ಆಗಿಹೋಯ್ತು. ಪದ್ಮಾ ಭಟ್ ಮತ್ತು ಗಣೇಶ್ ಹೆಗಡೆ, ಮತ್ತವನ ಸ್ವಾಭಿಮಾನಿ ಗ್ಯಾಂಗ್‌ನ ದೊರೆ ಕೃಷ್ಣೇಗೌಡರೆಲ್ಲ ಸೇರಿ ನಯನಾಳನ್ನು ಟಿವಿ ಚಾನೆಲ್‌ಗಳ ಕ್ಯಾಮೆರಾದ ಮುಂದೆ ತಂದು ಕೂಡಿಸಿದ್ದರು. ನಯನಾ ಭಟ್ ತಾನು ನೊಂದ ಹೆಂಗಸೆಂದು ಬಿಂಬಿಸಿ ಕರುಣೆ ಉಕ್ಕಿಸಲು ನೋಡಿದ್ದಾರೆ. ಆದರೆ ಆಕೆಯ ನೋವಿಗೆ ಪೆದ್ದು ಗಂಡ ರಾಮಚಂದ್ರನ ಎಡವಟ್ಟುತನ ಅದೆಷ್ಟು ಕಾರಣವೋ ಅಷ್ಟೇ ಹೊಣೆ ಮಾಟಗಾತಿ ಪದ್ಮಾ ಭಟ್ ಮತ್ತು ಐನಾತಿ ಆಸಾಮಿ ಗಣೇಶ್ ಎಂಬುದು ಟಿವಿ ನೋಡಿದವರಿಗೆಲ್ಲಾ ನಿಸ್ಸಂದಿಗ್ಧವಾಗಿ ಸಾಬೀತಾಗಿಹೋಗಿದೆ. ಯಾವಾಗ ನಯನಾಳ ಹೆತ್ತ ತಾಯಿ 'ಗಣೇಶ್ ಹಾಗೆಲ್ಲಾ ಮಾಡಬಾರದಿತ್ತು' ಎಂದು ಟಿವಿಯಲ್ಲಿ ಹೇಳಿದಳೋ ಆಗ ನಯನಾ-ಗಣೇಶ್-ರಾಮಚಂದ್ರ-ಗುರೂಜಿಗಳ ಅಸಲಿಯತ್ತು ಅರ್ಥವಾಗಿ ಹೋಗಿದೆ. ನಯನಾಳ ಹಿರಿಯ ಮಗಳು ಆಡಿದ ಮಾತುಗಳಂತೂ ಆಕೆಯ ತಾಯಿ ಯಾರದೋ ಬಣ್ಣದ ಮಾತಿಗೆ ಬಲಿಯಾಗಿದ್ದಾಳೆಂಬುದು ಖಾತ್ರಿ ಮಾಡುತ್ತವೆ.

ಈಗ ದೇವಮಾನವ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾನೆ. ಭಾರದಲ್ಲಿ ಬೇರೆಯವರ ಸಮಸ್ಯೆ ನೀಗಿದಷ್ಟು ಸಲೀಸಾಗಿ ಮಾರುತಿ ಭಟ್ಟನಿಗೆ ತನ್ನ ಸಂಕಷ್ಟ ಪರಿಹರಿಸಿಕೊಳ್ಳಲಾಗುತ್ತಿಲ್ಲ. ಈ ಮಾರುತಿಯ ಮಹಿಮೆ ಅದೇನೇ ಇರಲಿ, ಆತನ ಕಳ್ಳ ಹಣದ ಮೇಲೆ ಕಣ್ಣಿಟ್ಟವರು ನಯನಾ ಭಟ್ಟಳ ಗೊಂದಲ-ವಿಕ್ಷಿಪ್ತ-ಆಕೆಯ ಗಂಡನ ಪೆದ್ದುತನ ಬಳಸಿಕೊಂಡು ಒಂದು ಸಂಸಾರಕ್ಕೆ ಕೊಳ್ಳಿ ಹಾಕಿದ್ದು ಮಾತ್ರ ಕರುಣಾಜನಕವಾಗಿದೆ. ಒಂದು ಮಗಳಿಗೆ ತಾಯಿ ಇಲ್ಲವಾದರೆ, ಇನ್ನೊಬ್ಬಳಿಗೆ ತಂದೆ ಇಲ್ಲ. ಈ ಪಾಪ ತಟ್ಟುವುದು ಪದ್ಮಾ ಭಟ್ಟ, ಗಣೇಶ ಹೆಗಡೆ ಮತ್ತು ಅವರ ...

● ಶುದ್ಧೋಧನ

ಶ್ರೀಶ್ರೀಶ್ರೀ ಮಹಾದುರ್ದಂಡನಾಥ ಸ್ವಾಮಿಗಳ ಪ್ರಹಸನವು

ಕೆಲವು ಮಠಾಧೀಶರ ವಿಲಾಸೀ ಜೀವನಶೈಲಿ, ಅಧಿಕಾರದ ಗತ್ತು, ಮಾತಿನ ವರಸೆ ಇಂತಹವುಗಳನ್ನು ನೋಡಿದಾಗ ಇಂದ್ರನ ವೈಭೋಗ ಅಂದರೆ ಇದೇ ಇರಬೇಕು ಅನ್ನಿಸದಿರದು. ದುರ್ದಂಡ ಮಠದ ಪೀಠಾಧಿಕಾರಿಗಳಾಗಿದ್ದ ಶ್ರೀಶ್ರೀಶ್ರೀ ಮಹಾದುರ್ದಂಡನಾಥ ಸ್ವಾಮಿಗಳು ಸಕಲ ಸೌಲಭ್ಯಗಳನ್ನೂ ಅನುಭವಿಸುವ ಭಾಗ್ಯವಂತರಾಗಿದ್ದರು ಎಂದು ತಿಳಿಸಿದರೆ ಇಂತಹ ಮಹಾಸ್ವಾಮಿಗಳ ಪರಿಚಯ ಮಾಡಿದಂತೆ ಆದೀತು.

ಯಥೇಚ್ಛವಾಗಿ ಹಾಲು ದೊರೆಯುವಾಗ ಹಸು ಸಾಕುವುದು ಮೂರ್ಖತನ ಎಂದು ದುರ್ದಂಡನಾಥ ಸ್ವಾಮಿಗಳು ನಂಬಿದ್ದರು. ಹಾಗಾಗಿಯೇ ಮಹಾಸ್ವಾಮಿಗಳು ವಿವಾಹ ಬಂಧನಕ್ಕೆ ಒಳಗಾಗಿರಲಿಲ್ಲ, ಆದರೂ ಆಯಸ್ಕಾಂತ ಕಬ್ಬಿಣವನ್ನು ಆಕರ್ಷಿಸುವಂತೆ ಭಕ್ತರಿಗೂ ಮಿಗಿಲಾಗಿ ಭಕ್ತೆಯರ ಸೆಳೆತ ಪ್ರಭಾವಶಾಲಿಯಾಗಿತ್ತು, ದುರ್ದಂಡಮಠ ಮಹಿಳೆಯರ ಕಲರವ ಸದಾ ಕಾಲವು ಅನುರಣಿಸುತ್ತಾ ಆನಂದಮಯವಾಗಿತ್ತು, ತ್ರಿಕರಣ ಶುದ್ಧಿ ಪೂರ್ವಕವಾಗಿ ತಮ್ಮನ್ನು ಅರ್ಪಿಸಿಕೊಂಡ ಮಹಿಳಾಮಣಿಗಳೆಂದರೆ ಸ್ವಾಮಿಗಳಿಗೆ ವಿಶೇಷ ಮಮತೆ. ಅಂತಹ ಸಮರ್ಪಣಾಭಾವಕ್ಕೆ ಮಠಾಧೀಶರು ಕರಗಿ ನೀರಾಗುತ್ತಿದ್ದರು. ದೈವತ್ವವನ್ನು ಆವಾಹಿಸಿಕೊಳ್ಳುತ್ತಿದ್ದರು. ತಾವೇ ದೈವವಾಗುತ್ತಿದ್ದರು. ದೈವಸ್ವರೂಪಿ ದುರ್ದಂಡನಾಥ ಸ್ವಾಮಿಗಳು ಆಯ್ದ ಶಿಷ್ಯೆಯರಿಗೆ 'ಕತ್ತಲ ಏಕಾಂತ ದರ್ಶನ' ದಯಪಾಲಿಸಿ ಅವರನ್ನು ಕೃತಾರ್ಥರನ್ನಾಗಿ ಮಾಡುತ್ತಿದ್ದರು. ಈ ಕೈಂಕರ್ಯದಿಂದ ಭಕ್ತೆಯೂ ಕೃತಾರ್ಥಭಾವನೆ ಪಡೆದರೆ ಭಕ್ತೆಗೂ ಸುಖ, ಸ್ವಾಮಿಗಳಿಗೂ ನೆಮ್ಮದಿ. ಸರ್ವಸಂಗಪರಿತ್ಯಾಗಿ ಮಠಾಧೀಶರೂ ಕತ್ತಲ ಏಕಾಂತದರ್ಶನದಿಂದ ಪುಳಕಗೊಳ್ಳುವಂತಹ ಭಕ್ತೆಯರನ್ನೇ ಆಯ್ಕೆ ಮಾಡುವ ಜಾಣತನ ಪ್ರದರ್ಶಿಸುತ್ತಿದ್ದರು. ಆದರೆ ಒಂದು- ನಡೆಯುವ ಐರಾವತನೂ ಎಡವುತ್ತೆ, ಭಾರಿ ಗಾತ್ರದ ಪ್ರಾಣಿ ಎಡವಿದಾಗ ಮುಗ್ಗರಿಸಿದಷ್ಟಕ್ಕೇ ಸೀಮಿತವಾದರೆ ಅಪಾಯ ಇಲ್ಲ, ಬಿದ್ದರೆ ಅದರ ಶರೀರದ ಅಡಿ ಸಿಕ್ಕಿದ ಕ್ರಿಮಿಕೀಟಗಳು, ಪ್ರಾಣಿಪಕ್ಷಿಗಳು ಪರಮಾತ್ಮನ ಪಾದಾರವಿಂದ ಸೇರಲೇಬೇಕು. ಬಿದ್ದ ಆನೆಗೆ ಮಾತ್ರ ಪ್ರಾಣಾಪಾಯವೇನೂ ಸಾಮಾನ್ಯವಾಗಿ ಆಗಿರುವುದಿಲ್ಲ, ದುರ್ದಂಡನಾಥ ಸ್ವಾಮಿಗಳೂ ಭಕ್ತೆಯರ ಆಯ್ಕೆಯಲ್ಲಿ ಪ್ರಮಾದವೆಸಗಬಹುದು. ಅಂತಹ ಭಕ್ತೆ ದೈವಸ್ವರೂಪಿಗಳೂ, ಸರ್ವಸಂಗ ಪರಿತ್ಯಾಗಿಗಳೂ ಆದ ಸ್ವಾಮಿಗಳ ಕತ್ತಲ ಏಕಾಂತಸೇವೆಯನ್ನೇ ಅತ್ಯಾಚಾರ ಪ್ರಯತ್ನ ಎಂದು ತಪ್ಪಾಗಿ ಅರ್ಥೈಸಬಹುದು. ಬಂಡಗೆಟ್ಟ ಹೆಂಗಸಾದರೆ ಪೊಲೀಸರಿಗೆ ದೂರು ನೀಡಬಹುದು. ಮಾನಗೆಟ್ಟ ಹೆಂಗಸಾದರೆ ನ್ಯಾಯಾಲಯದ ಮೆಟ್ಟಿಲೂ ಏರಬಹುದು.

ಇಂತಹ ಘಟನೆಗಳಿಂದ ದುರ್ದಂಡನಾಥ ಸ್ವಾಮಿಗಳು ವಿಚಲಿತರಾಗುವುದಿಲ್ಲ, ಸಾಮಾನ್ಯವಾಗಿ ಅತ್ಯಾಚಾರ, ಅನಾಚಾರ ಇಂತಹವುಗಳು ಮಠಗಳಲ್ಲಿ ನಿತ್ಯ ನಡೆಯುವ ಕ್ರಿಯೆಗಳಾಗಿರುತ್ತವೆ. ಇಂತಹವಕ್ಕೆ ಅನಗತ್ಯ ಪ್ರಾಮುಖ್ಯತೆ ನೀಡಬಾರದು ಎನ್ನುವಷ್ಟು ಪ್ರಬುದ್ಧತೆಯನ್ನು ಮಠದ ಗೌರವ ರಕ್ಷಿಸುವ ಜವಾಬ್ದಾರಿ ಹೊಂದಿರುವವರು ಹೊಂದಿರುತ್ತಾರೆ. ಹೊಲಸು ವಿಷಯಗಳೇ ಕೆಲವರಿಗೆ ಬೃಹದಾಕಾರವಾಗಿ ತೋರಿ ಅವನ್ನೇ ಎತ್ತಿ ಆಡುತ್ತಾರೆ. ಇದನ್ನು ತಡೆಯಲು ಆದಷ್ಟು ಗೌಪ್ಯ ಕಾಪಾಡಿಕೊಳ್ಳುವುದು ಮಠದ ಜವಾಬ್ದಾರಿಯಾಗಿರುತ್ತದೆ. ಸದರಿ ಘಟನೆಯಲ್ಲಿ ಯಾವುದೋ ಮಾನಗೆಟ್ಟ ಹೆಂಗಸರು ನೀಡಿರುವ ದೂರಿನ ಆಧಾರದ ಮೇಲೆ ಪೊಲೀಸರು ಮಠಾಧೀಶರ ಬಂಧನಕ್ಕೆ ಬಂದರೆ ವಿಷಯ ಬಯಲಾಗಿ ಮಠದ ಗೌರವ ಕುಸಿಯುತ್ತದಲ್ಲಾ, ಭಕ್ತರ ಭಾವನೆಗಳಿಗೆ ನೋವುಂಟಾಗಬಹುದಲ್ಲಾ... ದುರ್ದಂಡನಾಥ ಸ್ವಾಮಿಗಳಿಗೆ ಇಂತಹ ವಿಷಯಗಳಿಂದ



ಆಘಾತವೇನೂ ಆಗಲಿಲ್ಲ. ಇದಕ್ಕೆ ತಡೆಗೋಡೆ ನಿರ್ಮಿಸುವುದು ಅವರಿಗೆ ತಿಳಿದಿತ್ತು, ಲೋಕಕಲ್ಯಾಣಕ್ಕಾಗಿ ದೀರ್ಘ ಅವಧಿಯ ವ್ರತನಿರತರಾದರು! ಇಂತಹ ಪವಿತ್ರ ಕಾರ್ಯದಲ್ಲಿ ತಲ್ಲೀನರಾಗಿರುವ ಸ್ವಾಮಿಗಳನ್ನು ಬಂಧಿಸಿ ರೌರವ ನರಕಕ್ಕೆ ರಹದಾರಿ ಪಡೆಯಲು ಯಾವ ಧರ್ಮಿಷ್ಠ ಪೊಲೀಸರೂ ಸಿದ್ಧರಿರಲಿಲ್ಲ!

ಈ ಮಾನಗೆಟ್ಟ ಹೆಂಗಸು ಹೈಕೋರ್ಟಿಗೆ ಹೋದಳು, ವಿಭಾಗೀಯ ಪೀಠವೂ ರಚನೆಯಾಯಿತು. ನ್ಯಾಯಾಧೀಶರೂ ನೇಮಕ ಆದರು. ದುರ್ದಂಡ ಮಠದ ಶ್ರೀಶ್ರೀಶ್ರೀ ದುರ್ದಂಡನಾಥ ಸ್ವಾಮಿಗಳ ಕಣ್ಣು ನ್ಯಾಯಾಧೀಶರ ಕಡೆ ಹೊರಳಿತು. ದೃಷ್ಟಿ ಕ್ರೂರದೃಷ್ಟಿಯೋ, ವಕ್ರದೃಷ್ಟಿಯೋ, ಕೃಪಾದೃಷ್ಟಿಯೋ ಒಂದೂ ಯಾರ ಅರಿವಿಗೂ ಬರಲಿಲ್ಲ, ನ್ಯಾಯಪೀಠಕ್ಕೆ ಬರಲು ನ್ಯಾಯಾಧೀಶರು ತಯಾರಿಲ್ಲ!

ಅತ್ಯಾಚಾರ ಆರೋಪಿ
ಮಠಾಧೀಶ
ತ್ಯಾಗ ಮಾಡಲಿಲ್ಲ ಪೀಠ
ನ್ಯಾಯ ಕೋರಿ
ನ್ಯಾಯಾಲಯ ಹತ್ತಿದರೆ
ನ್ಯಾಯಾಧೀಶರು
ಮಾಡಿದರು
ಪೀಠ ತ್ಯಾಗ!

ನನಗೊಂದು ಆಲೋಚನೆ. ವಿಶೇಷ ಸಂದರ್ಭಗಳಲ್ಲಿ ದೇಶದ ಪ್ರಗತಿ ಸೂಚಿಸಲು, ವಾಸ್ತವಿಕತೆ ಬಿಂಬಿಸಲು ಟ್ಯಾಬ್ಲೊಗಳನ್ನು ಮಾಡಲಾಗುತ್ತದೆ. ಇಂತಹವುಗಳಿಗೆ ಪರ್ಯಾಯವಾಗಿ-

ಒಂದು ಖಾಲಿ ಇರುವ ನ್ಯಾಯಪೀಠ

ಅದರಿಂದ ಸಾಲಾಗಿ ಹೇರಿ ಕೀಳುತ್ತಿರುವ ನ್ಯಾಯಾಧೀಶರುಗಳ ಸಾಲು-

ಪೀಠದ ಎದುರು ದೈನ್ಯದಿಂದ ನ್ಯಾಯಭಿಕ್ಷೆ ಬೇಡುತ್ತಿರುವ ಅಮಾಯಕ ಹೆಂಗಸು

ಇವೆಲ್ಲವನ್ನೂ ತಿರಸ್ಕಾರ ಮಿಶ್ರಿತ ವ್ಯಂಗ್ಯದಿಂದ ನೋಡುತ್ತಿರುವ ಖಾವಿಧಾರಿ ಮಠಾಧೀಶ

- ಇಂತಹ ಟ್ಯಾಬ್ಲೊಗಳನ್ನು ಪ್ರದರ್ಶಿಸಿದರೆ ವಸ್ತುಸ್ಥಿತಿಗೆ ಹತ್ತಿರ ಇರುತ್ತದೆ ಅಲ್ಲವಾ....

ಭ್ರಷ್ಟಾಚಾರ: ಮಠಾಧೀಶರ ಮನ್ನಣೆ!

ಈ ಭ್ರಷ್ಟಾಚಾರದ್ದು ದ್ವಂದ್ವ ವ್ಯಕ್ತಿತ್ವ ಇರಬೇಕು. ಅದರಲ್ಲಿ ತೊಡಗಿಸಿಕೊಂಡಾಗ ಖುಷಿಖುಷಿಯಾಗಿರುತ್ತೆ, ಬಯಲಾದಾಗ ಅವಮಾನ ಆಯ್ತಲ್ಲ ಅಂತ ಕಾಡುತ್ತೆ.

ಮಂತ್ರಿಗಳು ಭ್ರಷ್ಟಾಚಾರ ಮಾಡ್ತಾರೆ. ಮಂತ್ರಿಗಳು ಆಗಿರುವುದೇ ಭ್ರಷ್ಟಾಚಾರ ಮಾಡೋಕೆ. ಅವಕಾಶ ಅಂತ ಸಿಕ್ಕಿದರೆ ಯಾರು ಮಾಡಲ್ಲ ಹೇಳಿ. ಕೊಟ್ಟ ಜನೋ ಸುಖಿನೋಭವಂತು, ತಗಂಡ ಜನೋ ಸುಖಿನೋಭವಂತು. ಹಿಂಗೆ ಜೀವನ ನಡೆಯುತ್ತಾನೇ ಇರುತ್ತೆ

ಕೊಟ್ಟೋನು ಕೋಡಂಗಿ ಈಸಿಕೊಂಡೋನು ಈರಭದ್ರ ಅನ್ನೋ ಮಾತಿದೆಯಲ್ಲ ಅದು ಕೊಟ್ಟೋನೂ ಕೋಡಂಗಿ ಈಸಿಕೊಂಡೋನೂ ಕೋಡಂಗಿ ಆಗಿಬಿಡುತ್ತೆ ಗ್ರಹಚಾರ ಕೆಟ್ಟಾಗ. ಹಂಗಾಗಿತ್ತು ಪ್ರಭಾವಿ ಮಂತ್ರಿ ಆಗಿದ್ದೋರಿಗೆ. ಈ ಭ್ರಷ್ಟಾಚಾರದ ಕೇಸುಗಳು ಇದಾವಲ್ಲ ಅವು ಆ ಕೋರ್ಟು ಈ ಕೋರ್ಟು ಅಂತ ಅಲ್ಲಿ ಇಲ್ಲಿ ಮೇಲೆ ಕೆಳಗೆ ಸುತ್ತಾಡಿ ಬರೋದರೊಳಗೆ ಕೇಸುಗಳೇ ಸುಸ್ತಾಗಿರ್ತವೆ. ಜಡ್ಜ್‌ಮೆಂಟ್ ಅನ್ನೋದು ಬರೋದರೊಳಗೆ ಆರೋಪಿ ಹರಹರಾ ಅಂದಿರೋದೇ ಹೆಚ್ಚು. ಹಂಗೂಹಿಂಗೂ ಜೀವ ಹಿಡ್ಕೊಂಡಿದ್ರೆ ಹಿರಿಯ ನಾಗರಿಕ ಅನ್ನೋ ಕರುಣೆ ಹರಿಸಿ ಬಚಾವ್ ಮಾಡ್ತಾರೆ ನ್ಯಾಯಾಧೀಶರು. ಅಷ್ಟರೊಳಗೆ ಇನ್ನೊಂದು ಆಗಬಹುದು. ಭ್ರಷ್ಟಾಚಾರ ಚಲಿಸುತ್ತಿರುವ ವೇಗ ನೋಡಿದ್ರೆ 'ಭ್ರಷ್ಟಾಚಾರವೇ ಆಚಾರ, ಶಿಷ್ಟಾಚಾರವೇ ಅನಾಚಾರ' ಅನ್ನೋದು ಸಂಬಂಧಿಸಿದ ಎಲ್ಲರ ತಲೆ ಒಳಕ್ಕೆ ಹೋದರೂ ಹೋಗಿರಬಹುದು. ಇದನ್ನೆಲ್ಲ ಮಂತ್ರಿವರ್ಯರು ತಿಳ್ಕೊಂಡಿದ್ರು. ಆದರೆ ಒಂದು ನಾಲ್ಕು ದಿನ ಆದರೂ ಶ್ರೀಕೃಷ್ಣ ಜನ್ಮಸ್ಥಾನದ ಅನುಭವ ಪಡೆಯಬೇಕಾಗುತ್ತೆ ಅಂತ ತಿಳಿದಾಗ ಅದೆಲ್ಲಿತ್ತೋ ಆ ನನ್‌ಮಗಂದು ಅವಮಾನ ಅನ್ನೋದು ಎದ್ದು ಬಂದು ಎದೆಗೊದ್ದಂಗಾಯ್ತು. ಏನು ಮಾಡಾಕಾಯ್ತದೆ ಎಲ್ಲ ಗ್ರಹಚಾರ. ಕೋರ್ಟಿನಿಂದ ಜೈಲಿಗೆ ಹೋಗಬೇಕಾಗಿತ್ತಲ್ಲ, ಆಗ ಇವರಿಗೇನಾಯ್ತು ಅಂದ್ರೆ, ಇಂತಹ ಸಮಯದಲ್ಲಿ ದೊಡ್ಡ ದೊಡ್ಡ ಮನುಸ್ರುಗೆಲ್ಲ ಬತ್ತದಲ್ಲ 'ಜೈಲು ಕಾಯಿಲೆ' ಅಂದು ಬಂದುಬುಡ್ತು. ಏನ್ಮಾಡಾಕಾಯ್ತದೆ. ರೋಗ ಬಂದಿದ್ರೂ ಈ ನನ್‌ಮಗ ಸತ್ರೂ ಸಾಯ್ಲಿ ಅಂತ ಜೈಲಿಗೆ ಸೇರಿಸೋಕಾಯ್ತದ. ಆಸ್ಪತ್ರೆಗೆ ಸೇರಿಸಿದ್ರು. ಎಲ್ಲೋ ಬದುಕ್ಕಳ್ಳಿಬಿಡಿ.

ರಾತ್ರಿ ಎಲ್ಲ ಏನಾಯ್ತು ಅಂತೀರಿ. ಅವಮಾನ ಅನ್ನೋದು ಇತ್ತಲ್ಲ ಅವನ್‌ಮಗಂದು ರೆಸ್ಟ್‌ನಿಂದ ಎದ್ದು ಮಂತ್ರಿಗೋಳ ಎದೆಗೆ ಒದ್ದು ಒದ್ದು ನಿದ್ದೆ ಮಾಡಾಕೆ ಬುಡ್ಲಿಲ್ಲವಂತೆ. ಹೊತ್ತಾರೆ ನಿದ್ದೆ ಮಂಪರಿನಲ್ಲೇ ನೋಡ್ತಾರೆ ಸ್ವಾಮಿಗಳ ಸಾಲೇ ನಿಂತದೆ. ಸ್ವಾಮಿಗಳಾದೋರು ತೊಂದರೆಯಲ್ಲಿರೋರ್ಗೆ ಸಾಂತ್ವನ ಹೇಳಬೇಕಲ್ಲಾ ಆದಕ್ಕೆ ಬಂದಿದ್ದರಂತೆ. ನ್ಯಾಯವೇಯ ಬುಡಿ. ಆದರೆ ಒಂದು- ಸಾಂತ್ವನ ಹೇಳಲು ಬಂದಿದ್ದ ಸ್ವಾಮಿಗಳೆಲ್ಲ ಮಂತ್ರಿಗಳ ಜಾತಿಯವರೇ ಅಂತೆ!

ಜಾತಿ ಗೆದ್ದಿತು. ನ್ಯಾಯ ಸೋತಿತು!

ಭ್ರಷ್ಟ ಮಂತ್ರಿಗೆ 'ನಾವಿದ್ದೇವೆ ಭಯಬೇಡ' ಎಂದು ಅಭಯಹಸ್ತ ನೀಡುತ್ತಿರುವ ಟ್ಯಾಬ್ಲೊ ಮಾಡಿ ಪ್ರದರ್ಶಿಸಿದರೆ ವಸ್ತುಸ್ಥಿತಿ ಬಿಂಬಿಸಲಾಗುತ್ತದೆ ಅಲ್ಲವಾ...

● ಎಚ್ಚೆಲ್ಕೆ


ಚೆಡ್ಡಿಗಳಿಗೆ ಒದ್ದ ಒಬಾಮಾ

ಬರಾಕ್ ಒಬಾಮಾನನ್ನು ಭಾರತಕ್ಕೆ ಆಹ್ವಾನಿಸಿದ್ದು ನಮಗೆ ಜಾತ್ಯತೀತತೆಯ ಪಾಠ ಹೇಳಲೇ ಅಂತ ಚೆಡ್ಡಿಗಳು ಒಳಗೊಳಗೆ ಬುಸುಗುಟ್ಟಿದರೂ ಅಮೆರಿಕದ ಅಧ್ಯಕ್ಷನ ಭೇಟಿಯನ್ನು ತನ್ನ ಸ್ವಪ್ರತಿಷ್ಠೆ ಮೆರೆಯಲು ಬಳಸಿಕೊಂಡ ಮೋದಿಗಂತೂ ಖಂಡಿತ ಖುಷಿಯಾಗಿರಬೇಕು. ಇನ್ನಿತರ ವಿದೇಶ ನಾಯಕರೊಂದಿಗೆ ಭೇಟಿ ನಡೆಸುವ ಸಂದರ್ಭಗಳಲ್ಲೂ ಮೋದಿಯಲ್ಲಿ ಹೆಚ್ಚುಕಮ್ಮಿ ಇದೇ ವರ್ತನೆಯನ್ನು ಕಾಣಬಹುದಾಗಿದೆ. ಆದರೆ ಈ ಬಾರಿಯದು ಮಾತ್ರ ಅತಿರೇಕದ ಪರಮಾವಧಿ. ಸಂಪ್ರದಾಯಗಳಿಗೆಲ್ಲ ಬೈಬೈ ಹೇಳಿ ವಿದೇಶಾಂಗ ಸಚಿವೆ, ಉಪರಾಷ್ಟ್ರಪತಿಯಂಥವರನ್ನೆಲ್ಲಾ ಮೂಲೆಗೊತ್ತಿದ ಮೋದಿಯ ಸಂಸ್ಕಾರಹೀನ ನಡೆ ಇಡೀ ದೇಶದ ಗೌರವಕ್ಕೆ ಚ್ಯುತಿ ತಂದಿದೆ. ಒಬಾಮ ಬಂದ ದಿನ ಕನಿಷ್ಠ ಮೂರು ಬಾರಿ ಉಡುಪು ಬದಲಾಯಿಸಿದ ಮೋದಿ ಒಮ್ಮೆಯಂತೂ "ನರೇಂದ್ರ ದಾಮೋದರದಾಸ್ ಮೋದಿ" ಎಂಬ ಹೆಸರನ್ನು ಚಿನ್ನದ ಗೀಟುಗಳಲ್ಲಿ ಛಾಪಿಸಿದ್ದ ಉಣ್ಣೆಯ ಸೂಟು ಧರಿಸಿ ಕಾಣಿಸಿಕೊಂಡ. ಷೋಕಿಲಾಲ ಮೋದಿಯ ಈ 15,000 ಪೌಂಡುಗಳ ಪೋಷಾಕಿನ ಸುದ್ದಿ ಕ್ಷಣಮಾತ್ರದಲ್ಲಿ ದೇಶವಿದೇಶಗಳ ಮಾಧ್ಯಮಗಳಲ್ಲಿ ಬಿತ್ತರವಾಗಿ ಭಾರಿ ನಗೆಪಾಟಲಿಗೆ ಗುರಿಯಾಯಿತು. ಕೆಲವೊಂದು ಮಾಧ್ಯಮಗಳು ಇದನ್ನು ಪ್ರಚಾರಪ್ರಿಯತೆ, ಆತ್ಮರತಿಯೆಂದು ಮಿದುವಾಗಿ ವರದಿ ಮಾಡಿವೆ. ಆದರೆ ಕಟು ವಾಸ್ತವವೇನೆಂದರೆ ಇದೊಂದು ರೀತಿಯ ಆತ್ಮವೈಭವೀಕರಣದ ಬುದ್ಧಿವಿಕಲ್ಪ, ಇಂತಹ ಗುಣಗಳು ಹೆಚ್ಚಾಗಿ ಕಾಣಸಿಗುವುದು ಸರ್ವಾಧಿಕಾರಿ ಪ್ರವೃತ್ತಿಯ ವ್ಯಕ್ತಿಗಳಲ್ಲಿ.

ಈಜಿಪ್ಟ್‌ನ ಪದಚ್ಯುತ ಅಧ್ಯಕ್ಷ ಹೋಸ್ನಿ ಮುಬಾರಕ್, ಅರ್ಜೆಂಟೀನಾದ ಮಾಜಿ ಅಧ್ಯಕ್ಷ ಕಾರ್ಲೋಸ್ ಮೆನೆಮ್‌ನಂಥವರಿಗೂ ಇಂತಹದೇ ಹವ್ಯಾಸಗಳಿದ್ದವು.

ಮೋದಿಯ ಸಂಸ್ಕಾರಹೀನತೆಯ ಪ್ರದರ್ಶನ ಮತ್ತೊಮ್ಮೆ ಆದುದು ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ. ಅಲ್ಲಿ ಒಬಾಮ ಮೋದಿಯನ್ನು ಶಿಷ್ಟಾಚಾರದಂತೆ "ಭಾರತದ ಪ್ರಧಾನಮಂತ್ರಿ" ಎಂದು ಸಂಬೋಧಿಸಿದರೆ ಮೋದಿ ಮಾತ್ರ ತನ್ನೊಬ್ಬ ಹಳೆ ದೋಸ್ತ್‌ನನ್ನು ಕರೆಯುವ ಹಾಗೆ "ಬರಾಕ್" "ಬರಾಕ್" ಎನ್ನುತ್ತಿದ್ದ!

ಬರಾಕ್ ಒಬಾಮ ಭಾರತೀಯ ಪ್ರಜೆಗಳ ಜೇಬಿಗೆ ಕನ್ನಹಾಕಿ ಅಮೆರಿಕದ ಕಾರ್ಪೊರೇಟುಗಳ ಜೇಬು ತುಂಬುವಂಥ ಅಣು ಒಪ್ಪಂದವನ್ನು ತನ್ನ ಬ್ಯಾಗಿಗೆ ಇಳಿಬಿಟ್ಟುಕೊಂಡು ನಮ್ಮವರ ಮೂರ್ಖತನಕ್ಕೆ ಮನಸ್ಸಿನೊಳಗೇ ಮುಸಿಮುಸಿ ನಗುತ್ತ ಚ್ಯೂಯಿಂಗ್ ಗಮ್ ಜಗಿಯುತ್ತ ತನ್ನೂರಿಗೆ ಮರಳಿದ. ಆದರೆ ಹೀಗೆ ತನ್ನ ಬೇಳೆ ಬೇಯಿಸಿಕೊಂಡು ಹೊರಟುಹೋಗುವ ಮುನ್ನ ಮೋದಿ ಸರ್ಕಾರದ ಪೃಷ್ಠಕ್ಕೆ ಬಲವಾದ ಲಾತ ಕೊಟ್ಟುಹೋದ.




ಭಾರತದಲ್ಲಿ ಮತೀಯ ಅಲ್ಪಸಂಖ್ಯಾತರ ಮೇಲೆ, ಅದರಲ್ಲೂ ವಿಶೇಷವಾಗಿ ಕ್ರೈಸ್ತರ ಮೇಲೆ ದಾಳಿಗಳು ಹೆಚ್ಚಾಗಿರುವುದು ಮತ್ತು ಜನವರಿ 26ರ ಸರ್ಕಾರಿ ಜಾಹೀರಾತಿನಲ್ಲಿ ಸಂವಿಧಾನದ 'ಜಾತ್ಯತೀತ' ಮತ್ತು 'ಸಮಾಜವಾದಿ' ಪದಗಳು ಕಣ್ಮರೆಯಾದುದು ಒಬಾಮನ ಗಮನಕ್ಕೆ ಬಂದಿದೆ. ಅಂತೆಯೆ ಆತ ದಿಲ್ಲಿಯ ಸಿರಿ ಫೋರ್ಟ್ ಸಭಾಸದನದಲ್ಲಿ ಭಾರತೀಯ ಸಂವಿಧಾನವನ್ನು ಉಲ್ಲೇಖಿಸುತ್ತ "ಭಾರತವು ಮತಧರ್ಮಗಳ ಆಧಾರದಲ್ಲಿ ಮತ್ತು ಯಾವುದೇ ರೀತಿಯಲ್ಲಿ ಒಡೆದು ಹೋಳಾಗದೆ ಇದ್ದರೆ ಮತ್ತು ಐಕ್ಯತೆಯಿಂದ ಒಂದು ದೇಶವಾಗಿ ಇದ್ದರೆ ಮಾತ್ರ ಅದಕ್ಕೆ ಯಶಸ್ಸು ದೊರೆಯಲಿದೆ" ಎಂದು ಹೇಳಿ ವಿಮಾನ ಹತ್ತಿದ್ದಾನೆ. ಪರಿಣಾಮವಾಗಿ ಭೇಟಿಗೆ ಮುಂಚೆ ತಕಥೈ ಎಂದು ಕುಣಿದುಕುಪ್ಪಳಿಸುತ್ತಿದ್ದ ಸಂಘ ಪರಿವಾರದ ಬಲೂನಿಗೆ ಏಕಾಏಕಿ ಮುಳ್ಳು ಚುಚ್ಚಿದಂತಾಗಿದೆ. ಒಬಾಮ ಕೊಟ್ಟ ಪವರ್‌ಫುಲ್ ಕಿಕ್‌ಅನ್ನು ನುಂಗಲೂ ಆಗದ ಉಗುಳಲೂ ಆಗದ, ಒಬಾಮನ ಟೀಕಿಸಲೂ ಆಗದಂಥಾ ಪರಿಸ್ಥಿತಿ ಅದರದಾಗಿತ್ತು.

ಆದರೆ ಒಬಾಮನ ಒದೆತದಿಂದ ಭಂಡ ಸಂಘ ಪರಿವಾರದ ಅಜೆಂಡಾ ಮೇಲೆ ಸದ್ಯಕ್ಕಂತೂ ಯಾವುದೇ ಪರಿಣಾಮ ಆದಂತೆ ತೋರುತ್ತಿಲ್ಲ. ಇದಕ್ಕೆ ಸಂಘ ಪರಿವಾರದ ವಕ್ತಾರರಲ್ಲೊಬ್ಬನಾದ ಡಾ.ಸುಬ್ರಮಣಿಯನ್ ಸ್ವಾಮಿ ಎಂಬ ಊಸರವಳ್ಳಿಯ ಇತ್ತೀಚಿನ ಹೇಳಿಕೆಗಳೇ ಸಾಕ್ಷಿ. ಒಬಾಮ ಭಾರತದಿಂದ ನಿರ್ಗಮಿಸಿದ ಎರಡು ದಿನಗಳ ನಂತರ ಜನವರಿ 29ರಂದು ಪುಣೆಯಲ್ಲಿ ಎಬಿವಿಪಿ ಯುವಕರನ್ನು ಉದ್ದೇಶಿಸಿ ಮಾತನಾಡಿದ ಸ್ವಾಮಿ "ಮುಸ್ಲಿಮರು ತಮ್ಮ ಪೂರ್ವಜರೆಲ್ಲ ಹಿಂದೂಗಳಾಗಿದ್ದರು ಎಂಬುದನ್ನು ಒಪ್ಪಿಕೊಳ್ಳಬೇಕು. ಭಾರತ ಬಹುಸಂಖ್ಯಾತ ಹಿಂದೂಗಳ ರಾಷ್ಟ್ರವಾಗಿ ಹೊರಹೊಮ್ಮದಿದ್ದರೆ ಭಾರತದ ತತ್ವಸಿದ್ಧಾಂತಗಳನ್ನು ರಕ್ಷಿಸಲು ಸಾಧ್ಯವಿಲ್ಲ...... ಮುಸ್ಲಿಮರು 800 ವರ್ಷಗಳ ಕಾಲ ಭಾರತದ ಮೇಲೆ ಆಕ್ರಮಣ ಮಾಡಿದರು. ಕ್ರೈಸ್ತರು 200 ವರ್ಷಗಳ ಕಾಲ ಭಾರತವನ್ನು ಆಳಿದರು. ಆದರೂ ಭಾರತದ ಶೇಕಡಾ 80ಕ್ಕೂ ಅಧಿಕ ಮಂದಿ ಹಿಂದೂಗಳಾಗಿ ಉಳಿದಿದ್ದಾರೆ....... ನಾವು ವಿದೇಶೀ ಆಕ್ರಮಣಗಳ ವಿರುದ್ಧ ಹೋರಾಡುತ್ತಾ ಬಂದವರು. ಹೀಗಾಗಿ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ಪೂರ್ವಜರು ಹಿಂದೂಗಳು ಎಂಬುದನ್ನು ಒಪ್ಪಬೇಕು" ಎಂದಿದ್ದಾನೆ.

ಸಂಘ ಪರಿವಾರ ಒಬಾಮನ ಲೆಕ್ಚರ್‌ಅನ್ನು ಈಚೆ ಕಿವಿಯಿಂದ ಕೇಳಿ ಆಚೆ ಕಿವಿಯಿಂದ ಹೊರಬಿಟ್ಟಿದೆ ಮತ್ತು ತನ್ನ ಕೋಮು ಧ್ರುವೀಕರಣದ ಕೆಲಸವನ್ನು ಯಥಾಪ್ರಕಾರ ಮುಂದುವರಿಸುತ್ತಿದೆ ಎಂಬುದಕ್ಕೆ ಬೇರೆ ನಿದರ್ಶನ ಬೇಕೆ? ●

ಬೂಸಿ ಬಸ್ಯ... ಮೋದಿ!



ಊರೆಂಬ ಚೈತನ್ಯ...



ಮ: ಪನಿ ಭೂಮಿಯ ಒಡಲನ್ನು ಸ್ಪರ್ಶಿಸುತ್ತಲೇ ...ಲ್ಲಿರುತ್ತವೆಯೋ ಈ ಕಪ್ಪೆಗಳು ವಟಗುಟ್ಟತೊಡಗುತ್ತವೆ. ...ದೇ ರಾತ್ರಿಗೆ ಕೆರೆಗೆ ತೂಬಿನುದ್ದಕ ನೀರು ಬಂದುನಿಲ್ಲುತ್ತದೆ. ...ದ್ದವ್ರೋ ಈ ಮೀನುಗಳು ಕೆರೆಯಿಂದ ನೀರಿನ ಜೊತೆಗೆ ...ರಗೆ ಬಂದು ಕೂಳೆಗೆ ಸಿಕ್ಕಿಹಾಕಿಕೊಳ್ಳುತ್ತವೆ. ಹಿತ್ತಲ ...ರೆ ಹಿಗ್ಗುತ್ತದೆ. ಎಲೆಯ ಮೇಲಿನ ಮಳೆಹನಿಯ ...ತಿಬಿಂಬಗಳು ಹಂಬಲಿಸುತ್ತವೆ. ಎರಡುಜಡೆಯ ಪುಟ್ಟ ...ಡುಗಿ ಬಿಟ್ಟ ದೋಣಿ ನೀರಿನಲ್ಲಿ ತೇಲುತ್ತಿರುವುದನ್ನು ...ಳ್ಳುಗಳು ದಿಟ್ಟಿಸಿ ನೋಡುತ್ತವೆ. ಪ್ರಕೃತಿಯೇ ಮಳೆಯ ...ತೆ ಮಿಲನಸುಖದಲ್ಲಿರುತ್ತದೆ. ಇಡೀ ಊರು ...ತನ್ಯ-ಲವಲವಿಕೆಯಿಂದ ಕೂಡಿ, ಮನುಷ್ಯರ ಮನಸ್ಸುಗಳು ...ಣ್ಣಿನ ಘಮ್ಮನೆಯ ವಾಸನೆಯೊಡನೆ ಬೆರೆತುಬಿಡುತ್ತವೆ.

...ಎಲ್ಲಿತ್ತೋ ಈ ಚಳಿ ಮಾಗಿಯನ್ನ ನೆನಪಿಸುತ್ತ, ಅಜ್ಜಿ ...ದಿಯ ಘಾಟುವಾಸನೆಗೆ ಅಂಟಿಕೊಳ್ಳುತ್ತಾಳೆ. ನಡುಗುವ ...ಡು'ಗಳು ನಲ್ಲನ ಅಪ್ಪುಗೆಯನ್ನು ಬಯಸುತ್ತವೆ. ಇಡೀ ...ಊರು ಅದೇನೋ ಹಿತಕರವಾಗಿ ಚಳಿಯನ್ನ ಸ್ವಾಗತಿಸುತ್ತದೆ. ...ಕಪ ಬಿಟ್ಟು ಹಾಲು ಕರೆದುಕೊಳ್ಳುವ, ರಂಗೋಲಿ ...ಡುವ, ಸಗಣಿ ಜೊತೆ ಕರ್ಕನ್ನು ಸೇರಿಸಿಕೊಂಡು ನೆಲ ...ಳಿಯುವ, ಬರಲಗಡ್ಡಿ ಹಿಡಿದು ಅಂಗಳ ಗುಡಿಸುವ, ...ಸರು ಕಡೆಯುವ, ಹಕ್ಕೆಯಲ್ಲಿ ಸಗಣಿ ಹೊಡೆದು ...ಟುವಿನ ಗ್ವಾತ ಹೋರುವ, ಪುಟ್ಟಿಯಲ್ಲಿ ಬಟ್ಟೆಯನ್ನಿಟ್ಟು ...ಂಡು ಕೆರೆಕಡೆ ಸಾಗುವ ನಮ್ಮೂರ ಗಂಡು, ಹೆಣ್ಣು ...ಡುಗ-ಹುಡುಗಿ ಎಲ್ಲರೂ ಆ ಚಳಿಯನ್ನು ಹಿತವಾಗಿ ...ಡಿದಿಟ್ಟುಕೊಳ್ಳುತ್ತಾರೆ. ಈ ಚಳಿ ಕೂಡ ಪ್ರೇಮವನ್ನು ...ಚ್ಚಿಡುತ್ತದೆ. ಪ್ರಣಯವನ್ನು ಧ್ಯಾನಿಸುತ್ತದೆ. ಜಂಜಾಟಗಳನ್ನು ...ಡಗಟ್ಟಿಸುತ್ತದೆ. ದುಮ್ಮಾನಗಳನ್ನು ದಹಿಸುತ್ತದೆ. ಇಡೀ ...ಊರು ಚಳಿಯಲ್ಲೂ ಬೆಚ್ಚಗೆ ಹೊದ್ದು ತಣ್ಣಗೆ ಮಲಗಿ ...ಮೌನದಲ್ಲಿ ಲೀನವಾಗುತ್ತದೆ.

...ಒಂದೇ ರಗ್ಗಿನಲ್ಲಿ ಇಬ್ಬರು ಹೊದ್ದುಕೊಂಡು, ...ಬ್ಬಿಕೊಂಡು ಮಲಗುವ ನಲ್ಲ-ನಲ್ಲೆಯರು ರಗ್ಗನ್ನೇ ದೂಡುವ ...ಲವೂ ಬಂದುಬಿಡುತ್ತದೆ. ಬೇಸಿಗೆ ಕಾಲಿಡುತ್ತಿದ್ದಂತೆ ...ಯಿಂದ ಊರು ಬಳಲುತ್ತದೆ. ಗಂಡು-ಹೆಣ್ಣುಗಳು ...ದವಿಲ್ಲದೇ, ಅಂಜಿಕೆಯಿಲ್ಲದೇ ಸಾಲುಸಾಲಾಗಿ ಅಂಗಳದಲ್ಲಿ ...ಮಲಗಿ ಚಂದ್ರನನ್ನು ನೋಡುತ್ತಾ ನಿದ್ರೆಗೆ ಜಾರುವುದು ...ಸಿಗೆಯ ಮತ್ತೊಂದು ಚೈತನ್ಯ. ಇಡೀ ಊರಿನ ...ಮರಗಳು ಅಲ್ಲಾಡದಿರುವಷ್ಟು ಊರು ನಿಶ್ಯಬ್ಧವಾಗಿರುತ್ತದೆ. ...ದೆಯಲು ಬೆಡ್‌ಶೀಟ್ ಕೊಳ್ಳಲೂ ಆಗದ ಬಡವರೂ ...ಡಾ ಸುಖವಾಗಿ ಮಲಗಬಹುದಾದ ಕಾಲ ಬೇಸಿಗೆ. ...ಮ್ಮ ಬಾಲ ಹಿಡಿದುಕೊಂಡು ಈಜು ಹೊಡೆಯುವ ...ಕ್ಕಳು, ಹಳ್ಳದ ಮೂಲೆಯಲ್ಲಿ ಯಾರೂ ಇಲ್ಲದ್ದ ಕಂಡ ...ಹುಡುಗಿ ನೀರಿನ ಜೊತೆ ಸರಸವಾಡುತ್ತಾ ಸರ್ರನೇ ...ಟ್ಟೆ ಬದಲಾಯಿಸುವುದನ್ನು ಕಂಡು ನಗುವ ...ಡೆಯಲ್ಲಿರುವ ಕೇದಿಗೆ ಮರಗಳು ಬೇಸಿಗೆಯಲ್ಲೂ ತಮ್ಮ ...ನುಟುಗಳನ್ನು ದೂಡುವ ಜನರು ನಿಜಕ್ಕೂ ಚೈತನ್ಯಶೀಲರು.

...ನನ್ನೂರು ಅದೆಷ್ಟೋ ಚಳಿ, ಮಳೆ, ಬೇಸಿಗೆಯನ್ನು ...ದಿದೆ. ನೋಡು ನೋಡುತ್ತಿರುವಂತೆ ಬದಲಾವಣೆಗಳನ್ನು ...ಸಿ, ಬಯಸಿ ಬದುಕನ್ನು ಚೇತೋಹಾರಿಯಾಗಿಟ್ಟು ...ಳ್ಳುವ ಪರಿ ನಿಜಕ್ಕೂ ಅದ್ಭುತ. ತೊಟ್ಟಿಲಲ್ಲಿ ಬೆಳ್ಳಿಯ ...ಗ್ಗಡಗ ಹಾಕಿಕೊಂಡು, ಕಾಲು ಅಲ್ಲಾಡಿಸುತ್ತಾ ತೂಗಿದರೂ ...ಲಗದೆ ಅಳುತ್ತಾ ಅಮ್ಮನ ಎದೆಗೆ ಅವುಚಿಕೊಳ್ಳುತ್ತಲೇ ...ಳೆದು, ಲಂಗ-ಜಾಕೀಟಿನಲ್ಲಿ ಕುಂಟಬಿಲ್ಲೆ ಆಡುತ್ತಲೇ ...ಳೆದು, ಸೀರೆಗೆ ಜಂಪ್ ಆಗಿ ಕೊನೆಗೆ ತಾನು ಹುಟ್ಟಿ ...ಳೆದ ಊರಿಗೇ ವಿದಾಯ ಹೇಳಿ ಅದೇ ಊರಿಗೆ ಮತ್ತೆ ...ಮಗಳನ್ನು ಕಳುಹಿಸಿ ಸಂಭ್ರಮ ಪಡುವ ಈ ಪರಿಯ ...ಬಗು ಚೈತನ್ಯವಲ್ಲದೇ ಮತ್ತೇನು?

...ಕಳೆದ ಐವತ್ತು ವರ್ಷಗಳಲ್ಲಿ ಊರಲ್ಲಿ ಅದೆಷ್ಟು ಜನ ...ದ್ದಾರೋ, ಹುಟ್ಟಿದ್ದಾರೋ, ಕೆಟ್ಟಿದ್ದಾರೋ ಗೊತ್ತಿಲ್ಲ. ...ರು ಅಸಮಾನತೆ, ಅನ್ಯಾಯ, ಮತ್ಸರ, ಭ್ರಷ್ಟತೆ, ಕ್ರೌರ್ಯ, ...ಢ್ಯತೆಗಳ ಜೊತೆಗೆ ಬೆಳೆಯುತ್ತಲೇ, ಪ್ರೇಮ-ಅನುಕಂಪ-...ತ್ಸಲ್ಯ-ಹೃದಯವಂತಿಕೆ-ಸಾಮರಸ್ಯಗಳನ್ನು ಬೆಳೆಸಿಕೊಂಡಿದೆ.

...ಕಾಲಿಗೆ ಚಪ್ಪಲಿಯಿಲ್ಲದೇ ಎರಡುಮೈಲು ದೂರದ ...ಮತಿ ಹೈಸ್ಕೂಲಿಗೆ ಹೋಗಿಬರುತ್ತಿದ್ದ ದಿನಗಳು ...ಪಾಗುತ್ತದೆ. ಹಬ್ಬ ಬಂದರೆ ಸಾಕು ನೆಲ್ಲಕ್ಕಿ ಅನ್ನ ಉಣ್ಣಲು ...ತೊರೆಯುತ್ತಿದ್ದ ದಿನಗಳು ಮರೆತಿಲ್ಲ. ಚೆಂಬಿನಲ್ಲಿ ...ಡಹಾಕಿ ಇಸ್ತ್ರಿ ಮಾಡಿದ ದಿನಗಳು ಮನಸ್ಸನ್ನು ...ದುಡುವುದಿಲ್ಲ, ಬದಲು ಚೈತನ್ಯ ತರುತ್ತದೆ. ಊರು ...ಗೆ ಬಾಳುವುದನ್ನು ಕಲಿಸಿದೆ. ಅಲ್ಲಿ ಬೇಸರವೂ ಇದೆ. ...ಕೋಪವೂ ಇದೆ. ಊರೆಂದರೆ ಹಾಗೇ. ಈ ಎಲ್ಲದರ ...ತೆಗೆ ಪಕ್ವ ಯೌವ್ವನ ಜಾರಿದೆ. ಪ್ರೇಮ-ಕಾಮ-...ಪ್ಪ-ಬೇಸರ-ಗೆಳೆತನ ತಿಕ್ಕಾಟಮಾಡುತ್ತಾ ಸಜ್ಜನರ ...ತೆಗೆ ಮನುಷ್ಯಪ್ರೇಮ ಬೆರೆತುಕೊಂಡಿದೆ.

...ನೋಡುನೋಡುತ್ತಲೇ ಊರು ಬದಲಾಗಿದೆ. ...ಾರರು, ಕುಂಬಾರರು, ಬಡಿಗರು ಕೆಲಸ ಬಿಟ್ಟಿದ್ದಾರೆ. ...ಮರ ಜಾತಿಯಿಂದ ಬಂದ ಎತ್ತುಗಳ ಹಲ್ಲುಗಳನ್ನು ...ಡಿ ಇಷ್ಟು, ಇಷ್ಟೇ ಬೆಲೆ ಎಂದು ಲೆಕ್ಕಹಾಕುವ ಮಂದಿ ...ಲ್ಲ, ಟಿವಿಯೊಳಗೆ ಕೈತೂರಿಸಿಕೊಂಡು, ಕೈ ...ಗಳನ್ನೇ ನೋಡುತ್ತಾ ಪರಿಚಯಿಸಿಕೊಂಡವರೂ ಇಲ್ಲ, ...ಇಲ್ಲ, ಹತ್ತಾರು ಬ್ಯಾನರ್‌ಗಳು ಹತ್ತಾರು ದಿನದಲ್ಲಿ

ಇಡೀ ಊರಿನ ಹೊಲಗಳನ್ನೆಲ್ಲಾ ಊಳುತ್ತವೆ. ದೊಡ್ಡ ಅಗಸೆಬಾಗಿಲು ಚಿಕ್ಕದು ಎನಿಸುತ್ತದೆ. ಅಗಸೆಬಾಗಿಲಿಗೆ ಬಂದು ಬೀಳುತ್ತಿದ್ದ ಕೊತ್ತುಂಬರಿ ಸೊಪ್ಪಿನ ಹೊರೆ ಈಗಿಲ್ಲ. ನೆಲಗಡಲೆ ರಾಶಿಯೂ ಇಲ್ಲ. ಹೆಂಚಿನ ಮನೆಯ ಮೇಲೆ ಮೆಣಸಿನಕಾಯಿಯೂ ಇಲ್ಲ. ಮೆಕ್ಕೆಜೋಳ ನೆಲವನ್ನ ನೆಕ್ಕತೊಡಗಿದೆಯಷ್ಟೇ.

ಪ್ರಬಂಧ

ಈ ಊರಿನ ಎಲ್ಲ ಘಟನೆಗಳ ನಡುವೆ ನಮ್ಮೂರ ಅನಾಥೆ 'ಸಪೂರ್ರಿ' ಎಂಬಾಕೆ ನೆನಪಾಗುತ್ತಾಳೆ. ಈ ಸಪೂರ್ರಿ ಅನಾಥ ಹೆಂಗಸು. ಜಾತಿಯಲ್ಲಿ ಮುಸ್ಲಿಂ, ನೀತಿಯಲ್ಲಿ ನಾನರಿಯೆ. ಅದುಹೇಗೆ ನಮ್ಮೂರಿಗೆ ಬಂದು ಸೇರಿಕೊಂಡಳೋ ಗೊತ್ತಿಲ್ಲ. ಅವರಿವರ ಮನೆಯಲ್ಲಿ ದನ ಕಾಯುತ್ತಾ, ಸಗಣಿ ಬಾಚುತ್ತಾ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಈಕೆ ಈಗ ದುಡಿಯಲೂ ಆಗದೇ ಊರಿನಲ್ಲಿ ಭಿಕ್ಷೆ ಬೇಡುವ ಸ್ಥಿತಿ ತಲುಪಿದ್ದಾಳೆ. ಆಕೆಯ ನಿಜವಾದ ಹೆಸರು ಆಕೆಗೂ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಅದು ಯಾರು ಆಕೆಗೆ ಸಪೂರ್ರಿ ಎಂದು ಹೆಸರಿಟ್ಟರೋ ಅದೂ ಗೊತ್ತಿಲ್ಲ. ಸಪೂರವಾಗಿದ್ದರಿಂದ ಅನ್ವರ್ಥವಾಗಿ ಸಪೂರ್ರಿ ಎಂದು ಕರೆದಿರಬಹುದು. ಆದರೆ, ಗೆಳೆಯ ಮುರುಗೇಶ್ ಹೇಳುವುದೇ ಬೇರೆ. ಸಪೂರ್ರಿ ಎಂದರೆ ಅದೊಂದು ಬೈಗುಳದ ಪದ, ಕರ್ಮದವನು ಎಂದು ಅದರ ಅರ್ಥ. ಬೈಗುಳದ ಪದವೊಂದು ಆಕೆಯ ಹೆಸರೇ ಆಗಿದ್ದು ವಿಪರ್ಯಾಸ. ಕಳೆದ ಐವತ್ತು ವರ್ಷಗಳಿಂದ ಊರಿನ ಎಲ್ಲ ಆಗುಹೋಗುಗಳಿಗೆ ಆಕೆಯೂ ಸಾಕ್ಷಿಯಾಗಿದ್ದಾಳೆ. ಬಹುತೇಕ ಲಿಂಗಾಯತ ಗೌಡರ ಮನೆಗಳಲ್ಲಿಯೇ ಆಕೆ ಕೆಲಸ ಮಾಡುತ್ತಿದ್ದದ್ದು. ಅಷ್ಟೊಂದು ತೆಳ್ಳಗಿದ್ದರೂ ಊಟ ಮಾತ್ರ ಬಹಳ ಬೇಕಿತ್ತು. ಆಕೆಗೆ ಊಟ ಹಾಕಲೇ ಕೆಲವರು ಹೆದರುತ್ತಿದ್ದರು. ಗೌಡರ ಮನೆಗಳಲ್ಲಿ ಒಮ್ಮೊಮ್ಮೆ ಮಾತು ಕೇಳದಿದ್ದಾಗ ಆಕೆಗೆ ದನಕ್ಕೆ ಬಡಿಯುವ ಹಾಗೆ ಬಡಿದಿದ್ದೂ ಉಂಟು. ಆದರೂ ಅವರ ಮನೆಯಲ್ಲೇ ಆಕೆ ಕೆಲಸ ಮಾಡಿದ್ದಾಳೆ. ಏಕೆಂದರೆ ಆಕೆಗೆ ಹೊಟ್ಟೆಯಿತ್ತು.

ಸಪೂರ್ರಿ ಬಾಲ್ಯ ಹೇಗಿತ್ತೋ ಗೊತ್ತಿಲ್ಲ. ಆದರೆ, ಆಕೆಗೆ ಮೊಲೆ ಬರುವ ವಯಸ್ಸಿನಲ್ಲಿ ಯಾರ್ಯಾರದೋ ಕಟ್ಟೆಯಲ್ಲಿ ಮಲಗುತ್ತಿದ್ದಳು. ಹೊದೆಯಲು ಆಕೆಗೆ ಯಾರೂ ಬೆಡ್‌ಶೀಟ್ ಕೊಟ್ಟ ನೆನಪಿಲ್ಲ. ಕೆಲವು ಪುಂಡ ಹುಡುಗರು ಆಕೆಯನ್ನು ಮುಟ್ಟಲು ಹೋಗಿ ಕೆಟ್ಟಾಕೊಳಕ ಬೈಯಿಸಿಕೊಂಡು, ಮರ್ಯಾದೆ ಕಳೆದುಕೊಂಡು ಮತ್ಯಾವತ್ತೂ ಆ ಕೆಲಸ ಮಾಡಲು ಕೈಹಾಕಿರಲಿಲ್ಲ. ಇದು ಬೇರೆ ಹುಡುಗರಿಗೆ ಎಚ್ಚರಿಕೆಯ ಸಂದೇಶವಾಗಿತ್ತು. ತನ್ನ ಇಡೀ ಬದುಕಲ್ಲಿ ಆಕೆ ಎಂದೂ ಮುಟ್ಟು ನಿಲ್ಲಿಸಿಕೊಂಡಿರಲಿಲ್ಲ. ಆದರೆ ನಿಸರ್ಗ ಈಗ ಸಹಜವಾಗಿಯೇ ಆಕೆಯ ಮುಟ್ಟು ನಿಲ್ಲಿಸಿದೆ. ಅದೆಷ್ಟು ಮಳೆ-ಗಾಳಿ-ಬಿಸಿಲನ್ನು ಸಹಿಸಿಕೊಂಡಿದ್ದಾಳೋ? ಅದು ಹೇಗೆ ದೊಡ್ಡವಳಾದಳೋ? ಋತುಚಕ್ರದ ದಿನಗಳಲ್ಲಿ ಎಲ್ಲಿ ಸ್ನಾನ ಮಾಡುತ್ತಿದ್ದಳೋ? ಯಾರು ಹೊಸ ಸೀರೆಯನ್ನು ತಂದುಕೊಟ್ಟರೋ ಗೊತ್ತಿಲ್ಲ. ಕೇವಲ ಹೊಟ್ಟೆಗಾಗಿ ಆಕೆ ಗಂಡಸಂತೆ ಕೆಲಸ ಮಾಡುತ್ತಿದ್ದಳು. ಸಂಬಳ ಅಂತ ಯಾರೂ ಆಕೆಗೆ ಕೊಟ್ಟಿಲ್ಲ. ತನ್ನ ಯೌವ್ವನವನ್ನು ಕಾಪಾಡಿಕೊಂಡ ಆಕೆ ನಿಜವಾದ ಸನ್ಯಾಸಿನಿ. ಈಗಲೂ ನಮ್ಮೂರಿನಲ್ಲಿಯೇ ಇದ್ದಾಳೆ. ಹಲ್ಲುಗಳು ಬಿದ್ದುಹೋಗಿವೆ. ತಲೆ ಬಾಚಿಕೊಳ್ಳಲಾಗದೇ ಬೋಳಿಸಿಕೊಂಡುಬಿಟ್ಟಿದ್ದಾಳೆ. ಮಾಸಿದ ಹರಕಲು ಸೀರೆ ತೊಟ್ಟ ಆಕೆಯನ್ನು ನಾನು ಊರಿಗೆ ಹೋದಾಗಲೆಲ್ಲಾ ನೋಡುತ್ತೇನೆ. ನನ್ನ ಕಂಡ ತಕ್ಷಣ ಅವಸರವಾಗಿ ಆಕೆ ಬಂದು ಓಹೋ... ಮೇಷ್ಟ್ರೇ ಈಗ ಬಂದ್ರಾ? (ನಮ್ಮೂರಲ್ಲಿ ಎಲ್ಲರನ್ನೂ ಮೇಷ್ಟ್ರೇ ಎಂದು ಕರೆಯುತ್ತಾರೆ) ಎಂದು ಹತ್ತಿರ ಬಂದು ನಿಲ್ಲುತ್ತಾಳೆ. ನಾನು ಐದು ರೂಪಾಯಿಗಿಂತ ಹೆಚ್ಚಿಗೆ ಆಕೆಗೆ ಕೊಟ್ಟಿಲ್ಲ. ಊರು ಆಕೆಯನ್ನು ದುಡಿಸಿಕೊಂಡಿದೆ. ಮುಸ್ಲಿಂ ಆದರೂ ಆಕೆಗೆ ಬುರ್ಖಾ ಎಂದರೇನು ಎಂಬುದೇ ಗೊತ್ತಿಲ್ಲ. ಊರಿನ ಒಂದು ಭಾಗವೇ ಆಗಿಹೋಗಿರುವ ಆಕೆ ತನ್ನ ಮಾತೃಭಾಷೆಯನ್ನ ಮರೆತಿಲ್ಲ. ಊರಿಗೆ ಬರುವ ಮುಸ್ಲಿಂ ಡ್ರೈವರ್, ಕಂಡಕ್ಟರ್ ಅಥವಾ ಹಲ್ಲೆ ಕಟ್ಟಲು ಬರುವವನ ಜೊತೆ ಮಾತನಾಡುತ್ತಾಳೆ. ಅವರು ಕೊಟ್ಟ ಐದು-ಹತ್ತು ರೂಪಾಯಿಗಳನ್ನು ಪಡೆಯುತ್ತಾಳೆ. ರಂಜಾನ್, ಮೊಹರಂ ಮುಂತಾದ ಹಬ್ಬಗಳಲ್ಲಿ ನ್ಯಾಮತಿಗೆ ಹೋಗಿ ಬಡವರಿಗೆ ಸಿಗುವ ಬಟ್ಟೆ ಮುಂತಾದವುಗಳನ್ನು ಪಡೆದು ಮತ್ತೆ ಬರುತ್ತಾಳೆ.

ಗೆಳೆಯ ಮುರುಗೇಶ್ ಆಕೆಯನ್ನು ಈಗಲೂ ಕುತೂಹಲದಿಂದ ನೋಡುತ್ತಾನೆ. ಆಕೆ ಕೆಲಸ ಮಾಡಲು ನಿರಾಕರಿಸಿದಾಗ ಕೆಲವರು ಬಾರುಕೋಲಿನಿಂದ ಬಡಿದಿದ್ದನ್ನು ಕಣ್ಣಾರೆ ಕಂಡು ಮರುಗಿದ್ದಾನೆ. ಕಣ್ಣಂಚಲ್ಲಿ ನೀರೂ ತಂದುಕೊಂಡಿದ್ದಾನೆ. ಯೌವ್ವನದಲ್ಲಿದ್ದಾಗ ಆಕೆಯನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದವರಿಗೆ ಬೈದು ಬುದ್ಧಿ ಹೇಳಿದ್ದಾನೆ. ಆಕೆಗೀಗ ಅರವತ್ತರ ಪ್ರಾಯ. ನನಗೊಂದು ಕುತೂಹಲವಿದೆ. ಆಕೆ ಸತ್ತರೆ ಯಾವ ಧರ್ಮದ ಪ್ರಕಾರ ಸಂಸ್ಕಾರ ಮಾಡುತ್ತಾರೆ ಎನ್ನುವುದು?

ಊರಿನ ಚೈತನ್ಯದ ಬಗ್ಗೆ ಹೇಳಹೊರಟ ನನಗೆ ಈ ಸಪೂರ್ರಿ ಅಡ್ಡಬಂದಳು. ನೆನಪುಗಳ ಹೆಜ್ಜೆಗಳೇ ಹಾಗೆ. ಸಪೂರ್ರಿ ತರಹ ಗುರುತುಗಳನ್ನು ತೋರಿಸುತ್ತದೆ. ಹಿಂದೂ ಮುಸ್ಲಿಮರ ನಡುವೆ ಸಿಖ್ ಧರ್ಮಗೋಡೆಯಂತೆ ಬೆಳೆಯುತ್ತಿರುವಾಗ ಇಂತಹ ಹೆಣ್ಣುಮಗಳು ಗೋಡೆಗಳನ್ನೇ ಬೀಳಿಸುತ್ತಾಳೆ. ವಿಶ್ವದ ಬಹುತೇಕ ಯುದ್ಧಗಳು ಧರ್ಮದ ಕಾರಣಕ್ಕಾಗಿ ನಡೆದಿದೆ. ಆರುಂಡಿಯಂಥ ಪುಟ್ಟ ಊರಲ್ಲಿ ಅದ್ಯಾವುದರ ಪರಿ ಇಲ್ಲದೇ ಈಕೆ ಬದುಕುತ್ತಿದ್ದಾಳೆ. ಭಯೋತ್ಪಾದನೆಗಳು ಅಮೆರಿಕದ ಕಟ್ಟಡದೊಳಗೆ ಬಾಂಬಿನ ವಿಮಾನಗಳ ಮೂಲಕ ನುಸುಳಿವೆ. ಮುಂಬೈನಲ್ಲಿ ಮಾನವ ಬಾಂಬ್‌ಗಳು ಸಿಡಿದು ರಕ್ತ ಚೆಲ್ಲಿದೆ. ಅಯೋಧ್ಯೆಯಲ್ಲಿ ಮಸೀದಿ ಧ್ವಂಸವಾಗಿದೆ. ಬಸವಣ್ಣ-ಬುದ್ಧ-ಶಿಶುನಾಳ ಜಯಂತಿಗಳು ಬಂದುಹೋಗುತ್ತಲೇ ಇವೆ. ಈ ಸಪೂರ್ರಿ ಮಾತ್ರ ಹುಲ್ಲನ್ನೇ ತಂದು ಗೂಡು ಕಟ್ಟಿಕೊಂಡು ಗುಬ್ಬಚ್ಚಿ ಬದುಕಿದಂತೆ ಬದುಕುತ್ತಿದ್ದಾಳೆ.


ನನ್ನೂರು ಹಾಗೇನೇ. ಇಲ್ಲಿ ಬದುಕಿನ ಸೆಲೆಯಿದೆ. ನೆಲೆಯಿಲ್ಲದ ಸಪೂರ್ರಿಯಂಥವರೂ ಇದ್ದಾರೆ. ಭಯ-ಹಿಂಸೆಗಳನ್ನು ದಾಟದ ಮನುಷ್ಯತ್ವವೂ ಇದೆ. ಜೀವನ ಪ್ರೀತಿ ಸದಾ ಪುಟಿಯುತ್ತಿದೆ. ನೆನ್ನೆ ತಾನೇ ಕುಂಸಿ ಪ್ರಕೃತಿಯ ವೈಚಿತ್ರ್ಯದ ಬಗ್ಗೆ ಮಾತನಾಡುತ್ತಿದ್ದ... "ಈ ನಿಸರ್ಗ ಹೇಗಿರುತ್ತೆ ನೋಡು, ದೇಹಕ್ಕೆ ತಂಪು ನೀಡುವ ಕಲ್ಲಂಗಡಿ ಹಣ್ಣು ನಮಗೆ ಬೇಸಿಗೆಯಲ್ಲಿ ಸಿಗುತ್ತದೆ. ಚಳಿಗಾಲದಲ್ಲಿ ಬಿಡುವ ಹಣ್ಣುಗಳು ಬೆಚ್ಚಗಿರುತ್ತವೆ. ಬದುಕಿನ ಖುಷಿಯೇ ಹಾಗೆ. ಬಿಸಿಲನ್ನು ತಣಿಸುವ ತಂಪಿನ ಹಣ್ಣುಗಳಂತೆ. ಸುಡು ಬಿಸಿಲಿನಲ್ಲೂ ವಸಂತನ ಆಗಮನ. ನೆಲದೊಡಲ ನೀರನ್ನ ಸ್ವೀಕರಿಸಿದ ಗಿಡಮರಗಳು ಚಿಗುರಿ ನಳನಳಿಸುತ್ತವೆ. ಉಗಾದಿ ಅಲ್ಲಿ ಹುಟ್ಟುತ್ತದೆ. ದೀವಳಿಗೆ ಮರುಜನ್ಮ ಪಡೆಯುತ್ತದೆ. ಬದುಕೆಂದರೆ ಇದಲ್ಲವೇ?"

ಕಪ್ಪೆಗಳು ಯಾವಾಗಲೂ ಇರುತ್ತವೆ. ಆದರೆ, ಮಳೆ ಬಂದರೆ ಸಾಕು ವಟಗುಟ್ಟುತ್ತವೆ. ಕುಂಬಳದ ಹೂ ಅರಳಿ ನಿಲ್ಲುತ್ತದೆ. ನಮ್ಮೂರ ಬೆಳಗು ಬೆರಗುಗೊಳಿಸಿದೆ. ಕತ್ತಲು ಕನವರಿಸಿದೆ. ಜಗತ್ತಿನೊಂದಿಗೆ ತೆರೆದುಕೊಂಡ ಆರುಂಡಿ ಎಂಬ ಪುಟ್ಟ ಊರು ಜಾಗತೀಕರಣ, ಭ್ರಷ್ಟಾಚಾರ-ಭಯೋತ್ಪಾದನೆ, ಮೌಢ್ಯತೆ, ಕಂದಾಚಾರ, ಅಸಮಾನತೆಯತ್ತ ಮುಖ ಮಾಡುವುದನ್ನು ನೋಡುತ್ತಲೇ ಇದೆ. ಪ್ರಜಾಪ್ರಭುತ್ವ-ಸಮಾಜವಾದ- ಸಮತಾವಾದ-ಕೋಮುವಾದ ಈ ಎಲ್ಲಾ ವಾದಗಳು ಪರಸ್ಪರ ರಾಜಿ ಮಾಡಿಕೊಂಡು ಚೈತನ್ಯವಾದದತ್ತ ಊರು ಸಾಗಿದೆ. ನಾನು ಮತ್ತೆ ಮೊದಲಿಗೆ ಬರುತ್ತೇನೆ. ಜಗತ್ತಿನಲ್ಲಿ ಏನೇ ನಡೆಯಲಿ ಬಿಳಿಯ ಅಮೆರಿಕ, ಕಪ್ಪು ಆಫ್ರಿಕಾವನ್ನು ಒಳಗೊಂಡಂತೆ ಪಶ್ಚಿಮದ ಅಹಂಕಾರವನ್ನು, ಪೂರ್ವದ ಚೆಲುವನ್ನು ತುಂಬಿಕೊಂಡ ನಮ್ಮೂರಿನಲ್ಲಿ ಚೈತನ್ಯ ಮಾತ್ರ ಸತ್ತಿಲ್ಲ, ಜೊತೆಗೆ ಸಪೂರ್ರಿ ಕೂಡ...

● ಆರುಂಡಿ ಶ್ರೀನಿವಾಸಮೂರ್ತಿ

ನಿರ್ಲಿಂಗ ಬಾಳೆಯ ನತದೃಷ್ಟ ಕಥೆ

ಅನುರಣನ



ಡಾ. ಟಿ.ಎಸ್. ಚನ್ನೇಶ್
channeshts@gmail.com

ಬಾಳೆಯಹಣ್ಣಿನ ಬಗ್ಗೆ ಯಾರಿಗಾದರೂ ತಿಳಿದಿರುವ ಸಂಗತಿಗಳೆಂದರೆ ಅದು ಸಾಮಾನ್ಯವಾಗಿ ಎಲ್ಲಾ ಕಾಲದಲ್ಲೂ ಸಿಗುವ ಹಣ್ಣು, ಸುಲಭವಾಗಿ ಸಿಪ್ಪೆ ಸುಲಿದು ಬಾಯಿಯೊಳಗಿಡುವ ಅನುಭವ. ಬಾಳೆಯ ತೋಟದ ಪಕ್ಕದಲ್ಲೇ ವಾಸಿಸುತ್ತಿದ್ದ ಕಪಿಗಳ ಗುಂಪು ಕೈಯಲ್ಲಿನ ಹಣ್ಣನ್ನು ಹಿಡಿದೇ ಇರಲಾರದೆ ಸುಲಿದು ನುಂಗಿದ ಕಥೆ ಕೂಡ ಕೇಳಿರುತ್ತೀರಿ. ವಿಜ್ಞಾನದ ವಿದ್ಯಾರ್ಥಿಗೆ ಅದರ ಕುರಿತ ತಿಳಿವಳಿಕೆ ಮಾತ್ರ ಹೆಚ್ಚು. ಬಾಳೆ ಹೆಚ್ಚು ಸಾಮರ್ಥ್ಯದ ಹಣ್ಣು ಎಂಬುದರ ಜೊತೆಗೆ ಅದರ ಬಗ್ಗೆ ಇನ್ನೂ ಹತ್ತು ಹಲವಾರು ತಿಳಿದಷ್ಟೂ ಕುತೂಹಲ ಹೆಚ್ಚುತ್ತಲೇ ಇರುತ್ತದೆ ಎಂದು ಹೇಳಿದರೆ ಅಚ್ಚರಿಯಾಗಬಹುದೇನೋ. ಆದರೆ ಅದು ನಿಜ. ಬಾಳೆಯ ರೂಪವೇನೋ ಸೆಕ್ಸಿಯಾಗೇ ಇದೆ. ಆದರೆ ಸಹಸ್ರಾರು ವರ್ಷಗಳಿಂದ ನಿರ್ಲಿಂಗವಾಗಿದೆ. ಹಣ್ಣಾಗಲು ಇಲ್ಲಿ ಹೆಣ್ಣು-ಗಂಡಿನ ಮಿಲನವೇ ಇಲ್ಲ. ಇಲ್ಲಿನ ಹಣ್ಣು ಅಪ್ಪಟ ಲಿಂಗರಹಿತ ಉತ್ಪನ್ನ. ಜನಪ್ರಿಯ ಹಣ್ಣಾಗಿ ಇದು ನಮ್ಮ ಆಹಾರದಲ್ಲಿ ಜವಾಬ್ದಾರಿಯುತ ಸಾಥ್ ಕೊಟ್ಟಿದೆ ಮಾತ್ರವಲ್ಲ, ನಮ್ಮ ದೇಶದ ಸಂದರ್ಭದಲ್ಲಂತೂ ಬಾಳೆಹಣ್ಣಿಗೆ ದೈವ ಸಾನಿಧ್ಯ! ತೆಂಗಿನಕಾಯಿಯ ಸಹಜ ಜತೆಗಾರ. ಅಷ್ಟೇಕೆ ತೆಂಗು ದುಬಾರಿಯಾದಾಗ ಅಥವಾ ದುಬಾರಿ ಅನ್ನಿಸಿದವರಿಗೆ ದೇವರಿಗೆ ಕನಿಷ್ಟ ನೈವೇದ್ಯದ ಕಾರಣಕ್ಕೆ ಸುಲಭವಾದ ಉಪಾಯ ಕೊಟ್ಟಿರುವ ಹಣ್ಣು.

ಹೆಚ್ಚೂ ಕಡಿಮೆ ಬೇಸಾಯಕ್ಕೆ ಒಳಪಡಿಸಿದಾಗಿನಿಂದಲೂ ಅಂದರೆ ಸುಮಾರು **10,000** ವರ್ಷಕ್ಕೂ ಹೆಚ್ಚು ಕಾಲದಿಂದಲೂ ತನ್ನೊಳಗೆ ಲಿಂಗರಹಿತವಾಗಿಯೇ ನಿರಂತರವಾಗಿ ಬೆಳೆಯಾಗಿ ಮುಂದುವರೆದಿದೆ. ಇದೇನು ಮಹಾ ಅನ್ನಿಸಿದರೂ ನಿಜಕ್ಕೂ ಅದೇ ಇದರ ನಿಜವಾದ ತೊಂದರೆ. ಇದರಲ್ಲಿ ಲಿಂಗರಹಿತವಾದ ಕಾರಣವೇ ಇದರ ನತದೃಷ್ಟ ಸಂಗತಿಗೆ ಕಾರಣವಾಗಿದೆ. ಇದನ್ನು ಉಳುಮೆಗೆ ಒಳಪಡಿಸಿದ್ದೇ ಒಂದು ಆಶ್ಚರ್ಯ. ಏಕೆಂದರೆ ವನ್ಯ ಬಾಳೆಯ ತಳಿಗಳು ಸಹಜವಾಗಿ ಲಿಂಗಸಹಿತವಾಗೇ ಇದ್ದು ಬೀಜದಿಂದಲೂ ಕೂಡಿರುತ್ತವೆ. ಆಗ್ನೇಯ ಏಷಿಯಾದ ಕಾಡುಗಳಲ್ಲಿ ಆಕಸ್ಮಿಕವಾಗಿ ಕಂಡ ಈ ಬೀಜರಹಿತವಾದ ಹಣ್ಣನ್ನು ಬೆಳೆಯಾಗಿಸಿ ಉಪಯೋಗಕ್ಕೆ ತಂದುದ್ದೇ ನಿಜವಾದ ಕೌತುಕ.

ಏಷಿಯಾದ - ಬಹುಶಃ ಮಲೇಶಿಯಾದ - ಕಾಡಿನಿಂದ ಅದಾವ ಮಾಯೆಯಿಂದ ಬಂದ ಬಾಳೆಯು ಹಾಗೆಯೇ ಆಫ್ರಿಕಾವನ್ನು ಸೇರಿತು. ಅಲ್ಲಿಂದ 'ಬಂಟು' ಎನ್ನುವ ಜನಾಂಗದ ಮೂಲಕ ಖಂಡಾಂತರವಾಗಿ ಹರಡಿತು ಎಂಬುದು ಮಾನವಶಾಸ್ತ್ರಜ್ಞರ ಅಭಿಪ್ರಾಯ. ಕಾಡಿನಲ್ಲಿ ಯಾವುದೋ ಒಂದು ಆಕಸ್ಮಿಕವಾಗಿ ಅನುವಂಶಿಕವಾಗಿ ಹಠಾತ್ ರೂಪಾಂತರಗೊಂಡ ಹಣ್ಣಿನ ರುಚಿಯನ್ನು ಆಗ್ನೇಯ ಏಷಿಯಾದ ದೇಶದ ಕಾಡಿನ ಮೂಲ ನಿವಾಸಿಗಳು ಕಂಡುಕೊಂಡು ಅದನ್ನು ಬೆಳೆಯಾಗಿ ಪೋಷಿಸಿದರು. ಅದೇ ಇಂದಿಗೂ ನಮ್ಮ ಬಾಳೆಯ ಹಣ್ಣಾಗಿ ಲಿಂಗರಹಿತವಾದ ಬೀಜವಿಲ್ಲದ ಹಣ್ಣು ಸಿಗುತ್ತಿದೆ. ಆಕಸ್ಮಿಕವಾಗಿ ಬೀಜರಹಿತವಾಗಿದ್ದ ತಳಿಯನ್ನು ಹಾಗೆ ಅದರ ಕಂದುಗಳಿಂದ ಬೆಳೆಸಲು ಮೊದಲು ಮಾಡಿದ್ದೇ ಅವರ ದೊಡ್ಡ ಆವಿಷ್ಕಾರ! ಏಕೆಂದರೆ ಬೀಜ ಉಳ್ಳ ಬಾಳೆಯ ವನ್ಯತಳಿಗಳ ಹಣ್ಣನ್ನು ತಿನ್ನಲು ಆಗುವುದಿಲ್ಲ, ಈ ಬೀಜರಹಿತ ಹಣ್ಣನ್ನು ತಿನ್ನಬಹುದೆಂಬ ಖಾತರಿಯನ್ನು ಮಾಡಿಕೊಂಡಿದ್ದೇ ಅಲ್ಲದೆ ಅದನ್ನು ಸಹಸ್ರಾರು ವರ್ಷಗಳಿಗಿಂತಲೂ ಹೆಚ್ಚು ಕಾಲ ಕಾಪಾಡಿಕೊಂಡು ಬಂದಿದೆ. ಇದೀಗ ಕಳೆದ ಹಲವು ವರ್ಷಗಳಿಂದ ವಿಜ್ಞಾನದ ಅರಿವು ಹೆಚ್ಚಾದ ಮೇಲೂ ಯಾವುದೇ ರೂಪಾಂತರಕ್ಕೆ ಸಾಧ್ಯವಾಗಿಲ್ಲ, ಏಕೆಂದರೆ ಅದರ ವನ್ಯಸಂಬಂಧಿಗಳಿಂದ ದೂರ ಸಾಗಿ ಬಂದ ತಳಿ ಮಾತ್ರವೇ ನಮ್ಮಲ್ಲಿರುವುದು. ಈಗಿರುವ ಬಾಳೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲಿ ಒಂದು ಕಪ್ಪು ಬಣ್ಣದ ಸಾಲುಗಳಿದ್ದಂತೆ ಕಾಣುತ್ತದೆ. ಇದು ಹಿಂದೊಮ್ಮೆ ಬೀಜವಾಗಿದ್ದ ಸ್ಥಳ. ಇದೀಗ ನಿರ್ಲಿಂಗವಾದ ಹಣ್ಣಾಗಿದ್ದು ಅದರ ಕುರುಹುಗಳಷ್ಟೇ ಅಲ್ಲಿ ಕಪ್ಪನೆಯ ಗೆರೆಯಂತೆ ಉಳಿದಿದೆ.

ಇದೆಲ್ಲಾ ಸರಿ, ಇದರಲ್ಲಿ ನತದೃಷ್ಟ ಎಂತಾ ಬಂತು? ನಿಜ ವಿಜ್ಞಾನದ ಅರ್ಥದಲ್ಲಿ ಇದರ ನತದೃಷ್ಟ ಸಂಗತಿಗಳಿವೆ. ಏಕೆಂದರೆ ಇದು ನಿರ್ಲಿಂಗವಾದ್ದರಿಂದ ಇದರಲ್ಲಿನ ತಳಿ ಅಭಿವೃದ್ಧಿಗೆ ಇದೂವರೆಗೂ ಏನೂ ಮಾಡಲಾಗಿಲ್ಲ, ಅದು ಬೇಕಾ ಬೇಡವಾ ಎಂಬ ಪ್ರಶ್ನೆಯನ್ನು ಬದಿಗಿಟ್ಟು ಹೋದೋಣ. ಸಹಸ್ರಾರು ವರ್ಷಗಳಿಂದ ಒಂದೇ ತಳಿ -ನಮ್ಮಲ್ಲಿ ಪಚ್ಚಬಾಳೆ ಎಂದು ಕರೆಯುವ ಕ್ಯಾವೆಂಡಿಶ್ - ಜಗತ್ತಿನ ಬಹುಪಾಲು ತೋಟಗಳನ್ನು ಆಕ್ರಮಿಸಿದೆ. ಎಲ್ಲೋ ನಮ್ಮ ದೇಶದಲ್ಲಿ ಮಾತ್ರವೇ ಏಲಕ್ಕಿ, ಪುಟ್ಟ ಬಾಳೆ, ದೇವ ಬಾಳೆ ಇತ್ಯಾದಿಗಳಿದ್ದಾವು ಅಷ್ಟೇ. ಆತಂಕ ಏನೆಂದರೆ ಹೆಚ್ಚೂ ಕಡಿಮೆ ಒಂದೇ ತಳಿ ಮಾತ್ರವೇ ಸಹಸ್ರಾರು ವರ್ಷದಿಂದಲೂ ಇರುವುದರಿಂದಲೇ ಈ ಭಯ. ಅದೆಲ್ಲಿ ಇದನ್ನು ಕಳೆದುಕೊಳ್ಳುವೆವೋ ಎಂಬ ಭಯ. ಹಾಗೇ ಯೋಚಿಸಿ, ನಮ್ಮಲ್ಲಿ ಸಹಸ್ರಾರು ಭತ್ತದ ತಳಿಗಳಿವೆ. ನೂರಾರು ಮಾವಿನ ತಳಿಗಳಿವೆ. ಈ ವೈವಿಧ್ಯತೆಯೆಲ್ಲಾ ಅದರಲ್ಲಿನ ಲಿಂಗ ಸಹಿತ ತಳಿ ವಿಕಾಸಗಳಿಂದಾಗಿ ಆಗಿದೆ. ಆದರೆ ಬಾಳೆ ಮಾತ್ರವೇ ಒಂದೇ ತಳಿ ಜಗತ್ತನ್ನು ಆವರಿಸಿ, ಅವುದೇ ವೈವಿಧ್ಯತೆಯನ್ನೂ ವಿಕಾಸಗೊಳಿಸದೆ ಅದು ಹೇಗೆ ಬಂದಿತ್ತೋ ಹಾಗೇ ಇನ್ನೂ ಇದೆ. ನಮ್ಮ ಅದೃಷ್ಟ. ಹೀಗೆ ಉಳಿದ ಒಂದೇ ತಳಿ ಮತ್ತೂ ಉಳಿಯಬೇಕಾದರೆ ಅದರಲ್ಲಿನ ಗಟ್ಟಿತನ ಕಾರಣವಾಗಬೇಕು. ಆದೂ ಕೈ ಕೊಟ್ಟರೆ ಬಾಳೆಯನ್ನೇ ಕಳೆದುಕೊಳ್ಳುವ ಸಂಗತಿ ನಮ್ಮ ಮುಂದಿದೆ.

ಬಾಳೆಗಾದರೋ ತನ್ನನ್ನು ಏನಾದರು ಮಾಡಿ ಮೇಲೆತ್ತಿಕೊಳ್ಳಲಿ ಎಂತಿದೆ. ಆದರೆ ವಿಜ್ಞಾನ ಮಾತ್ರ ಅದನ್ನು ಹಿಂದಕ್ಕೆ ತಳ್ಳುತ್ತಲೇ ಇದೆ. ಹಲವಾರು ದಶಕಗಳ ಕಾಲ ಸಸ್ಯ ತಳಿಶಾಸ್ತ್ರಜ್ಞರು ಬಾಳೆಯಲ್ಲಿ ಈ ಬಗೆಯ ಯಾವುದೇ ಕ್ರಮಕ್ಕೂ ಮೊದಲಾಗಿಲ್ಲ, ಹಾಗೆಯೇ ಈ ಬೆಳೆಯನ್ನು ಬಿಟ್ಟಿದ್ದಾರೆ. ಅದರಲ್ಲಿ ಬೀಜಾಂಕುರ ಆಗುವಂತಿದ್ದರೆ ಆ ಮಾತು ಬೇರೆ ಇತ್ತು, ಆದರೆ ಹಾಗಾಗಲು ಸಾಧ್ಯವಿಲ್ಲವಲ್ಲ, ನಿರ್ಲಿಂಗ ರೀತಿಯಲ್ಲಿ ಬೆಳೆಯುವ ಬಾಳೆಯಲ್ಲಿ ಹೊಸತನದ ಹುಡುಕಾಟ ಅಷ್ಟು ಸುಲಭದ ಸಂಗತಿಯಲ್ಲ. ಇದ್ದುದರಲ್ಲಿ ನೆಲದ ಗುಣಕ್ಕೆ ಒಂದಷ್ಟು ಬದಲಾದ ರುಚಿ ಬಿಟ್ಟರೆ ತಳಿ ಮಾತ್ರ ಒಂದೇ ಜಗತ್ತಿನಾದ್ಯಂತ ಅದೇ ಕ್ಯಾವೆಂಡಿಶ್ - ಅಥವಾ ಪಚ್ಚ ಬಾಳೆ. ನಮ್ಮಲ್ಲೇ ನೋಡಿ ರಸಬಾಳೆ ಹೆಚ್ಚೂ ಕಡಿಮೆ ಇಲ್ಲವೇ ಇಲ್ಲ ಎನ್ನುವಂತಾಗಿದೆ.

ಬಾಳೆಹಣ್ಣು ಹಣ್ಣುಗಳಲ್ಲೇ ಅತ್ಯಂತ ಜನಪ್ರಿಯವಾದ ಹಣ್ಣು ಅಷ್ಟೇ ಅಲ್ಲ ಸುಲಭವಾಗಿ ಎಲ್ಲಿಗೆಂದರಲ್ಲಿಗೆ ಕೊಂಡೊಯ್ಯಲು ಸುಲಭ ಕೂಡ. ಅದರ ದಪ್ಪ ಸಿಪ್ಪೆ ಒಳ್ಳೆಯ ಸೂಕ್ತವಾದ ಪ್ಯಾಕಿಂಗ್‌ನಂತಿದೆ. ಸುಲಿಯಲೂ ಅಷ್ಟೇ ಹೆಚ್ಚೇನೂ ಕಷ್ಟ ಬೇಡ. ಕೈಯಲ್ಲೇ ತೆಗೆದು ಎಸೆಯಬಹುದು. ವಿಕಾಸದ ಹಿನ್ನೆಲೆಯ ತಿಳಿವಿನಂತೆ ತಳಿಗಳಲ್ಲೂ ವೈವಿಧ್ಯತೆಯಿದ್ದರೆ ಬೆಳೆಯ ಉಳಿವಿಗೆ ಸಹಾಯಕ. ಬಾಳೆಯಲ್ಲಿ ಯಾವುದೇ ತಳಿ ವೈವಿಧ್ಯತೆ ಸಾಧ್ಯವಿಲ್ಲದಿರುವುದೇ ಸಮಸ್ಯೆ ಎನ್ನುತ್ತಾರೆ ಬಾಳೆಯ ಅಂತರರಾಷ್ಟ್ರೀಯ ಸಸ್ಯ ತಳಿ ಸಂಪನ್ಮೂಲ ಸಂಸ್ಥೆಯ ತಜ್ಞರು. ಸುಮಾರು ನೂರು ನೂರೈವತ್ತು ವರ್ಷದ ಹಿಂದೆ ಆಲೂಗಡ್ಡೆಗೆ ಇನ್ನೂ ಬ್ಲೈಟ್ ಬಂದಿರಲಿಲ್ಲ ಹಾಗಿತ್ತು ಬಾಳೆ. ಒಂದು ಸಲ ಬಂತು ನೋಡಿ ಆಲೂ ನಾಶವಾಗಿಯೇ ಹೋಯಿತು ಅನ್ನಿಸುವಂತೆ ಆಯಿತು. ಐರ್ಲೆಂಡ್ ಅಕ್ಷರಶಃ ಬರಗಾಲವನ್ನು ಎದುರಿಸಿತ್ತು. ಇವತಿನ ಸಂದರ್ಭದಲ್ಲಿ ಈ ಆಲೂ ಬೆಳೆ ಒಂದು ಪಾಠ ಕಲಿಸಬೇಕಿದೆ. ಜನಪ್ರಿಯವಾದ ಈ ಬಾಳೆಯ ಹಣ್ಣು ಹೀಗೆ ಇದ್ದಕ್ಕಿದ್ದಂತೆ ಆಲೂವಿನಂತೆ ಇಂತದ್ದೇ ಸಮಸ್ಯೆ ಎದುರಿಸಿದರೆ ಬಾಳೆ ಸರ್ವನಾಶವಾಗುತ್ತದೆ. ಇರುವ ಒಂದೇ ತಳಿಯಲ್ಲಿ ಎಲ್ಲವನ್ನೂ ನಿಭಾಯಿಸುವುದು ಕಷ್ಟ ಎನ್ನುತ್ತಾರೆ. ಜಗತ್ತಿಗಿರುವ ಬಾಳೆಯ ವ್ಯಾಮೋಹ ಇಂತಹಾ ನಿರಾಸೆಯನ್ನೂ ತನ್ನ ಮಡಿಲಲ್ಲಿಟ್ಟುಕೊಂಡಿದೆ.

ತಿನ್ನಲು ಯೋಗ್ಯವಾದ ಬಾಳೆಯ ಎಲ್ಲಾ ತಳಿಗಳೂ ಲಿಂಗರಹಿತವೇ. ಹಾಗಾಗಿ ಅದರಲ್ಲಿ ಅನುವಂಶಿಕ ಬದಲಾವಣೆಯನ್ನು ತರುವುದು ಅಸಾಧ್ಯ. ಆ ಮೂಲಕ ರೋಗಕೀಟಗಳಿಂದ ಮುಕ್ತಿಕೊಡಿಸುವುದಂತೂ ಇನ್ನೂ ದೂರದ ಮಾತು. ಹಾಗಂತ ಸಂಪೂರ್ಣ ತಳ್ಳಿ ಹಾಕುವಂತೆಯೂ ಇಲ್ಲ, ಹಾಗೇನಾದರೂ ತರುವುದಿದ್ದರೆ ತುಂಬಾ ಕಷ್ಟ ಪಡಬೇಕಿದೆ.

ಈಗಿರುವ ಆತಂಕಗಳಿಗೆ ಕಾರಣವಾಗುವ ವಿವರಗಳು ಹೀಗಿವೆ. ಸರಿಸುಮಾರು **1820**ರಲ್ಲೇ ಏಶಿಯಾದಿಂದ ಫ್ರೆಂಚ್ ಸಸ್ಯಶಾಸ್ತ್ರಜ್ಞರು ಅಭಿವೃದ್ಧಿಪಡಿಸಿದ್ದ ಗ್ರೋಸ್ ಮೈಕಿಲ್ ಎಂಬ ತಳಿಯು **1950** ರವರೆಗೂ ಚಾಲ್ತಿಯಲ್ಲಿತ್ತು, ಅದಕ್ಕೆ ಪನಾಮ ವಿಲ್ಟ್ ಎಂಬ ಶಿಲೀಂಧ್ರ ಕಾಯಿಲೆಯು ತುತ್ತಾಗಿ ನರಳಿತು. ಈಗಿರುವ ಯಾವುದೇ ಪಚ್ಚ ಬಾಳೆಗೆ ಹೋಲಿಸಿದಲ್ಲಿ ಅದು ತುಂಬಾ ಸಿಹಿಯಾಗಿತ್ತು, ಆದರೇನು ಅದನ್ನು ನಿರಂತರವಾಗಿ ಉಳಿಸಿಕೊಳ್ಳಲಾಗಲಿಲ್ಲ, ಏಕೆಂದರೆ ಶಿಲೀಂದ್ರವು ಮಣ್ಣು ಸೇರಿ ಇನ್ನೂ ಹರಹನ್ನು ಹೆಚ್ಚಿಸಿಕೊಂಡಿತ್ತು.

ಈಗಿರುವ ಈ ಕ್ಯಾವೆಂಡಿಶ್ ತಳಿಯನ್ನು ದಕ್ಷಿಣ ಚೀನಾದಿಂದ ಬ್ರಿಟಿಷ್ ಸಸ್ಯಶಾಸ್ತ್ರಜ್ಞರು ತಮ್ಮ ವಸಾಹತು ಅಲೆದಾಟದಲ್ಲಿ ಸುಮಾರು **1828**ರ ಹೊತ್ತಿಗೆ ಬಳಕೆಗೆ ತಂದರು. ಹೀಗೆ ಬ್ರಿಟನ್ ಹೊಕ್ಕ ತಳಿಗೆ ಮೊದಲು ಜಾಗ ಒದಗಿಸಿದ ಲಾರ್ಡ್ ಒಬ್ಬನ ಹೆಸರನ್ನೇ ಇಟ್ಟದ್ದರಿಂದ ಕ್ಯಾವೆಂಡಿಶ್ ಆಗಿ ಒಂದು ತಳಿಯೆಂದು ಜಾರಿಗೆ ಬಂತು. ಗ್ರೋಸ್ ಮೈಕಿಲ್ ತಳಿಗೆ **1960**ರಲ್ಲಿ ಕಾಡಿದ್ದ ಪನಾಮ ರೋಗಕ್ಕೆ ಹೆದರಿದ ರೈತರು ಅದರ ರುಚಿಗಿಂತಾ ರೋಗ ತಡೆದುಕೊಳ್ಳುವಿಕೆಯಲ್ಲಿ ಒಲವು ತೋರಿಸಿದರು. ಆಗ ಅದು ಸಾಧ್ಯವಿದ್ದ ಈ ಕ್ಯಾವೆಂಡಿಶ್ ಜನಪ್ರಿಯವಾಯಿತು. ಇದಕ್ಕೆ ಪನಾಮ ರೋಗ ತಡೆಯುವ ಶಕ್ತಿಯಿದ್ದುದರಿಂದ ಈಗಲೂ ಉಳಿದಿದೆ. ಆದರೆ ಮತ್ತೆ ಹೊಸ ಹೊಸ ಅಡೆತಡೆಗಳು ಬರುತ್ತಲೇ ಇವೆ. ನಮ್ಮಲ್ಲೂ ಬಾಳೆಯ ಹೊಸ ಆತಂಕಗಳಿಂದ ಅದರ ಬುಡ ಅಲುಗಾಡಿದೆ.

ಬಾಳೆಯ ಬುಡ ಸಡಿಲವಾಗುತ್ತಿದೆಯೇ?

ಬಾಳೆಯನ್ನು ಬಗೆದು ಹಾಕು ತೆಂಗನ್ನು ತೇಲಿಸಿ ಬಿಡು ಎನ್ನುವುದು ಜನಪ್ರಿಯ ಮಾತು. ಬಗೆದು ಹಾಕು ಅನ್ನುವುದು ಅದರ ಬುಡದ ಭದ್ರತೆಗೆ ಸಂಬಂಧಿಸಿದ ಮಾತು. ಏಕೆಂದರೆ ಬಾಳೆಯು ಬೆಳೆದು ದೊಡ್ಡದಾದಂತೆ ಅದರ ಕಾಂಡ ಉದ್ದವಾಗಿ ಜತೆಗೆ, ಬಾಳೆಗೊನೆಯ ಭಾರವನ್ನೂ ತಡೆದುಕೊಳ್ಳುವಂತೆ ಬುಡವನ್ನು ಭದ್ರಪಡಿಸುವ ಕುರಿತೇ ರೈತ ಕಾಳಜಿಯು ಈ ಮಾತಿನಲ್ಲಿ ಬಂದಿದೆ. ಭಾರತದಲ್ಲಿ ರಾಜಸ್ತಾನ್ ಮತ್ತು ಕಾಶ್ಮೀರ ಹೊರತು ಪಡಿಸಿ ಬಹುಶಃ ಎಲ್ಲಾ ರಾಜ್ಯಗಳಲ್ಲೂ ಬಾಳೆ ಪರಿಚಿತ ಬೆಳೆ. ಕರ್ನಾಟಕದಲ್ಲಿ **1,00,000** ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಬಾಳೆಯನ್ನು ಬೆಳೆಯಲಾಗುತ್ತಿದೆ. ಅದೇನೋ ರೈತರಂತೂ ಬಾಳೆಯ ಬುಡದ ಭದ್ರತೆಯ ಬಗ್ಗೆ ಸಾಕಷ್ಟು ತಲೆಕೆಡಿಸಿಕೊಂಡಿದ್ದಾರೆ. ಅದಕ್ಕೆ ಪ್ರತ್ಯುತ್ತರವಾಗಿ ಎಂಬಂತೆ ಜಗತ್ತಿನ ಬಾಳೆಯ ಸಂಶೋಧಕರು ಒಂದಷ್ಟು ಬುಡದ ಅಭದ್ರತೆಯ ಬಗೆಗೆ ಮಾತಾಡಿದ್ದಾರೆ. ಅದಕ್ಕೆ ಮುಖ್ಯ ಕಾರಣವೆಂದರೆ ಬೇರನ್ನು ಕಾಡುವ ದುಂಡುಹುಳ. ಇದರಿಂದ ತೊಂದರೆಗೆ ಒಳಗಾದರೆ ಏನಿಲ್ಲವೆಂದರೂ **70-75%** ನಷ್ಟವನ್ನು ಬಾಳೆಯಲ್ಲಿ ಕಾಣಬೇಕಾಗುತ್ತದೆ. ಅದರಲ್ಲೂ ಹೆಚ್ಚಾಗಿ ಬೆಳೆಯಲಾಗುತ್ತಿರುವ ಅಂಗಾಂಶ ಕೃಷಿಯ ಜಿ-ನೈನ್ ತಳಿಯಂತೂ ಇದೇ ಕಾರಣದಿಂದಲೇ ಹೆಚ್ಚಿನ ನಷ್ಟವನ್ನು ಅನುಭವಿಸುವುದರಿಂದ ಇದೀಗ ಹೆಚ್ಚಿನ ಆತಂಕ. ಬೇರನ್ನೇ ಕಾಡುವ ಈ ಹುಳುಗಳು ಬರಿ ಕಣ್ಣಿಗೆ ಕಾಣವು. ಆದರೆ ಸುಮಾರು ಸಾವಿರಾರು ಹುಳುಗಳು ಒಮ್ಮೆಲೇ ಬಾಳೆಯ ಬೇರಿನ ಒಳಹೊಕ್ಕು ಕಾಡಬಲ್ಲವು. ದುಂಡುಹುಳು ಪೀಡಿತ ಬಾಳೆಯಲ್ಲಿ ಬೇರನ್ನು ಹೊಕ್ಕ ಹುಳುಗಳಿಂದ ಬೇರಿನ ಚಟುವಟಿಕೆಯಲ್ಲಿ ಕುಂಠಿತವಾಗತೊಡಗುತ್ತದೆ. ಬೇರುಗಳಿಂದ ನೀರು, ಆಹಾರದ ಸರಬರಾಜು ಗಿಡಕ್ಕೆ ಕಡಿಮೆಯಾಗತೊಡಗಿ ಗಿಡ ಸೊರಗಲು ಪ್ರಾರಂಭವಾಗುತ್ತದೆ. ಇದರ ಕೊನೆಯ ಗುರಿ ಬೇರು ಕೊಳೆತು ಸಂಪೂರ್ಣ ನಾಶ. ಆ ಹಂತದಲ್ಲಿ ಗಿಡವೇ ಬುಡಮೇಲಾಗುವ ಪರಿಸ್ಥಿತಿ. ಆಗ ಬಾಳೆಗೊನೆಯ ನಷ್ಟ.


ಜಗತ್ತಿನ ಅನೇಕ ಬಾಳೆ ಬೆಳೆಯ ಸಂಶೋಧಕರ ಅಭಿಪ್ರಾಯದಂತೆ ದುಂಡುಹುಳುವಿನ ನಾಶ ಅಷ್ಟು ಸುಲಭವಲ್ಲ, ಕಾರಣ ಈಗಿರುವ ಬಹುಪಾಲು ದುಂಡುಹುಳು ನಾಶಕ ಔಷಧಗಳು ಅವುಗಳನ್ನು ಸಂಪೂರ್ಣ ಕೊಲ್ಲುವುದಿಲ್ಲ, ಬದಲಿಗೆ ನಿಸ್ತೇಜಗೊಳಿಸಿ ಚಟುವಟಿಕೆಗಳನ್ನು ಕಡಿಮೆ ಮಾಡುತ್ತವೆ. ಇದರಿಂದ ಮತ್ತೆ ಹುಳುಗಳು ಶಕ್ತವಾಗಲು ಸಹಾಯಕವಾಗುತ್ತವೆ. ಆದ್ದರಿಂದಲೇ ಇತ್ತೀಚಿಗಿನ ಅಧ್ಯಯನಗಳು ಈ ದುಂಡುಹುಳುಗಳು ಉತ್ಪಾದಿಸುವ ರಸಾಯನಿಕಗಳು ಎಂತಹವು, ಅದರಿಂದ ಬಾಳೆಗೆ ಯಾವ ರೀತಿಯ ತೊಂದರೆಗಳಾಗುತ್ತವೆ ಎಂಬುದನ್ನೇ ಮೂಲವಾಗಿಟ್ಟು ನೋಡಲಾರಂಭಿಸಿವೆ. ಈವರೆಗೂ ಕೇವಲ ಔಷಧೋಪಚಾರದ ಮಿತಿಗಳಲ್ಲೇ ಅಧ್ಯಯನಗಳು ನಡೆದು ರೈತರನ್ನು ಆತಂಕದಲ್ಲಿಟ್ಟಿವೆ. ಇದಕ್ಕೂ ಆಚೆ ನೋಡುವಂತಹ ಅನೇಕ ಅವಕಾಶಗಳನ್ನು ಈ ದುಂಡುಹುಳುಗಳ ಇಕಾಲಜಿಯು ಹುಟ್ಟಿಹಾಕಿದೆ. ಅವುಗಳ ಚಟುವಟಿಕೆಗಳಿಂದ ಬರುವ ರಸಾಯನಿಕದ ವಿವರಗಳಿನ್ನೂ ಅಲಭ್ಯ. ಮುಂದೊಂಹು ದಿನ ಆ ರಸಾಯನಿಕಗಳ ಚಟುವಟಿಕೆಗಳ ತಡೆಯೊಡ್ಡುವಂತಹ ಉತ್ತರಗಳು ದೊರೆತಾವು. ಆದರೂ ಈ ಬಗೆಯ ರಸಾಯನಿಕಗಳ ಬಗ್ಗೆಯ ತಿಳಿವಳಿಕೆಯೂ ಮತ್ತೊಂದು ಉತ್ತರವಾದ ರಸಾಯನಿಕಗಳ ಹುಟ್ಟಿಗೆ ಸಂಶೋಧನೆಗಳು ಬಳಕೆಯಾಗುತ್ತವೆ. ಅಷ್ಟು ವ್ಯವಸ್ಥಿತವಾಗಿ ಮಾರುಕಟ್ಟೆ ಆಧಾರಿತ ಸಂಶೋಧನಾ ಮಾದರಿಗಳು ರೈತೋದ್ಯಮದ ಪರಿಕರಗಳನ್ನು ಮಾರಾಟ ಮಾಡಲಾಗುತ್ತದೆ.

ಆದರೂ ಹುಳುಗಳ ಚಟುವಟಿಕೆಯಿಂದ ಬರುವಂತಹ ರಸಾಯನಿಕಗಳ ಪ್ರತಿರೋಧಿಸುವ ತಳಿಗಳ ಹುಟ್ಟಿಗೂ ಕಾರಣವಾಗಬಹುದು. ಏಕೆಂದರೆ ಈಗಾಗಲೆ ದುಂಡುಹುಳು ಪೀಡಿತ ತೋಟದಲ್ಲೂ ಕೆಲವು ಗಿಡಗಳು ಆರೋಗ್ಯಕರವಾಗಿತ್ತವೆ. ಅಂತಹ ಗಿಡಗಳಲ್ಲಿ ಪ್ರತಿರೋಧದ ರಸಾಯನಿಕಗಳ ಉತ್ಪಾದನೆಯಾಗುತ್ತದೆ. ಇಂತಹ ಸುಮಾರು 9 ಬಗೆಯ ಸಸ್ಯ ಉತ್ಪಾದಿತ ರಸಾಯನಿಕಗಳನ್ನು ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ರಸಾಯನಿಕಗಳ ಇಕಾಲಜಿ ಸಂಸ್ಥೆಯು ಪತ್ತೆ ಹಚ್ಚಿದೆ. ಇವುಗಳ ತಳಿ ಸಂಬಂಧಿತ ಅಧ್ಯಯನಗಳು ಮುಂಚೂಣಿಯಲ್ಲಿವೆ. ರಸಾಯನಿಕಗಳ ಇಕಾಲಜಿಯನ್ನೇ ಮುಖ್ಯವಾಗಿಟ್ಟು ನೋಡುವ ಈ ಸಂಸ್ಥೆಯೂ ಇಂತಹ ರೈತಸ್ನೇಹಿ ಹುಡುಕಾಟಗಳಲ್ಲಿ ತೊಡಗಿ ಉತ್ತರಗಳನ್ನು ಪ್ರಶ್ನೆಗಳಲ್ಲೇ ಪತ್ತೆಹಚ್ಚುವ ಮೂಲಕ ಆಶಾದಾಯಕ ಪರಿಹಾರಗಳನ್ನು ಉತ್ತೇಜಿಸಿದೆ.


ಹಾಗಾಗಿ ಅನೇಕ ಸಂದರ್ಭಗಳಲ್ಲಿ ಬಾಳೆಯ ಈ ಬಗೆಯ ತೊಂದರೆಗಳನ್ನು ಸಮಗ್ರ ನಿರ್ವಹಣೆಯ ಮಾದರಿಗಳಿಂದ ವ್ಯವಸ್ಥಿತವಾಗಿ ತಡೆಗಟ್ಟಬಹುದಾಗಿದೆ. ಮುಖ್ಯವಾಗಿ ಮಿಶ್ರಬೆಳೆಯನ್ನು ಕಡ್ಡಾಯಗೊಳಿಸಿ ತೊಂದರೆಯು ಹಬ್ಬುವುದನ್ನು ತಪ್ಪಿಸಬಹುದಾಗಿದೆ. ಅಲ್ಲದೆ ಬೆಳೆ ಪರಿವರ್ತನೆಯೂ ಉತ್ತಮ ಉಪಾಯವಾಗಲಿದೆ. ಕೆಲ ರೈತರು ಬೆಳೆ ವಿಶ್ರಾಂತಿ ಕ್ರಮವನ್ನೂ ಅನುಸರಿಸುತ್ತಾರೆ. ಅಂದರೆ ಒಂದು ಅಥವಾ ಎರಡು ಬೆಳೆಯನ್ನು ತಪ್ಪಿಸುವ ಪರಿಪಾಠ. ಆಗ ಬಾಳೆಯನ್ನು ಸಂಪೂರ್ಣ ತೆಗೆದು ಬೇರೆಯದೇ ಬೆಳೆಯನ್ನು ಬೆಳೆವ ಮೂಲಕ ಹುಳುಕಾಟಕ್ಕೆ ಮುಕ್ತಿಕೊಡಲಾಗುತ್ತದೆ. ಈ ಇಕಾಲಜಿಯ ಸರಳ ಪಾಠಗಳು ರಸಾಯನಿಕಗಳು ಕೊಡುವ ಉತ್ತರಗಳಿಗಿಂತ ಬಹುಕಾಲ ಬಾಳುವ ಬಾಳೆಗೆ ಉತ್ತರವಾಗುತ್ತವೆ. ಜತೆಗೆ ವೈವಿಧ್ಯಮಯವಾದ ಬೆಳೆಗಳನ್ನೂ ಒಟ್ಟಿಗೇ ಬೆಳೆಸುವ ಮಾದರಿಗಳೂ ಸಹಾಯಕವಾಗಬಲ್ಲವು.


ಬಾಳೆಯು ಹೆಚ್ಚು ನೀರು, ಹೆಚ್ಚು ಆಹಾರವನ್ನು ಬಯಸುವ ಬೆಳೆ. ಮಣ್ಣಿನಲ್ಲಿ ಆಹಾರಾಂಶಗಳ ಕೊರತೆ ಜತೆಗೆ ತೇವಾಂಶದ ತೊಂದರೆಗಳು ಸಹ. ಒಟ್ಟಾರೆ ರೋಗ, ಕೀಟ ನಿರೋಧಕ ಶಕ್ತಿಗಳನ್ನು ಕಡಿಮೆಗೊಳಿಸುತ್ತವೆ. ಆದ್ದರಿಂದ ಬಾಳೆ ಬೆಳೆವ ಮಣ್ಣು ಫಲವತ್ತಾಗಿರುವಂತೆ ನೋಡಿಕೊಳ್ಳುವುದೂ ಅಷ್ಟೇ ಮುಖ್ಯ. ಜತೆಗೆ ಉತ್ಪಾದಕತೆಯೂ ಮಣ್ಣಿನ ಆಹಾರಾಂಶಗಳ ನೇರ ಲಾಭವನ್ನೂ ಪಡೆಯುವುದರಿಂದ ಇದರ ಕಾಳಜಿ ಅಧಿಕ.

ಬಾಳೆಯ ಬಗೆಗಿನ ವೈಯಕ್ತಿಕ ಕಾಳಜಿ ಏಕೆಂದರೆ ಇದು ಹಣ್ಣುಗಳಲ್ಲಿ ಅತೀ ಹೆಚ್ಚಿನ ಉತ್ಪಾದನೆಯ ಬೆಳೆ. ಅದೂ ಅಲ್ಲದೇ ಬ್ರೆಜಿಲ್, ಈಕ್ವೆಡಾರ್, ಚೀನಾ ಜತೆ ಭಾರತವೂ ಸೇರಿ ಜಗತ್ತಿನ ಅರ್ಧದಷ್ಟು ಬಾಳೆಯನ್ನು ಉತ್ಪಾದಿಸುತ್ತವೆ. ಭಾರತದಿಂದ ಕೋಟ್ಯಾಂತರ ರೂಪಾಯಿಗಳ ತಾಜಾ ಬಾಳೆಹಣ್ಣಿನ ರಫ್ತು ವ್ಯವಹಾರ ನಡೆಯುತ್ತದೆ. ಮುಖ್ಯವಾಗಿ ಅರಬ್ ರಾಷ್ಟ್ರಗಳಿಂದ ಹೆಚ್ಚಿನ ಬೇಡಿಕೆ. ಅದೂ ಅಲ್ಲದೆ ವರ್ಷ ಪೂರ್ತಿ ಬೇಡಿಕೆಯಿರುವ ಹಣ್ಣಾದ್ದರಿಂದ ದಿನವೂ ಇದರ ಉತ್ಪಾದನೆಯ ಹೊರೆ ರೈತಾಪಿಯ ಮೇಲಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಗತ್ತಿನಾದ್ಯಂತ ಕೇವಲ ಒಂದೇ ಬಗೆಯ ತಳಿಯು ಇದೆಲ್ಲವನ್ನೂ ನಿಭಾಯಿಸುತ್ತಿರುವುದರಿಂದ ಎಲ್ಲಾದರೂ ಹೆಚ್ಚೂ ಕಡಿಮೆಯಾದಲ್ಲಿ ನಿವಾರಿಸುವ ಬಗೆಗೆ ಕಾಳಜಿಗಳ ಚರ್ಚೆಗಳಾಗುತ್ತಿವೆ.










ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ಬಹುಸಂಖ್ಯಾತರ ಗೋರಿಗಳ ಮೇಲೆ ಶಿಷ್ಟ ಚರಿತ್ರೆಗಳು

"ಅಹಹಹ ವೀರಭದ್ರ," ಎಂದು ಸೊಲ್ಲೆತ್ತಿ, ಗರ್ಜಿಸಿ, ಜಂಗುಗಳು ತಾಳಹಾಕುವಂತೆ ಒಂದು ಕೈಯಲ್ಲಿ ಚೂರಿಯಂತಹ ಚಿಕ್ಕ ಕತ್ತಿ ಮತ್ತೊಂದು ಕೈಯಲ್ಲಿ ದೊಡ್ಡ ಕತ್ತಿ ಹಿಡಿದು ಕುಣಿಯುವ ವೀರಗಾಸೆಯನ್ನು ನೋಡಿ. ಅದು ಅಪ್ಪಟ ಜಾನಪದ. ಅದರಲ್ಲಿ ಅನುಮಾನವೇ ಇಲ್ಲ. ಕೆಂಪು ವಸ್ತ್ರ ರುಂಡಾಭರಣ, ತಲೆಯ ಮೇಲೆ ನಾಗ, ಕೆಂಜಡೆ, ಹುರಿಮೀಸೆ, ಕುಣಿತದ ಹೆಜ್ಜೆಗಳು; ಇವೆಲ್ಲವೂ ನೇರವಾಗಿ ವೀರಭದ್ರ ಗಣ ಸಂಸ್ಕೃತಿಯವನು ಎಂದು ತೋರಿಸುತ್ತದೆ. ಎಣ್ಣೆಗಾಣದೆ, ಉಪಚಾರವನ್ನು ಅರಿಯದ ಕೂದಲು ಕೆಂದಾಗಿ ಜಟೆಗಟ್ಟಿರುವುದು ಶುದ್ಧ ಅವೈದಿಕವಾದ ಅಘೋರಿಯಂತಹ ತಾಂತ್ರಿಕ ಸಾಧಕರ ಲಕ್ಷಣ.

ತನ್ನ ಶತ್ರುಗಳನ್ನು ಕೊಂದ ಮೇಲೆ ಅವರ ಹೆಣವನ್ನು ಅಲ್ಲಿಯೇ ಬಿಟ್ಟು, ತಾನೆಲ್ಲೋ ಹೋಗಿ ಶುಚಿರ್ಭೂತನಾಗಿ ಮಲಿನವನ್ನು ಕಳೆದುಕೊಂಡು, ಯಾವುದೋ ದೇವರಿಗೆ ಪೂಜಿಸುವುದು ಆರ್ಯ ಸಂಸ್ಕೃತಿ. ಪೂಜೆಯೇ ಆರ್ಯ ಸಂಸ್ಕೃತಿಯೋ ಅಥವಾ ವೈದಿಕ ಸಂಸ್ಕೃತಿಯೋ ಅಲ್ಲ. ಪೂ-ಅಂದರೆ ಹೂ ಇಂದ ಉತ್ಪತ್ತಿಯಾದ ಪೂಜೆ ಪಕ್ಕಾ ದ್ರಾವಿಡ







ಸಂಸ್ಕೃತಿ. ಪೂಜೆಯನ್ನು ಮಾಡಲು ತೊಡಗಿದಾಗಲೇ ಬ್ರಾಹ್ಮಣ ತನ್ನ ಬ್ರಾಹ್ಮಣ್ಯವನ್ನು ಕಳೆದುಕೊಳ್ಳುತ್ತಾನೆ. ಅವನ ಸಂಧ್ಯಾವಂದನಾದಿ ಮಾಡುವ ಕಾರ್ಯಗಳು ವ್ಯಕ್ತಿಗತವಾಗಿ ಒಬ್ಬನೇ ಮಾಡುವುದಾದರೆ, ಸಾಮೂಹಿಕವಾಗಿ ಮಾಡುವುದು ಯಜ್ಞ. ಯಜ್ಞ ಸಂಸ್ಕೃತಿಯಿಂದ ಹೊರತಾಗಿ ಪೂಜೆಯನ್ನು ಮಾಡುವವನು ಬ್ರಾಹ್ಮಣನಾಗಿ ಉಳಿಯಲಾರ. ಪೂಜೆಯ ಆಕರ್ಷಣೆಯಿಂದ ಆರ್ಯರು ತಪ್ಪಿಸಿಕೊಳ್ಳಲಾಗದ್ದರಿಂದಲೋ ಅಥವಾ ದ್ರಾವಿಡಾದಿ ಇತರ ಅನಾರ್ಯ ಸಮುದಾಯಗಳಲ್ಲಿ ರೂಢಿಕೆಯಲ್ಲಿದ್ದ ಪೂಜೆಯ ಪದ್ಧತಿಯನ್ನು ಕೈಗೊಳ್ಳದೇ ಅವರಿಗೆ ಸಂಸ್ಕೃತಿಯ ಒಳ ನುಸುಳಲು ಸಾಧ್ಯವಿರದಿದ್ದ ಕಾರಣವೋ, ಒಟ್ಟಿನಲ್ಲಿ ಪೂಜೆಯನ್ನು ಅಭ್ಯಾಸಕ್ಕೆ ಒಳಪಡಿಸಿದರು.

ಇರಲಿ, ವರ್ಣಾಶ್ರಮ ಪದ್ಧತಿಯನ್ನು ಒಪ್ಪಿದ್ದ ಆರ್ಯನಾದ ಕ್ಷತ್ರಿಯ ರಾಮನು ರಾವಣನನ್ನು ಕೊಂದ ಪಾಪ ಪರಿಹಾರಕ್ಕೆ ರಾಮೇಶ್ವರಕ್ಕೆ ಹೋಗಿ ಲಿಂಗ ಸ್ಥಾಪನೆ ಮಾಡಿದ. ಕೊಂದಾದ ಮೇಲೆ ಹೆಣವನ್ನು, ಅದರ ಅಂಗಗಳನ್ನು ತಮ್ಮಲ್ಲಿರಿಸಿಕೊಳ್ಳುವುದು ಶಿಷ್ಟರ ಪಾವಿತ್ರ್ಯಕ್ಕೆ ತಗ್ಗದು.


ತಮ್ಮ ಕುಟುಂಬದಲ್ಲಿ ಒಬ್ಬರ ಸಾವಾದರೆ, ಅವರ ಹೆಣವನ್ನೇ ಹೆಚ್ಚು ಹೊತ್ತು ಇರಿಸಿಕೊಳ್ಳಲಾಗದ ಬ್ರಾಹ್ಮಣರು ಎಷ್ಟು ಬೇಗ ಮನೆಯಿಂದ ಸಾಗ ಹಾಕುತ್ತಾರೆ. ಸ್ಮಶಾನಕ್ಕೆ ಹೆಂಗಸರನ್ನೇ ಕರೆದೊಯ್ಯದವರು, ತಂದೆ ತಾಯಿಗಳಿರುವವರು ಸ್ಮಶಾನಕ್ಕೆ ಹೋಗಬಾರದೆನ್ನುವ ವೈದಿಕರು ಹೆಣವನ್ನು ಭಾವನಾತ್ಮಕವಾಗಿ ಆಪ್ತತೆಗಾಗಲಿ, ಸಾಮೀಪ್ಯಕ್ಕಾಗಲಿ ಬಳಸಮಾಡುವುದಿಲ್ಲ.


ಅಂತಹುದರಲ್ಲಿ ಕೊಂದವರ ತಲೆಗಳನ್ನು ಮಾಲೆಯನ್ನಾಗಿ ಹಾಕಿಕೊಳ್ಳುವುದು, ಹೆಣಗಳ ಕೈಗಳನ್ನು ಪೋಣಿಸಿ ಒಳಿಯಂತೆ ಸೊಂಟಕ್ಕೆ ಕಟ್ಟಿಕೊಳ್ಳುವುದು ಇತ್ಯಾದಿಗಳೆಲ್ಲವೂ ಅವೈದಿಕವೂ ಮತ್ತು ಬುಡಕಟ್ಟುಗಳ (ತಾಂತ್ರಿಕ ರೂಪದ) ಮೂಲಗಳೂ ಆಗಿರುತ್ತವೆ. ಇಲ್ಲಿ ವೀರಭದ್ರನು ತಾನು ರುಂಡಮಾಲೆಯನ್ನು ಧರಿಸುವನು. ದಕ್ಷನೇ ಮೊದಲಾದ ದುರ್ಜರ ಸಂಹಾರ ಮಾಡಿದ ಮೇಲೆ ಯಾವ ಪ್ರಾಯಶ್ಚಿತ್ತ ಕಾರ್ಯವನ್ನೂ, ಸೂತಕ ಕಳೆದುಕೊಳ್ಳುವಂತಹ ಕಾರ್ಯವನ್ನೂ ಮಾಡುವುದಿಲ್ಲ. ಅವನ ವೇಷಭೂಷಣಗಳು, ಹಾವಭಾವ ಮ, ಒಟ್ಟು ನಿಲುವುಗಳು ಕುಪಂಬನಾಗಿಯೂ ಮತ್ತು ರೌದ್ರಾಕಾರಿಯಾಗಿಯೂ ಕಾಣುತ್ತಾನೆ. ತನ್ನ ಹೆಂಡತಿಯ ಹೆಣವನ್ನು ಹೆಗಲ ಮೇಲೆ ಹೊತ್ತೊಯ್ಯುವ ಶಿವನಾಗಲಿ, ರುಂಡ ಮಾಲೆ, ಕಡಿದ ಕೈಗಳ ಸ್ಕರ್ಟ್ ಧರಿಸುವ ಕಾಳಿಯಾಗಲಿ ಹೇಗೆ ಆರ್ಯ, ವೈದಿಕ ಅಥವಾ ಶಿಷ್ಟ ವರ್ಗಕ್ಕೆ ಸೇರಿದ್ದವರಲ್ಲವೋ ವೀರಭದ್ರನೂ ಅಂತೆಯೇ ವೈದಿಕ ಮತ್ತು ಬ್ರಾಹ್ಮಣಿಕೆಯಿಂದ ಸಂಪೂರ್ಣವಾಗಿ ಹೊರತಾದವನು.


ವೈದಿಕತೆಯನ್ನೂ ಮತ್ತು ತಮ್ಮ ವೀರಭದ್ರನನ್ನೂ ಒಟ್ಟಿಗೆ ಅಪ್ಪಿಕೊಳ್ಳುವ ಪಂಚಪೀಠಗಳು ಎಚ್ಚರಿಕೆಯಿಂದಲೂ, ಪ್ರಜ್ಞೆಯಿಂದಲೂ ಗಮನಿಸಬೇಕಾದ ಹಲವು ಅಂಶಗಳಿವೆ. ವೈದಿಕತೆಯನ್ನು ಒಪ್ಪುವುದಾದರೆ ವೀರಭದ್ರನನ್ನು ಬಿಡಬೇಕು, ವೀರಭದ್ರನನ್ನು ಪೂಜಿಸುವುದಾದರೆ ವೈದಿಕತೆಯನ್ನು ಬಿಡಬೇಕು. ಪತಿವ್ರತೆಗೆ ಒಬ್ಬನೇ ಗಂಡನಾಗಿರಬೇಕು ಸೋಕಾಲ್ಡ್ ಶಿಷ್ಟರ ಸಮಾಜದಲ್ಲಿ.

ಅದೇನೇ ಇರಲಿ, ತಾವು ಜಾನಪದದಿಂದ ಕಂಡುಕೊಂಡ ವುಗಳನ್ನೂ ವೈದಿಕದ ತೆಕ್ಕೆಯಲ್ಲಿ ತೆಗೆದುಕೊಂಡು ಅದನ್ನು ಬ್ರಾಹ್ಮಣೀಕರಣಗೊಳಿಸುವುದು ಇವರಿಗೆ ಹೊಸದೇನಲ್ಲ. ವೀರಭದ್ರನ ಬಗ್ಗೆ ಹುಡುಕುತ್ತಾ ದೇಸೀ ನೆಲೆಯನ್ನು ತಡಕಾಡಿದರೆ ಅವನ ಕಾವ್ಯ ಸ್ವರೂಪವು ಅನಾಮಿಕ ಕೃತಿಕಾರರ ಧ್ವನಿಯಾಗಿ ಜನಪದೀಯ ಪುರಾಣಗಳಲ್ಲಿ ಧ್ವನಿಸುತ್ತದೆ.

ಜನಪದೀಯ ಪುರಾಣಗಳನ್ನು ಜನಸಮುದಾಯದ ಇತಿಹಾಸವನ್ನು ಅರಿಯಲು ನೋಡಲೇಬೇಕಾದ ಅನಿವಾರ್ಯತೆ ಇದೆ. ರಾಮಾಯಣವಾಗಲಿ, ಮಹಾಭಾರತವಾಗಲಿ ಜಾನಪದವಲ್ಲ. ಅವಕ್ಕೆ ನಿರ್ದಿಷ್ಟ ಕೃತಿಕಾರರಿದ್ದಾರೆ. ಅವನ್ನು ನಮ್ಮ ಜನಪದ







ತಮ್ಮದಾಗಿಸಿಕೊಂಡು ವಿಸ್ತಾರ ಮಾಡಿರುವಂತಹ ಸೃಜನಶೀಲತೆಯನ್ನು ತೋರಿ, ತಮ್ಮಲ್ಲಿ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ಅದು ಅವರ ಔದಾರ್ಯ.

ಹಾದರದ ಕಥೆಯ ಸೋದರರ ವಧೆಯನ್ನು ತುಂಬಿಕೊಂಡಿರುವ ಮಹಾಭಾರತವನ್ನು ಆಧರಿಸಿ ಕೇಳುವವರನ್ನು ಸರ್ವಜ್ಞ ಖಂಡಿಸುತ್ತಾನೆ. ನಿಜ, ಅದು ಪ್ರಭುತ್ವದಲ್ಲಿರುವ ಮನೆಗಳ, ವಂಶಗಳ, ವ್ಯಕ್ತಿಗಳ ಮನಸ್ತಾಪಗಳ, ಸಂಘರ್ಷಗಳ ಕಥನ. ಹಾಗೆಯೇ ರಾಮಾಯಣವೂ ರಾಜನೊಬ್ಬನು ತನ್ನ ಹೆಂಡತಿಯನ್ನು ಕಳೆದುಕೊಂಡು, ಮತ್ತೊಬ್ಬ ರಾಜನನ್ನು ಎದುರಿಸುವಂತಹ ಪ್ರಯಾಣದ ಕಥೆಯೇ ಹೊರತು ಜನಸಾಮಾನ್ಯರ ವಿಷಯಗಳೇ ಇಲ್ಲ. ಜನ ಸಾಮಾನ್ಯರೆಂದರೆ ಆ ಕಾವ್ಯಗಳಲ್ಲಿ ಬಳಸಿಕೊಳ್ಳುವ ವಸ್ತುಗಳಂತೆ ಅಥವಾ ಪ್ರಭುತ್ವವನ್ನು ಒಪ್ಪಿ ತಗ್ಗಿ ಬಗ್ಗಿ ಹೋಗುವ ಕುರಿಗಳಂತೆ. ಕಾವ್ಯಗಳ ಮಾತಿರಲಿ, ಭಾರತದ ಇತಿಹಾಸವೇ ಜನರ ಇತಿಹಾಸವಲ್ಲ. ಯಾರೋ ಒಬ್ಬ ರಾಜ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ, ಮತ್ತೊಬ್ಬನ ಮೇಲೆ ಯುದ್ಧ ಮಾಡುವ, ಅವರ ಸಂಧಾನಗಳು, ಪಿತೂರಿಗಳು, ಮನಸ್ತಾಪಗಳು, ಏಳುಬೀಳುಗಳು, ಅವನ ಯೋಜನೆಗಳು, ರಾಜವಂಶಗಳ ಉತ್ಪತ್ತಿಗಳು; ಇವೇ ಮೊದಲಾದ ರಾಜರ ಮತ್ತಿತರ ಮೇಲ್ವರ್ಗದ ಕಾರ್ಯಾಚರಣೆಗಳೇ ಇತಿಹಾಸ. ಜನರ ಕಷ್ಟಸುಖಗಳು, ಸಾಧನೆ, ವೇದನೆಗಳು; ಯಾವುವೂ ಇತಿಹಾಸದ ಕೇಂದ್ರದ ವಸ್ತುವಾಗಲಿಲ್ಲ.

ಮೇಲ್ವರ್ಗದ ಸ್ಥಾನವನ್ನು ಪಡೆಯುವ ಅಥವಾ ಶ್ರೇಷ್ಠತೆಯ ಗೀಳೇ ಇಂತಹ ಇತಿಹಾಸಕ್ಕೆ ಕಾರಣವೇನೋ. ಸಾಮಾನ್ಯ ಜನರೂ ಮೇಲ್ವರ್ಗಕ್ಕೆ ಅದೆಷ್ಟು ಮನಸೋತಿದ್ದಾರೆಂದರೆ, ಅವರು ಮಕ್ಕಳಿಗೆ ರಂಜಿಸಲು ಹೇಳುವ ಕಥೆಗಳೂ "ಒಂದೂರಲ್ಲಿ ಒಬ್ಬ ರಾಜನಿದ್ದ" ಎಂದು. ತಾನು ರಾಜಕುಮಾರ ಅಥವಾ ರಾಜಕುಮಾರಿಯಾಗುವ ಕನಸನ್ನು ಕಾಣುವ ಜನರೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಸಾಮಾನ್ಯ ಜನರ ಅಸಮಾನ್ಯ ಸರಳತನದ ಬದುಕುಗಳೆಲ್ಲೂ ಇತಿಹಾಸವಾಗಿಯೋ, ಕಾವ್ಯಗಳಾಗಿಯೋ ಬಯಸುವಂತಹ ಬದುಕಿನ ಮೌಲ್ಯಗಳಾಗಿಯೋ ಕಾಣಬರುವುದಿಲ್ಲ. ಅದಕ್ಕೆ ಸೂಫಿ ಸಂತರು ಬರಬೇಕಾಯ್ತು, ಶರಣರು, ಸಿದ್ಧರು, ಅವಧೂತರು ಬರಬೇಕಾಯ್ತು, ಮಂಟೇಸ್ವಾಮಿ, ಜುಂಜಪ್ಪ ರಾಚಪ್ಪನಂತವರು ಬರಬೇಕಾಯ್ತು.

ಇನ್ನೂ ಒಂದು ದೊಡ್ಡ ವಿಪರ್ಯಾಸವೆಂದರೆ ನಮ್ಮ ದೇಶದ ಇತಿಹಾಸವನ್ನು ಕಟ್ಟುವಾಗ ವೇದಗಳು, ಬ್ರಾಹ್ಮಣಗಳು, ಅರಣ್ಯಕಗಳೇ ಮೊದಲಾದ ಒಂದು ವರ್ಗದ ಕೃತಿಗಳನ್ನು ಆಧರಿಸಿ ಬರೆಯಲಾಯಿತು. ಭಾರತದಲ್ಲಿ ಅತ್ಯಂತ ಅಲ್ಪ ಸಂಖ್ಯೆಯಲ್ಲಿರುವ ಬ್ರಾಹ್ಮಣಾಕೃತ ಗ್ರಂಥಗಳನ್ನೇ ಆಧರಿಸಲಾಯಿತು. ಪ್ರಭುತ್ವದ ನೆರಳುಗಳಲ್ಲಿ ಪ್ರಾಯೋಜಿತ ಗ್ರಂಥಕರ್ತರು ತಮ್ಮ ಪ್ರಾಯೋಜಕರನ್ನು ಕೊಂಡಾಡಿ ವೈಭವೀಕರಿಸಿದ ಕೃತಿಗಳೆಲ್ಲವೂ ಇತಿಹಾಸದ ಭಾಗಗಳಾದವು. ದುರಂತವೆಂದರೆ ಅಕ್ಷರ ರೂಪದಲ್ಲಿ ದಾಖಲಿಸದ ಬಹುಜನರ ಮೌಖಿಕ ಪರಂಪರೆಯಲ್ಲಿ ಪೀಳಿಗೆಯಿಂದ ಪೀಳಿಗೆಗಳಿಗೆ ಹರಿದುಬರುತ್ತಿದ್ದ ಜನಸಾಮಾನ್ಯರ ಇತಿಹಾಸಗಳು, ವಿಚಾರಗಳು, ಮೌಲ್ಯಗಳು ಇತಿಹಾಸವೆಂದು ದಾಖಲಾಗಲೇ ಇಲ್ಲ. ತಪ್ಪು ಗ್ರಹಿಕೆಯ ವ್ಯಾಖ್ಯಾನಗಳು, ತಿರುಚಲ್ಪಟ್ಟ ಸಂಗತಿಗಳು ಮತ್ತು ಮರೆಮಾಚಲ್ಪಟ್ಟ ವಿಷಯಗಳೆಲ್ಲವೂ ಬೇರೊಂದು ರೀತಿಯಲ್ಲಿ ಪುನರ್ವ್ಯಾಖ್ಯಾನಕ್ಕೊಳಗಾಗಿ ರಾಕ್ಷಸರು ದುಷ್ಟರಾಗಿಯೂ, ಅಸುರರೆಲ್ಲಾ ಪೀಡಕರಾಗಿಯೂ ಬಿಂಬಿಸಲ್ಪಟ್ಟು ಬುಡಕಟ್ಟುಗಳ ನಾಯಕರು, ಜನರು ಇತಿಹಾಸ ಹೀನರಾಗಿ ಸಾಂಸ್ಕೃತಿಕ ಶೋಷಣೆಗೆ ಒಳಗಾಗಬೇಕಾಯ್ತು. ಮೂಲನಿವಾಸಿಗಳನ್ನು, ಅರಣ್ಯಕರನ್ನು, ಬುಡಕಟ್ಟು ಜನರನ್ನು ಕೊಂದು ನಲಿದ ಅತ್ಯಾಚಾರಗಳೆಲ್ಲವೂ ಸಾಂಸ್ಕೃತಿಕ ರೂಪ ಪಡೆದು ಹಬ್ಬಗಳಾಗಿ ವಿಜೃಂಭಿಸತೊಡಗಿದವು.

ಇಂತಹ ಇತಿಹಾಸ, ಇಂಥಾ ಸಂಸ್ಕೃತಿ ನಮ್ಮ ಭಾರತದ ಸಾಮಾನ್ಯ ಪ್ರಜೆಗಳು ಓದುತ್ತಿರುವುದು. ಅವರು ಗ್ರಹಿಸುವುದಾದರೂ ಏನನ್ನು?

ಈ ನಿಟ್ಟಿನಲ್ಲಿ ಚಂದ್ರಶೇಖರ ಕಂಬಾರ ಬುಡಕಟ್ಟು ಮಹಾಕಾವ್ಯ ಮಾಲೆಯಲ್ಲಿ ಮಂಟೇಸ್ವಾಮಿ ಕಾವ್ಯದ ಮುನ್ನುಡಿಯಾಗಿ ಹೇಳುವ ಮಾತು ಗಮನಾರ್ಹ.


"ನಮ್ಮ ನಾಡಿನ ಸಾಂಸ್ಕೃತಿಕ ಪುರಾಣ ಎಂದರೆ ಅದು ಕೇವಲ ರಾಮಾಯಣ ಮತ್ತು ಮಹಾಭಾರತಗಳ ಪುರಾಣ ಎಂಬ ಸಾರ್ವತ್ರಿಕ ಅಭಿಪ್ರಾಯವಿದೆ. ಮಾತೆತ್ತಿದರೆ ಭಾರತೀಯ ಸಂಸ್ಕೃತಿ ಎಂದು ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರ ಬಂದು ಪ್ರತಿಯೊಂದು ಭಾಷೆಯ ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆ. ತನ್ನದೇ ಆದ ಸಂಸ್ಕೃತಿ ಇದೆ ಎಂಬ ವಾಸ್ತವದ ನೆಲೆಯಲ್ಲಿ, ನೆಲದ ಗುಣ ಹುಡುಕುವ ಕಾರ್ಯಕ್ಕೆ ನಾವೀಗ ಮುಂದಾಗಬೇಕಾಗಿದೆ. ಅಖಿಲ ಭಾರತೀಯ ಮಟ್ಟದ ರಾಮ, ಕೃಷ್ಣ ಶಿವ ಅಥವಾ ಇತರೆ ದಶಾವತಾರದ ದೈವಗಳಂತಲ್ಲದೆ ಒಂದು ವಿಶಿಷ್ಟ ಭೂಪ್ರದೇಶದ ಅಥವಾ ಒಂದು ಬುಡಕಟ್ಟಿನ ಪರಂಪರೆಯಲ್ಲಿ ಸೃಷ್ಟಿಯಾಗಿರುವ ದೈವ ಪುರುಷರು ಇವತ್ತಿನ ಸಂಸ್ಕೃತಿ ಚಿಂತಕರಿಗೆ ಮುಖ್ಯವಾಗಬೇಕಾಗಿದೆ. ಕಾಡು ಮತ್ತು ನಾಡಿನ ಹತ್ತಾರು ಜನ ವರ್ಗಗಳು ಪೂಜಿಸುವ ದೈವಗಳು ಮತ್ತು ಆ ದೈವಗಳ ಬಗ್ಗೆ ಅವರು ಕಟ್ಟಿಕೊಂಡ ಕಥನಗಳು ನೂರಾರು. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲ ಮುಖ್ಯ ಸಂಗತಿಗಳು. ಈ ಕಥನಗಳನ್ನು ಅಭ್ಯಸಿಸುವುದರಿಂದ ಭಾರತದ ಇದುವರೆಗಿನ ವ್ಯವಸ್ಥೆಯಲ್ಲಿ ನಿರ್ಲಕ್ಷಿಸಲ್ಪಟ್ಟ ಜನವರ್ಗಗಳಿಗೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆ ಎಂಬುದನ್ನೂ, ಆ ಸಂಸ್ಕೃತಿಗೆ ಒಂದು ಪರಂಪರೆ ಇದೆ ಎಂಬುದನ್ನೂ, ಆ ಪರಂಪರೆಯೇ ಒಂದು ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನೂ ನಾವು ತಿಳಿಯುತ್ತೇವೆ. ಮಂಟೇಸ್ವಾಮಿ, ಮಲೆ ಮಾದೇಶ್ವರ, ಜುಂಜಪ್ಪ ಇಂಥಾ ಸಾಂಸ್ಕೃತಿಕ ನಾಯಕರ ದೀರ್ಘ ಕಥಾನಕಗಳು ಮಹಾಕಾವ್ಯಗಳ ರೂಪದಲ್ಲಿ ಈಗ ಹೊರಬರುತ್ತಿದ್ದು ಅಧ್ಯಯನಕಾರರಿಗೆ ಹೊಸ ಬೆಳಕನ್ನು ನೀಡುತ್ತದೆ ಎಂಬ ನಂಬಿಕೆ ನಮ್ಮದು."

ಆದರೆ, ವಾಸ್ತವವಾಗಿ ಇದು ಎಂದೋ ಯಾವಾಗಲೋ ಆಗಬೇಕಿತ್ತು, ಆದರೆ ಊರೆಲ್ಲಾ ಕೊಳ್ಳೆ ಹೋದ ಮೇಲೆ ಊರ ಬಾಗಿಲು ಮುಚ್ಚುವುದು ಎಂಬಷ್ಟು ಹತಾಶೆ ಇರದಿದ್ದರೂ ತಡವಾಗಿಯಾದರೂ ಪ್ರಜ್ಞಾವಂತರಾಗುತ್ತಿರುವುದು ಒಂದು ಸಮಾಧಾನದ ಸಂಗತಿ. ಇದೇ ವಿಷಯವು ಸಾಂಸ್ಕೃತಿಕ ಇತಿಹಾಸದಲ್ಲಿ ಆಗುತ್ತಿರುವಂತೆ ರಾಜಕೀಯ ಇತಿಹಾಸದಲ್ಲಿಯೂ ಆದರೆ ಆಗ ಭಾರತದ ನಿಜವಾದ ಇತಿಹಾಸ ತಿಳಿಯಲು ಸಾಧ್ಯ. ಇಲ್ಲವಾದರೆ ಪ್ರಾಯೋಜಿಕ, ಸ್ವಹಿತಾಸಕ್ತಿಯ ಪಟ್ಟಭದ್ರಾಸಕ್ತಿಯ ಇತಿಹಾಸವನ್ನೇ ಭಜಿಸುತ್ತಿರುವ ದುರಂತ ಮುಂದುವರೆಯುತ್ತದೆ.

ಮಂಟೇಸ್ವಾಮಿ ಕಾವ್ಯದ ಸಂಪಾದಕರಾದ ಹಿ.ಚಿ.ಬೋರಲಿಂಗಯ್ಯನವರು ತಮ್ಮ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಈ ಮಾತುಗಳು ಎಷ್ಟೋ ಜನರ ಒಳಗಣ್ಣನ್ನು ತೆರೆಸಬಹುದೆಂದು ನಂಬುತ್ತೇನೆ.

"ಬಹುಶಃ ರಾಮಾಯಣ ಮತ್ತು ಮಹಾಭಾರತಗಳು ಮಾತ್ರ ನಮ್ಮ ದೇಶದ ಮಹಾಕಾವ್ಯಗಳು ಎಂಬ ಸಾರ್ವತ್ರಿಕ ಅಭಿಪ್ರಾಯ ನಮ್ಮದಾಗಿತ್ತು. ಈ ಎರಡೂ ಮೇರು ಕೃತಿಗಳಷ್ಟೇ ಇಡೀ ಭರತಖಂಡದ ಸಂಸ್ಕೃತಿಯನ್ನು ಪ್ರತಿನಿಧಿಸುವಂತಹ ಶಕ್ತಿಯನ್ನು ಪಡೆದುಕೊಂಡಿವೆ ಎಂಬ ನಂಬಿಕೆ ನಮ್ಮದಾಗಿತ್ತು. ಭಾರತದಾದ್ಯಂತ ಅನೇಕ ಬುಡಕಟ್ಟುಗಳು ತಮ್ಮದೇ ಆದ ರಾಮಾಯಣ ಮಹಾಭಾರತಗಳನ್ನು ಹಾಡಿಕೊಳ್ಳುತ್ತಿದ್ದರಾದರೂ ಸ್ಥಾಪಿತ ಮೌಲ್ಯಗಳಿಗೆ ಅವು ವಿರುದ್ಧವಾಗಿದ್ದುದರಿಂದಾಗಿ ಅವುಗಳನ್ನು ಮಾನ್ಯ ಮಾಡಲಿಲ್ಲ.

ಮಹಾಕಾವ್ಯವೆಂದರೆ ಅದು ನೂರಾರು ಘಟನೆಗಳ ಮೊತ್ತವಾದ್ದರಿಂದ ಅಕ್ಷರ ಬಲ್ಲವನು ಮಾತ್ರ ಅಂತಹದ್ದನ್ನು ರಚಿಸಬಲ್ಲನೆಂಬ ತಿಳಿವಳಿಕೆಯೂ ಈ ನಿರ್ಲಕ್ಷ್ಯಕ್ಕೆ ಕಾರಣವಿರಬಹುದು. ಇಡೀ ಭಾರತಕ್ಕೆ ಒಂದು ಸಂಸ್ಕೃತಿ ಇದೆ. ಅದೇ ಭಾರತೀಯ ಸಂಸ್ಕೃತಿ ಎಂಬ ಏಕಮುಖಿ ಚಿಂತನೆ ಈ ಅಭಿಪ್ರಾಯಕ್ಕೆ ಕಾರಣವಾಗಿರಬಹುದು. ಆದರೆ ಈಗ ಒಂದು ದೇಶಕ್ಕೆ ಒಂದೇ ಸಂಸ್ಕೃತಿ ಎಂಬುದು ಇಲ್ಲ. ಅದರಲ್ಲೂ ಭಾರತದಂತಹ ದೇಶ ಬಹುಮುಖಿ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದ್ದು ಕೆಲವರು ಊಹಿಸುವಂಥಾ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳಿವಳಿಕೆ ಗಟ್ಟಿಗೊಳ್ಳುತ್ತಿದೆ."



ವೇದಗಳಿಗೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಲ್ಲ

ತಮಿಳುನಾಡಿನ ತಿರುಚೆಂಗೋಡು ಅರ್ಧನಾರೀಶ್ವರ ದೇವಸ್ಥಾನ ಪ್ರದೇಶದಲ್ಲಿ ರೂಢಿಯಲ್ಲಿದ್ದ ಬಂಜೆತನ ಉಳ್ಳ ಮಹಿಳೆಯರು ಪರಪುರುಷರೊಂದಿಗೆ ಮಕ್ಕಳನ್ನು ಪಡೆಯುವ ಪದ್ಧತಿ ಬಗ್ಗೆ ಲೇಖಕ ಮುರುಗನ್‌ರವರು "ಮಾಧೊರು ಬಾಗನ್" ಕಾದಂಬರಿಯಲ್ಲಿ ಉಲ್ಲೇಖಿಸಿರುವ ಕ್ರಮವನ್ನು ಪ್ರತಿರೋಧಿಸಿ ಲೇಖಕರಿಗೆ ನೀಡಿರುವ ಮಾನಸಿಕ ಕಿರುಕುಳಗಳನ್ನು ಪತ್ರಿಕೆಯಲ್ಲಿ ಓದಿ ಬೇಸರವಾಯಿತು. ಈ ಘಟನೆಗಳಿಂದ ಮುರುಗನ್‌ರವರು ಹತಾಶೆಪಡುವ ಅಗತ್ಯವಿಲ್ಲ. ಭಾರತೀಯ ತತ್ವಶಾಸ್ತ್ರದ ಇತಿಹಾಸದಲ್ಲಿ ಈ ಮತಾಂಧರ ಪಂಚನೆ ಕ್ರೂರಕೃತ್ಯಗಳ ಬೇಧಿಸಿದವರನ್ನು ಅತೀ ಕ್ರೂರವಾಗಿ ಹಿಂಸಿಸಿರುವ ಘಟನೆಗಳು ಚರಿತ್ರೆಯ ಪುಟ ಪುಟದಿಲ್ಲಿ ದಾಖಲಾಗಿವೆ. ಈ ಕೃತ್ಯಗಳಿಗೆ ಎದೆಗುಂದದೆ ಅವರ ಕುತಂತ್ರಗಳನ್ನು ವಿಮರ್ಶಿಸಿ ನಗ್ನವಾಗಿ ಬಹಿರಂಗಗೊಳಿಸಿ ಎದೆಗಳನ್ನು ತಲ್ಲಣಗೊಳಿಸಿರುವ ಕೀರ್ತಿ ಚಾರ್ವಕ ನಾಸ್ತಿಕರಿಗೆ ಸಲ್ಲುತ್ತದೆ.

ಈ ಮತಾಂಧರ ಎಡೆಬಿಡದ ಹಿಂಸೆಗಳು ಚರಿತ್ರೆಯ ಪುಟಗಳೆಲ್ಲಾ ರಕ್ತಾಕ್ಷರಗಳಾಗಿ ತುಂಬಿಹೋಗಿವೆ. ಈ ನಿರಂತರ ಪ್ರಕ್ರಿಯೆಯ ಭಾಗವೇ ನಮ್ಮ ನಾಡಿನ ಬಂಜಗೆರೆ, ಯೋಗೇಶ್ ಮಾಸ್ಟರ್ ನಂತರದ ಸರದಿಯೇ ಮುರುಗನ್. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾಮಿ ಧರ್ಮತೀರ್ಥರು 'ಹಿಂದೂ ಸಾಮ್ರಾಜ್ಯಶಾಹಿ' ಎಂಬ ಕೃತಿಯಲ್ಲಿ "ಹಿಂದೂ ಧರ್ಮದಲ್ಲಿರುವ ಕೊಳಕುಗಳನ್ನು ಒಪ್ಪಿ ಸ್ವಚ್ಛಗೊಳಿಸುವ ಮನೋಸ್ಥೈರ್ಯ ಕೈಗೊಂಡಿದ್ದರೆ ಈ ಧರ್ಮ ಜಗತ್ತಿನ ಶ್ರೇಷ್ಠ ಧರ್ಮವಾಗಿ ಉಳಿಯುತ್ತಿತ್ತು" ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. ಧರ್ಮದ ವಾರಸುದಾರಿಕೆಯನ್ನು ಪಡೆದವರು ಈ ವ್ಯಾಖ್ಯಾನವನ್ನು ಸರ್ವಥಾ ಒಪ್ಪುವುದಿಲ್ಲ.


ಇಂತಹ ಧೋರಣೆಗಳ ಗುತ್ತಿಗೆಯನ್ನು ಪಡೆದವರಿಗೆ ನನ್ನದೊಂದು ಭಿನ್ನಹ. ಮುರುಗನ್‌ರವರ ಕಾದಂಬರಿಯಲ್ಲಿ ಸಂಸ್ಕೃತಿಗೆ ಅಪಚಾರವೆಸಗುವ ಅಂಶ ಏನಿದೆ? ಲೇಖಕರ ತೇಜೊವಧೆ ಮಾಡುವ ನಿಮ್ಮ ಅಜೆಂಡಾವೇನು? ನಮ್ಮಲ್ಲಿನ ಆಚರಣೆಗಳೆಲ್ಲಾ ಮೌಲಿಕವಾದುದ್ದೆಂಬ ಶ್ರೇಷ್ಠತೆಯ ವ್ಯಸನವೇಕೆ? ನಿಮ್ಮದೇ ವೇದ ಪುರಾಣಗಳಲ್ಲಿ ಅದೆಷ್ಟೋ ಅನೈತಿಕ ಕೃತ್ಯಗಳು ತುಂಬಿದ್ದಾವೆ! ಇದರ ಬಗ್ಗೆ ನಿಮ್ಮ ಅನಿಸಿಕೆ ಏನು? ನದಿ ಮೂಲ ಋಷಿ ಮೂಲ ಕೇಳಬಾರದೆಂಬ ಮಾತಿನ ಅರ್ಥವೇನು? ವೇದಗಳು ಅಪೌರುಷೇಯ ಇವು ಬ್ರಹ್ಮನ ಬಾಯಿಂದ ಉದುರಿದ ಅಣಿಮುತ್ತುಗಳೆಂದು ಸಬೂಬು ನೀಡುವಿರಾ! ಇವುಗಳನ್ನು ವಿಮರ್ಶಿಸಿ ತರ್ಕಿಸಬಾರದು, ಕಾವ್ಯವಾಗಿ ಆಸ್ವಾದಿಸಿ; ಇವು ನಿಮ್ಮ ಪೂರ್ವಿಕ ಕಲ್ಪನೆಗಳು, ತರ್ಕಾತೀತವಾದ್ದುದೆಂದು ರೀಲು ಬಿಡುವಿರಾ?

ಅಂಬೇಡ್ಕರ್‌ರವರು ವೇದಗಳಿಗೆ ನೈತಿಕ ಮತ್ತು ಆಧ್ಯಾತ್ಮ ಮೌಲ್ಯಗಳಿಲ್ಲವೆಂದು ಸಾಬೀತುಪಡಿಸಲು ಋಗ್ವೇದದಲ್ಲಿನ ಯಮಯಮಿಯೆಂಬ ಸಂಭಾಷಣೆಯನ್ನು ಉಲ್ಲೇಖಿಸುತ್ತಾ ಯಮಿ ತನ್ನ ಅಣ್ಣನನ್ನು ನಿನ್ನ ಉತ್ಕೃಷ್ಟ ಗುಣವುಳ್ಳ ಬೀಜವನ್ನು ನನ್ನ ಕ್ಷೇತ್ರದಲ್ಲಿಡುವೆಂದು ಪ್ರಚೋದಿಸಿದಾಗ ಯಮ ಈ ಸಖ್ಯ ಇಷ್ಟವಿಲ್ಲ, ನೀನು ಆಕಾರದಲ್ಲಿ ಬೇರೆ ಇದ್ದರೂ ನಾವಿಬ್ಬರೂ ಒಂದೇ ಮೂಲದವರು. ಯಮಿ ಮಾನವರಿಗೆ ನಿಷಿದ್ಧವಾದ ಈ ಸುಖವು (ಲೈಂಗಿಕ ಸಮಾಗಮ) ದೇವತೆಗಳಿಗೆ ಪ್ರಿಯ. ಸೃಷ್ಟಿಕರ್ತ (ತನ್ನ ಮಗಳ) ಗಂಡನಾದಂತೆ ನೀನು ನನ್ನ ದೇಹವನ್ನು ಭೋಗಿಸು. (ಹಿಂದೂ ಧರ್ಮ, ಒಗಟುಗಳು, ಅಂಬೇಡ್ಕರ್ ಬರಹ ಭಾಷಣಗಳು) ನಿಮ್ಮದೇ ಧರ್ಮಗ್ರಂಥಗಳಲ್ಲಿ ಅಶ್ಲೀಲ ಅಂಶಗಳ ಉಲ್ಲೇಖಗಳಿರುವುದು ಚರಿತ್ರಾರ್ಹವಾಗಿದೆ.

ಸಂಸ್ಕೃತಿ ರಕ್ಷಣೆ ಹೊಣೆ ಹೊತ್ತವರು ಇದನ್ನೆಲ್ಲ ಅರಿಯದೇ ಇರುವುದು ವಿಪರ್ಯಾಸ. ಗತಕಾಲದಲ್ಲಿ ರೂಢಿಯಲ್ಲಿದ್ದ ಪದ್ಧತಿಯನ್ನು ಮುರುಗನ್ ತಮ್ಮ ಸಂಶೋಧನೆಯಲ್ಲಿ ಮನಗಂಡು ಉಲ್ಲೇಖಿಸಿದ್ದು ಶಿಕ್ಷಾರ್ಹವೆ?

ಆಂಧ್ರದ ತಾಪಿ ಧರ್ಮರಾವ್ ಈ ಹಿಂದೆ ದೇವಾಲಯಗಳು ಶೋಭನ ಕೊಠಡಿಗಳಾಗಿದ್ದವು ಎಂದು ಹೇಳಿದ್ದಾರೆ. ಅವರು ಸಂಶೋಧನೆಯಲ್ಲಿ ತೊಡಗಿದ್ದಾಗ ಬೆಳಕಿಗೆ ಬಂದ ಅಂಶಗಳನ್ನು ದಾಖಲಿಸುತ್ತಾ 'ಹಬ್ಬದ ದಿವಸ ಗಂಡಹೆಂಡತಿ ದೇವಸ್ಥಾನಕ್ಕೆ ಬರುತ್ತಾರೆ. ಪೂಜೆ ಪುರಸ್ಕಾರಗಳೆಲ್ಲಾ ಮುಗಿದ ನಂತರ ಹೆಂಗಸರು ತಾವು ತೊಟ್ಟಿರುವ ರವಿಕೆಗಳನ್ನು ತೆಗೆದು ಒಂದು ಕಡೆ ಗುಡ್ಡೆ ಹಾಕುತ್ತಾರೆ. ಗಂಡಸರೆಲ್ಲಾ ಹೋಗಿ ಕೈಗೆ ಸಿಕ್ಕ ರವಿಕೆ ಎತ್ತಿಕೊಂಡು ಆ ರವಿಕೆ ಯಾರದೋ ಆ ಹೆಂಗಸು ರಾತ್ರಿಯೆಲ್ಲಾ ತನ್ನ ಗಂಡನಲ್ಲದಿದ್ದರೂ ಆ ಗಂಡಸಿನೊಡನೆ ಸುಖಿಸಬೇಕು. ಇಂತಹ ಪದ್ಧತಿ ಆ ದಿನಗಳಲ್ಲಿ ಪವಿತ್ರವಾಗಿತ್ತು, ಶಾಸ್ತ್ರ ಸಮ್ಮತವಾಗಿತ್ತು' ಎಂಬುದನ್ನು ವಿವರಿಸುತ್ತಾರೆ. ಈ ಉತ್ಸವದಲ್ಲಿ ರವಿಕೆ ತನ್ನ ಗಂಡನಿಗೆ ಸಿಕ್ಕನೆ 'ಹಬ್ಬದ ದಿನವೂ ಹಳೆ ಗಂಡ'ನೆಂಬ ಮಾತು ಇಂತಹ ಪದ್ಧತಿಯಿಂದಲೇ ರೂಢಿಗೆ ಬಂದಿದೆ ಎಂದು ಧರ್ಮರಾವ್ ವ್ಯಾಖ್ಯಾನಿಸುತ್ತಾರೆ.

ದೇವರು ಅಂದರೆ ಆ ದಿನಗಳಲ್ಲಿ ಸಂಗಮ, ಸಮರ್ಪಣೆ ಎಂಬ ಪ್ರತೀತಿ ಇತ್ತು, ಸಂಗಮ ಮಾಡಬೇಕೆಂಬ ಬುದ್ಧಿಗೆ ಉದ್ರೇಕಗೊಳಿಸುವ ವಿಷಯಗಳೆಲ್ಲವು ದೇವಸ್ಥಾನದ ಮುಖ್ಯ ಅಂಗಗಳಾದವು. ದೇವಸ್ಥಾನಗಳು ರತಿ ಕಲಾಮಂದಿರದಂತೆ ತಯಾರಾದವು. 'ಈ ರೂಢಿಗತ ಶೈಲಿಯೇ ಮಿಥುನ ಬೊಂಬೆಗಳು, ಲೈಂಗಿಕ ಬೊಂಬೆಗಳಾದವು. ಈ ಕಾರಣಕ್ಕಾಗಿಯೇ ದೇವಾಲಯಗಳಲ್ಲಿ ಲೈಂಗಿಕ ಶಿಲ್ಪಗಳು ಮೂಡಿಬಂದಿರುವುದು' ಎಂದು ತಾಪಿ ಧರ್ಮರಾವ್ ದಾಖಲಿಸುತ್ತಾರೆ. ('ದೇವಾಲಯಗಳು ಮತ್ತು ಲೈಂಗಿಕ ಶಿಲ್ಪಗಳು', ತಾಪಿ ಧರ್ಮರಾವ್, ಅನುವಾದ ಎಸ್.ಆರ್‌ಶಾಸ್ತ್ರೀ) ಇಂದಿಗೂ ನಮ್ಮಂತಹ ಎಷ್ಟೋ ಮಂದಿಗೆ ದೇವಾಲಯಗಳಲ್ಲಿ ಏಕೆ ಲೈಂಗಿಕ ಶಿಲ್ಪಗಳು ಇವೆಯೆಂಬುದು ಯಕ್ಷ



ಪ್ರಶ್ನೆಯಾಗಿ ಉಳಿದಿವೆ. ಈ ಪ್ರಶ್ನೆಯನ್ನು ಮುರುಗನ್‌ರವರ ಕಾದಂಬರಿಯ ಬಗ್ಗೆ ಪ್ರತಿರೋಧಿಸಿದ ಸಂಸ್ಕೃತಿ ರಕ್ಷಿತರನ್ನು ಕೇಳಿದರೆ ಏನೆಂದು ಉತ್ತರಿಸುವರು? ಕಲಾವಿದನ ಕಲಾ ನೈಪುಣ್ಯತೆಯಿಂದಲೋ! ದೇವರ ಸನ್ನಿಧಿಗೆ ಹೋಗುವ ಭಕ್ತರಿಗೆ ಮನಸ್ಸು ವಿಚಲಿತರಾಗದಂತೆ ಪರೀಕ್ಷಿಸಲೆಂದು ಉತ್ತರಿಸುವರೋ ಗೊತ್ತಿಲ್ಲ.

ಸಂಸ್ಕೃತಿ ಶೋಧನೆಯಲ್ಲಿ ವಾಸ್ತವವಾದ ಸಂಗತಿಗಳ ಕಂಡು ದಾಖಲಿಸುವ ಲೇಖಕರ ಪ್ರಯತ್ನ ಚಿವುಟಿ ಹಾಕುವ ಕಾರ್ಯ ಸಲ್ಲದು. ಮಡಿವಂತಿಕೆ ಮನಸ್ಸಿನ ಸಂಸ್ಕೃತಿ ರಕ್ಷಕರು ಅರಿಯಬೇಕೆಂದು ಮನವಿ.

-ವಿ.ಬಾಲಕೃಷ್ಣ ಮಾಲೂರು

ಕೆಸರಾಗಿ ಬದಲಾಗುತ್ತಿದೆಯೇ ದಲಿತರ ಕಾರ ಧೂಳು..!!?


ಮೊನ್ನೆ ಜ. 30 ರಂದು ಮಹಾತ್ಮ ಗಾಂಧಿ ಮತಾಂಧನೊಬ್ಬನ ಗುಂಡಿಗೆ ಬಲಿಯಾಗಿ ಹುತಾತ್ಮರಾಧ ದಿನವನ್ನು ಆಚರಿಸಲಾಯಿತು. ಈ ಹುತಾತ್ಮ ದಿನವನ್ನು ಆಚರಿಸುವವರು ಬಹುಬೇಗನೆ ಇದೀಗಲೇ ಆಚರಿಸಿ ತಮ್ಮ ಆಸೆಯನ್ನು ಪೂರೈಸಿಕೊಳ್ಳುವುದು ಉತ್ತಮ. ಯಾಕೆಂದರೆ ಇನ್ನು ಮುಂದೆ ಇದು ಗಾಂಧಿಯೆಂಬ 'ದುರುಳ'ನನ್ನು ಕೊಂದ ಶೌರ್ಯದ ದಿನವಾಗಿ ಮಾರ್ಪಡಿಸಲಾಗುತ್ತದಂತೆ. ಅದಕ್ಕಾಗಿ ಸದ್ದಿಲ್ಲದೇ ದೊಡ್ಡ ಮಟ್ಟದ ಚಟುವಟಿಕೆಗಳು ಈಗಾಗಲೇ ಜಾರಿಯಲ್ಲಿದೆ. ಜಿ. ರಾಜಶೇಖರ್ ಅವರು ಕಳೆದ ಫೆ. 11 ರ ಸಂಚಿಕೆಯಲ್ಲಿ 'ಮಹಾತ್ಮರ ಮರಣ' ಎಂಬ ಲೇಖನದಲ್ಲಿ ಗಾಂಧೀಜಿ ಅವಿಭಜಿತ ಜಿಲ್ಲೆಗೆ ಭೇಟಿಯಿತ್ತು ಮಂಗಳೂರಿನ ಕೆನರಾ, ಹೈಸ್ಕೂಲು, ಉಡುಪಿಯ ಕೃಷ್ಣದೇಗುಲಗಳಿಗೆ ಭೇಟಿಯಿತ್ತು ಇಲ್ಲಿನ ಜಾತೀಯತೆ ಅಸಮಾನತೆ ಮೊದಲಾದ ಸಾಮಾಜಿಕ ಹುಳುಕುಗಳಿಗೆ ಛಾಟಿಯೇಟು ನೀಡಿದಂತಹ ಸಂಗತಿಗಳನ್ನು ಚೆನ್ನಾಗಿ ನೆನಪಿಸಿದ್ದಾರೆ.

ಗಾಂಧೀಜಿಯ ಇದೇ ಭೇಟಿಯ ಸಮಯದಲ್ಲೇ ಇದೇ ಜಿಲ್ಲೆಯಲ್ಲಿನ ಜಾತೀಯತೆ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅದರ ಮತ್ತೊಂದು ಮಗ್ಗುಲನ್ನು ಪರಿಚಯಿಸುವಂತಹ ಇನ್ನೊಂದು ಅವಿಸ್ಮರಣೀಯ ಘಟನೆಯೂ ಮಂಗಳೂರಿನಲ್ಲಿ ನಡೆದಿತ್ತು, ಅದೇ ಸಾಮಾಜಿಕ ಸಮಾನತೆಗಾಗಿ ಹೋರಾಡಿದ್ದ ಕುದ್ಮುಲ್ ರಂಗರಾಯರ ಕಾರ್ಯಗಳನ್ನು ಗಾಂಧೀಜಿ ಕಣ್ಣಾರೆ ಕಂಡು ಮೂಕ ವಿಸ್ಮಿತರಾಗಿದ್ದರು.

ಅವತ್ತು 24-2-1934ರ ಬೆಳಗ್ಗೆ ಮಡಿಕೇರಿಯಿಂದ ಹೊರಟ ಗಾಂಧೀಜಿ ಸುಳ್ಯ ಪುತ್ತೂರಿನ ಮಾರ್ಗವಾಗಿ (ಗಾಂಧೀಜಿ ತನ್ನ ಕೊನೆಗಾಲವನ್ನು ಪುತ್ತೂರಿನಲ್ಲೇ ಕಳೆದಿದ್ದರು ಎಂದು ನಂಬುವ ಭಾವುಕರೂ ಇದ್ದಾರೆ) ಸಭೆಗಳಲ್ಲಿ ಭಾಗವಹಿಸುತ್ತಾ ಸಂಜೆ ಮಂಗಳೂರನ್ನು ಮುಟ್ಟಿ ಅಲ್ಲಿನ ಶೇದಿಗುಡ್ಡೆಯಲ್ಲಿರುವ DCM (ಡಿಪ್ರೆಸ್ಡ್ ಕ್ಲಾಸಸ್ ಮಿಷನ್) ಸಂಸ್ಥೆಗೆ ಭೇಟಿಯಿತ್ತು ಅದರ ಸಂಸ್ಥಾಪಕರಾದ ಕುದ್ಮುಲ್ ರಂಗರಾಯರು ಮಾಡಿದಂತಹ ದಲಿತೋದ್ಧಾರ, ಸ್ತ್ರೀಯರ ಸಬಲತೆ ಹಾಗು ಸಾಮಾಜಿಕ ಅನಿಷ್ಟಗಳ ವಿರುದ್ಧ ಅವರು ನಡೆಸಿದಂತಹ ಹೋರಾಟ ಹಾಗು ತ್ಯಾಗವನ್ನು ಕಂಡು ಬೆರಗಾಗಿ "ಅವರ ಈ ಕಾರ್ಯವನ್ನು ಹೋಲಿಸಿಕೊಂಡಲ್ಲಿ ನಾನಿನ್ನೂ ಸಣ್ಣವ ಹಾಗು ಈ ವಿಚಾರದಲ್ಲಿ ಅವರಿಂದ ಕಲಿಯಬೇಕಾಗಿರುವಂತಾದ್ದು ನನಗೆ ಬಹಳಷ್ಟಿದೆ" ಎಂದಿದ್ದರಲ್ಲದೆ "ದಲಿತೋದ್ಧಾರದ ವಿಷಯದಲ್ಲಿ ರಂಗರಾಯರು ನನ್ನ ಗುರು ಸಮಾನರು" ಎಂಬ ಮಾತನ್ನು ಆಡಿದ್ದರು. ಆದರೆ ಈ ಮಾತನ್ನು ಗಾಂಧೀಜಿ ರಂಗರಾಯರ ಎದುರು ಹೇಳಿದ್ದಿರಲಿಲ್ಲ, ಯಾಕೆಂದರೆ ತುಂಬು ಜೀವನ ನಡೆಸಿದ್ದ ರಾಯರು ಗಾಂಧಿ ಭೇಟಿಯ ಕೆಲ ವರ್ಷಗಳ ಹಿಂದೆಯೇ (1928ರಲ್ಲೇ) ತೀರಿಕೊಂಡಿದ್ದರು. ಅವರು ಆರಂಭಿಸಿದ್ದ ಸಮಾಜಮುಖಿ ಕಾರ್ಯಗಳಷ್ಟೇ ಆಗ ಮುಂದುವರೆಯುತಿತ್ತು.

ಕಾಕತಾಳೀಯವೆಂದರೆ ಮೊನ್ನೆಯ ಮಹಾತ್ಮ ಗಾಂಧಿ ಪುಣ್ಯತಿಥಿಯ ದಿನದಂದೇ ದಿವಂಗತ ಕುದ್ಮುಲ್ ರಂಗರಾಯರ ಪುಣ್ಯತಿಥಿಯೂ ಆಗಿತ್ತು. ಮೊನ್ನೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ 'ಸೌಹಾರ್ದ ದಿನ' ಕಾರ್ಯಕ್ರಮದ ಸಲುವಾಗಿ ಸುರೇಶ್ ಭಟ್ ಸರ್ ಹಾಗು ಇಸ್ಮತ್ ಪಜೀರ್‌ರೊಂದಿಗೆ ಅತ್ತಾವರದಲ್ಲಿರುವ ರಂಗರಾಯರ ಸಮಾಧಿಗೂ ಭೇಟಿಯಿತ್ತಾಗ ಅವರ ಸಮಾಧಿಯ ಮೇಲೆ "ನನ್ನೀ ವಿದ್ಯಾಸಂಸ್ಥೆಯಿಂದ ಕಲಿತ ದಲಿತನೊಬ್ಬ ಬದುಕಿನಲ್ಲಿ ಉನ್ನತಿಯನ್ನು ಸಾಧಿಸಿ ಆತ ತನ್ನ ಸ್ವಂತ ಕಾರಿನಲ್ಲಿ ಹೋಗುತ್ತಿರುವಾಗ ಅದು ಎಬ್ಬಿಸುವ ಧೂಳನ್ನು ನೋಡುವಾಸೆ ನನ್ನದು" ಎಂದು ಬರೆದಿರುವುದನ್ನು ಓದಿ ಅದನ್ನು ಪ್ರಸ್ತುತ ಪರಿಸ್ಥಿತಿಗೆ ಹೋಲಿಸಿಕೊಂಡು ಸುರೇಶ್ ಭಟ್ಟರವರು ವಿಷಾದದ ಮಾತನ್ನು ಆಡಿದ್ದರು.

ದಲಿತರ ಏಳ್ಗೆಗಾಗಿ ಶ್ರಮಿಸಿದ ಅಂಬೇಡ್ಕರರ ತತ್ವಗಳಿಗೆ ದಲಿತರೇ ಬೆಲೆ ಕೊಡದಂತಹ ಕಾಲ ಇದು. ಅವರಿಗೂ ಮೊದಲು ದಲಿತೋದ್ಧಾರಕ್ಕಾಗಿ ಜೀವಸವೆಸಿದ ಈ ರಂಗರಾಯರು ಯಾರೆನ್ನುವುದೇ ಅನೇಕರಿಗೆ ತಿಳಿಯದು. ಪ್ರಾಣಿಗಳಿಗೂ ಕಡೆಯಾಗಿ ಬದುಕುತ್ತಿದ್ದ ದಲಿತರ ಬದುಕನ್ನು ಹಸನಾಗಿಸಲು ಜೀವತೆತ್ತ ರಾಯರ "ದಲಿತನೊಬ್ಬನ ಕಾರ ಧೂಳನ್ನು ನೋಡುವ" ಆಶಯ ಅವರ ಜೀವಿತಕಾಲದಲ್ಲಿ ಈಡೇರದೇ ಹೋಯಿತು. (ವಿದ್ಯೆ ಹಾಗು ಸಮಾಜ ಪರಿವರ್ತನೆ ಒಂದೇ ದಿನಕ್ಕೆ ಆಗುವಂತಾದ್ದಲ್ಲ; ಪೀಳಿಗೆಯಿಂದ ಪೀಳಿಗೆಗೆ ಅದರ ಪರಿಣಾಮನ್ನು ಗಮನಿಸಬೇಕಷ್ಟೆ) ರಾಯರ ಶ್ರಮದಿಂದಾಗಿ ಕರಾವಳಿ ಜಿಲ್ಲೆಯಲ್ಲಿ ದಲಿತರಲ್ಲೂ ವಿದ್ಯೆಯ ಜಾಗೃತಿ ಹುಟ್ಟಲು ನೆರವಾಯಿತು.




ಮಂಗಳೂರು ನಗರದ ಶೇದಿಗುಡ್ಡೆಯ ರಂಗರಾವ್ ರಸ್ತೆಯ ಪಕ್ಕದಲ್ಲಿ ರಂಗರಾಯರು ಸ್ಥಾಪನೆ ಮಾಡಿದ ವಿದ್ಯಾರ್ಥಿನಿ ನಿಲಯಕ್ಕೆ 1934ಕ್ಕೆ ಗಾಂಧೀಜಿಯವರು ಸಂದರ್ಶನವಿತ್ತು ಮರಳಿದಾಗ, ತೆಗೆಯಲಾದ ಚಿತ್ರ

1934 ರಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕೇವಲ ಇಬ್ಬರು ಹರಿಜನ ವಿದ್ಯಾರ್ಥಿಗಳು ಗಾಂಧಿಗೆ ಕಾಣಸಿಕ್ಕಿದ್ದರೆ 42 ವರ್ಷಗಳ ಹಿಂದೆಯೇ 1892ರಲ್ಲಿ ಮೇಲ್ವರ್ಗದವರ ತೀವ್ರ ವಿರೋಧ ಕಿರುಕುಳಗಳ ನಡುವೆಯೇ ಸ್ವಂತ ಹಣದಿಂದ ದಲಿತರಿಗಾಗಿ ಮಂಗಳೂರಿನ ಉರ್ವ ಚಿಲಿಂಬಿ ಎನ್ನುವಲ್ಲಿ ರಾಯರು ಶಾಲೆಯೊಂದನ್ನು ತೆರೆದಿದ್ದರು. ಆದರೆ ಇಂದು ವಿದ್ಯಾವಂತ ಹಾಗು ಉದ್ಯೋಗಸ್ಥರಾಗಿ ಸ್ಥಿತಿವಂತರಾದ ದಲಿತರು ನಿಕೃಷ್ಟ ಸ್ಥಿತಿಯಲ್ಲಿರುವ ತಮ್ಮವರನ್ನೇ ಮರೆತು ಬೇರೆಯದೇ ಲೋಕದಲ್ಲಿದ್ದಾರೆ. ರಾಯರು ಕಾಣಬಯಸಿದ್ದ ಕಾರಿನ ಧೂಳು ಮುಖಕ್ಕೆ ರಾಚುವ ಕೆಟ್ಟ ಕೆಸರಿನಂತೆ ಪರಿವರ್ತಿತವಾಗುತ್ತಿದೆಯೇ ಎಂಬ ಸಂದೇಹ ಹಲವರದ್ದು. ಅಂಬೇಡ್ಕರರ ಆಶಯಗಳಿಗೆ ಬೆನ್ನುಕೊಟ್ಟು ಪುರೋಹಿತಶಾಹಿಗಳ, ಕೋಮುವಾದಿಗಳ ಹಿಂಬಾಲಕರಾಗುತ್ತಿರುವ, ರಾಯರ ಸೌಹಾರ್ದ ಸಮಾನತೆಯ ಆಶಯಗಳಿಗೆ ಬದಲಾಗಿ ಹೆಚ್ಚು ಹೆಚ್ಚು ಸ್ವಾರ್ಥಿಗಳಾಗುತ್ತಿರುವ ದಲಿತರು ಇನ್ನಾದರೂ ಎಚ್ಚೆತ್ತುಕೊಳ್ಳುವುದು ಉತ್ತಮ.

ಅಂದಹಾಗೆ, ಸಮಾಜವಾದಿ ಹಿನ್ನೆಲೆಯ ಸಿದ್ದರಾಮಯ್ಯನವರು ಕಳೆದ ಬಜೆಟ್‌ನಲ್ಲಿ ಘೋಷಿಸಿದ ರಂಗರಾಯರ ಸಮಾಧಿ ಅಭಿವೃದ್ಧಿಗೆ ಬಿಡುಗಡೆ ಮಾಡಿದ 1 ಕೋಟಿ ರೂ ಹಣದ ಸುದ್ದಿಯೇ ಇಲ್ಲದಿರುವುದು ವಿಷಾದಕರ. ಉಳಿದವರ ಕಥೆ ಒತ್ತಟ್ಟಿಗಿರಲಿ ಖುದ್ದು ರಾಯರ ತ್ಯಾಗದ ಫಲಾನುಭವಿಗಳ ಮಕ್ಕಳು-ಮರಿಗಳಿಗೇನೇ ಕುದ್ಮುಲ್ ರಂಗರಾಯರ ಹೆಸರೇ ಗೊತ್ತಿಲ್ಲ, ಅವರ ಸಮಾಜಮುಖಿ ತ್ಯಾಗದ ಬದುಕು ಈ ಮೂಲಕವಾದರೂ ಜನಮಾನಸದಲ್ಲಿ ಉಳಿಯುವಂತಾಗಲಿ.

-ಶಶಿ ಪುತ್ತೂರು, ದಕ



ಕಳ್ಳು-ಬಳ್ಳಿಯ ಕತ್ತರಿಸಿಕೊಂಡು ದೂರವಾದ ಡಾ.ವಸು ಮಳಲಿ

"ಯಾವುದೇ ಚಿಂತನೆಯನ್ನು ತಡೆಹಿಡಿಯಲಾಗದು, ಅದು ಪರಿಮಳದಂತೆ ಹರಡುತ್ತದೆ ಎನ್ನುವುದಕ್ಕೆ ಮಾರ್ಕ್ಸ್‌ವಾದ ಉತ್ತಮ ಸಾಕ್ಷಿ" ಎನ್ನುವ ಬರಹ ನನಗೆ ಇವತ್ತೂ ನೆನಪಿದೆ. ಕನ್ನಡ ಹಾಗೂ ಕರ್ನಾಟಕದ ಇತಿಹಾಸವನ್ನು ಹೊಸ ದೃಷ್ಟಿಕೋನದಿಂದ ನೋಡಿದ್ದ, ಭಾರತದ ಚರಿತ್ರೆಯನ್ನು ವಿಶಿಷ್ಟವಾಗಿ ವಿಮರ್ಶಿಸುತ್ತಿದ್ದ ಅಂಕಣಕಾರರು, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಲೇಖಕರು ಆಗಿದ್ದ ವಸು ಮಳಲಿ ಮರಳಿ ಬಾರದ ಲೋಕಕ್ಕೆ ಹೋಗಿದ್ದಾರೆ.

ಅಪಾರ ಚಿಂತನೆಯಿಂದ ಬ್ರಾಹ್ಮಣ್ಯದ ಬಗ್ಗೆ, ಮಹಾಕಾವ್ಯಗಳ ಬಗ್ಗೆ, ಇತಿಹಾಸ ತಜ್ಞರ ಬಗ್ಗೆ, ಬಡವರ ಬಗ್ಗೆ, ರಾಜಕೀಯದ ಬಗ್ಗೆ, ಪರಿಸರದ ಬಗ್ಗೆ ಹೀಗೆ ಹಲವಾರು ವಿಷಯಗಳ ಬಗ್ಗೆ ವಿಸ್ತೃತವಾಗಿ ಮನಮುಟ್ಟುವಂತೆ ಬರೆಯುತ್ತಿದ್ದ ವಸುರವರ ಜ್ಞಾನದ ದಾಹಕ್ಕೆ ಮಿತಿಯೇ ಇರಲಿಲ್ಲ. ಜಾತಿ, ಒಳಜಾತಿ, ಧರ್ಮ, ಭಾಷೆ, ನೆಲದಿಂದ ನಾವೆಲ್ಲ ಒಂದು ಎಂದು ಭಾವಿಸುವ ಸಮಾಜದ ಸೃಷ್ಟಿ ದುರದೃಷ್ಟಕರ ಎಂದು ಪ್ರತಿಪಾದಿಸಿದ್ದ ಅವರು 'ದೈವಗಳು ಸೊಗಸಾಗಿ ಜನರನ್ನು ಒಗ್ಗೂಡಿಸುವಂತೆ, ಉಳಿದವರನ್ನು ದೂರವಿಡುತ್ತದೆ' ಎಂದು ಹೇಳಿದ್ದರು. "ರಾಷ್ಟ್ರೀಯತೆಯ ಕಲ್ಪನೆಗೆ ಧರ್ಮ ಬೆರೆತರೆ ಮಾದಕ ದ್ರವ್ಯಗಳೆರಡನ್ನು ಬೆರೆಸಿ ಕುಡಿದಂತೆ" ಎನ್ನುವ ವೈಚಾರಿಕತೆಯಲ್ಲಿರುವ ಸೂಕ್ಷ್ಮತೆಯನ್ನು ಮತ್ತು ಗ್ರಹಿಕೆಯನ್ನು ನೋಡಿ ಬೆಕ್ಕಸ ಬೆರಗಾದರು .... ಇದು ವಸು ಮಳಲಿ ಯೋಚಿಸುತ್ತಿದ್ದ ಪರಿ!! ಸ್ಲಂಗಳಲ್ಲಿ ವಾಸಿಸುವ ವಲಸೆ ಬಂದ ಬಡಜನರನ್ನು ಎತ್ತಂಗಡಿ ಮಾಡುವ ನಗರ ಪ್ರದೇಶದ ಕ್ರೌರ್ಯವನ್ನು ಖಂಡಿಸಿದ್ದ ವಸು, ಬಡವರ ಪರ ಕಾಳಜಿ ವಹಿಸಿ ಬಡವರನ್ನು ಹಾಗೂ ಸ್ಲಂಗಳನ್ನು ನಿರ್ಮೂಲನೆ ಮಾಡಬಾರದು; ಬದಲಾಗಿ ಮನಸ್ಸಿಗೆ ಹತ್ತಿರುವ ಕೊಳೆ, ನಗರವೆಂಬ ಸೋಗಿನ ದುರ್ನಾತ, ಮುಸುಕಿನೊಳಗೆ ನಾರುವ ಭ್ರಷ್ಟಾಚಾರವನ್ನು ತೊಳೆದು ಹಾಕಬೇಕಿದೆ ಎಂದು ಸಾರಿದ್ದರು. ವಿಚಾರಗಳನ್ನು ಗ್ರಹಿಸಲು ಅವರಲ್ಲಿ ಇದ್ದ ಆ ಒಂದು ಬುದ್ಧಿವಂತ ಕ್ರಾಂತಿಯ ಚೇತನ ಜಾಗೃತವಾಗಿತ್ತು, ಇತಿಹಾಸವನ್ನು ನೋಡಲು ಬೇಕಾಗಿದ್ದ ಸ್ಥಿತಿಸ್ಥಾಪಕತ್ವ ಅವರಲ್ಲಿ ಇದ್ದುದರಿಂದಲೇ ಬರಹದ ಬಲವನ್ನು ಹೆಚ್ಚಿಸುವಂತೆ ಅಕ್ಷರಗಳು ಇತಿಹಾಸವನ್ನು ಮರುಸೃಷ್ಟಿ ಮಾಡುತ್ತಿದ್ದವು. ಲೈಂಗಿಕ ಅಲ್ಪಸಂಖ್ಯಾತರ ಪುನರ್ವಸತಿ ಕುರಿತಾಗಿ ಸಭೆಯೊಂದರಲ್ಲಿ ಮಾತನಾಡಿದ್ದ ವಸುರವರು, ಲೈಂಗಿಕ ಅಲ್ಪಸಂಖ್ಯಾತರ ಸಹಾಯವಾಣಿಯನ್ನು ಬಿಡುಗಡೆಮಾಡುವ ಸಂದರ್ಭದಲ್ಲಿ ಸಹಾಯವಾಣಿಯು ಹೇಗೆ ದುರುಪಯೋಗವಾಗುತ್ತದೆ ಎಂದು ಹೇಳಿ ವ್ಯವಸ್ಥಾಪಕರ ಕೆಂಗಣ್ಣಿಗೆ ಗುರಿಯಾಗಿದ್ದರು. ಆಧುನಿಕ ಸಲಕರಣೆಗಳನ್ನು ಬಳಕೆಯಿಂದ ಪಿಡುಗುಗಳಿಗೆ ಆಧುನಿಕ ಸ್ವರೂಪ ಬರುತ್ತದೆ ಎಂದು ಆ ಸಭೆಯಲ್ಲಿ ಅವರು ಪ್ರತಿಪಾದಿಸಿದ್ದರು. ಬಂಡವಾಳ ಶಾಹಿಗಳ ವಿರುದ್ಧ ರಣಕಹಳೆಯನ್ನು ಮೊಳಗಿಸಿದವರಂತೆ ಬರೆಯುತ್ತಿದ್ದ ಅವರು, ರಾಜಕೀಯದಲ್ಲಿ ಉದ್ಯಮಿಗಳು ಹೂಡುವ ಹಣ ಐದು ವರ್ಷ ನಿರಂತರವಾಗಿ ಕರೆಯುವ ಹಸುವಿಗೆ ಹಿಂಡಿ ಹಾಕಿದಂತೆ, ಜನಸಾಮಾನ್ಯರಿಗೆ ಇರುವ ಏಕೈಕ ಬಂಡವಾಳ ವೋಟು, ಅದನ್ನು ಖಡ್ಗವಾಗಿಸಿ ಪ್ರಜಾಪ್ರಭುತ್ವಕ್ಕಾಗಿ ಹೋರಾಡಬೇಕಿದೆ ಎನ್ನುವ ಕಿಚ್ಚನ್ನು ಹಚ್ಚಿದ್ದರು. ವಸು ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರೂ ಇತಿಹಾಸವನ್ನು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ವರ ಕಾಳಜಿಯನ್ನು, ಮೌಲ್ಯಾಧಾರಿತ ವೈಚಾರಿಕತೆಯನ್ನು, ನವೀಯ ಗುಣಗಳನ್ನು ತೆರೆದಿಡುತ್ತಿದ್ದ ಡಾ.ಮಹಾ ಮಳಲಿ ಮ್ಮ ಓದುಗರೊಂದಿಗೆ ಹೊಂದಿದ್ದ ಕಳ್ಳು-ಬಳ್ಳಿಯನ್ನು ಡಿಸಿಕೊಂಡು ಮರೆಯಾಗಿದ್ದಾರೆ. ಮಹರವರ ಸಂಶೋಧನೆ ತಿಹಾಸದ ಸಂಕೀರ್ಣತೆಯನ್ನು ಸಂಪೂರ್ಣಗೊಳಿಸಿದ ಂಪ್ಲೆಕ್ಸಿಟಿ ಟು ಕಂಪ್ಲೀಟ್). ಅವರ ಚಿಂತನೆಯನ್ನು ನಾವು ರಿಸುತ್ತ ಪಾಲಿಸುತ್ತ ಮರೆಯಾದ ಮಹುವಿನ ಆತ್ಮಕ್ಕೆ ಂತಿ ಕೋರೋಣ.

-ಡಾ.ಅಭಿನಂದನ ಬಳ್ಳಾರಿ. ಬೆಂಗಳೂರು

ಅಲ್ಪಸಂಖ್ಯಾತರ ಸಂಖ್ಯೆ ಹೆಚ್ಚಳ ಎಂಬ ಕಪೋಲಕಲ್ಪಿತ ವರದಿ

ಒಂದೆಡೆ ಕೇಸರಿ ಸಂಘಟನೆಗಳು ಮತ್ತು ಬಿಜೆಪಿ ಕ್ಷವು ಜಾತಿ ಆಧಾರಿತ ಮತ್ತು ಧರ್ಮ ಆಧಾರಿತ ನಗಣತಿಯನ್ನು ತೀವ್ರವಾಗಿ ವಿರೋಧಿಸುತ್ತಿವೆ. ಇನ್ನೊಂದೆಡೆ ನೇ ಸಂಘಟನೆಗಳು ದೇಶದಲ್ಲಿ ಹಿಂದೂಗಳ ಜನಸಂಖ್ಯೆ ಮೆಯಾಗುತ್ತಿದೆ ಎಂದು ಹುಯಿಲೆಬ್ಬಿಸುತ್ತಿವೆ. ನಮ್ಮ ಶದಲ್ಲಿ ಧರ್ಮಾಧಾರಿತ ಜನಗಣತಿಯ ಪ್ರಕ್ರಿಯೆ ಇನ್ನೂ ರ್ಣಗೊಂಡಿಲ್ಲ ಹಾಗೂ ಯಾವುದೇ ಅಧಿಕೃತ ಜನಗಣತಿ ಖ್ಯೆ ಸರಕಾರದ ಕೈಗೆ ಬಂದೇ ಇಲ್ಲ, ಆದರೂ ಕೆಲವು ೀಡಿಯಾಗಳು 2001-2011 ಅವಧಿಯಲ್ಲಿ ಮುಸ್ಲಿಮರ ನಸಂಖ್ಯೆ 24% ಹೆಚ್ಚಾಗಿದೆ ಎಂದು ವರದಿ ಡಿರುವುದು ದುರುದ್ದೇಶಪೂರಿತ ಎಂದು ಅನಿಸುತ್ತಿದೆ.

ಈಗ ಮೀಡಿಯಾದ ಅದೇ ವರದಿ ಹಿಡಿದುಕೊಂಡು ಸರಿ ಸಂಘಟನೆಗಳ ಮುಖಂಡರು ಜನಸಂಖ್ಯೆ ಏರುಪೇರಿನ ಪ್ರತಿಪಾದನೆ ಸರಿಯಾಗಿದೆ ಹಾಗಾಗಿ ದೇಶದಲ್ಲಿ ಮಾನ ನಾಗರಿಕ ಸಂಹಿತೆ ಜಾರಿಗೊಳಿಸಬೇಕು ಎಂದು ಗ್ರಹಿಸುತ್ತಿವೆ. ಇಲ್ಲದಿದ್ದರೆ ಹಿಂದೂಗಳು ಕೆಲವೇ ರ್ಷಗಳಲ್ಲಿ ಅಲ್ಪ ಸಂಖ್ಯಾತರಾಗುತ್ತಾರೆ, ಅದಕ್ಕಾಗಿ ಹಿಂದೂ ಪತಿಗಳು ಹೆಚ್ಚು ಹೆಚ್ಚು ಮಕ್ಕಳನ್ನು ಹುಟ್ಟಿಸಬೇಕು ದು ಕರೆ ಕೊಟ್ಟು ಹಿಂದೂ ಮಹಿಳೆಯರನ್ನು ಹೆರಿಗೆ ಂತ್ರ ಮಾಡಬೇಕೆಂದು ಹವಣಿಸುತ್ತಿವೆ. ಇನ್ನೊಂದೆಡೆ ತರಿ ಅಥವಾ ಸ್ವತಂತ್ರ ವೃತ್ತಿ ಮಾಡುವ ಮಹಿಳೆಯು ತ್ಯಾಚಾರವನ್ನು ಸುಖಿಸುತ್ತಾಳೆ, ಅದಕ್ಕಾಗಿಯೇ ಅವಳು ಯುತ್ತಿರುತ್ತಾಳೆ, ತನ್ನ ಮೇಲೆ ಅತ್ಯಾಚಾರವಾಗಲಿ ಎಂಬ ಬಯಕೆ ವಿದ್ಯಾವಂತ ಮಹಿಳೆ ಹೊಂದಿರುತ್ತಾಳೆ ದು ಬರೆದು ಯುವಕರನ್ನು ಅತ್ಯಾಚಾರ ಮಾಡಲು ್ರೋತ್ಸಾಹಿಸುವ ಭೈರಪ್ಪನಂತವರಿಗೆ ಜ್ಞಾನಪೀಠ ಪ್ರಶಸ್ತಿ ಡಬೇಕೆಂದು ಈ ಹಿಂದೂತ್ವ ಸಂಘಟನೆಗಳು ಶಿಫಾರಸು ಾಡುತ್ತವೆ (ಸಾಹಿತ್ಯದ ಮೂಲಕ ಅತ್ಯಾಚಾರಕ್ಕೆ ೋಕ್ಷವಾಗಿ ಪ್ರೇರೇಪಿಸುವುದು ಸಹ ಕ್ರಿಮಿನಲ್ ರಾಧ). ಇದಕ್ಕೆಲ್ಲಾ ಉತ್ತರಿಸಬೇಕಾಗಿರುವ ಕೇಂದ್ರ ಸರಕಾರ ಮ್ಮನಿದೆ. ಯಾಕೆಂದರೆ ಕೇಂದ್ರ ಸರಕಾರದಲ್ಲಿರುವ ಕೆಲವು ಾರರಿಗೂ ಇದೇ ಜನಸಂಖ್ಯೆಯ ವಿವಾದ ಬೇಕಾಗಿದೆ. ್ದಾರೆ ಇಂತಹ ಒಂದು ಅರೆಬೆಂದ ವರದಿ ಮೀಡಿಯಾ ಲ್ಲಿ ದುರುದ್ದೇಶದಿಂದ ಪ್ಲಾಂಟ್ ಮಾಡಿರುವುದರ ಹಿಂದೆ ಮ ಸಂಘಟನೆಯ ಹಿಡನ್ ಅಜೆಂಡಾ ಹಾಗೂ ಒಂದು ರಗಾಮಿ ಸಂಚಿರುವಂತೆ ಕಾಣಿಸುತ್ತಿದೆ.

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ರಶೈವರು ಲಿಂಗಾಯತರಾಗಬಹುದು ವರೆ ಲಿಂಗಾಯತ ವೀರಶೈವನಾಗಲಾರ

ಲಿಂಗಾಯತ ಪದವು ಬಸವಣ್ಣ ಮತ್ತು ಶರಣರಿಂದ ಟ್ಟಿದ ಶ್ರೇಷ್ಠ ಸಮುದಾಯದ ಪದ. ಇಲ್ಲಿ ಲಿಂಗವನ್ನು ಂತ ಮಾಡಿಕೊಂಡವ ಲಿಂಗಾಯತ. ವರ್ಗ ವರ್ಣ ಆಶ್ರಮ ಲಿಂಗ ಭೇದ ಅನೇಕ ರೇಖೆಗಳ ದಾಟಿ ಕ್ತ ಸ್ವತಂತ್ರ ವಿಚಾರದ ಧರ್ಮವೇ ಲಿಂಗಾಯತ ಧರ್ಮ. ಶೈವ ಅದರ ಏಳು ಪ್ರಭೇದಗಳಲ್ಲಿ ಒಂದು. ಟಕದಲ್ಲಿ ವೀರಶೈವರು ಲಿಂಗಾಯತ ಧರ್ಮವನ್ನು ಕೊಂಡವರು. ಆದರೆ ಇಲ್ಲಿ ಪೌರೋಹಿತ್ಯಕ್ಕೆ ಕಾಶವಿಲ್ಲದಿದ್ದಾಗ, ಅವರ ಉದ್ಯೋಗ ನಡೆಯದಿದ್ದಾಗ ಸ್ವಂತ ಅಸ್ತಿತ್ವಕ್ಕೆ ಬೇರೆಯಾಗಿ ಉಳಿದರು. ಅವರಲ್ಲಿರುವ ಆಚಾರಗಳು ಲಿಂಗಾಯ ತರವು. ಇಷ್ಟಲಿಂಗ ಪೂಜೆ ಾವರಣ ಪಂಚಾಚಾರ ಷಟ್‌ಸ್ಥಲ. ಇವು ಬಸವಾದಿ ರ ಕೊಡುಗೆಗಳು. ಇರಲು ಮನೆ ಕೊಟ್ಟರೆ ಮನೆಯೇ ದು ಎನ್ನುವುದು ಅವರ ವಾದ. ಕೃತ್ರಿಮ ಕೆಲ ತ ಗ್ರಂಥ ಬರೆದು ತಮ್ಮ ಅನಾದಿಯ ಪೌರಾಣಿಕ ಹೇಳುವಲ್ಲಿ ಅವರು ನಿಸ್ಸೀಮರು. ಬಸವ ಭಕ್ತರಿಗೆ ಗಲಿಲ್ಲ, ಇದು ಕೌಟುಂಬಿಕ ಪ್ರಾಪಂಚಿಕ ಧರ್ಮ. ಸ ಬಾಳು ಸಮಾಜವಾದದ ತಳಹದಿ ಮೇಲಿದೆ.

-ಡಾ.ಶಶಿಕಾಂತ ಪಟ್ಟಣ, ಪೂನಾ

ಎಸ್ ಎಲ್. ಭೈರಪ್ಪ ಅವರನ್ನು ದೊಡ್ಡ ಇತಿಹಾಸಕಾರ, ವಾದಿ ಎಂದೆಲ್ಲ ಬಿಂಬಿಸಲಾಗಿತ್ತು, ಆದರೆ 81ನೇ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆತನ ಮುಖವಾಡ ಬಯಲು ಮಾಡಿದ್ದೀರಿ. ಮಹಿಳೆಯರ ಗಿ ದಿಟ್ಟವಾಗಿ ಮಾತನಾಡಿದ ಗೌರಿ ಲಂಕೇಶ್, ಡಾ. ಕೆ.ಎಸ್ ವಿಮಲಾ ಮತ್ತು ಡಾ. ಎಂ.ಎಸ್ ಆಶಾ ... ಸಿದ್ದಿಬ್ಬರಿಗೂ ಅಭಿನಂದನೆಗಳು.

-ರಾಹುಲ್ ಬೆಂಕಿಕೆರೆ, ಎಸ್‌ಎಂಎಸ್ ಮೂಲಕ

ಶಂಕರ್ ನಾಗ್ ಎಂಬ ಕನಸುಗಳ ಕಣಜ

ಶಂಕರ್ ನಾಗ್ ತಮ್ಮ ಓದು ಮುಗಿಯುತ್ತಿದ್ದಂತೆಯೇ ಮುಂಬಯಿಗೆ ಹೋದವರು. ಮುಂಬಯಿಯ ಮರಾಠಿ ರಂಗಭೂಮಿಯತ್ತ ಆಸಕ್ತರಾಗಿ ಸಕ್ರಿಯರಾದವರು. ರಂಗದ ಹಿಂದಿನ, ಮುಂದಿನ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ ಗ್ರಹಿಸುತ್ತಾ ಪಳಗಿದವರು. ಇಷ್ಟಕ್ಕೂ ರಂಗದ ಮೇಲೆ ನಾಟಕ ನೋಡುವವರಿಗೆ ನೇಪಥ್ಯದಲ್ಲಿನ ಆತಂಕ, ನಾಟಕವೊಂದು ರಂಗಕ್ಕೆ ಬರುವವರೆಗಿನ ಕಷ್ಟ, ಕಣ್ಣೀರು, ಬೆವರು ಅರ್ಥವಾಗುವುದಿಲ್ಲ. ಪಾತ್ರಕ್ಕೆ ಹೊಂದುವ ವಸ್ತ್ರ ವಿನ್ಯಾಸ, ಮೇಕಪ್, ಬಾಡಿ ಲಾಂಗ್ವೇಜ್, ಡೈಲಾಗ್ ಹೇಳುವ ಟೈಮಿಂಗ್, ಅವುಗಳ ಹಿಂದೆ ಅಡಗಿರುವ ಒತ್ತಡ ಗೊತ್ತಿರುವುದಿಲ್ಲ. ಸ್ಟೇಜ್ ಸಿದ್ಧಗೊಳಿಸುವವನು, ಬೆಳಕು ಬಿಡುವವನು, ರಂಗದ ಮೂಲೆಯೊಂದರಲ್ಲಿ ಕೂತು ವಾದ್ಯ ನುಡಿಸುವವನು, ಹಿನ್ನೆಲೆಯಲ್ಲಿ ರಂಗಗೀತೆ ಹಾಡುವವನು- ಇವರಿಲ್ಲದೆ ನಾಟಕ ಇಲ್ಲ; ಶಂಕರ್ ನಾಗ್ ಇವುಗಳನ್ನು ಅರಿತಿದ್ದರು.

"ಸತ್ತ ಮೇಲೆ ನಿದ್ರಿಸುವುದು ಇದ್ದೇ ಇದೆ. ಬದುಕಿದ್ದಾಗ ಹಗಲುರಾತ್ರಿಗಳೆನ್ನದೆ ದುಡಿಯುವ ಮೂಲಕ ಮಹತ್ವವಾದುದನ್ನು ಸಾಧಿಸಬೇಕು" ಎಂದು ಹೇಳುತ್ತಿದ್ದ ಶಂಕರ್ ನಾಗ್ ಅವರ ಮಹತ್ವಾಕಾಂಕ್ಷೆಯ ಧೋರಣೆ ಕೂಡ ರಂಗಭೂಮಿಯ ಹಿನ್ನೆಲೆಯಿಂದಲೇ ಪಡೆದದ್ದು.


ಅಲ್ಲಿ ಅಷ್ಟು ಪಕ್ವವಾಗುತ್ತಿದ್ದಂತೆಯೇ ಶಂಕರ್ ನಾಗ್ ಬೆಂಗಳೂರಿಗೆ ಬಂದರು. ಅಷ್ಟರಲ್ಲಾಗಲೇ ಕನ್ನಡ ಚಿತ್ರರಂಗದಲ್ಲಿ ನೆಲೆ ಕಂಡುಕೊಂಡಿದ್ದ ಸಹೋದರ ಅನಂತ್ ನಾಗ್ ಇಂಗಿತದಂತೆ ಸಿನಿಮಾದಲ್ಲಿ ನಟಿಸಲು ಮುಂದಾದರು. ಗಿರೀಶ್ ಕಾರ್ನಾಡ್ ನಿರ್ದೇಶನದ 'ಒಂದಾನೊಂದು ಕಾಲದಲ್ಲಿ' ಚಿತ್ರದ ಮೂಲಕ ಚೊಚ್ಚಲ ಬಾರಿಗೆ ನಾಯಕನ ಪಾತ್ರದಲ್ಲಿ ನಟಿಸಿ ದೆಹಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ರಾಷ್ಟ್ರೀಯ ಮನ್ನಣೆ ಪಡೆದರು. ಶಂಕರ್ ನಾಗ್ ಗಂಡುಗಲಿ ಪಾತ್ರದಲ್ಲಿ ಜನಪ್ರಿಯರಾದ ಆ ಚಿತ್ರ ಮೂಲತಃ ಜಪಾನಿನ ನಿರ್ದೇಶಕ ಅಕಿರಾ ಖುರೋಸಾವ ನಿರ್ದೇಶನದ 'ಸೆವೆನ್ ಸಾಮುರೈ' ಚಿತ್ರದ ಕನ್ನಡ ಅವತರಣಿಕೆಯಾಗಿತ್ತು. ಚಂದ್ರಶೇಖರ ಕಂಬಾರರ ಸಾಹಿತ್ಯವಿದ್ದ ಹಾಡುಗಳು ಚಿತ್ರಕ್ಕೆ ಮತ್ತಷ್ಟು ಅರ್ಥ ತಂದಿದ್ದವು. ಆ ಚಿತ್ರದಲ್ಲಿನ ಪಾತ್ರಗಳು, ಪ್ರಕೃತಿ, ಕ್ರೌರ್ಯ, ಸಂಚು, ಪ್ರೀತಿ, ಮುಗ್ಧತೆ, ಅನಾಗರಿಕತೆ... ಇಂಥವೆಲ್ಲ ಇವತ್ತಿಗೂ ನೆನಪಿಗೆ ಬರುತ್ತವೆ. ಹೀರೋ ಆಗಿ ಆ ಚಿತ್ರದಲ್ಲಿ ನಟಿಸಿದಾಗ ಶಂಕರ್ ನಾಗ್ ಕೇವಲ ಇಪ್ಪತ್ತ ನಾಲ್ಕು ವರ್ಷದ ತರುಣ.

ಆಗ ಶಂಕರ್ ನಾಗ್ ಬಿಸಿ ನೆತ್ತರ ಯುವಕ. ಮಹತ್ವದ ನಾಳೆಗಳನ್ನು ಕನಸುತ್ತಿದ್ದ ಕನಸುಗಣ್ಣಿನ ಹುಡುಗ. ಅಣ್ಣ ಅನಂತ್ ನಾಗ್ ನೀಡುತ್ತಿದ್ದ ಅಪಾರ ಭ್ರಾತೃತ್ವದ ಸವಿಯನ್ನು ಕಂಡಾತ. ಅಲ್ಲದೆ ಸಿನಿಮಾದ ರಹಸ್ಯಗಳನ್ನು ಬೇಧಿಸುವಲ್ಲಿ ಅಷ್ಟರಲ್ಲಾಗಲೇ ಪಣ ತೊಟ್ಟು ನಿಂತಿದ್ದ ಉತ್ಸಾಹಿ. ಭಾರತದ ಬೇರೆ ಬೇರೆ ಭಾಷೆಗಳಲ್ಲಿ ತಯಾರಾಗುತ್ತಿದ್ದ ಚಿತ್ರಗಳ ಸೂಕ್ಷ್ಮತೆ, ಕ್ರಿಯಾಶೀಲತೆಯನ್ನು ಗಮನಿಸುತ್ತಿದ್ದ ವ್ಯಕ್ತಿ. ಅತ್ತ ರಂಗಭೂಮಿಯ ಗಟ್ಟಿ ಬುನಾದಿ, ಇತ್ತ ಸಿನಿಮಾ ಎನ್ನುವ ಮಾಯಾಜಗತ್ತಿನ ಹೊಸ ಬಾನಿನೆಡೆಗೆ ನೆಟ್ಟ ನೋಟ... ಇವೆಲ್ಲವುಗಳಿಂದ ಶಂಕರ್ ನಾಗ್ ಕಣ್ಣೆದುರು ಭರವಸೆಯ ನಾಳೆಗಳು ಸುಳಿದಾಡತೊಡಗಿದವು.

ಸಿನಿಮಾದ ವಿಸ್ಮಯಕಾರಿ ಸಂಗತಿಗಳ ಬಗ್ಗೆ ಧ್ಯಾನಿಸುವವರು ಮನುಷ್ಯನ ವಿಚಿತ್ರ ಶೋಧನೆಗಳಲ್ಲಿ ಸಿನಿಮಾ ಕೂಡ ಒಂದೆಂಬುದನ್ನು ಮನಗಾಣಬೇಕು. ಚಲಿಸುವ ಫೋಟೋಗಳ ಮೂಲಕ ಜಗತ್ತಿಗೆ ಹೇಳಬೇಕಾದುದನ್ನು ಸಮರ್ಥವಾಗಿ ಹೇಳುವುದೇ ಈ ಕಲೆಯ ಮೂಲ ಆಶಯ. ನಾಟಕದಲ್ಲಾದರೆ ಒಂದೊಳ್ಳೆಯ ಡೈಲಾಗ್ ಹೇಳಿದಾಗ ಅಥವಾ ಒಂದೊಳ್ಳೆ ನೃತ್ಯ ಮಾಡಿದಾಗ ಜನ ಚಪ್ಪಾಳೆ ಹೊಡೆಯುತ್ತಾರೆ. ಆ ಚಪ್ಪಾಳೆಯ ಪ್ರೋತ್ಸಾಹ ಕಲಾವಿದ ತನ್ನ ಮುಂದಿನ ದೃಶ್ಯಗಳಲ್ಲಿ ಇನ್ನಷ್ಟು ಚೆನ್ನಾಗಿ, ಉತ್ಸಾಹದಿಂದ ನಟಿಸಲು ಪ್ರೇರೇಪಿಸುತ್ತದೆ. ಆದರೆ ಸಿನಿಮಾದಲ್ಲಿ ಅಂತಹ ಅವಕಾಶವಿಲ್ಲ, ಕ್ಯಾಮೆರಾವನ್ನೇ ಪ್ರೇಕ್ಷಕ ಎಂದು ತಿಳಿದು ನಟಿಸುವ ಕಲಾವಿದರ ಚಿತ್ತದಲ್ಲಿ ಒಂದು ಬಗೆಯ ಪರವಶತೆ ಹಾಗೂ ಜಾಗೃತ ಭಾವ ಒಟ್ಟೊಟ್ಟಿಗೆ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ನಾಟಕದಲ್ಲಿ ನಟಿಸುವುದು ಎಷ್ಟು ದೊಡ್ಡ ಸವಾಲೋ ಸಿನಿಮಾಗಳಲ್ಲಿ ನಟಿಸುವುದು ಕೂಡ ಅಷ್ಟೇ ದೊಡ್ಡ ಸವಾಲು. ಆದ್ದರಿಂದಲೇ ಸಿನಿಮಾ ನಾಟಕಕ್ಕಿಂತ ಭಿನ್ನ. ಆ ಗುಟ್ಟು ನಾಟಕದ ಹಿನ್ನೆಲೆಯಿಂದ ಬಂದ ಶಂಕರ್ ನಾಗ್ ಅವರಿಗೂ ಗೊತ್ತಿತ್ತು. ಗಿರೀಶ್ ಕಾರ್ನಾಡ್ ಎಂಬ ಎರಡೂ ನೆಲೆಯಲ್ಲಿ ಪಳಗಿದ ನಿರ್ದೇಶಕನ ಮಾರ್ಗದರ್ಶನದಲ್ಲಿ ನಟಿಸುವಾಗ ನಾಟಕ ಹಾಗೂ ಸಿನಿಮಾ ನಡುವಿನ ಈ ಪುಟ್ಟ ವ್ಯತ್ಯಾಸ ಶಂಕರ್ ನಾಗ್ ಅವರಿಗೆ ಮತ್ತಷ್ಟು ಗೊತ್ತಾಯಿತು ಅನ್ನಬಹುದು.

ಹೀಗೆ ಅವಲೋಕಿಸುತ್ತಾ ಹೋದಂತೆ, ಶಂಕರ್ ನಾಗ್ ಕಮರ್ಷಿಯಲ್ ಚಿತ್ರಗಳಿಗೆ ಒಗ್ಗಿಕೊಳ್ಳಲು ಹೆಚ್ಚು ಸಮಯ ಹಿಡಿಯಲಿಲ್ಲ. ಶಂಕರ್ ನಾಗ್ ನಟಿಸಿದ ಚೊಚ್ಚಲ ಮಸಾಲಾ ಚಿತ್ರ 'ಸೀತಾರಾಮು'. ಅದು ಸೂಪರ್ ಹಿಟ್ ಆಯಿತು.

ಅಲ್ಲಿಂದಾಚೆಗೆ 'ಪ್ರೀತಿ ಮಾಡು ತಮಾಷೆ ನೋಡು', 'ಆಟೋ ರಾಜ', 'ಮೂಗನ ಸೇಡು', 'ಜನ್ಮಜನ್ಮದ ಅನುಬಂಧ', 'ಗೀತಾ', 'ಮಿಂಚಿನ ಓಟ', 'ಕಾರ್ಮಿಕ ಕಳ್ಳನಲ್ಲ', 'ನೋಡಿ



ಸ್ವಾಮಿ ನಾವಿರೋದು ಹೀಗೆ', 'ಆಕ್ಸಿಡೆಂಟ್', 'ಸಿ.ಬಿ.ಐ.ಶಂಕರ್', 'ಇದು ಸಾಧ್ಯ', 'ಹೊಸ ಜೀವನ' ಮುಂತಾದ ಚಿತ್ರಗಳಲ್ಲಿ ವಿಕಸಿಸುತ್ತಾ ಸಾಗಿದಂತೆ ಶಂಕರ್ ನಾಗ್ ಅದ್ಭುತ ಕಲಾವಿದನಾಗಿ ರೂಪುಗೊಂಡರು. ಹಾಗೆಯೇ ಕ್ರಿಯಾಶೀಲ ನಿರ್ದೇಶಕರಾಗಿ ಸಹ. ಪೊಲೀಸ್ ಅಧಿಕಾರಿ ಸಾಂಗ್ಲಿಯಾನ ಮುಂತಾದವರು ಶಂಕರ್ ನಾಗ್ ಚಿತ್ರಗಳಿಗೆ ಅಸ್ಫೂರ್ತಿಯಾಗಿದ್ದಾರೆ. ರಾಮಕೃಷ್ಣ ಹೆಗಡೆ, ಪ್ರೊತಿಮಾ ಬೇಡಿ ತರಹದವರು ಇವರಿಗೆ ಇಷ್ಟವಾಗುತ್ತಾರೆ. ಜನತಾ ಪಕ್ಷ ಎಂಬತ್ತರ ದಶಕದಲ್ಲಿ ಇವರು ಗುರುತಿಸಿಕೊಳ್ಳುವ ರಾಜಕೀಯ ಪಕ್ಷವಾಗುತ್ತದೆ.


ಇವರ ಚಿತ್ರಗಳಲ್ಲಿ ಹಾಡುಗಳಿವೆ, ಫೈಟುಗಳಿವೆ, ಪಂಚಿಂಗ್ ಡೈಲಾಗ್ಸ್ ಇವೆ; ತಂತ್ರವಿದೆ, ಬಡವರ ಬಗ್ಗೆ ಕಾಳಜಿ ಇದೆ, ಸಾಮಾಜಿಕ ಪ್ರಜ್ಞೆ ಇದೆ; ಎಲ್ಲವೂ ವಾಸ್ತವಕ್ಕೆ ಹಿಡಿದ ಕನ್ನಡಿಯಂತಿವೆ. ಚಿತ್ರ ಮಾಡಿ ಕೀರ್ತಿ, ಹಣ ಗಳಿಸುವ ಉದ್ದೇಶಕ್ಕಿಂತ ಮಿಗಿಲಾಗಿ ಸಿನಿಮಾ ಮಾಧ್ಯಮದ ಮೂಲಕ ನಾಡಿಗೆ ಹೇಳಬೇಕಾದುದನ್ನು ಸ್ಪಷ್ಟವಾಗಿ ಹೇಳಬೇಕೆಂಬ ತುಡಿತ ಮತ್ತು ವ್ಯವಹಾರದಾಚೆಗೂ ಸಿನಿಮಾವನ್ನು ಕಲೆಯಾಗಿ ನೋಡುವ ಪ್ರಾಮಾಣಿಕತೆ- ಇಲ್ಲಿ ಏಕಕಾಲಕ್ಕೆ ಗ್ರಹಿಕೆಗೆ ಸಿಕ್ಕುತ್ತವೆ. ಈ ಕಾರಣದಿಂದ ಶಂಕರ್ ನಾಗ್ ಅವರ ಹಲವು ಬಗೆಯ ಪ್ರಯತ್ನಗಳು ಮುಖ್ಯವಾಗಿ ಪರಿಗಣಿಸಲ್ಪಡುತ್ತವೆ. ಇವರು ಮೊದಲು ಕಲಾತ್ಮಕ ಚಿತ್ರಗಳಲ್ಲಿ ನಟಿಸಿದವರು; ಆಮೇಲೆ ಹೆಚ್ಚು ಜನರನ್ನು ತಲುಪುವ ವ್ಯಾಪಾರಿ ಚಿತ್ರಗಳತ್ತ ಮುಖ ಮಾಡಿದರು. ತಡಮಾಡದೆ 'ಮಿಂಚಿನ ಓಟ'ದ ಮೂಲಕ ನಿರ್ದೇಶಕರಾದರು; ಚಿತ್ರಕ್ಕೆ ಎರಡನೇ ಅತ್ಯುತ್ತಮ ಚಿತ್ರ, ಅತ್ಯುತ್ತಮ ಚಿತ್ರಕತೆ ರಾಜ್ಯ ಪ್ರಶಸ್ತಿಗಳೂ ಬಂದವು.

ಹೀಗೆ ಶುರುವಾದ ಶಂಕರ್ ನಾಗ್ ಅವರ ಕಲಾಪಯಣ ಕಡೆಗೆ ತನ್ನ ಸುತ್ತಣ ಸಮಾಜಕ್ಕೆ ಸ್ಪಂದಿಸುವ ಕಡೆಗೆ ವಾಲಿಕೊಂಡಿತು; 'ಆಟೋರಾಜ' ಮೂಲಕ ಆಟೋ ಡ್ರೈವರುಗಳ ಪ್ರೀತಿಯನ್ನೂ, 'ಲಾರಿ ಡ್ರೈವರ್' ಮೂಲಕ ಲಾರಿ ಡ್ರೈವರುಗಳ ಅಭಿಮಾನವನ್ನೂ, 'ಕಾರ್ಮಿಕ ಕಳ್ಳನಲ್ಲ' ಮೂಲಕ ಕಾರ್ಮಿಕರ ಒಲವನ್ನೂ ಗಳಿಸಲು ಸಾಧ್ಯವಾಯಿತು. ಶಂಕರ್ ನಾಗ್ ಎಂಬ ಹೆಸರು ಕೇವಲ ಒಬ್ಬ ಚಿತ್ರನಟನ ಹೆಸರಾಗದೆ ತುಳಿತಕ್ಕೊಳಗಾದ, ಶೋಷಣೆಯನ್ನು ಎದುರಿಸುವ, ಶ್ರಮಿಕ, ಬಡವ, ದೀನ ಜನತೆಯ ಪಾಲಿನ ಗಟ್ಟಿಧ್ವನಿಯಾಗುವತ್ತ ತಿರುಗಿಕೊಂಡಿತು...ಈ ಎಲ್ಲ ಕಾರಣಗಳಿಂದಾಗಿ ತಮ್ಮ ಓವರ್ ಸ್ಪೀಡ್‌ನಿಂದಾಗಿ ಶಂಕರ್ ನಾಗ್ ತಮಗೇ ಗೊತ್ತಿಲ್ಲದಂತೆ ತಮಗಿಂತಲೂ ಮೊದಲೇ ಇಲ್ಲಿ ಸ್ಟಾರ್, ಆರಾಧ್ಯ ದೈವ ಎನಿಸಿಕೊಂಡಿದ್ದವರನ್ನು ಹಿಂದಿಕ್ಕಿ ಅತ್ಯಂತ ಕಡಿಮೆ ಅವಧಿಯಲ್ಲಿ ಒಂದೆರಡು ಹೆಜ್ಜೆ ಮುಂದಕ್ಕೆ ಹೋಗಿಬಿಟ್ಟಿದ್ದರು!

ಮಹಾನ್ ಕಲಾವಿದ ಶಂಕರ್ ನಾಗ್ ಅವರಲ್ಲಿದ್ದ ಈ ವಿಶೇಷ ಗುಣ, ತೀಕ್ಷ್ಣತೆ, ಚುರುಕುತನ ಸಾಮಾನ್ಯ ಅನ್ನಿಸದ ಚಿತ್ರಗಳನ್ನು ಮಾಡುವ ರೀತಿ ಅಚ್ಚರಿಗೊಳಿಸುತ್ತಿತ್ತು. ತಮ್ಮ ನಿರ್ದೇಶನದ ಚಿತ್ರಗಳಿಗೆ ತಾವೇ ಸ್ಕ್ರಿಪ್ಟ್ ಬರೆಯುವುದನ್ನು ರೂಢಿಸಿಕೊಂಡಿದ್ದ ಶಂಕರ್ ನಾಗ್ ಅವರಿಗೆ ಅಸಾಧ್ಯವಾದ ವಾಸ್ತವತೆ, ಪಾರದರ್ಶಕತೆ, ದೂರದೃಷ್ಟಿ ಇತ್ತು; ಇವರ ನಿರ್ದೇಶನದ ಇವರದೇ ಆದ ಶೈಲಿಯ ಚಿತ್ರಗಳಲ್ಲಿ ಕಮರ್ಷಿಯಲ್ ಎಲಿಮೆಂಟ್ಸ್ ಏನೇನು ಇರಬೇಕೋ ಅವೆಲ್ಲವೂ ಇರುವುದರ ಜೊತೆಗೆ ಜಗತ್ತಿಗೆ ಹೇಳಲೇಬೇಕಾದ ಒಂದು ಮಹತ್ವಪೂರ್ಣ ಸಂಗತಿ ಕಲಾತ್ಮಕ ವಿನ್ಯಾಸದೊಳಗೆ ತಪ್ಪದೆ ಅಡಗಿರುತ್ತಿತ್ತು; ಎಷ್ಟು ಮನರಂಜನೆ ಇರುತ್ತಿತ್ತೋ ಅಷ್ಟೇ ಭಾವುಕತೆ, ಚಿಂತನೆಗೆ ಹಚ್ಚುವ ಗುಣ ಇವರ ಚಿತ್ರಗಳಲ್ಲಿ ಇರುತ್ತಿತ್ತು.

ಹೀಗೆ ಹೇಳುವುದು ಶಂಕರ್ ನಾಗ್ ಅವರನ್ನು ಹೊಗಳುವ ಸಲುವಾಗಿ ಅಲ್ಲ; ಅವರ ಶಕ್ತಿ ಮತ್ತು ಯುಕ್ತಿಯನ್ನು ಗ್ರಹಿಸುವ ಉದ್ದೇಶದಿಂದ ಮಾತ್ರ. ಪೂರ್ಣಪ್ರಮಾಣದಲ್ಲಿ ಶಂಕರ್ ನಾಗ್ ಗಿರೀಶ್ ಕಾರ್ನಾಡ್, ಸತ್ಯಜಿತ್ ರೇ, ಶ್ಯಾಮ್ ಬೆನಗಲ್, ಗಿರೀಶ್ ಕಾಸರವಳ್ಳಿ ಮುಂತಾದವರ ಹಾಗೆ ಕಲಾತ್ಮಕ ಚಿತ್ರಗಳ ತೆಕ್ಕೆಗೆ ಸಿಕ್ಕಿಹಾಕಿಕೊಂಡು ಅಲ್ಲೇ ಉಳಿದುಬಿಟ್ಟಿದ್ದರೆ ಇನ್ನೊಂದಿಷ್ಟು ಮಹತ್ವದ ಪ್ರಶಸ್ತಿಗಳನ್ನು ಕನ್ನಡಕ್ಕೆ ತಂದುಕೊಡುತ್ತಿದ್ದರು ಅನ್ನುವುದನ್ನು ಬಿಟ್ಟರೆ ಸಾಮಾನ್ಯ ಪ್ರೇಕ್ಷಕನಿಗೂ ತಲುಪುವ ಸರಳತೆಯ ನಡುವೆ ಸಂಕೀರ್ಣವಾದುದನ್ನು ಪ್ರತಿಪಾದಿಸುವ ನಟ ಅಥವಾ ನಿರ್ದೇಶಕ ಬಹುಶಃ ಆಗುತ್ತಿರಲಿಲ್ಲವೇನೋ. ಶಂಕರ್ ನಾಗ್ ಅವರ ಹೆಚ್ಚುಗಾರಿಕೆ ಇರುವುದೇ ಹೀಗೆ ಎರಡು ದಿಕ್ಕುಗಳು ಒಂದೆಡೆ ಸಂಧಿಸುವಂತೆ ಮಾಡುವ ಸಮತೋಲನ ಗುಣ, ಚಾಣಾಕ್ಷತೆ, ಪ್ರತಿಭೆಯಿಂದ. ಹಾಡು, ನೃತ್ಯ ಡೈಲಾಗ್ಸ್, ಪ್ರಜ್ಞೆ ಹುಟ್ಟುಹಾಕುವ ಚಿತ್ರಕತೆ ಮೂಲಕ ಹೃದಯ ಸ್ಪರ್ಶಿಸಬಲ್ಲ ಈತ ಪ್ರೇಕ್ಷಕರ ಆಸಕ್ತಿ, ಅಭಿರುಚಿಗಳನ್ನು, ಅವರಲ್ಲಿ ಅಡಗಿರಬಹುದಾದ ಕೌತುಕವನ್ನು ಗ್ರಹಿಸಬಲ್ಲವರಾಗಿದ್ದರು, ಅವರಲ್ಲಿನ ಭಾವಜಗತ್ತು, ಪ್ರೇಮಕ್ಕಾಗಿ ತುಡಿಯುವ ಮನಸು, ಸ್ನೇಹಕ್ಕಾಗಿ ಹಾತೊರೆಯುವ ಹಪಾಹಪಿ, ವ್ಯವಸ್ಥೆಯ ಮೇಲಿನ ಅವರ ಸಿಟ್ಟು, ಆಕ್ರೋಶ, ಅಸಹಾಯಕತೆ, ಕನ್ನಡ ನಾಡುನುಡಿಯ ಬಗೆಗಿನ ಅವರ ಪ್ರೀತಿ, ಅಭಿಮಾನ ಎಲ್ಲವನ್ನೂ ಅಚ್ಚುಕಟ್ಟಾಗಿ ಹಿಡಿದು ಅವರನ್ನು ರಂಜಿಸಬಲ್ಲ ಮಾಂತ್ರಿಕತೆ ಶಂಕರ್ ನಾಗ್ ಅವರಲ್ಲಿತ್ತು.

ಮೂವತ್ತೈದು ವರ್ಷಕ್ಕೇ ಶಂಕರ್ ನಾಗ್ ಎಷ್ಟು ಸಾಧಿಸಿದ್ದರು? ಚಿತ್ರರಂಗಕ್ಕೆ ಕಾಲಿಟ್ಟ ಬರೀ ಹನ್ನೆರಡು ವರ್ಷಗಳೊಳಗೆ ಬರೋಬ್ಬರಿ ಎಂಬತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು. ಹತ್ತಾರು ಚಿತ್ರಗಳನ್ನು ಬರೆದು, ನಿರ್ದೇಶಿಸಿದ್ದರು: ಆಕರ್ಷಕ ಗಡ್ಡ, ವಿಶಿಷ್ಟ ಧ್ವನಿ, ಸ್ಟೈಲಿಶ್ ನಡಿಗೆ ಮತ್ತು ಭರವಸೆಯ ಬೆಳಕನ್ನು ಮೊಗೆಮೊಗೆದು ಕೊಡುವ ಕಣ್ಣುಗಳು ಅವರ ಕಲೆಯನ್ನು, ವ್ಯಕ್ತಿತ್ವವನ್ನು ಇಡಿಯಾಗಿ ಹಿಡಿಯಬಯಸುವವರಿಗೆ ಸಹಕರಿಸುತ್ತಿದ್ದವು. ಅಣ್ಣ ಅನಂತ್ ನಾಗ್ ಜೊತೆಗೂಡಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಸ್ನೇಹ ಬೆಳೆಸಿ ಕಟ್ಟಿದ 'ಸಂಕೇತ್' ಸ್ಟುಡಿಯೋ, ಆ ಸ್ಟುಡಿಯೋ ಮೂಲಕ ಕನ್ನಡಕ್ಕೊಂದು ರೆಕಾರ್ಡಿಂಗ್



ಸ್ಟುಡಿಯೋ ಲಭ್ಯವಾಗಬೇಕು ಮತ್ತು ಕನ್ನಡಿಗರು ಹಿಂದಿ ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳಬೇಕು ಅನ್ನುವ ಕನಸುಗಳು, ಕನ್ನಡ ನಾಟಕ ಮತ್ತು ರಂಗ ಕಲಾವಿದರು ರಾಷ್ಟ್ರಮಟ್ಟದಲ್ಲಿ ಪ್ರಜ್ವಲಿಸಬೇಕು ಅನ್ನುವ ಭರವಸೆಗಳು ಹಾಗೆಯೇ ದೊಡ್ಡ ಮಟ್ಟದಲ್ಲೊಂದು ಕಂಟ್ರಿ ಕ್ಲಬ್ ಮಾಡುವ ಕನಸು... ಯಾವುದೂ ಹೆಚ್ಚು ಕಾಲ ಉಳಿಯಲಿಲ್ಲ.

ಅದೊಂದು ಬೆಳಗಿನ ಜಾವ ಶಂಕರ್ ನಾಗ್ ದಾವಣಗೆರೆಯಿಂದ ಹತ್ತು ಕಿಲೋಮೀಟರ್ ಈಚೆಗೆ ಕಾರು ಅಪಘಾತದಲ್ಲಿ ತೀರಿಕೊಂಡರು. 'ಒಂದಾನೋದು ಕಾಲದಲ್ಲಿ' ಗಿರೀಶ್ ಕಾರ್ನಾಡ್ ಮೂಲಕ ಚಿತ್ರನಟನಾದ ಶಂಕರ್ ನಾಗ್ ಅದೇ ಗಿರೀಶ್ ಕಾರ್ನಾಡ್ ಅವರ 'ಜೋಕುಮಾರ ಸ್ವಾಮಿ' ಮಾಡುವ ಸಂದರ್ಭದಲ್ಲಿ ಕೆಟ್ಟ ಸಾವಿಗೆ ಬಲಿಯಾದರು. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ಸಮೀಪದ ಮಲ್ಲಾಪುರದಲ್ಲಿ 1954ರಲ್ಲಿ ಜನಿಸಿದ ಶಂಕರ್ ನಾಗ್ ತಮ್ಮನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಅಸಂಖ್ಯಾತ ಕನ್ನಡಿಗರನ್ನು ಶಾಶ್ವತವಾಗಿ ಬಿಟ್ಟು ಹೋಗುವ ಮುನ್ನ ಅದೆಷ್ಟೋ ಅದ್ಭುತ ಸಿನಿಮಾಗಳನ್ನು, 'ಮಾಲ್ಗುಡಿ ಡೇಸ್' ತರಹದ ಭಾರತ ಮಟ್ಟದಲ್ಲೇ ಬೆರಗು ಮೂಡಿಸಿದ ಹಿಂದಿ ಧಾರಾವಾಹಿಯನ್ನು ನೀಡಿದ್ದರ ಜೊತೆಗೆ ಕನ್ನಡಿಗರ ಪಾಲಿಗೆ ಒಂದು ದೊಡ್ಡ ಶೂನ್ಯವನ್ನು ಉಳಿಸಿಬಿಟ್ಟು ಅರ್ಥದಲ್ಲೇ ದಿಢೀರನೆ ಹೊರಟುಬಿಟ್ಟರು.

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 18-02-2015 RNI No. KARKAN2005/14648



ಮೈತ್ರಿಗೆ ಡಿಕೆ ಎದುರಾಳಿ

'ಜಟ್ಟ'ದಂತಹ ಒಳ್ಳೆಯ ಚಿತ್ರವನ್ನು ಕೊಟ್ಟಿದ್ದ ಬಿ.ಎಂ.ಗಿರಿರಾಜ್ ಈ ಬಾರಿ 'ಮೈತ್ರಿ' ಎನ್ನುವ ಚಿತ್ರವನ್ನು ಮಾಡುತ್ತಿರುವುದು ನಿಮಗೆಲ್ಲಾ ಗೊತ್ತಿದೆ. ಈ ಚಿತ್ರ ಫೆಬ್ರವರಿ ಹದಿಮೂರರಂದು ರಾಜ್ಯಾದ್ಯಂತ ಬಿಡುಗಡೆಯಾಗುವ ಎಲ್ಲಾ ಲಕ್ಷಣಗಳು ಕಂಡುಬರುತ್ತಿವೆ. ಗಾಂಧಿನಗರದ ಎಂದಿನ ಫಾರ್ಮುಲಾಗಳನ್ನು ಇಟ್ಟುಕೊಂಡು ಚಿತ್ರ ಮಾಡದ ಗಿರಿರಾಜ್ ಸದಾ ಹೊಸತಿನೆಡೆಗೆ ತುಡಿಯುವ ಕ್ರಿಯಾಶೀಲ ಜೀವಿ. 'ಮೈತ್ರಿ' ಚಿತ್ರದ ಮೂಲಕ ಸಮಾಜಕ್ಕೆ ಏನನ್ನೋ ಹೇಳುವ ಪ್ರಯತ್ನ ಮಾಡಿದ್ದಾರೆ. ಆ ಹೇಳಬೇಕಾದ ವಿಷಯವನ್ನು ಸಮರ್ಪಕವಾಗಿ ಹೇಳುವ ಕಲೆಗಾರಿಕೆ ಕೂಡ ಅವರಿಗೆ ಕರಗತ ಅನ್ನುವ ಮಾತು ಅವರ 'ಜಟ್ಟ' ನೋಡಿದವರಿಗೆಲ್ಲಾ ಗೊತ್ತಿರುವಂಥದ್ದು. 'ಮೈತ್ರಿ'ಯಲ್ಲಿ ಮಲೆಯಾಳಂನ ಸೂಪರ್ ಸ್ಟಾರ್ ಮೋಹನ್ ಲಾಲ್ ಮತ್ತು ಕನ್ನಡದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಮಹತ್ವದ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆ ಮೂಲಕ 'ಮೈತ್ರಿ'ಗೆ ಬರೀ ಕಲಾತ್ಮಕ ಚಿತ್ರಗಳನ್ನು ನೋಡುವ ಪ್ರೇಕ್ಷಕರ ಜೊತೆಗೆ ಮಾಸ್ ಆಡಿಯನ್ಸ್ ಕೂಡ ಸಿಕ್ಕಲಿದ್ದಾರೆ ಅಂತಾಯ್ತು, ಇಂಥದೊಂದು 'ಮೈತ್ರಿ' ಈಗ ಬಿಡುಗಡೆಗೆ ರೆಡಿಯಾಗಿದೆ.

ಇನ್ನೊಂದು ಮುಖ್ಯ ವಿಚಾರವೆಂದರೆ 'ಮೈತ್ರಿ'ಗೆ ಎದುರಾಗಿ ಪ್ರೇಮ್ ನಟಿಸಿರುವ 'ಡಿಕೆ' ಕೂಡ ತೆರೆಗೆ ಬರುತ್ತಿದೆ. 'ಮೈತ್ರಿ' ಹೇಗೆ ಒಂದು ಸದ್ದಿಲ್ಲದ ಅಪ್ಪಟ ಚಿತ್ರವಾಗುವ ನಿರೀಕ್ಷೆ ಹುಟ್ಟಿಸಿದೆಯೋ ಹಾಗೆಯೇ ಇದರ ವಿರುದ್ಧ ದಿಕ್ಕಿನ 'ಡಿಕೆ' ಪಕ್ಕಾ ಎಂದಿನ ಪ್ರೇಮ್ ಶೈಲಿಯ ಗಿಮಿಕ್ ಸಿನಿಮಾ. ಚಿತ್ರದಲ್ಲಿ ಏನಿರುತ್ತೋ, ಇರಲ್ವೋ ಪ್ರೇಮ್ ಗಿಮಿಕ್ ಅಂತೂ ಮಾಡಿರುತ್ತಾರೆ. ಹತ್ತು ವರ್ಷಗಳ ಹಿಂದೆ ಮಾಡುತ್ತಿದ್ದ ಗಿಮಿಕ್‌ಗಳನ್ನೇ ನೆಚ್ಚಿಕೊಂಡು ಈಗಲೂ ಸಿನಿಮಾ ಮಾಡುತ್ತಾರೆ. ಪ್ರೇಕ್ಷಕ ಸಾಕಷ್ಟು ಮುಂದೆ ಹೋಗಿದ್ದಾನೆ ಅನ್ನೋದನ್ನು ಮರೆತೇಬಿಟ್ಟಿದ್ದಾರೆ ಪ್ರೇಮ್. ಇಂತಹ ಎರಡು ದಿಕ್ಕಿನ 'ಮೈತ್ರಿ' ಹಾಗೂ 'ಡಿಕೆ' ಒಂದೇ ದಿನ ಮುಖಾಮುಖಿಯಾಗುತ್ತಿರುವುದು ಸಹಜ ಕುತೂಹಲವನ್ನೇನೋ ಉಂಟುಮಾಡಿದ್ದರೂ ಎರಡೂ ಚಿತ್ರಗಳಿಗೆ ತನ್ನದೇ ಆದ ಭಿನ್ನ ಇಮೇಜ್ ಇರುವುದು ಸುಳ್ಳಲ್ಲ, ಯಾವ ಚಿತ್ರದ ಹಣೆಬರಹ ಏನು ಎಂಬುದು ಗೊತ್ತಾಗಲು ಇನ್ನೊಂದು ವಾರ ಕಾಯಬೇಕಷ್ಟೇ.

ಅಪ್ಪು ಈಗ ಜೇಮ್ಸ್

ಈ ವರ್ಷದ ಹಿಟ್ ಚಿತ್ರಗಳಲ್ಲಿ 'ಬಹದ್ದೂರ್' ಕೂಡ ಒಂದು. ಈ ಚಿತ್ರ ಹಿಟ್ ಆಗುತ್ತಿದ್ದಂತೆಯೇ ನಿರ್ದೇಶಕ ಚೇತನ್ ಕುಮಾರ್‌ಗೂ ಬೇಡಿಕೆ ಉಂಟಾಗತೊಡಗಿತು. ಚೊಚ್ಚಲ ಚಿತ್ರದಲ್ಲಿಯೇ ಹಿಟ್ ಕೊಟ್ಟ ಚೇತನ್ ಕುಮಾರ್ ತಮ್ಮ ಎರಡನೆಯ ಚಿತ್ರವನ್ನು ಯಶ್ ಅಥವಾ ಪುನೀತ್ ರಾಜ್‌ಕುಮಾರ್ ಜೊತೆ ಮಾಡುವ ಆಶಯ ಹೊತ್ತಿದ್ದರು. ತಮ್ಮ ಎರಡನೆಯ ಚಿತ್ರಕ್ಕೆ 'ಜೇಮ್ಸ್' ಅಂತಲೂ ಹೆಸರಿಟ್ಟಿದ್ದರು.



ಇದೀಗ 'ಜೇಮ್ಸ್'ನಲ್ಲಿ ಪುನೀತ್ ರಾಜ್‌ಕುಮಾರ್ ನಟಿಸಲು ಒಪ್ಪಿರುವ ಸುದ್ದಿಯನ್ನು ಸ್ವತಃ ಚೇತನ್ ಕುಮಾರ್ ಬಹಿರಂಗಪಡಿಸಿದ್ದಾರೆ. ಚೇತನ್ ಕುಮಾರ್ ಹೇಳಿದ ಕಥೆಯ ಎಳೆ ಪುನೀತ್‌ಗೆ ಇಷ್ಟವಾಗಿದ್ದು 'ಜೇಮ್ಸ್'ನಲ್ಲಿ ಅಭಿನಯಿಸಲು ಒಪ್ಪಿದ್ದಾರಂತೆ.

ಈಗಾಗಲೇ 'ಧೀರಾ ರಣವಿಕ್ರಮ', 'ದೊಡ್ಮನೆ ಹುಡುಗ', 'ಆಹ್ವಾನ' ಚಿತ್ರಗಳನ್ನು ಒಪ್ಪಿಕೊಂಡಿರುವ ಪುನೀತ್ ರಾಜ್‌ಕುಮಾರ್ ಈ ಚಿತ್ರಗಳ ನಂತರವಷ್ಟೇ 'ಜೇಮ್ಸ್'ನಲ್ಲಿ ನಟಿಸಲು ಸಾಧ್ಯವಾಗುತ್ತದೆ. ಅಲ್ಲಿಗೆ ಒಂದು ಹಿಟ್ ಚಿತ್ರ ಕೊಟ್ಟರೆ ಪುನೀತ್ ರಾಜ್‌ಕುಮಾರ್ ನಿರ್ದೇಶಕ ಹೊಸಬನಾಗಿದ್ದರೂ ಡೇಟ್ಸ್ ಕೊಡುತ್ತಾರೆ ಅನ್ನುವ ಮಾತು ಮತ್ತಷ್ಟು ದೃಢವಾಯಿತು!

ದಕ್ಷ ದಾಖಲೆಯತ್ತ

'ಚಂಡ' ಚಿತ್ರದ ನಂತರ ಕಿತ್ತಾಡಿಕೊಂಡಿದ್ದ ಎಸ್.ನಾರಾಯಣ್-ದುನಿಯಾ ವಿಜಯ್ ಜೋಡಿ ಮತ್ತೆ ಒಂದಾಗಿ ಒಂದು ಚಿತ್ರ ಮಾಡಿದೆ. ಆ ಚಿತ್ರದ ಹೆಸರು 'ದಕ್ಷ' ಅಂತ. ಈ 'ದಕ್ಷ' ಚಿತ್ರದ ಒಂದು ವಿಶೇಷತೆ ಎಂದರೆ ಸಿಂಗಲ್ ಶಾಟ್‌ನಲ್ಲಿ ಇಡೀ ಚಿತ್ರವನ್ನು ಶೂಟ್ ಮಾಡಲಾಗಿದೆ. ಈ ಪ್ರಯತ್ನಕ್ಕೆ ಫಲ ಎನ್ನುವಂತೆ ಈಗಾಗಲೇ ಗಿನ್ನಿಸ್ ಬುಕ್‌ನಲ್ಲಿ ಹೊಸದೊಂದು ದಾಖಲೆ ಬರೆಯುವ ಉತ್ಸಾಹದಲ್ಲಿದೆ. ಇಡೀ ಚಿತ್ರ ಒಂದೇ ಶಾಟ್‌ನಲ್ಲಿ ಮುಗಿಸಿದ್ದು ಮೂರು ಬೇರೆ ಬೇರೆ ಲೊಕೇಶನ್‌ಗಳಲ್ಲಿ, ಹದಿಮೂರು ಕೋಣೆಗಳಲ್ಲಿ ಶೂಟ್ ಮಾಡಲಾಗಿದೆಯಂತೆ. ಈ ದಾಖಲೆ ಬರೆಯುವ ಹಿಂದೆ ಎಲ್ಲ ಪಾತ್ರಧಾರಿಗಳ ಪ್ರಯತ್ನ, ಪರಿಶ್ರಮವಿದ್ದು ಒಟ್ಟು ಹದಿಮೂರು ದಿನಗಳ ಕಾಲ ರಿಹರ್ಸಲ್‌ನಲ್ಲಿ ಪಾಲ್ಗೊಂಡಿದ್ದರಂತೆ.

ಇಂಥದೊಂದು ಚಿತ್ರಕ್ಕೆ ಕ್ಯಾಮೆರಾಮ್ಯಾನ್ ಕೈಚಳಕ ಮುಖ್ಯವಾಗುತ್ತದೆ.



ಆ ನಿಟ್ಟಿನಲ್ಲಿ 'ದಕ್ಷ'ಕ್ಕೆ ಕ್ಯಾಮೆರಾ ಹಿಡಿದ ರೇಣುಕುಮಾರ್ ಬಗ್ಗೆ ಎಸ್.ನಾರಾಯಣ್ ಅವರಿಗೆ ಎಲ್ಲಿಲ್ಲದ ಪ್ರೀತಿ, ಅಭಿಮಾನ.




ನೋಯ್ಡಾಗೆ ಹಗ್ಗದ ಕೊನೆ

ದಯಾಳ್ ಪದ್ಮನಾಭನ್ ನಿರ್ದೇಶನದ 'ಹಗ್ಗದ ಕೊನೆ' ಒಳ್ಳೆಯ ಹೆಸರು ಮಾಡಿತೇ ವಿನಃ ಒಳ್ಳೆಯ ಕಾಸು ಮಾಡಲಿಲ್ಲ, ಚಿತ್ರವು ಎಷ್ಟು ಬೇ... ರೆಡಿಯಾಗಿ ಎಷ್ಟು ಬೇಗ ರಿಲೀಸ್ ಆಯಿತೋ ಅಷ್ಟೇ ಬೇಗ ಥಿಯೇಟರುಗಳಿಂ... ಮಾಯವಾಗಿಬಿಟ್ಟಿತು. ಸತತ ಸೋಲುಗಳಿಂದ ಕಂಗೆಟ್ಟಿದ್ದ ನವೀನ ಕೃಷ್ಣ... ಈ ಚಿತ್ರದ ಮೂಲಕವಾದರೂ ಒಂದು ಬ್ರೇಕ್ ಸಿಗುತ್ತದೆ ಅನ್ನುವ ನಿರೀ... ಸುಳ್ಳಾಯಿತು. ಈ ಚಿತ್ರ ಹಣ ಮಾಡಲಿಲ್ಲ ಅಂದ ಮಾತ್ರಕ್ಕೆ ಸೋತ... ಹೋಯಿತು ಅಂತೇನೂ ಅಲ್ಲ, ಈ ಚಿತ್ರ ಈಗ ರಾಷ್ಟ್ರಮಟ್ಟದಲ್ಲಿ ಗಮ... ಸೆಳೆಯುತ್ತಿದೆ. ಬೆಂಗಳೂರಿನಲ್ಲಿ ಜರುಗಿದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಎರಡೆರಡು ಬಾರಿ ಪ್ರದರ್ಶನ ಕಂಡ ಈ ಸಿನಿಮಾ ಆನಂತರ ದೆಹಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿಯೂ ಪ್ರದರ್ಶನ ಕಂಡಿತ್ತು, ಇದೇ ಫೆಬ್ರವರಿ ಎರಡನೆ ವಾರ ನೋಯ್ಡಾದಲ್ಲಿ ಆರಂಭವಾಗಲಿರುವ ಚಿತ್ರೋತ್ಸವದಲ್ಲೂ 'ಹಗ್ಗದ ಕೊನೆ' ಪ್ರದರ್ಶನ ಕಾಣಲಿದೆ. ಈ ಚಿತ್ರದಲ್ಲಿ ನವೀನ ಕೃಷ್ಣ ನಟಿಸುವುದರ ಜೊತೆಗೆ ಸಂಭಾಷಣೆಯನ್ನೂ ಬರೆದಿದ್ದರು. ಇನ್ನು ಈ ಚಿತ್ರದ ತಯಾರಿಕೆಗೆ ದಯಾಳ್ ಪದ್ಮನಾಭನ್ ಜೊತೆ ಉಮೇಶ್ ಬಣಕಾರ್ ಕೂಡ ದುಡ್ಡು ಹಾಕಿದ್ದರು.



ಕೋಲಾರದಲ್ಲಿ ಕೋಡಿಹಳ್ಳಿ

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ... ಮತ್ತೊಮ್ಮೆ ಮುಖಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಈ ಬಾರಿ ಇವರು ಬ... ಹಚ್ಚುತ್ತಿರುವುದು 'ಕೋಲಾರ್' ಎನ್ನುವ ಚಿತ್ರಕ್ಕಾಗಿ. ಈ ಚಿತ್ರದಲ್ಲಿ ಇವರದ... ಪೊಲೀಸ್ ಅಧಿಕಾರಿಯ ಪಾತ್ರ. ಇತ್ತೀಚೆಗಷ್ಟೇ ಬೆಂಗಳೂರಿನ ಕಂಠೀರ... ಸ್ಟುಡಿಯೋದಲ್ಲಿ ಚಿತ್ರೀಕರಣ ನಡೆದಿದ್ದು ಕೋಡಿಹಳ್ಳಿ ಚಂದ್ರಶೇಖರ್ ತಮ... ಪಾತ್ರಕ್ಕಾಗಿ ನಟಿಸಿದ್ದಾರೆ. ಇದಕ್ಕೂ ಮೊದಲು ಇವರು ಟಿ.ಎನ್.ಸೀತಾರಾಮ... ಅವರ 'ಮುಕ್ತ' ಧಾರಾವಾಹಿಯಲ್ಲಿ ನಟಿಸಿದ್ದರು ಎಂಬುದನ್ನು ಇ... ನೆನಪಿಸಿಕೊಳ್ಳಬಹುದು. ಅದರ ನಂತರ ಶಿವರಾಜ್ ಕುಮಾರ್ ನಟಿಸಿ... 'ಮೈಲಾರಿ' ಚಿತ್ರದಲ್ಲಿಯೂ ಒಂದು ಪಾತ್ರ ಮಾಡಿದ್ದರು. ಈ ಬಾ... ಯೋಗಿ ಅಭಿನಯದ 'ಕೋಲಾರ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಬೇರೆ ಬೇ... ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆದವರನ್ನು ಕರೆ ತಂದು ತಮ್ಮ ಚಿತ್ರಗಳಲ್ಲಿ ಪಾ... ನೀಡಿ ಆ ಮೂಲಕ ಚಿತ್ರಕ್ಕೆ ಒಂದಿಷ್ಟು ಪ್ರಚಾರ ಪಡೆಯುವ ಪ್ರಯತ್ನಗ... ಮೊದಲಿನಿಂದಲೂ ಇರುವಂಥದ್ದೇ. 'ಕೋಲಾರ್' ಚಿತ್ರಕ್ಕೆ ಕೋಡಿಹ... ಚಂದ್ರಶೇಖರ್ ಎಷ್ಟು ಉಪಯೋಗಕರ ಎಂಬುದು ಚಿತ್ರ ಬಿಡುಗಡೆಯಾ... ಮೇಲಷ್ಟೇ ಗೊತ್ತಾಗಬೇಕು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com